ಮಂಗಳೂರು

ಮಂಗಳವಾರ, 17 ಮಾರ್ಚ್ 2026

ಸಂಪುಟ 47, ಸಂಚಿಕೆ 348 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮುರ್ಮು ಭೇಟಿಗಾಗಿ ಟಿಎಂಸಿ ಮತ್ತೆ ಮನವಿ | ೦೨ ಬೆಂಕಿ ಅವಘಡ: 10 ರೋಗಿಗಳ ಸಾವು | ೦೨ ಮಮತಾ ವಿರುದ್ಧ ಸುವೇಂದು ಸ್ಪರ್ಧೆ | ೦೨

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷೆ

ದಿನದ ಮಾತು

ದಿನದ ಒಂದು ಗಂಟೆ ಪುಸ್ತಕ ಓದುವುದಕ್ಕೆ ಸಮರ್ಪಿಸಿ. ನೀವು ಕೆಲವೇ ವರ್ಷಗಳಲ್ಲಿ ಜ್ಞಾನದ ಕೇಂದ್ರವಾಗಿ ಬದಲಾಗುವಿರಿ.

▲ ಎ.ಪಿ.ಜೆ. ಅಬ್ದುಲ್ ಕಲಾಂ

ವಜ್ರದ ವ್ಯಾಪಾರಿಯ ಅಪ್ರತಿಮ ಗೋಸೇವೆ


ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ

• ಪುಟ ೬

ಕಿರುಸುದ್ದಿ

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ



• **ಹೊಸದಿಲ್ಲಿ:** ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರಿಗೆ ಇ-ಕೆವೈಸಿ ಕಡ್ಡಾಯಗೊಳಿಸಿದೆ. ಎಂಒಪಿಎನ್‌ಜಿ ತಮ್ಮ ಎಕ್ಸ್ ಖಾತೆಯಲ್ಲಿ, ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರು ಬಯೋಮೆಟ್ರಿಕ್ ಆಧಾರ ದೃಢೀಕರಣವನ್ನು (ಇ-ಕೆವೈಸಿ) ಪೂರ್ಣಗೊಳಿಸಬೇಕಾಗುತ್ತದೆ ಎಂದು ಹೇಳಿದೆ. ➡ಪುಟ ೪

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ



• **ಹೊಸದಿಲ್ಲಿ:** ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ ಸಹ-ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು. ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

• ಪುಟ ೪

ಮೋದಿ ಇಸ್ರೇಲ್ ಭೇಟಿಗೂ ಸಮರಕ್ಕೂ ಸಂಬಂಧವಿಲ್ಲ

• ಪುಟ ೨

ಜೆಫ್ರಿ ಎಪ್ಸ್ಟೀನ್: ಪುರಿ ಪುತ್ರಿಯಿಂದ ಮಾನನಷ್ಟ ಕೇಸ್

• ಪುಟ ೨

4,300ಕ್ಕೂ ಹೆಚ್ಚು ವಿಮಾನಗಳು ರದ್ದು

• ಪುಟ ೨

ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

• ಪುಟ ೨

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ

• ಪುಟ ೪

ಸಚಿವರಿಂದ ಸಿಗದ ಉತ್ತರ | ಸದನದಿಂದ ಹೊರನಡೆದ ಖಾದರ್

ಸ್ಪೀಕರ್ ಸಭಾತ್ಯಾಗ

• **ವಿಧಾನಸಭೆ:** ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಸರ್ಕಾರದ ಸಚಿವರು ಸೂಕ್ತವಾಗಿ ಉತ್ತರಿಸುತ್ತಿಲ್ಲವೆಂದು ಬೇಸರಗೊಂಡು ವಿಧಾನಸಭಾಧ್ಯಕ್ಷರೇ ಸದನ ಮುಂದೂಡಿ, ಸಭಾತ್ಯಾಗ ಮಾಡಿರುವ ಅಪರೂಪದ ಪ್ರಸಂಗಕ್ಕೆ ರಾಜ್ಯ ವಿಧಾನಸಭೆ ಅಧಿವೇಶನ ಸಾಕ್ಷಿಯಾಯಿತು.

ಅಷ್ಟೇ ಅಲ್ಲ, ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಸ್ಪಷ್ಟನೆ ನೀಡುವವರೆಗೂ ಸದನಕ್ಕೆ ಬರುವುದಿಲ್ಲ ಎಂದು ಎಚ್ಚರಿಕೆಯನ್ನೂ ನೀಡಿದರು. ಸೋಮವಾರ ಪ್ರಶ್ನೋತ್ತರ ಕಲಾಪ ಮುಕ್ತಾಯವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಲಿಖಿತ ಉತ್ತರಗಳ ಮೂಲಕ ನೀಡುವ ಪ್ರಶ್ನೆಗಳ ಪಟ್ಟಿ ಮಂಡನೆಗೆ ಅವಕಾಶ ನೀಡಿದರು. ಈ ವೇಳೆ ಗೃಹ ಸಚಿವ ಡಾ. ಪರಮೇಶ್ವರ ಅವರು ಲಿಖಿತ ಮೂಲಕ ಉತ್ತರಿಸುವ 245 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳಿಗೆ ಉತ್ತರ ಮಂಡಿಸಿದರು.

ಈ ವೇಳೆ ಪ್ರತಿಪಕ್ಷ ನಾಯಕ ಆರ್. ಅಶೋಕ ಎದ್ದು ನಿಂತು, ಈ ಸರ್ಕಾರ ಸತ್ತು ಹೋಗಿದೆ. ತಿಥಿ ಮಾಡಬೇಕು. ತಿಥಿ ಮಾಡಿದರೂ ಉಪಯೋಗವಾಗುವುದಿಲ್ಲ. ಈವರೆಗೆ ನಾಲ್ಕು ಬಾರಿ ಎಚ್ಚರಿಸಿದರೂ ಸಭಾಧ್ಯಕ್ಷರ ಮಾತಿಗೂ ಎಚ್ಚೆತ್ತುಕೊಂಡಿಲ್ಲ. ಆದರೂ ಶೇ.50ರಷ್ಟು ಪ್ರಶ್ನೆಗಳಿಗೂ ಉತ್ತರ ನೀಡದೆ ನಿಯಮ ಪಾಲಿಸಿಲ್ಲ. ದೇವರ ಹಾಗೆ ಬಂದು ಕುಳಿತುಕೊಳ್ಳುತ್ತದೆ. 5ನೇ ಬಾರಿಗೆ ಎಚ್ಚರಿಸಿ ಎಂದು ಸಭಾಧ್ಯಕ್ಷರನ್ನು ಮನವಿ ಮಾಡಿದರು.

ನಾಲ್ಕು ಬಾರಿ ಎಚ್ಚರಿಕೆ: ದಿನಕ್ಕೆ ಕೇವಲ 15 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಲು ಸಾಧ್ಯವಿದೆ. ಉಳಿದ ಪ್ರಶ್ನೆಗಳಿಗೆ ನಿಯಮಾವಳಿ ಪ್ರಕಾರ, ಲಿಖಿತ ಉತ್ತರ ನೀಡುವುದು ಸರ್ಕಾರದ ಕರ್ತವ್ಯ. ಗಮನಸೆಳೆಯುವ ಸೂಚನೆಯಲ್ಲಿಯೂ 15ಕ್ಕಿಂತ ಹೆಚ್ಚು ತೆಗೆದುಕೊಳ್ಳದಂತೆ ಮನವಿ ಮಾಡುತ್ತೀರಿ. ಆದರೆ, ಶಾಸಕರ ಪ್ರಶ್ನೆಗಳಿಗೆ ಉತ್ತರಿಸುವ ಸಚಿವರು, ಅಧಿಕಾರಿಗಳು ಅತ್ಯಂತ ನಿರ್ಲಕ್ಷ್ಯ ವಹಿಸಿದ್ದಾರೆ. ಈ ಪೀಠದಿಂದ ನಾಲ್ಕು ಬಾರಿ ಎಚ್ಚರಿಸಲಾಗಿತ್ತು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಎಷ್ಟು ಹೇಳಿದರೂ ಏನೂ ಸುಧಾರಣೆ ಆಗುವುದಿಲ್ಲ. ಸರಿಯಾದ ಸಮಯಕ್ಕೆ ಸಚಿವರು ಸದನಕ್ಕೆ ಬರವುದಿಲ್ಲ. ಒಟ್ಟು 245 ಲಿಖಿತ ಪ್ರಶ್ನೆಗಳ ಪೈಕಿ ಸರ್ಕಾರವು ಕೇವಲ 87 ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಿದೆ. ಅಂದರೆ, ಅರ್ಧಕ್ಕಿಂತ ಹೆಚ್ಚು ಪ್ರಶ್ನೆಗಳಿಗೆ ಉತ್ತರವನ್ನೇ ನೀಡಿಲ್ಲ. ಸರ್ಕಾರದ ಈ ವರ್ತನೆ ಸರಿಯಲ್ಲ. ಹೀಗಾದರೆ ಸದನ ನಡೆಸುವುದು ಹೇಗೆ? ಸಂಬಂಧಪಟ್ಟ ಸಚಿವರು ಮತ್ತು ಕಾರ್ಯದರ್ಶಿಗಳು ನನಗೆ ಸ್ಪಷ್ಟೀಕರಣ ನೀಡುವವರೆಗೆ ನಾನು ಸದನವನ್ನು ನಡೆಸುವುದಿಲ್ಲ ಎಂದು ಪೀಠದಿಂದ ಎದ್ದು ಹೊರನಡೆದರು.



ಶಾಸಕರಿಗಾಗಿ ಅಧಿವೇಶನ

ಸಭಾಧ್ಯಕ್ಷರು ಮಾತನಾಡಿ, ಅಧಿವೇಶನ ಎನ್ನುವುದು ಜನರ ಸಮಸ್ಯೆಗಳನ್ನು ಚರ್ಚಿಸಲು ಇರುವ ವೇದಿಕೆ. ಈ ಸದನ ನಡೆಯುವುದು ಸಚಿವರಿಗಾಗಿ ಅಲ್ಲ, ಶಾಸಕರಿಗಾಗಿ ನಡೆಯುತ್ತದೆ. ಮೂರು ತಿಂಗಳಿಗೊಮ್ಮೆ ಶಾಸಕರು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೊತ್ತು ಇಲ್ಲಿಗೆ ಬರುತ್ತಾರೆ. ಶಾಸಕರು ಇಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಸರ್ಕಾರದ ಕರ್ತವ್ಯ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸಭಾಧ್ಯಕ್ಷರ ಜತೆ ಸಂಧಾನ ಸಭೆ

ಸದನ ನಡೆಸುವುದಿಲ್ಲ ಎಂದು ಹೊರನಡೆದ ಸಭಾಧ್ಯಕ್ಷ ಯು.ಟಿ.ಖಾದರ್ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಹಾಗೂ ಪ್ರತಿಪಕ್ಷ ನಾಯಕರು ಸಂಧಾನ ಸಭೆ ನಡೆಸಿದರು. ಸಭಾಧ್ಯಕ್ಷರನ್ನು ಸಮಾಧಾನಪಡಿಸಿದ ನಾಯಕರು, ಸೂಕ್ತ ರೀತಿಯಲ್ಲಿ ಸದನ ನಡೆಸಲು ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಅಲ್ಲದೇ ಶಾಸಕರ ಪ್ರಶ್ನೆಗಳಿಗೆ ಉತ್ತರ ಕೊಡಿಸುವುದಾಗಿ ಹಾಗೂ ಸದನಕ್ಕೆ ಉತ್ತರ ನೀಡದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದರು. ಜೊತೆಗೆ ಭೋಜನ ವಿರಾಮದ ಬಳಿಕ ಸರ್ಕಾರ ಉತ್ತರ ನೀಡುವುದಾಗಿ ಹೇಳಿದರು. ಮುಖ್ಯಮಂತ್ರಿಗಳ ಭರವಸೆ ತರುವಾಯ ಸದನ ನಡೆಸಲು ಸಭಾಧ್ಯಕ್ಷರು ಒಪ್ಪಿಕೊಂಡರು. ಆ ಬಳಿಕ ಕಲಾಪವನ್ನು ಭೋಜನ ವಿರಾಮಕ್ಕೆ ಮುಂದೂಡಲಾಯಿತು.

3 ಅಧಿಕಾರಿಗಳ ಅಮಾನತಿಗೆ ಕ್ರಮ: ಪರಮೇಶ್ವರ್



ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದರು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ನಾವಿಕರೆಲ್ಲ ಸುರಕ್ಷಿತ: ರಾಜೇಶ್‌ಕುಮಾರ್

ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ



• **ಹೊಸದಿಲ್ಲಿ:** ಯುಎಇಯ ಫುಜೈರಾ ಟರ್ಮಿನಲ್ ಮೇಲೆ ಇತ್ತೀಚೆಗೆ ನಡೆದ ಮಿಲಿಟರಿ ದಾಳಿಯ ನಡುವೆಯೂ ಅಲ್ಲಿಂದ ಸುರಕ್ಷಿತವಾಗಿ ಹೊರಬಂದಿರುವ ಭಾರತದ ಜಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಮಂಗಳವಾರ ಭಾರತದ ಮುಂದ್ರಾ ಬಂದರು ತಲುಪುವ ನಿರೀಕ್ಷೆಯಿದೆ. ಇದೇ ವೇಳೆ ಇಂಧನ ಹೊತ್ತ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ

ಜಗ್ ಲಾಡ್ಕಿ ನೌಕೆ ಸುಮಾರು 80,800 ಟನ್ ಮುರ್ಬನ್ ಕಚ್ಚಾ ತೈಲವನ್ನು ಹೊತ್ತು ತರುತ್ತಿದೆ. ಹಡಗಿನಲ್ಲಿರುವ ಎಲ್ಲಾ 22 ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಎಂದು ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಸೋಮವಾರ ಖಚಿತಪಡಿಸಿದ್ದಾರೆ. ಮಾ.14ರಂದು ಫುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದ ನಂತರ, ಈ ನೌಕೆ ಭಾನುವಾರ ಬೆಳಗ್ಗೆ ಅಲ್ಲಿಂದ ಪ್ರಯಾಣ ಬೆಳೆಸಿತ್ತು.

ಸಿಕ್ಕಿಬಿದ್ದ ಹಡಗುಗಳು: ಸಂಘರ್ಷಪೀಡಿತ ಪ್ರದೇಶದಿಂದ ಸುರಕ್ಷಿತವಾಗಿ ಹೊರಬಂದಿರುವ 28 ಭಾರತೀಯ ಹಡಗುಗಳಲ್ಲಿ ಜಗ್ ಲಾಡ್ಕಿ ನಾಲ್ಕನೆ ಯದ್ದು. ಇದರೊಂದಿಗೆ, ಒಟ್ಟು 92,712 ಟನ್ ಇಂಧನವನ್ನು ಹೊತ್ತಿರುವ ಶಿವಾಲಿಕ್ ಮತ್ತು ನಂದಾ ದೇವಿ ಎಂಬ ಎರಡು ಎಲ್‌ಪಿಜಿ ವಾಹಕ ನೌಕೆಗಳು ಹಾರ್ಮುಜ್ ಜಲಸಂಧಿ ದಾಟಿವೆ. ➡ಪುಟ ೪

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚಿಸಿಲ್ಲ: ಭಾರತ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಹಡಗುಗಳ ಸುರಕ್ಷಿತ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಭಾರತ ಅಮೆರಿಕದೊಂದಿಗೆ ಯಾವುದೇ ದ್ವಿಪಕ್ಷೀಯ ಮಾತುಕತೆಯಲ್ಲಿ ತೊಡಗಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸ್ಪಷ್ಟಪಡಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಂತಾರಾಷ್ಟ್ರೀಯ ನೌಕಾ ಹಸ್ತಕ್ಷೇಪಕ್ಕೆ ಕರೆನೀಡಿದ ಬೆನ್ನಲ್ಲೇ, ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಈ ಹೇಳಿಕೆ ನೀಡಿದ್ದಾರೆ.

ಈ ವಿಷಯದ ಕುರಿತು ವಿವಿಧ ಪಾಲುದಾರರೊಂದಿಗೆ ಚರ್ಚೆಗಳು ನಡೆಯುತ್ತಿದ್ದರೂ, ವಾಷಿಂಗ್ಟನ್ ಜತೆ ಯಾವುದೇ ನಿರ್ದಿಷ್ಟ ದ್ವಿಪಕ್ಷೀಯ ಮಾತುಕತೆ ನಡೆದಿಲ್ಲ ಎಂದು ಅವರು ಹೇಳಿದ್ದಾರೆ. ಭಾರತದ ಧ್ವಜ ಹೊಂದಿರುವ ಹಡಗುಗಳ ಸುರಕ್ಷಿತ ಸಂಚಾರಕ್ಕಾಗಿ ಇರಾನ್‌ನೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಲಾಗಿದೆ. ➡ಪುಟ ೪

ಡಿಕೆಶಿ ನೇತೃತ್ವದಲ್ಲಿ ರಾಜ್ಯ ನೀರಾವರಿ ಯೋಜನೆ ಬಗ್ಗೆ ಚರ್ಚೆ

ಸಚಿವರು, ಸಂಸದರ ಸಭೆ ಇಂದು

• **ಬೆಂಗಳೂರು:** ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯ ನೀರಾವರಿ ಯೋಜನೆಗಳ ಬಗ್ಗೆ ಮಂಗಳವಾರ (ಮಾ.17) ಮಹತ್ವದ ಸಭೆ ನಡೆಯಲಿದೆ. ಈ ಸಭೆಯಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಯಲಿದೆ.



ರಾಜ್ಯದ ನೀರಾವರಿ ವಿಚಾರವಾಗಿ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣಗಳ ಕುರಿತು ಚರ್ಚೆ ಹಾಗೂ ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಿರಿಯ ವಕೀಲರು ಹಾಗೂ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರು ಹಾಗೂ ಸರ್ವ ಪಕ್ಷಗಳ ಸಂಸದರ ಜತೆಗೆ ಸಭೆ ನಡೆಸಲಿದ್ದಾರೆ. ಹೀಗಾಗಿ ಈ ಸಭೆ ತೀರಾ ಮಹತ್ವ ಪಡೆದಿದೆ. ➡ಪುಟ ೪

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಲ್ಲಿ ಒಂದಾದ ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು ಎಂದು ನೆರೆಯ ಆಂಧ್ರ ಪ್ರದೇಶದವರು ಕೇಂದ್ರ ಸರ್ಕಾರಕ್ಕೆ ಆಕ್ಷೇಪಣಾ ಪತ್ರ ಬರೆದಿದೆ. ಅಲ್ಲದೇ, ಮಹಾರಾಷ್ಟ್ರ ಸರ್ಕಾರ ಕೂಡ ಕೇಂದ್ರಕ್ಕೆ ಪತ್ರ ಬರೆದು ಈ ಯೋಜನೆ ಜಾರಿಯಾಗಬಾರದು ಎಂದು ಕೇಂದ್ರಕ್ಕೆ ಮನವಿ ಮಾಡಿದೆ. ಈ ವಿಚಾರವಾಗಿ ಕೇಂದ್ರ ಸರ್ಕಾರ ನಮಗೆ ಪತ್ರ ಬರೆದು ಸ್ಪಷ್ಟನೆ ಕೇಳಿದೆ. ➡ಪುಟ ೪

ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆಗೆ ದೇವೇಗೌಡ ಬೇಸರ

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ ಸೋನಿಯಾ ಗಾಂಧಿಗೆ ಎಚ್‌ಡಿಡಿ ಪತ್ರ

• **ಹೊಸದಿಲ್ಲಿ:** ಸಂಸತ್ ಅಧಿವೇಶನದಲ್ಲಿ ವಿಪಕ್ಷಗಳಿಂದ, ಅದರಲ್ಲಿಯೂ ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ತೋರಿಸುತ್ತಿರುವ ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆ ಬಗ್ಗೆ ರಾಜ್ಯಸಭಾ ಸದಸ್ಯ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ತೀವ್ರ ಆತಂಕ, ಕಳವಳ ವ್ಯಕ್ತಪಡಿಸಿದ್ದು, ಈ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಬಜೆಟ್ ಅಧಿವೇಶನದ ವೇಳೆ ಪ್ರತಿಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದು, ಪ್ರಮುಖವಾಗಿ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗೂ ಸಂಸತ್ತಿನ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶನ ಮಾಡುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ಮತ್ತು ಕಲಾಪ ಸ್ಥಗಿತ ಆಗುವಂತೆ ಮಾಡುತ್ತಿದ್ದಾರೆ. ➡ಪುಟ ೪



ಪ್ರತಿಪಕ್ಷದ ಹೊಣೆಗಾರಿಕೆ ಹಾಗೂ ಜವಾಬ್ದಾರಿಗಳ ಬಗ್ಗೆ ತಮಗೆ ಅರಿವಿದೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು. ಆದರೆ ಅದು ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು.

■ ಎಚ್.ಡಿ.ದೇವೇಗೌಡ, ರಾಜ್ಯಸಭಾ ಸದಸ್ಯ

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

ಬಿಹಾರ, ಒಡಿಶಾ ರಾಜ್ಯಸಭೆ ಚುನಾವಣೆ ಫಲಿತಾಂಶ

• **ಹೊಸದಿಲ್ಲಿ:** ಬಿಹಾರ ಮತ್ತು ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಮಹತ್ವದ ಜಯ ದೊರೆತಿದೆ. ಬಿಜೆಪಿ ಬೆಂಬಲಿತ ಬಿಹಾರದಲ್ಲಿ ಐವರು ಮತ್ತು ಒಡಿಶಾದಲ್ಲಿ ಮೂವರು ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಹಾರದಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿ ಐವರು ಎನ್‌ಡಿಎ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಚುನಾವಣಾಧಿಕಾರಿ ಖ್ಯಾತಿ ಸಿಂಗ್ ಪ್ರಕಟಿಸಿದಂತೆ, ಕೇಂದ್ರ ಸಚಿವ ರಾಮನಾಥ್ ಠಾಕೂರ್(ಜೆಡಿಯು), ಬಿಜೆಪಿ ನಾಯಕ ಶಿವೇಶ್ ಕುಮಾರ್ ಮತ್ತು ರಾಷ್ಟ್ರೀಯ ಲೋಕ ಮೋರ್ಚಾ ಅಧ್ಯಕ್ಷ ಉಪೇಂದ್ರ ಕುಶ್ವಾಹಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ➡ಪುಟ ೪

ಎಲ್‌ಪಿಜಿ ವಿತರಣೆಗೆ ಸರ್ಕಾರ ಹೊಸ ನೀತಿ

• **ಬೆಂಗಳೂರು:** ಕೊಲ್ಲಿ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಉಂಟಾಗಿರುವ ಎಲ್‌ಪಿಜಿ ಕೊರತೆ ನೀಗಿಸಲು ಹಾಗೂ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ವಿತರಣೆಯನ್ನು ಸುಗಮಗೊಳಿಸಲು ರಾಜ್ಯ ಸರಕಾರ ಹೊಸ ನೀತಿ ಪ್ರಕಟಿಸಿದೆ.



ಐದು ಹಂತದಲ್ಲಿ ವರ್ಗೀಕರಣ: ಈ ನೀತಿ ಅನ್ವಯ, ಎಲ್‌ಪಿಜಿ ಪೂರೈಕೆ ಪ್ರಮಾಣ ಮೊದಲಿನ ಹಂತಕ್ಕೆ ತಲುಪುವವರೆಗೂ ಆದ್ಯತೆ ಮೇರೆಗೆ, ಅಗತ್ಯ ಸೇವೆಗಳಿಗಷ್ಟೇ ಸಿಲಿಂಡರ್ ಪೂರೈಸಲು ಕ್ರಮ ಕೈಗೊಂಡಿದೆ. ಇದೇ ಮಾದರಿಯಲ್ಲಿ ಎಲ್‌ಪಿಜಿ ಪೂರೈಸುವ ಎಲ್ಲ ಸಂಸ್ಥೆಗಳಿಗೂ ರಾಜ್ಯ ಸರಕಾರ ಸೂಚನೆ ನೀಡಿದ್ದು, ಪೂರೈಕೆಯನ್ನು ಐದು ಹಂತಗಳಲ್ಲಿ ವರ್ಗೀಕರಣ ಮಾಡಲಾಗಿದೆ. ಒಟ್ಟು ಪ್ರತಿನಿತ್ಯ 7 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಪೈಕಿ ಶಾಲಾ-ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಆಸ್ಪತ್ರೆಗಳು ಮತ್ತು ಇತರ ಅತ್ಯಗತ್ಯ ಸಂಸ್ಥೆಗಳಿಗೆ ಹೆಚ್ಚಿನ ಆದ್ಯತೆ ಮೇರೆಗೆ ಪ್ರತಿದಿನ 4,200 ಸಿಲಿಂಡಗರ್‌ಗಳನ್ನು ಪೂರೈಸಬೇಕಿದೆ. ಸರಕಾರಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳು, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿರುವ ಕ್ಯಾಂಟೀನ್‌ಗಳು, ಕೆಎಂಎಫ್ (ನಂದಿನಿ) ಮತ್ತು ಇಂದಿರಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1,200 ಸಿಲಿಂಡರ್‌ಗಳು ಪೂರೈಕೆಯಾಗಲಿವೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,59,800(2,63,500) ಅಪರಂಜಿ ಚಿನ್ನ: 15,670(15,800) ಆಭರಣ ಚಿನ್ನ: 14,590(14,635) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) ಷೇರು ಸೂಚ್ಯಂಕ ಬಿಎಸ್‌ಇ 75,502 (938↑) ಎನ್‌ಎಸ್‌ಇ 23,408 (257↑) $1 = ₹92.28

ಮಧ್ಯಪ್ರಾಚ್ಯ ಯುದ್ಧ ತೀವ್ರ: ಹಾರ್ಮುಜ್ ಸಾಗರದ ಮಾರ್ಗ ತಡೆ

ಯುದ್ಧ ನೌಕೆಗಳನ್ನು ಕಳುಹಿಸಲು ಓಗೊಡದ ಮಿತ್ರದೇಶಗಳು


ಬೈರೂತ್: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ತೀವ್ರಗೊಳ್ಳುತ್ತಿರುವ ಹಿನ್ನೆಲೆ ಜಾಗತಿಕ ಇಂಧನ ಸಂಕಷ್ಟದ ಭೀತಿ ಹೆಚ್ಚಾಗಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ಬಳಿಕ ಇರಾನ್ ಪ್ರತಿ ದಾಳಿ ನಡೆಸುತ್ತಿದ್ದು, ಪ್ರಮುಖ ಸಾಗಣೆ ಮಾರ್ಗವಾದ ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆ ಸ್ಥಗಿತಗೊಂಡಿದೆ. ಈ ಮಾರ್ಗದ ಮೂಲಕ ವಿಶ್ವದ ಸುಮಾರು ಐದನೇ ಭಾಗದ ತೈಲ ಸಾಗಣೆ ನಡೆಯುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಕಂಡುಬಂದಿದೆ.

ಏತನ್ಮಧ್ಯೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾರ್ಮುಜ್ ಮಾರ್ಗವನ್ನು ಸುರಕ್ಷಿತಗೊಳಿಸಲು ಹಲವು ದೇಶಗಳಿಗೆ ಯುದ್ಧ ನೌಕೆಗಳನ್ನು ಕಳುಹಿಸುವಂತೆ ಮನವಿ ಮಾಡಿದ್ದಾರೆ. ಆದರೆ ಇದುವರೆಗೆ ಯಾವುದೇ ದೇಶ ಸ್ಪಷ್ಟವಾಗಿ ಒಪ್ಪಿಗೆ ನೀಡಿಲ್ಲ. ಇದೇ ವೇಳೆ ಸಹಾಯ ಮಾಡದ ದೇಶಗಳನ್ನು ನಾವು ನೆನಪಿಟ್ಟುಕೊಳ್ಳುತ್ತೇವೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇನ್ನೊಂದೆಡೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಯುದ್ಧ ವಿರಾಮ ಅಥವಾ ಮಾತುಕತೆ ಸಾಧ್ಯತೆಗಳ ಕುರಿತು ಹೊರಬರುತ್ತಿರುವ ವರದಿಗಳನ್ನು ತಳ್ಳಿಹಾಕಿದ್ದಾರೆ.

ಇರಾನ್ ದಾಳಿಗಳ ಭೀತಿಯಿಂದ ಹಾರ್ಮುಜ್ ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಸಂಚಾರ ಬಹುತೇಕ ನಿಂತಿದೆ. ಈ ಮಾರ್ಗದ ಮೂಲಕ ವಿಶ್ವದ ಸುಮಾರು 20% ತೈಲ ಸಾಗಣೆ ನಡೆಯುತ್ತದೆ.

ಈ ಪರಿಸ್ಥಿತಿಯಿಂದ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್ ಮೀರಿದ್ದು, ಸೋಮವಾರ ಆರಂಭಿಕ ವಹಿವಾಟಿನಲ್ಲಿ 104 ಡಾಲರ್‌ಗೆ ಏರಿಕೆಯಾಗಿದೆ. ಫೆಬ್ರವರಿ 28ರಿಂದ ಇದು ಸುಮಾರು 45% ಏರಿಕೆಯಾಗಿದೆ.



ಜಾಗತಿಕ ಆರ್ಥಿಕತೆಗೆ ಹೊಡೆತ

ಈ ಯುದ್ಧದಿಂದ ಇಂಧನ ಮತ್ತು ರಸಗೊಬ್ಬರ ಬೆಲೆ ಏರಿಕೆ ಕಂಡುಬರುತ್ತಿದ್ದು, ಬಡ ರಾಷ್ಟ್ರಗಳಲ್ಲಿ ಆಹಾರ ಕೊರತೆ ಉಂಟಾಗುವ ಆತಂಕ ವ್ಯಕ್ತವಾಗಿದೆ. ಜಾಗತಿಕ ಆರ್ಥಿಕತೆಗೂ ಇದರ ಪರಿಣಾಮ ಬೀರುವ ಸಾಧ್ಯತೆ ಇದೆ.

ಜಾಗತಿಕ ಇಂಧನ ಸಂಕಷ್ಟ ಭೀತಿ

ಚಬಹಾರ್ ಸಮೀಪದ ಮಿಲಿಟರಿ ನೆಲೆಗಳ ಮೇಲೆ ಅಮೆರಿಕ ದಾಳಿ

ಇರಾನ್‌ನ ವ್ಯೂಹಾತ್ಮಕ ಚಬಹಾರ್ ಮುಕ್ತ ವ್ಯಾಪಾರ–ಕೈಗಾರಿಕಾ ವಲಯದ(ಸಿಎಫ್ ಝೆಡ್) ಸಮೀಪವಿರುವ ಮಿಲಿಟರಿ ನೆಲೆಗಳ ಮೇಲೆ ಅಮೆರಿಕದ ಫೈಟರ್ ಜೆಟ್‌ಗಳು ದಾಳಿ ನಡೆಸಿವೆ ಎಂದು ವರದಿಯಾಗಿದೆ. ಸಂಘರ್ಷ ಮೂರನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಸಿಸ್ತಾನ್ ಮತ್ತು ಬಲೂಚಿಸ್ತಾನ್ ಪ್ರಾಂತ್ಯದ ಈ ವ್ಯಾಪಾರ ಕೇಂದ್ರದ ಹಿಂಭಾಗದಲ್ಲಿ ಭೀಕರ ಸ್ಫೋಟದ ಶಬ್ದ ಕೇಳಿಬಂದಿದೆ, ಎಂದು ವಾಯ್ಸ್ ಆಫ್ ಅಮೇರಿಕಾ ವರದಿ ಮಾಡಿದೆ.


ಮಧ್ಯ ಏಷ್ಯಾವನ್ನು ಹಿಂದೂ ಮಹಾಸಾಗರಕ್ಕೆ ಸಂಪರ್ಕಿಸುವ ಅತ್ಯಂತ ಪ್ರಮುಖ ತೆರಿಗೆ ಮುಕ್ತ ಕೇಂದ್ರದ ಸಮೀಪವಿರುವ ಪ್ರದೇಶಗಳನ್ನು ಈ ದಾಳಿಯಲ್ಲಿ ಗುರಿಪಡಿಸಲಾಗಿದೆ. ಹಾರ್ಮುಜ್ ಜಲಸಂಧಿಯನ್ನು ಬಳಸದೆಯೇ ನೇರ ಸಮುದ್ರ ಮಾರ್ಗವನ್ನು ಒದಗಿಸುವ ಈ ವಲಯ ಇರಾನ್‌ಗೆ ಅತ್ಯಂತ ನಿರ್ಣಾಯಕ. ಒಂದು ವೇಳೆ ಗಲ್ಫ್ ಹಡಗು ಸಂಚಾರಕ್ಕೆ ಇರಾನ್ ಅಡ್ಡಿಪಡಿಸುವುದನ್ನು ಮುಂದುವರಿಸಿದರೆ, ಈ ದಾಳಿಗಳನ್ನು ಇಂಧನ ಮೂಲಸೌಕರ್ಯಗಳಿಗೂ ವಿಸ್ತರಿಸಲಾಗುವುದು, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

550ಕ್ಕೂ ಹೆಚ್ಚು ಪ್ರಯಾಣಿಕರ ಸ್ಥಳಾಂತರ

ಹೊಸದಿಲ್ಲಿ: ಭಾರತವು ತನ್ನ 550ಕ್ಕೂ ಹೆಚ್ಚು ಪ್ರಜೆಗಳನ್ನು ಇರಾನ್‌ನಿಂದ ಅರ್ಮೇನಿಯಾದ ಮೂಲಕ ಸ್ಥಳಾಂತರಿಸಿದೆ. ಇದಕ್ಕೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅರ್ಮೇನಿಯಾಗೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಧನ್ಯವಾದ ಹೇಳಿದ್ದಾರೆ. ಈವರೆಗೆ 20 ಸಾವಿರಕ್ಕೂ ಅಧಿಕ ಮಂದಿಯನ್ನು ಸುರಕ್ಷಿತವಾಗಿ ಕರೆತರಲಾಗಿದೆ. ಸುಮಾರು 9,000 ಭಾರತೀಯರು ಇರಾನ್‌ನಲ್ಲಿ ನೆಲೆಸಿದ್ದಾರೆ. ಅಜರ್‌ಬೈಜಾನ್ ಮತ್ತು ಅರ್ಮೇನಿಯಾಗೆ ಪ್ರಯಾಣಿಸಲು ಬಯಸುವವರಿಗೆ ಭಾರತ ಸರ್ಕಾರವು ಸಹಾಯ ಮಾಡುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.



ಇರಾನ್ ತೈಲ ಕೇಂದ್ರದ ವಶಕ್ಕೆ ಅಮೆರಿಕ ಚಿಂತನೆ



ವಾಷಿಂಗ್ಟನ್: ಟೆಹ್ರಾನ್‌ನ ಕಡಲ ದಿಗ್ಬಂಧನವನ್ನು ಭೇದಿಸಿ ಉಲ್ಬಣಗೊಳ್ಳುತ್ತಿರುವ ಜಾಗತಿಕ ಇಂಧನ ಬಿಕ್ಕಟ್ಟನ್ನು ಪರಿಹರಿಸಲು ಖಾರ್ಗ್ ದ್ವೀಪದ ಮೇಲೆ ಮಿಲಿಟರಿ ಹಸ್ತಕ್ಷೇಪ ಮಾಡುವ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಿಶೀಲಿಸುತ್ತಿದ್ದಾರೆ ಎನ್ನಲಾಗಿದೆ. ಪರ್ಷಿಯನ್ ಕೊಲ್ಲಿಯಲ್ಲಿ ತೈಲ ಟ್ಯಾಂಕರ್‌ಗಳ ಸಂಚಾರ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಇರಾನ್‌ನ ಪ್ರಮುಖ ತೈಲ ರಫ್ತು ಕೇಂದ್ರವನ್ನು ವಶಪಡಿಸಿಕೊಳ್ಳುವ ಸಾಧ್ಯತೆಯಿದೆ, ಎಂದು ಮೂಲಗಳು ತಿಳಿಸಿವೆ. ಟ್ರಂಪ್, ಅತ್ಯಮೂಲ್ಯ ರತ್ನ ಎಂದೇ ವ್ಯಾಖ್ಯಾನಿಸುವ ಖಾರ್ಗ್ ದ್ವೀಪವನ್ನು ಅಮೆರಿಕದ ಅಧಿಕಾರಿಗಳು ನಿರ್ಣಾಯಕ ಗುರಿಯೆಂದು ಪರಿಗಣಿಸಿದ್ದಾರೆ. ಈ ಸೌಲಭ್ಯದ ಮೇಲಿನ ನಿಯಂತ್ರಣ ಸಾಧಿಸಿ, ಇರಾನ್ ಆಡಳಿತದ ಆರ್ಥಿಕ ಮೂಲವನ್ನೇ ಕಡಿತಗೊಳಿಸುವ ಯೋಜನೆ ಅವರದ್ದು ಎಂದು ನಂಬಲಾಗಿದೆ.


ದ್ವೀಪದ ಮೇಲಿರುವ ಮಿಲಿಟರಿ ನೆಲೆಗಳ ಮೇಲೆ ಈಗಾಗಲೇ ದಾಳಿ ನಡೆಸಲು ಆದೇಶಿಸಲಾಗಿದ್ದರೂ, ಭೂಸೇನೆಯನ್ನು ನಿಯೋಜಿಸುವುದು ಹೆಚ್ಚಿನ ಅಪಾಯದ ಕ್ರಮವೆಂದು ಪರಿಗಣಿಸಲಾಗಿದೆ. ನೆರೆಯ ಕೊಲ್ಲಿ ರಾಷ್ಟ್ರಗಳ ತೈಲ ಮೂಲಸೌಕರ್ಯಗಳ ಮೇಲೆ ಪ್ರತೀಕಾರದ ದಾಳಿಗಳು ನಡೆಯಬಹುದು ಎಂಬ ಆತಂಕ ವ್ಯಕ್ತವಾಗಿದೆ. ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಪ್ರಮುಖ ಮಿತ್ರರಾಷ್ಟ್ರವಾದ ಇಸ್ರೇಲ್, ಇರಾನ್‌ನಲ್ಲಿ ಸದ್ಯಕ್ಕೆ ನೇರ ಭೂಸೇನಾ ಕಾರ್ಯಾಚರಣೆಗೆ ಇಳಿಯಲು ಒಲವು ಹೊಂದಿಲ್ಲ ಎನ್ನಲಾಗಿದೆ.

ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

ಸೋಮವಾರ ಬೆಳಗ್ಗೆ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ಇಂಧನ ಟ್ಯಾಂಕ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ ಪರಿಣಾಮ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಕೆಲ ಗಂಟೆಗಳ ಕಾಲ ವಿಮಾನ ಸಂಚಾರ ಸ್ಥಗಿತಗೊಂಡು ಬಳಿಕ ಪುನರಾರಂಭವಾಯಿತು. ಯಾವುದೇ ಗಾಯಗಳ ವರದಿ ಇಲ್ಲ. ಇದಕ್ಕೂ ಮುನ್ನ ಅಬುಧಾಬಿಯಲ್ಲಿ ಇರಾನ್ ಕ್ಷಿಪಣಿ ದಾಳಿಯಿಂದ ಒಂದು ವಾಹನಕ್ಕೆ ಹಾನಿಯಾದ ಪರಿಣಾಮ ಒಬ್ಬರು ಮೃತಪಟ್ಟಿದ್ದಾರೆ. ಫುಜೈರಾ ಪ್ರದೇಶದ ತೈಲ ಘಟಕದಲ್ಲೂ ಡ್ರೋನ್ ದಾಳಿಯಿಂದ ಬೆಂಕಿ ಕಾಣಿಸಿಕೊಂಡಿದೆ.

ಬೈರೂತ್, ಟೆಹ್ರಾನ್ ಮೇಲೆ ಇಸ್ರೇಲ್ ದಾಳಿ

ಇಸ್ರೇಲ್ ಸೇನೆ ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಹೆಜ್ಬೊಲ್ಲಾ ಸಂಘಟನೆಯ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಹೊಸ ದಾಳಿಗಳನ್ನು ನಡೆಸಿದೆ. ಈ ದಾಳಿಯಿಂದ ದಕ್ಷಿಣ ಲೆಬನಾನ್‌ನಲ್ಲಿ ಕನಿಷ್ಠ ಏಳು ಮಂದಿ ಮೃತಪಟ್ಟಿದ್ದಾರೆ. ಇದುವರೆಗೆ ಲೆಬನಾನ್‌ನಲ್ಲಿ 850ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸುಮಾರು 8 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ.ಟೆಹ್ರಾನ್ ಮೇಲೂ ಇಸ್ರೇಲ್ ಹೊಸ ದಾಳಿಗಳನ್ನು ನಡೆಸಿದ್ದು, ಹಲವು ಸ್ಫೋಟಗಳ ಶಬ್ದಗಳು ಕೇಳಿಬಂದಿವೆ. ಇತ್ತೀಚಿನ ಯುದ್ಧದಲ್ಲಿ ಇರಾನ್‌ನಲ್ಲಿ 1300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.





ಭಾರತೀಯರಿಗೆ ಸಲಹೆ

ಪ್ರಸ್ತುತ ಇರಾನ್‌ನಲ್ಲಿರುವ ತನ್ನ ನಾಗರಿಕರು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಪೂರ್ವಭಾವಿ ಮತ್ತು ಸ್ಪಷ್ಟ ಮಾಹಿತಿ ಇಲ್ಲದೆ ಯಾವುದೇ ಭೂ ಗಡಿ ದಾಟಲು ಪ್ರಯತ್ನಿಸಬೇಡಿ ಎಂದು ಭಾರತವು ಸೋಮವಾರ ಮತ್ತೊಂದು ಸಲಹೆ ನೀಡಿದೆ. ಇರಾನ್‌ಗೆ ಮಾರ್ಗದರ್ಶನವಿಲ್ಲದೆ ಭೂ ಗಡಿಗಳ ಮೂಲಕ ಹೊರಡಲು ಪ್ರಯತ್ನಿಸುವ ಭಾರತೀಯ ಪ್ರಜೆಗಳು ಗಂಭೀರ ಸಾರಿಗೆ ಮತ್ತು ವಲಸೆ ತೊಂದರೆಗಳನ್ನು ಎದುರಿಸುವ ಸಾಧ್ಯತೆಯಿದೆ ಎಂದು ರಾಯಭಾರ ಕಚೇರಿಯು ಹೇಳಿದೆ.

4,300ಕ್ಕೂ ಹೆಚ್ಚು ವಿಮಾನಗಳು ರದ್ದು

ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಭಾರತೀಯ ವಿಮಾನಯಾನ ಸಂಸ್ಥೆಗಳು ಈವರೆಗೆ 4,335 ವಿಮಾನಗಳನ್ನು ಮತ್ತು ವಿದೇಶಿ ವಿಮಾನಯಾನ ಸಂಸ್ಥೆಗಳು 1,187 ವಿಮಾನಗಳನ್ನು ರದ್ದುಗೊಳಿಸಿವೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು ಸೋಮವಾರ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ. ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ವಾಯುಪ್ರದೇಶದ ಮುಚ್ಚುವಿಕೆಯಿಂದಾಗಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ಒಳಗೊಂಡ ಉಲ್ಬಣಗೊಳ್ಳುತ್ತಿರುವ ಸಂಘರ್ಷವು ವಿಮಾನ ಕಾರ್ಯಾಚರಣೆಯನ್ನು ಗಮನಾರ್ಹವಾಗಿ ಅಡ್ಡಿಪಡಿಸಿದೆ. ಪ್ರಶ್ನೋತ್ತರದ ಸಮಯದಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ನಾಯ್ಡು, ವಿಮಾನಯಾನ ಕಾರ್ಯಾಚರಣೆಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಪ್ರತಿಪಾದಿಸಿದರು.

ಮೋದಿ ಇಸ್ರೇಲ್ ಭೇಟಿಗೂ ಸಮರಕ್ಕೂ ಸಂಬಂಧವಿಲ್ಲ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಇಸ್ರೇಲ್ ಭೇಟಿ ಮುಗಿಸಿ ಭಾರತಕ್ಕೆ ಮರಳಿದ 2 ದಿನ ನಂತರ ಇರಾನ್ ವಿರುದ್ಧ ಮಿಲಿಟರಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಪ್ರಧಾನಿ ಮೋದಿ ಪ್ರವಾಸವನ್ನು ದಾಳಿ ಕಾರ್ಯಾಚರಣೆ ಜತೆ ಥಳುಕು ಹಾಕುವುದು ತಪ್ಪು ಎಂದು ಇಸ್ರೇಲ್‌ನ ಭಾರತ ರಾಯಭಾರಿ ರುವೆನ್ ಅಝುರ್ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಧಾನಿ ಮೋದಿ ಭೇಟಿಗೆ ಮುನ್ನ ವಲಯದಲ್ಲಿ ಸನ್ನಿವೇಶ ಅತ್ಯಂತ ಪ್ರಕ್ಷುಬ್ಧವಾಗಿತ್ತು. ಪ್ರಧಾನಿ ಮೋದಿ ಇಸ್ರೇಲ್‌ನಿಂದ ನಿರ್ಗಮಿಸಿದ ಬಳಿಕವೇ ಇರಾನ್ ವಿರುದ್ಧ ಮಿಲಿಟರಿ ಕಾರ್ಯಾಚರಣೆಗಳ ಶುರು ಮಾಡಲಾಗಿತ್ತು. ಪ್ರಧಾನಿ ಮೋದಿ ಇಸ್ರೇಲ್‌ನಿಂದ ನಿರ್ಗಮಿಸಿದ ಎರಡು ದಿನಗಳ ತರುವಾಯ, ಕಾರ್ಯಾಚರಣೆ ನಿರ್ಧಾರವನ್ನು ಇಸ್ರೇಲ್ ಸಂಪುಟವು ಕೈಗೊಂಡಿತು. ಈ ಹಿನ್ನೆಲೆಯಲ್ಲಿ ಮೋದಿಯವರ ಇಸ್ರೇಲ್ ಪ್ರವಾಸವನ್ನು ಮಿಲಿಟರಿ ಕಾರ್ಯಾಚರಣೆಯೊಂದಿಗೆ ಜೋಡಿಸುವುದು ಸರಿಯಲ್ಲವೆಂದು ಅಝುರ್ ಪುನರುಚ್ಚರಿಸಿದ್ದಾರೆ.

ಕಳೆದ 9ವರ್ಷಗಳಲ್ಲಿ ದ್ವಿತೀಯ ಬಾರಿ ಫೆ.25ರಂದು ಪ್ರಧಾನಿ ಮೋದಿ ಇಸ್ರೇಲ್‌ಗೆ ಭೇಟಿ ನೀಡಿದ್ದರು. ಅಧ್ಯಕ್ಷ ಬೆಂಜಮಿನ್ ನೆತನ್ಯಾಹು ಜತೆ ಮಾತುಕತೆ ಬಳಿಕ ಮರುದಿನ ಭಾರತಕ್ಕೆ ವಾಪಸ್ಸಾಗಿದ್ದರು. ಫೆ.28ರಂದು ಮುಂಜಾನೆ ಅಮೆರಿಕ ಸಹಕಾರದೊಂದಿಗೆ ಇಸ್ರೇಲ್ ಇರಾನ್ ವಿರುದ್ಧ ಭಾರೀ ಮಿಲಿಟರಿ ಕಾರ್ಯಾಚರಣೆ ನಡೆಸಿತ್ತು. ಸಂಭಾವ್ಯ ಪರಮಾಣು ಒಪ್ಪಂದ ಕುರಿತ ಮಾತುಕತೆಗಳು ನಡೆದಿರುವಂತೆಯೇ, ಟೆಹ್ರಾನ್ ಅಣ್ವಸ್ತ್ರ ತಯಾರಿಗೆ ಮುಂದಾಗಿರುವುದು ತೀರಾ ತಪ್ಪೆಂಬುದು ಇಸ್ರೇಲ್ ಆರೋಪವಾಗಿದೆ.

ಕಿರುಸುದ್ದಿ

ಸಿಪಿಐಗೆ ರಾಜೀನಾಮೆ ನೀಡಿದ್ದ ಶಾಸಕ ಬಿಜೆಪಿಗೆ

ತ್ರಿಶೂರ್: ಕೇರಳದಲ್ಲಿ ರಾಜಕೀಯ ಬದಲಾವಣೆಗಳು ತೀವ್ರಗೊಳ್ಳುತ್ತಿದ್ದು, ಇತ್ತೀಚೆಗೆ ಸಿಪಿಐಗೆ ರಾಜೀನಾಮೆ ನೀಡಿದ್ದ ನಾಟ್ಟಿಕಾ ಶಾಸಕ ಸಿ.ಸಿ.ಮುಕುಂದನ್ ಅವರು ಸೋಮವಾರ ಬಿಜೆಪಿ ಸೇರಿದ್ದಾರೆ. ಜಿಲ್ಲಾ ಬಿಜೆಪಿ ಕಚೇರಿಗೆ ಆಗಮಿಸಿದ ಮುಕುಂದನ್ ಅವರು ಅಲ್ಲಿ ಬಿಜೆಪಿ ಸದಸ್ಯತ್ವ ಸ್ವೀಕರಿಸಿದ್ದು, ಅವರನ್ನು ನಾಟ್ಟಿಕಾ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ನಿರೀಕ್ಷೆಯಿದೆ. ತಾನು ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಪ್ರಕಟಿಸಿದ ಬಳಿಕ ಅವರನ್ನು ಪಕ್ಷದಿಂದ ಉಚ್ಚಾಟಿಸಿರುವುದಾಗಿ ಸಿಪಿಐ ಹೇಳಿಕೊಂಡಿತ್ತು.

ಬೆಂಕಿ ಅವಘಡದಲ್ಲಿ 10 ರೋಗಿಗಳ ಸಾವು

ಭುವನೇಶ್ವರ: ಸರ್ಕಾರಿ ಸ್ವಾಮ್ಯದ ಎಸ್‌ಸಿಬಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಐಸಿಯುನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 10 ರೋಗಿಗಳು ಮೃತಪಟ್ಟಿದ್ದು, 11 ಮಂದಿ ಗಾಯಗೊಂಡಿದ್ದಾರೆ. ಮೃತರ ಕುಟುಂಬಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ತಲಾ 25 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದರು. ಪ್ರಧಾನಿ ಮೋದಿ ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ.

ಭಾರತದ ಫೆಬ್ರವರಿ ತಿಂಗಳ ಸರಕು ರಫ್ತಲ್ಲಿ ಅಲ್ಪ ಕುಸಿತ

ಹೊಸದಿಲ್ಲಿ: ಭಾರತದ ಸರಕು ರಫ್ತು ಫೆಬ್ರವರಿಯಲ್ಲಿ ಶೇ. 0.81 ರಷ್ಟು ಕುಸಿದು 36.61 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ವ್ಯಾಪಾರ ಕೊರತೆ ಕಳೆದ ತಿಂಗಳಿಗಿಂತ 27.1 ಬಿಲಿಯನ್ ಡಾಲರ್‌ಗಳಿಗೆ ಇಳಿಕೆಯಾಗಿದೆ.

ವ್ಯಾಪಾರ ಕೊರತೆ ಜನವರಿಯ 34.68 ಬಿಲಿಯನ್ ಡಾಲರ್‌ಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ, ಆದರೆ ಕಳೆದ ವರ್ಷದ ಫೆಬ್ರವರಿಯ 14.05 ಬಿಲಿಯನ್ ಡಾಲರ್‌ಗಳಿಗೆ ಹೋಲಿಸಿದರೆ ಹೆಚ್ಚಾಗಿದೆ. ಚಿನ್ನದ ಆಮದು ಶೇ. 218.55 ಮತ್ತು ಬೆಳ್ಳಿ ಆಮದು ಶೇ. 285.23 ರಷ್ಟು ಏರಿಕೆಯಾದ ಕಾರಣ, ಒಟ್ಟು ಆಮದು ಶೇ. 24.11 ರಷ್ಟು ಹೆಚ್ಚಾಗಿ 63.71 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ.

ಸರಕು ಸಾಗಣೆ ವೆಚ್ಚದ ಬಿಸಿ: ಫೆಬ್ರವರಿ 28 ರಂದು ಆರಂಭವಾದ ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಮಾರ್ಚ್ ತಿಂಗಳ ರಫ್ತು ಕುಸಿಯುವ ಸಾಧ್ಯತೆಯಿದೆ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ತಿಳಿಸಿದ್ದಾರೆ. ಹೆಚ್ಚುತ್ತಿರುವ ತೈಲ ಬೆಲೆಗಳು ಮತ್ತು ಅಸ್ತವ್ಯಸ್ತಗೊಂಡಿರುವ ಕಡಲ ಮಾರ್ಗಗಳು ಸರಕು ಸಾಗಣೆ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಿವೆ.

ಜಾಗತಿಕ ಸವಾಲುಗಳ ನಡುವೆಯೂ ಏಪ್ರಿಲ್–ಫೆಬ್ರವರಿ ಅವಧಿಯ ಒಟ್ಟು ರಫ್ತು ಶೇ. 1.84 ರಷ್ಟು ಏರಿಕೆಯಾಗಿ 402.93 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ರಫ್ತುದಾರರು ಎದುರಿಸುತ್ತಿರುವ ಸಾಗಾಣಿಕೆ ಅಡಚಣೆಗಳನ್ನು ಪರಿಹರಿಸಲು ಸರ್ಕಾರ ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ.

ಮುರ್ಮು ಭೇಟಿಗಾಗಿ ಟಿಎಂಸಿ ಮತ್ತೆ ಮನವಿ

ಹೊಸದಿಲ್ಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಾರ್ಯಕ್ರಮ ಮತ್ತು ಪ್ರೋಟೋಕಾಲ್ ವಿಚಾರದಲ್ಲಿ ವಿವಾದ ಮೈಗತ್ತಿಸಿಕೊಂಡಿರುವ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಮತ್ತೊಮ್ಮೆ ಅವರ ಭೇಟಿಗೆ ಸಮಯ ಕೋರಿದೆ. ಈಗಾಗಲೇ ಎರಡು ಬಾರಿ ಈ ಸಂಬಂಧ ಸಲ್ಲಿಕೆಯಾಗಿದ್ದ ಮನವಿಯನ್ನು ರಾಷ್ಟ್ರಪತಿ ಕಾರ್ಯಾಲಯ ತಿರಸ್ಕರಿಸಿದೆ. ಸದ್ಯ ಸಮಯಾಭಾವ ಇರುವುದರಿಂದ ಭೇಟಿ ಸಾಧ್ಯವಿಲ್ಲ ಎಂದಿದೆ. ಇದರ ನಡುವೆಯೂ ಮೂರನೇ ಬಾರಿಗೆ ಮನವಿ ಸಲ್ಲಿಕೆ ಮಾಡಿದ್ದು, ಭೇಟಿಗೆ ಅವಕಾಶ ಕೇಳಿದೆ. ಪಶ್ಚಿಮ ಬಂಗಾಳ ಸರ್ಕಾರ ಕೈಗೊಂಡಿರುವ ಕಲ್ಯಾಣ ಯೋಜನೆಗಳ ಕುರಿತು ವಿವರಿಸಲು ಸಮಯ ನೀಡುವಂತೆ ಪತ್ರ ಬರೆದಿದೆ. ಮಾ. 9ರಂದು ಟಿಎಂಸಿಯ ಹಿರಿಯ ನಾಯಕರು ರಾಷ್ಟ್ರಪತಿಗೆ ಮೊದಲ ಪತ್ರ ಬರೆದು, ಸಂಸದರು ಹಾಗೂ ರಾಜ್ಯ ಸಚಿವರು ಸೇರಿರುವ 12–15 ಸದಸ್ಯರ ಪ್ರತಿನಿಧಿ ಮಂಡಳಿಗೆ ಭೇಟಿಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದರು. ಪಶ್ಚಿಮ ಬಂಗಾಳ ಸರ್ಕಾರವು ಸಮಾಜದ ಎಲ್ಲಾ ವರ್ಗಗಳ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ರಾಷ್ಟ್ರಪತಿಗೆ ವಿವರಿಸಲು ಈ ಭೇಟಿಯನ್ನು ಕೇಳಲಾಗಿದೆ ಎಂದು ಪತ್ರದಲ್ಲಿ ತಿಳಿಸಲಾಗಿತ್ತು. ಮತ್ತೆ ಮಾ.11ರಂದು ಪತ್ರ ಬರೆಯಲಾಗಿತ್ತು. ಮಾ.7ರಂದು ಪಶ್ಚಿಮ ಬಂಗಾಳ ಭೇಟಿ ವೇಳೆ ಸಿಎಂ ಮಮತಾ ಬ್ಯಾನರ್ಜಿ ಅವರು ರಾಷ್ಟ್ರಪತಿಗಳನ್ನು ಸ್ವಾಗತಿಸಲು ಹೋಗಿರಲಿಲ್ಲ. ಅಲ್ಲದೆ, ಹಿರಿಯ ಅಧಿಕಾರಿಗಳೂ ತೆರಳಿರಲಿಲ್ಲ. ಇದರಿಂದ ವ್ಯಾಪಕ ಟೀಕೆಗೆ ಗುರಿಯಾದ ಟಿಎಂಸಿ ಈಗ ಮುಖ ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಬಳಿಕ ರಾಷ್ಟ್ರಪತಿಗಳ ಭೇಟಿಗಾಗಿ ಟಿಎಂಸಿ ಪದೇ ಪದೆ ಮನವಿ ಸಲ್ಲಿಕೆ ಮಾಡುತ್ತಿದೆ.

ಪಬಂ: ಸಿಎಸ್, ಡಿಜಿಪಿ ಸೇರಿ ಏಳು ಅಧಿಕಾರಿಗಳ ವರ್ಗ

ಕೋಲ್ಕತಾ: ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಸರ್ಕಾರದ ಅಂದಾದುಂದಿ ಆಡಳಿತ ಮುಂದುವರಿದಿರುವಂತೆಯೇ, ಚುನಾವಣಾ ಆಯೋಗ ಆ ರಾಜ್ಯದಲ್ಲಿ ಹಿಂಸಾಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಮತ್ತು ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಅವರ ಸ್ಥಾನದಿಂದ ಪದಚ್ಯುತಗೊಳಿಸಿ ಅವರ ಸ್ಥಾನಗಳಿಗೆ ದಕ್ಷ , ಅನುಭವೀ ಅಧಿಕಾರಿಗಳನ್ನು ನಿಯೋಜಿಸಿದೆ. ರಾಜ್ಯದಲ್ಲಿ 2 ಹಂತಗಳ ಚುನಾವಣೆ ಘೋಷಣೆಯಾದ ಬೆನ್ನಿಗೇ, ಪಶ್ಚಿಮ ಬಂಗಾಲದಲ್ಲಿ ಉನ್ನತ ಆಡಳಿತ ಮತ್ತು ಪೊಲೀಸ್ ಆಡಳಿತ ವ್ಯವಸ್ಥೆಯನ್ನು ಪುನರ್‌ರಚಿಸಿರುವ ಚುನಾವಣಾ ಆಯೋಗ ಕಟ್ಟುನಿಟ್ಟಿನ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ, ಗೃಹಕಾರ್ಯದರ್ಶಿ ಜಗದೀಶ್ ಪ್ರಸಾದ್ ಮೀನಾ, ಡಿಜಿಪಿ ಪೀಯೂಷ್ ಪಾಂಡೆ, ಕೋಲ್ಕತಾ ಪೊಲೀಸ್ ಕಮಿಷನರ್ ಆಗಿರುವ ಸುಪ್ರತಿಮ್ ಸರ್ಕಾರ್ ಸೇರಿದಂತೆ ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಬದಲಿಸಿದೆ. ಮುಖ್ಯ ಕಾರ್ಯದರ್ಶಿಯಾಗಿ ದಕ್ಷ ಮತ್ತು ಅನುಭವಿ ಅಧಿಕಾರಿ ಎಂದೇ ಗುರುತಿಸಲ್ಪಟ್ಟ ದುಷ್ಯಂತ್ ನಾರಿಯಾಲ ಅವರನ್ನು ನೇಮಿಸಿದೆ. ಹಾಗೆಯೇ ನೂತನ ಗೃಹಕಾರ್ಯದರ್ಶಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಸಂಘಮಿತ್ರಾ ಘೋಷ್ ಅವರನ್ನು ನೇಮಿಸಿದೆ.ಹೊಸ ಪೊಲೀಸ್ ಮಹಾನಿರ್ದೇಶಕರಾಗಿ ಹಿರಿಯ ಐಪಿಎಸ್ ಅಧಿಕಾರಿ ಸಿದ್ಧ್ ನಾಥ್ ಗುಪ್ತಾ ಅವರನ್ನು ಮತ್ತು ಕೋಲ್ಕತಾ ಪೊಲೀಸ್ ಆಯುಕ್ತರನ್ನಾಗಿ ಅಜಯ್ ಕುಮಾರ್, ನಂದಾ, ಕಾನೂನು ಸುವ್ಯವಸ್ಥೆಯ ಎಡಿಜಿ ವಿನೀತ್ ಗೋಯಲ್ ಅವರ ಸ್ಥಾನಕ್ಕೆ ಅಜಯ್ ಮುಕುಂದ್ ರಾನಡೆ ಅವರನ್ನು, ನಟರಾಜನ್ ರಮೇಶ್ ಬಾಬು ಅವರನ್ನು ಸುಧಾರಣಾ ಸೇವೆಗಳ ಡಿಜಿ ಆಗಿ ನೇಮಿಸಿದೆ.

ಜೆಫ್ರಿ ಎಪ್‌ಸ್ಟೀನ್: ಪುರಿ ಪುತ್ರಿಯಿಂದ ಮಾನನಷ್ಟ ಕೇಸ್



ಹೊಸದಿಲ್ಲಿ: ಜೆಫ್ರಿ ಎಪ್‌ಸ್ಟೀನ್ ಕ್ರಿಮಿನಲ್ ಚಟುವಟಿಕೆಗಳಿಗೆ ಮತ್ತು ತಮಗೂ ನಂಟು ಕಲ್ಪಿಸುವ ಮಾನಹಾನಿಕರ ವಿಷಯ ಹರಡಿದ್ದಕ್ಕಾಗಿ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಾಯನಿ ಪುರಿ ಅವರು ಹಲವಾರು ವ್ಯಕ್ತಿಗಳು ಮತ್ತು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ವಿರುದ್ಧ 10 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಇವರು ದಿಲ್ಲಿ ಹೈಕೋರ್ಟ್‌ನಲ್ಲಿ 10 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಿದ್ದು, ತಮ್ಮ ವಿರುದ್ಧ ವಿಷಯವನ್ನು ಪ್ರಕಟಿಸದಂತೆ ಶಾಶ್ವತ ಮತ್ತು ಕಡ್ಡಾಯ ತಡೆಯಾಜ್ಞೆ, 10 ಕೋಟಿ ರೂ. ಪರಿಹಾರ ಮತ್ತು ಬೇಷರತ್ತಾದ ಕ್ಷಮೆಯಾಚನೆ ಕೋರಿದ್ದಾರೆ. ಈ ಪ್ರಕರಣವನ್ನು ಮಂಗಳವಾರ ವಿಚಾರಣೆ ನಡೆಸುವ ಸಾಧ್ಯತೆಯಿದೆ.

ಜಾತಿವಾದದಿಂದ ಸಾಮಾಜಿಕ ಚೌಕಟ್ಟು ದುರ್ಬಲ

ಧರ್ಮಕ್ಕಿದೆ ಸಂಘಟಿಸುವ ಶಕ್ತಿ

ಜೈಪುರ: ಜಾತಿ ವ್ಯವಸ್ಥೆ ಸಮಾಜ ಸಂಘಟನೆಗಾಗಿ ಮಾಡಿಕೊಂಡ ವ್ಯವಸ್ಥೆಯಾಗಿದೆ. ಜಾತೀಯವಾದವು ಸಾಮಾಜಿಕ ಚೌಕಟ್ಟನ್ನು ದುರ್ಬಲಗೊಳಿಸುತ್ತದೆ ಮತ್ತು ರಾಷ್ಟ್ರವನ್ನು ಒಡೆಯುತ್ತದೆ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಎಚ್ಚರಿಸಿದ್ದಾರೆ. ಧರ್ಮವು ಸಮಾಜವನ್ನು ಸಂಘಟಿಸುವ ಶಕ್ತಿಯಾಗಬೇಕೆಂದು ಅವರು ನುಡಿದರು. ಜಲೋರ್‌ನ ಸೈರೆ ಕ್ಷೇತ್ರದಲ್ಲಿನ ಕಾರ್ಯಕ್ರಮದಲ್ಲಿ ಆದಿತ್ಯನಾಥ್ ಪಾಲ್ಗೊಂಡರು.



ಸಮಾಜ ವ್ಯವಸ್ಥಿತವಾಗಿ ಮುನ್ನಡೆಯಲು ಜಾತಿ ವ್ಯವಸ್ಥೆ ಮಾಧ್ಯಮವಾಗಬೇಕು. ಆದರೆ ಜಾತಿವಾದವು ಈ ವ್ಯವಸ್ಥೆಯನ್ನು ಹಾಳುಗೆಡಹುವಂತದ್ದು. ಹಿಂದಿನ ಸರ್ಕಾರಗಳು ಜನರನ್ನು ಧರ್ಮ, ಜಾತಿ, ಭಾಷೆಗಳ ಹೆಸರಲ್ಲಿ ಒಡೆದ ಪರಿಣಾಮ ದೇಶವು ದುರ್ಬಲಗೊಂಡಿತ್ತು ಮತ್ತು ಕಾಶ್ಮೀರ ಅರಾಜಕತೆ, ನಕ್ಸಲ್‌ಪಿಡುಗುಗಳಂತಹ ಸವಾಲುಗಳು, ಭಾಷಾ ಸಂಬಂಧಿತ ವಿವಾದಗಳು ಹಾಗೂ ಜಾತಿ ಸಂಘರ್ಷಗಳಿಗೆ ನಾಂದಿ ಹಾಡಿತ್ತು. ಮಾತ್ರವಲ್ಲ, ಸರ್ಕಾರದ ಯೋಜನೆಗಳ ಪ್ರಯೋಜನಗಳು ದಲಿತರು, ಕಡುಬಡವರು ಹಾಗೂ ಇತರ ಶೋಷಿತ ವರ್ಗಗಳನ್ನು ತಲುಪುವಲ್ಲಿ ವಿಫಲವಾಗಿತ್ತು.

ಇಂದಿನ ಭಾರತವಾಗಲಿದೆ ವಿಶ್ವದ ಪ್ರಬಲ ಶಕ್ತಿ: ಆದರೆ, ಇಂದು ಭಾರತವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ವಿಶ್ವದ ಪ್ರಮುಖ ಶಕ್ತಿಯಾಗುವತ್ತ ದಾಪುಗಾಲಿಕ್ಕಿದೆ. ಮೋದಿ ನಾಯಕತ್ವದಲ್ಲಿ ದೇಶವನ್ನು ಒಗ್ಗಟ್ಟಾಗಿಸಲಾಗಿದೆ. ಕಾಶ್ಮೀರ ಸಮಸ್ಯೆ, ನಕ್ಸಲ್ ಪಿಡುಗುಗಳ ಮಟ್ಟಹಾಕಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರದ ಯೋಜನೆಗಳ ಪ್ರಯೋಜನಗಳು ಯಾವುದೇ ತಾರತಮ್ಯರಹಿತವಾಗಿ ಜನರನ್ನು ತಲುಪುತ್ತಿವೆ. ದೇಶಾದ್ಯಂತ ಮೂಲಸೌಕರ್ಯಗಳು ಮತ್ತು ಸಾರ್ವಜನಿಕ ಸೌಲಭ್ಯಗಳ ವಿಸ್ತರಣೆಗೆ ಸರಕಾರ ಆದ್ಯತೆ ನೀಡಿದೆ ಎಂದು ಸಿಎಂ ಯೋಗಿ ವಿವರಿಸಿದರು.

ರಾಮನ ಅಸ್ತಿತ್ವವನ್ನೇ ಶಂಕಿಸಿತ್ತು ಯುಪಿಎ

ಹಿಂದಿನ ಯುಪಿಎ ಸರ್ಕಾರ ಭಾರತದ ಆಧ್ಯಾತ್ಮಿಕ ಪರಂಪರೆಗಳನ್ನು ಕಡೆಗಣಿಸಿತ್ತು. ಆದರೆ ನಮ್ಮ ಧರ್ಮ ಶ್ರದ್ಧೆಗಳು ಸನಾತನ ಧರ್ಮಾಧಾರಿತ ಮತ್ತು ಸಮಾಜದೊಂದಿಗೆ ಗಾಢವಾಗಿ ಬೆರೆತಿವೆ. ಭಕ್ತಿ– ಶ್ರದ್ಧೆ ವಿನಾ ನಾವು ಪ್ರಗತಿ ಸಾಧಿಸಲಾಗದು ಎಂಬ ಅಚಲ ನಂಬಿಕೆ ಪ್ರಸ್ತುತ ನಾಯಕತ್ವದ್ದು. ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮನ ಮಂದಿರ ನಿರ್ಮಾಣ ದಶಕಗಳ ಹಿಂದೆಯೇ ಸಾಕಾರಗೊಳ್ಳಬೇಕಿತ್ತು. ಆದರೆ, ಹಿಂದಿನ ಸರ್ಕಾರಗಳು ಈ ನಿಟ್ಟಿನಲ್ಲಿ ಪ್ರಯತ್ನಿಸಲೇ ಇಲ್ಲ, ಬದಲಾಗಿ ಶ್ರೀರಾಮನ ತೀರಾ ಅಸ್ತಿತ್ವವನ್ನೇ ಶಂಕಿಸಿದ್ದವು ಎಂದು ಸಿಎಂ ಯೋಗಿ ಆರೋಪಿಸಿದರು. ಇಂದೀಗ ಶ್ರೀರಾಮ ಮಂದಿರ ಅತ್ಯದ್ಭುತವಾಗಿ ಪ್ರಗತಿ ಹೊಂದುತ್ತಿದೆ. ಜನರು ದೃಢ ಸಂಕಲ್ಪದೊಂದಿಗೆ ಒಗ್ಗಟ್ಟಾದಾಗ ಶ್ರೀರಾಮ ಮಂದಿರದಂತಹ ಸಾಧನೆಗಳು ಸುಲಭವಾಗಿ ಸಾಕಾರಗೊಳ್ಳುವುದು ಎಂದು ಸಿಎಂ ಯೋಗಿ ವಿಶ್ವಾಸ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳ, ಕೇರಳ ಚುನಾವಣೆ: ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಮಮತಾ ವಿರುದ್ಧ ಬಿಜೆಪಿಯ ಸುವೇಂದು ಸ್ಪರ್ಧೆ

ಹೊಸದಿಲ್ಲಿ: ಪಂಚರಾಜ್ಯ ವಿಧಾನಸಭೆ ಚುನಾವಣೆಗೆ ಭರ್ಜರಿ ತಯಾರಿ ನಡೆಸಿರುವ ಬಿಜೆಪಿ, ಚುನಾವಣೆ ಘೋಷಣೆಯಾದ ಮರುದಿನವೇ ಪಶ್ಚಿಮ ಬಂಗಾಳ ಹಾಗೂ ಕೇರಳಕ್ಕೆ ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಮೊದಲ ಹಂತದಲ್ಲಿ ಪಶ್ಚಿಮ ಬಂಗಾಳದಲ್ಲಿ 144 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿರುವ ಬಿಜೆಪಿ, ಭವಾನಿಪುರ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಎದುರಾಳಿಯಾಗಿ ಸುವೇಂದು ಅಧಿಕಾರಿ ಅವರನ್ನು ಕಣಕ್ಕಿಳಿಸಿದೆ. ನಂದಿಗ್ರಾಮ ಕ್ಷೇತ್ರದಿಂದಲೂ ಸುವೇಂದು ಸ್ಪರ್ಧಿಸಲಿದ್ದಾರೆ. ಇನ್ನು ಕೇರಳ ವಿಧಾನಸಭೆಗೆ 47 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ನೇಮಮ್ ಕ್ಷೇತ್ರದಿಂದ ರಾಜೀವ್ ಚಂದ್ರಶೇಖರ್ ಅವರನ್ನು ಬಿಜೆಪಿ ಅಭ್ಯರ್ಥಿಯಾಗಿ ಘೋಷಿಸಿದೆ. ಅದೇ ರೀತಿ ಕಂಜಿರಪ್ಪಳ್ಳಿ ಕ್ಷೇತ್ರದಿಂದ ಕೇಂದ್ರ ಮಾಜಿ ಸಚಿವ ಜಾರ್ಜ್ ಕುರಿಯನ್ ಅವರನ್ನು ಪಕ್ಷ ಸ್ಪರ್ಧೆಗೆ ಇಳಿಸಿದೆ.

ಕೇರಳದಲ್ಲಿ ಏ.9ರಂದು ಒಂದೇ ದಿನ ಮತದಾನ ನಡೆಯಲಿದೆ. ಪಶ್ಚಿಮ ಬಂಗಾಳದ 294 ವಿಧಾನಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಏ.23 ಮತ್ತು ಏ.29ರಂದು ಮತದಾನ ನಡೆಯಲಿದೆ. ಎರಡೂ ರಾಜ್ಯಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.



ನೇಮಮ್ ಕ್ಷೇತ್ರದಿಂದ ರಾಜೀವ್ ಕಣಕ್ಕೆ: ನೇಮಮ್ ಮತ್ತು ಕಳಕೂಟ್ಟಂ ಕ್ಷೇತ್ರಗಳಿಗೆ ಕ್ರಮವಾಗಿ ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಹಾಗೂ ವಿ.ಮುರಳೀಧರನ್ ಒಳಗೊಂಡಂತೆ, ಮುಂದಿನ ವಿಧಾನಸಭಾ ಚುನಾವಣೆಗೆ 47 ಅಭ್ಯರ್ಥಿಗಳ ಪ್ರಥಮ ಪಟ್ಟಿಯನ್ನು ಕೇರಳ ಬಿಜೆಪಿ ಬಿಡುಗಡೆ ಮಾಡಿದೆ.

ಕೇಂದ್ರದ ಮಾಜಿ ಸಚಿವ ಜಾರ್ಜ್ ಕುರಿಯನ್ ಕಾಂಜಿರಪಳ್ಳಿ ಕ್ಷೇತ್ರದಿಂದ ಸ್ಪರ್ಧಾ ಕಣಕ್ಕಿಳಿಯುವರು. ಪೂಂಜಾರ್ ಕ್ಷೇತ್ರಕ್ಕೆ ಪಿ.ಸಿ.ಜಾರ್ಜ್ ಅಭ್ಯರ್ಥಿಯಾದರೆ, ಆರ್.ಶ್ರೀಲೇಖಾ ವಟ್ಟಿಯೂರ್‌ಕಾವು ಕ್ಷೇತ್ರದಿಂದ, ತ್ರಿಶೂರ್‌ನಿಂದ ಪದ್ಮಜಾ ವೇಣುಗೋಪಾಲ್ ಸ್ಪರ್ಧಾ ಕಣಕ್ಕಿಳಿಯಲಿದ್ದಾರೆ. ಪ.ಜಾತಿಗೆ ಮೀಸಲಾಗಿರುವ ಕುನ್ನತ್ತೂರ್ ಕ್ಷೇತ್ರದಿಂದ ರಾಜಿ ಪ್ರಸಾದ್ ಸ್ಪರ್ಧಿಸಲಿದ್ದಾರೆ. ಕೊಟ್ಟಾರಕ್ಕರ ಕ್ಷೇತ್ರಕ್ಕೆ ಆರ್. ರಶ್ಮಿ , ಶೋಭಾ ಸುರೇಂದ್ರನ್ ಪಾಲಕ್ಕಾಡ್‌ನಿಂದ, ನವ್ಯಾ ಹರಿದಾಸ್ ಕೋಯಿಕ್ಕೋಡ್ ಉತ್ತರ ಕ್ಷೇತ್ರ ಮತ್ತು ಮೀಸಲು ಕ್ಷೇತ್ರ ಸುಲ್ತಾನ್ ಬತ್ತೇರಿಯಿಂದ ಕವಿತಾ ಕೆ.ಎಸ್.ಸ್ಪರ್ಧಾಕಣದಲ್ಲಿರುವರು.

ಪ.ಬಂಗಾಳಕ್ಕೆ ಬಿಜೆಪಿ 144 ಅಭ್ಯರ್ಥಿ ಪಟ್ಟಿ ಬಿಡುಗಡೆ: ಸುವೇಂದು ಅಧಿಕಾರಿ ಮತ್ತು ದಿಲೀಪ್ ಘೋಷ್ ಸಹಿತ ಹಲವು ಪ್ರಮುಖ ನಾಯಕರು ಸ್ಪರ್ಧಾ ಕಣದಲ್ಲಿರುವ 144 ಅಭ್ಯರ್ಥಿಗಳನ್ನು ಒಳಗೊಂಡ ಪ್ರಥಮ ಪಟ್ಟಿಯನ್ನು ಪ.ಬಂಗಾಳ ಬಿಜೆಪಿ ಬಿಡುಗಡೆ ಮಾಡಿದೆ. ದಿಲೀಪ್ ಘೋಷ್ ಖರಗ್‌ಪುರ ಸದರ್‌ನಿಂದ ಸ್ಪರ್ಧಿಸಲಿದ್ದು, ಸುವೇಂದು ಅಧಿಕಾರಿ ಭವಾನಿಪುರ ಮತ್ತು ನಂದಿಗ್ರಾಮ ಕ್ಷೇತ್ರಗಳಿಂದ ಸ್ಪರ್ಧಾ ಕಣದಲ್ಲಿರುವರು.

ಮಂಗಳೂರಿನ ರಾಮಕೃಷ್ಣ ಮಠದ ನೂತನ ಯೋಜನೆ

ಧಾರ್ಮಿಕ ತ್ಯಾಜ್ಯಗಳ ಸಂಗ್ರಹ

ಮಂಗಳೂರು: ರಾಮಕೃಷ್ಣ ಮಿಷನ್ ಮಂಗಳೂರು ವತಿಯಿಂದ ಸ್ವಚ್ಛ ಮಂಗಳೂರು ಪ್ರತಿಷ್ಠಾನ ಸಹಯೋಗದಲ್ಲಿ ಹಮ್ಮಿಕೊಂಡಿರುವ ಧಾರ್ಮಿಕ ತ್ಯಾಜ್ಯಗಳ ಸಂಗ್ರಹ ಹಾಗೂ ಸುರಕ್ಷಿತ ವಿಲೇವಾರಿಗಾಗಿ ವಿಶೇಷ ಅಭಿಯಾನ 'ವಿಸರ್ಜನೆ'ಗೆ ನಗರದ ಮಂಗಳಾದೇವಿ ರಾಮಕೃಷ್ಣ ಮಠದಲ್ಲಿ ಸೋಮವಾರ ಚಾಲನೆ ನೀಡಲಾಯಿತು.

ರಾಮಕೃಷ್ಣ ಮಠ ಬೆಂಗಳೂರು ಬಸವನಗುಡಿಯ ಸ್ವಾಮಿ ನಿತ್ಯಸ್ಥಾನಂದ ಜಿ ಮಹಾರಾಜ್ ಅವರು ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಮಂಗಳೂರು ರಾಮಕೃಷ್ಣಮಠದ ಸ್ವಾಮಿ ಜಿತಕಾಮಾನಂದಜಿ ಮಹಾರಾಜ್, ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು ಅಭಿಯಾನವು 2015ರಲ್ಲಿ ಆರಂಭಗೊಂಡು ಮುನ್ನಡೆಯುತ್ತಿದೆ. ಮಾರ್ಚ್ ತಿಂಗಳಲ್ಲಿ ಕದ್ರಿ ದೇವಸ್ಥಾನ ಪರಿಸರದಲ್ಲಿ ನಡೆಸಿದ ಸ್ವಚ್ಛತಾ ಶ್ರಮದಾನ ಸಂದರ್ಭದಲ್ಲಿ, ಹಳೆಯ ದೇವರ ಚಿತ್ರಗಳು, ಮುರಿದ ಮೂರ್ತಿಗಳು ಹಾಗೂ ಇತರೆ ಧಾರ್ಮಿಕ ವಸ್ತುಗಳು ಸಾರ್ವಜನಿಕ ಸ್ಥಳಗಳಲ್ಲಿ ತ್ಯಜಿಸಲ್ಪಟ್ಟಿರುವುದನ್ನು ಸ್ವಯಂಸೇವಕರು ಗಮನಿಸಿದರು. ಈ ವಸ್ತುಗಳನ್ನು ಸ್ವಯಂಸೇವಕರು ಗೌರವಪೂರ್ವಕವಾಗಿ ಸಂಗ್ರಹಿಸಿ, ಶ್ರದ್ಧೆಯಿಂದ ಸ್ವಚ್ಛಗೊಳಿಸಿ ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಿದ್ದರು. ಈ ಪ್ರಯತ್ನದ ಮುಂದುವರಿಕೆಯಾಗಿ 'ವಿಸರ್ಜನೆ' ಎಂಬ ಹೆಸರಿನಲ್ಲಿ ಧಾರ್ಮಿಕ ತ್ಯಾಜ್ಯಗಳ ಸಂಗ್ರಹ ಹಾಗೂ ಸುರಕ್ಷಿತ ವಿಲೇವಾರಿಗಾಗಿ ವಿಶೇಷ ಅಭಿಯಾನ ಆರಂಭಿಸಲಾಗಿದೆ. ಹಳೆ ಧಾರ್ಮಿಕ ವಸ್ತುಗಳನ್ನು ಶ್ರದ್ಧಾಪೂರ್ವಕವಾಗಿ ಹಾಗೂ ಗೌರವಪೂರ್ವಕವಾಗಿ ವಿಲೇವಾರಿ ಮಾಡುವ ಸೂಕ್ತ ಅವಕಾಶವನ್ನು ಒದಗಿಸುವುದು ಅಭಿಯಾನದ ಉದ್ದೇಶ ಎಂದರು.

ಅಭಿಯಾನ ಮೂಲಕ ಸಂಗ್ರಹಿಸಲಾದ ಎಲ್ಲಾ ವಸ್ತುಗಳನ್ನು ಕದ್ರಿ ದೇವಸ್ಥಾನಕ್ಕೆ ಸಾಗಿಸಿ ಸುರಕ್ಷಿತವಾಗಿ ಸಂಗ್ರಹಿಸಲಾಗುತ್ತದೆ. ಅಂತಿಮ ವಿಲೇವಾರಿಗೆ ಮೊದಲು ಕದ್ರಿ ದೇವಸ್ಥಾನದ ಅರ್ಚಕರಿಂದ ವಿಶೇಷ 'ಉದ್ವಾಸನ ಪೂಜೆ' ನಡೆಯಲಿದೆ. ಇದರಿಂದ ಈ ವಸ್ತುಗಳ ಪಾವಿತ್ರ್ಯವನ್ನು ಕಾಪಾಡಲಾಗುವುದು. ಪೂಜೆಯ ನಂತರ ಸ್ವಯಂಸೇವಕರು ವಸ್ತುಗಳನ್ನು ಜಾಗರೂಕತೆಯಿಂದ ವಿಂಗಡಿಸಲಿದ್ದಾರೆ. ಕಾಗದದ ದೇವರ ಚಿತ್ರಗಳನ್ನು ಗೌರವಪೂರ್ವಕವಾಗಿ ನೀರಿನಲ್ಲಿ ನಿಮಜ್ಜನ ಮಾಡಿ, ನಂತರ ಕದ್ರಿ ದೇವಸ್ಥಾನದ ತೋಟದಲ್ಲಿ ನಿಗದಿತ ಗುಂಡಿಯಲ್ಲಿ ಇಡಲಾಗುತ್ತದೆ ಮತ್ತು ಅಲ್ಲಿ ಪವಿತ್ರ ಸಂಕೇತವಾಗಿ ತುಳಸಿ ಗಿಡವನ್ನು ನೆಡಲಾಗುವುದು. ಮರ, ಗಾಜು, ಲೋಹ ಮೊದಲಾದ ಇತರೆ ವಸ್ತುಗಳನ್ನು ಪ್ರತ್ಯೇಕವಾಗಿ ವಿಂಗಡಿಸಲಾಗುವುದು. ಮರುಬಳಕೆ ಸಾಧ್ಯವಿರುವ ವಸ್ತುಗಳನ್ನು ಮರುಬಳಕೆ ಘಟಕಗಳಿಗೆ ಕಳುಹಿಸಲಾಗುವುದು. ಮರುಬಳಕೆ ಸಾಧ್ಯವಿಲ್ಲದ ವಸ್ತುಗಳನ್ನು ಪರಿಸರಕ್ಕೆ ಹಾನಿಯಾಗದಂತೆ ಸಿಮೆಂಟ್ ಕಾರ್ಖಾನೆಯಲ್ಲಿ ಕೋ-ಪ್ರೊಸೆಸಿಂಗ್ ಮೂಲಕ ಸುರಕ್ಷಿತವಾಗಿ ವಿಲೇವಾರಿ ಮಾಡಲಾಗುತ್ತದೆ ಎಂದು ಸ್ವಾಮೀಜಿ ವಿವರಿಸಿದರು.

'ವಿಸರ್ಜನೆ' ಅಭಿಯಾನವು ಕೇವಲ ಸರಿಯಾದ ವಿಲೇವಾರಿಯ ವ್ಯವಸ್ಥೆಯಷ್ಟೇ ಅಲ್ಲ, ಧಾರ್ಮಿಕ ತ್ಯಾಜ್ಯವನ್ನು ಗೌರವಪೂರ್ವಕವಾಗಿ ಹಾಗೂ ಪರಿಸರ ಸ್ನೇಹಿಯಾಗಿ ನಿರ್ವಹಿಸುವ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವೂ ಆಗಿದೆ ಎಂದರು.


ಧಾರ್ಮಿಕ ತ್ಯಾಜ್ಯಗಳ ಸಂಗ್ರಹ ಯೋಜನೆಗೆ ಚಾಲನೆ

ಆರು ಸ್ಥಳಗಳಲ್ಲಿ ಅಭಿಯಾನ

ಈ ಅಭಿಯಾನವು ಮಾ.16 ರಿಂದ 26ರ ವರೆಗೆ ಮಂಗಳೂರಿನ ಆರು ಸ್ಥಳಗಳಲ್ಲಿ ನಡೆಯಲಿದೆ. ನಗರದ ಮಂಗಳಾದೇವಿ ದೇವಸ್ಥಾನ, ಕದ್ರಿ ದೇವಸ್ಥಾನ, ಬಿಜೈ ಭಾರತ್ ಮಾಲ್, ಪಾಂಡೇಶ್ವರ ಫೋರಂ ಮಾಲ್, ಸಿಟಿ ಸೆಂಟರ್ ಮಾಲ್ ಮತ್ತು ಸುರತ್ಕಲ್ ಗೋವಿಂದ ದಾಸ ಕಾಲೇಜು ಆವರಣದಲ್ಲಿ ಸಂಗ್ರಹ ಹುಂಡಿಯನ್ನು ತಾತ್ಕಾಲಿಕವಾಗಿ ಇಡಲಾಗುತ್ತದೆ. ಸಾರ್ವಜನಿಕರು ಹಳೆಯ ಪ್ರೇಮ್ ಮಾಡಿರುವ ದೇವರ ಚಿತ್ರಗಳು, ಮುರಿದ ಮೂರ್ತಿಗಳು, ಧಾರ್ಮಿಕ ಚಿತ್ರಗಳಿರುವ ಕ್ಯಾಲೆಂಡರ್‌ಗಳು ಮತ್ತು ಇತರೆ ಪೂಜಾ ಸಾಮಗ್ರಿಗಳನ್ನು ಅಭಿಯಾನ ಅವಧಿಯಲ್ಲಿ ಈ ಕೇಂದ್ರಗಳಲ್ಲಿ ಸಲ್ಲಿಸಬಹುದು ಎಂದು ಸ್ವಾಮಿ ಜಿತಕಾಮಾನಂದಜಿ ಮಾಹಿತಿ ನೀಡಿದರು.

» ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು ಅಭಿಯಾನವು 2015ರಲ್ಲಿ ಆರಂಭಗೊಂಡು ಮುನ್ನಡೆಯುತ್ತಿದೆ.

ಮಾಹಿತಿಗಾಗಿ ಸಂಪರ್ಕಿಸಿ

ಆರಂಭಿಕವಾಗಿ 10 ದಿನಗಳ ಕಾಲ ನಡೆಯಲಿದೆ. ಈ ಅವಧಿಯಲ್ಲಿ ಅಭಿಯಾನಕ್ಕೆ ಸಾರ್ವಜನಿಕರಿಂದ ದೊರೆಯುವ ಸ್ಪಂದನೆ ನೋಡಿಕೊಂಡು ಮುಂದಿನ ಹಂತದ ಬಗ್ಗೆ ನಿರ್ಧರಿಸಲಾಗುವುದು. ವಿಸರ್ಜನೆ ಅಭಿಯಾನದ ಶಾಶ್ವತ ಕೌಂಟರ್ ತೆರೆಯುವ ಆಲೋಚನೆಯೂ ಇದೆ. ಅಭಿಯಾನಕ್ಕೆ ದೇವಸ್ಥಾನಗಳು, ಧಾರ್ಮಿಕ ತಂಡಗಳು, ಭಜನಾ ಸಂಘಗಳು ಕೈಜೋಡಿಸಬೇಕು. ಮಾಹಿತಿಗಾಗಿ ಸಹಾಯವಾಣಿ: 8105356290 ಸಂಪರ್ಕಿಸಬಹುದು ಎಂದು ರಂಜನ್ ಬೆಳ್ಳರ್ಪಾಡಿ ತಿಳಿಸಿದರು.

ಎಂಆರ್‌ಪಿಎಲ್ ಸಿಎಸ್‌ಆರ್ ವಿಭಾಗದ ಮ್ಯಾನೇಜರ್ ಕೇಶವ ಪಾಟಾಳಿ ಮಾತನಾಡಿ, ವಿಸರ್ಜನೆ ಅಭಿಯಾನ ಉತ್ತಮ ಕಾರ್ಯ. ಇಂತಹಾ ಸ್ವಚ್ಛತಾ ಅಭಿಯಾನಗಳಿಗೆ ಎಂಆರ್‌ಪಿಎಲ್ ಸದಾ ಬೆಂಬಲ ನೀಡಲಿದೆ ಎಂದರು.

'ವಿಸರ್ಜನೆ' ಕಾರ್ಯಕ್ರಮದ ಸಂಯೋಜಕರಾದ ಉದಯ್ ಕೆ. ಪಿ., ತಾರಾನಾಥ್ ಆಳ್ವ ಹಾಗೂ ಸೂರಜ್ ಮಂಗಳೂರು, ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು ಅಭಿಯಾನ ಸಂಯೋಜಕ ರಂಜನ್ ಬೆಳ್ಳರ್ಪಾಡಿ, ದಿಲ್‌ರಾಜ್ ಆಳ್ವ ಉಪಸ್ಥಿತರಿದ್ದರು. ಈ ವೇಳೆ ಹಳೆಯ ದೇವರ ಫೋಟೊ, ಧಾರ್ಮಿಕ ತ್ಯಾಜ್ಯಗಳನ್ನು ಸಂಗ್ರಹ ಹುಂಡಿಗೆ ಹಾಕಲಾಯಿತು.

ಕುಡಿಯುವ ನೀರಿನ ಸಮಸ್ಯೆ ಅಷ್ಟಿಲ್ಲ! ಫಲ್ಗುಣಿ ಒಡಲಿಗೆ ಒಳಚರಂಡಿ ನೀರು

ಪಂಜಿಮೊಗರಿನಲ್ಲಿ ಕಂಗಾಲಾಗಿಸಿದೆ ಡ್ರೈನೇಜ್ ಸಮಸ್ಯೆ!





ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆಯ 60 ವಾರ್ಡ್‌ಗಳ ಪೈಕಿ 12ನೇ ವಾರ್ಡ್ ಆಗಿರುವ ಪಂಜಿಮೊಗರು ವಾರ್ಡ್ ಕೂಡ ಒಂದು. ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಅಷ್ಟಾಗಿ ಇಲ್ಲ. ಎತ್ತರದ ಪ್ರದೇಶವಾದ ಉರುಂದಾಡಿ, ವಿದ್ಯಾನಗರ ಪ್ರದೇಶಗಳಲ್ಲಷ್ಟೇ ಸ್ವಲ್ಪಮಟ್ಟಿನ ಸಮಸ್ಯೆ ಇದೆ. ಉಳಿದ ಪ್ರದೇಶಗಳಲ್ಲಿ ನಿರಂತರ ನೀರಿದ್ದು, ಸದ್ಯಕ್ಕಂತೂ ಯಾವುದೇ ಸಮಸ್ಯೆ ಇಲ್ಲ. ಆದರೆ ಎಪ್ರಿಲ್ ಅಂತ್ಯದ ವೇಳೆಗೆ ನೀರಿನ ಸಮಸ್ಯೆ ಕಾಡುವುದನ್ನು ಅಲ್ಲಗಳೆಯುವಂತಿಲ್ಲ ಎನ್ನುತ್ತಾರೆ ವಾರ್ಡ್ ನಿವಾಸಿಗಳು.

ಇಲ್ಲಿ ಡ್ರೈನೇಜ್‌ನದ್ದೇ ಸಮಸ್ಯೆ

ಪಂಜಿಮೊಗರು ವಾರ್ಡ್‌ನಲ್ಲಿ ಡ್ರೈನೇಜ್ ಸಮಸ್ಯೆ ಬಹುವಾಗಿ ಕಾಡುತ್ತಿದೆ. ವೆಟ್‌ವೆಲ್‌ಗೆ ಸರಿಯಾದ ಜಾಗವಿಲ್ಲದೆ ಒಳಚರಂಡಿ ನೀರನ್ನು ಸಿಕ್ಕಸಿಕ್ಕಲ್ಲಿ ಬಿಡಲಾಗುತ್ತಿದೆ. ಇಂತದ್ದೇ ಸಮಸ್ಯೆ ಮರಕಡ, ಕೂಳೂರು ಮುಂತಾದೆಡೆ ಇದೆ. ಮುಂದೆ ಇದೇ ದೊಡ್ಡ ಸಮಸ್ಯೆಯಾಗಿ ಜನತೆಯನ್ನು ಕಾಡುವುದಂತೂ ಖಚಿತ. ಅಲ್ಲದೆ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ. ಅಷ್ಟರೊಳಗೆ ಈ ಸಮಸ್ಯೆ ಬಗೆಹರಿಯಬೇಕು ಎನ್ನುತ್ತಾರೆ ಪಂಜಿಮೊಗರು ನಿವಾಸಿ ರಮೇಶ್ ಶೆಟ್ಟಿ ಅವರು.

ಫಲ್ಗುಣಿ ಒಡಲಿಗೆ ತ್ಯಾಜ್ಯ ನೀರು

ಇಲ್ಲಿನ ಬಹುತೇಕ ಮನೆಗಳ ತ್ಯಾಜ್ಯ ನೀರು, ಕಸ ನೇರವಾಗಿ ಫಲ್ಗುಣಿ ನದಿಗೆ ಸೇರುತ್ತಿದೆ. ಒಂದೆಡೆ ತ್ಯಾಜ್ಯ ರಾಶಿಯಿಂದ ಫಲ್ಗುಣಿ ನದಿ ತುಂಬುತ್ತಿದ್ದು, ಮತ್ತೊಂದೆಡೆ ಒಳಚರಂಡಿ ನೀರು ನದಿಯನ್ನು ಮಲಿನಗೊಳಿಸಿದೆ. ಈಗಾಗಲೇ ಕಪ್ಪು ಬಣ್ಣಕ್ಕೆ ತಿರುಗಿರುವ ನೀರು ಸಾಂಕ್ರಾಮಿಕ ರೋಗಕ್ಕೆ ಎಡೆಮಾಡಿಕೊಡಲಿದೆಯೇ ಎಂಬ ಭೀತಿ ವಾರ್ಡ್‌ನ ಜನತೆಯನ್ನು ಆವರಿಸಿದೆ.

ನೀರಿನ ಸಮಸ್ಯೆ ಇಲ್ಲ

ನಮ್ಮ ವಾರ್ಡ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಅಷ್ಟಾಗಿ ಇಲ್ಲ. ಆದರೆ ಕೆಲವೆಡೆ ಪ್ರೆಶರ್ ಇಲ್ಲದೆ ಎತ್ತರದ ಪ್ರದೇಶಗಳಿಗೆ ಸರಾಗವಾಗಿ ನೀರು ಪೂರೈಕೆಯಾಗುತ್ತಿಲ್ಲ. ಪಾಲಿಕೆ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚುವರಿ ಟ್ಯಾಂಕರ್‌ಗಳನ್ನು ಸಿದ್ಧವಾಗಿರಿಸಬೇಕು. ಜಲಸಿರಿ ಯೋಜನೆ ಕುಂಟಾತ್ತಾ ಸಾಗಿದ್ದು, ಮೊದಲು ಇದು ಸರಿಯಾಗಬೇಕು.

■ ಅನಿಲ್ ಕುಮಾರ್, ನಿಕಟಪೂರ್ವ ಕಾರ್ಪೋರೇಟರ್

'ಒಳಚರಂಡಿ ವ್ಯವಸ್ಥೆ ಸರಿಯಾದರೆ ಬಹುತೇಕ ಸಮಸ್ಯೆಗಳು ಬಗೆಹರಿದಂತೆಯೇ. ಇದಕ್ಕಾಗಿ ಸೂಕ್ತ ಅನುದಾನವನ್ನು ಮಂಗಳೂರು ಮಹಾನಗರ ಪಾಲಿಕೆ ಮೀಸಲಿಡಬೇಕು' ಎಂದು ಒತ್ತಾಯಿಸುತ್ತಾರೆ ಉಮೇಶ್ ಪಂಜಿಮೊಗರು.



ಶಾಶ್ವತ ಪರಿಹಾರ ಸಿಗಲಿ

ಪಂಜಿಮೊಗರು ವಾರ್ಡ್‌ನಲ್ಲಿ ಒಳಚರಂಡಿ ವ್ಯವಸ್ಥೆ ಸವಾಲಾಗಿ ಪರಿಣಮಿಸಿದೆ. ಇಲ್ಲಿನ ಬಹುತೇಕ ಮನೆಗಳು ಡ್ರೈನೇಜ್ ಸಮಸ್ಯೆ ಎದುರಿಸುತ್ತಿವೆ. ಇದಕ್ಕೊಂದು ಶಾಶ್ವತ ಪರಿಹಾರ ಆಗಬೇಕಿದೆ. ಮಂಗಳೂರು ಮಹಾನಗರ ಪಾಲಿಕೆ ಈ ನಿಟ್ಟಿನಲ್ಲಿ ಸೂಕ್ತ ಅನುದಾನ ಮೀಸಲಿಡಬೇಕು.

■ ರಮೇಶ್ ಶೆಟ್ಟಿ, ಪಂಜಿಮೊಗರು

ನದಿ ನೀರು ಮಲಿನವಾಗದಿರಲಿ

ಫಲ್ಗುಣಿಗೆ ನಿರಂತರ ತ್ಯಾಜ್ಯ ಮತ್ತು ಒಳಚರಂಡಿ ನೀರು ಬಿಡುವುದು ತಪ್ಪಬೇಕು. ಒಳಚರಂಡಿ ನೀರಿನಿಂದಾಗಿ ಫಲ್ಗುಣಿ ನೀರು ಕಪ್ಪುಬಣ್ಣಕ್ಕೆ ತಿರುಗಿದೆ. ಮುಂದಿನ ಬಜೆಟ್‌ನಲ್ಲಾದರೂ ಪಾಲಿಕೆ ಇದಕ್ಕೆ ಸೂಕ್ತ ಅನುದಾನ ಮೀಸಲಿಡಲಿ. ವಾರ್ಡ್‌ನ ಜನತೆಯ ಸಮಸ್ಯೆಗೆ ಅಧಿಕಾರಿಗಳು ಸ್ಪಂದಿಸಬೇಕು.

■ ಉಮೇಶ್, ಪಂಜಿಮೊಗರು

ಒಂದೆಡೆ ಮಣ್ಣು, ತ್ಯಾಜ್ಯ ಹಾಕಿ ನದಿ ಒತ್ತುವರಿ ನಡೆಯುತ್ತಿದ್ದು, ನದಿಯ ಒಡಲಾಗಿ ಬರಿದಾಗಿ ಆಪತ್ತು ಎದುರಾಗುವ ಸಾಧ್ಯತೆ ಇದೆ. ನದಿ ಒತ್ತುವರಿಗೂ ಕಡಿವಾಣ ಬೇಳಬೇಕು ಎಂಬುದು ಇಲ್ಲಿನ ಜನತೆಯ ಆಗ್ರಹ.

ನಾಳೆ ವಾರ್ಡ್ 13, ಕುಂಜತ್ತಬೈಲ್ ಪರಿಸರದ ಸ್ಥಿತಿಗತಿ

ವೈಮಾನಿಕ ಸೇವೆ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಕೆ

ಬೆಂಗಳೂರು: ರಾಜಧಾನಿಯಿಂದ ಬೀದರ್ ಮತ್ತು ಕಲಬುರಗಿಗೆ ವೈಮಾನಿಕ ಸೇವೆ ಆರಂಭಿಸುವ ಬಗ್ಗೆ ವಿಮಾನಯಾನ ಸಂಸ್ಥೆಗಳು ಮಾ.23ರೊಳಗೆ ತಮ್ಮ ಪ್ರಸ್ತಾವನೆ ಸಲ್ಲಿಸಬೇಕು. ಇದರ ಬಗ್ಗೆ ಮುಂದಿನ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ ಹೇಳಿದ್ದಾರೆ.

ಈ ಸಂಬಂಧ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸೋಮವಾರ ವಿವಿಧ ವಿಮಾನಯಾನ ಸಂಸ್ಥೆಗಳೊಂದಿಗೆ ಸಭೆ ನಡೆಸಿದ ಅವರು, ಕಲಬುರಗಿ ವಿಮಾನ ನಿಲ್ದಾಣದಿಂದ ಈಗ ವಿಮಾನಸೇವೆ ಸ್ಥಗಿತವಾಗಿದೆ. ಬೀದರ್‌ನಲ್ಲಿ ಕೆ.ಕೆ.ಆರ್.ಡಿ.ಬಿ ನೆರವಿನಿಂದ ದಿನಕ್ಕೆ ಒಂದು ವಿಮಾನ ಮಾತ್ರ ಸಂಚರಿಸುತ್ತಿದೆ. ಕೇಂದ್ರ ಸರ್ಕಾರವು ಪ್ರಾದೇಶಿಕ ಮಟ್ಟದಲ್ಲಿ ವಿಮಾನಯಾನ ಉತ್ತೇಜಿಸಲು ಉಡಾನ್ ಯೋಜನೆ ಮೂಲಕ ಮೂರು ವರ್ಷ ನೆರವು ನೀಡಿತು. ಆ ಅವಧಿ ಮುಗಿದ ನಂತರ ಹೀಗಾಗುತ್ತಿದೆ. ಕಲಬುರಗಿಯಲ್ಲಿ 742 ಎಕರೆಯಲ್ಲಿ ವಿಮಾನ ನಿಲ್ದಾಣವಿದೆ. ಇಂದಿನ ಸಭೆಯಲ್ಲಿ ವೈಮಾನಿಕ ಸೇವೆ ಎಷ್ಟರ ಮಟ್ಟಿಗೆ ಕಾರ್ಯಸಾಧು, ವಿಮಾನ ನಿಲ್ದಾಣಗಳ ಪ್ರಾಧಿಕಾರ ಎರಡೂ ಕಡೆ ಒದಗಿಸಿರುವ ಸೌಲಭ್ಯಗಳು ಮುಂತಾದವನ್ನು ಚರ್ಚಿಸಲಾಯಿತು ಎಂದಿದ್ದಾರೆ.



ಕಲಬುರಗಿಯಲ್ಲಿ ರಾತ್ರಿ ವೇಳೆ ವಿಮಾನ ನಿಲ್ಲಿಸುವ ಸೌಲಭ್ಯ ಸೇರಿದಂತೆ ಎಲ್ಲ ಬಗೆಯ ವಿಮಾನಗಳು ಬಂದಿಳಿಯಲು ಅನುಕೂಲವಿದೆ. ಅಲ್ಲಿಂದ ಬೆಂಗಳೂರು ಮತ್ತು ಉಳಿದ ಅನೇಕ ರಾಜ್ಯಗಳಿಗೆ ದಿನನಿತ್ಯದ ವಿಮಾನಸೇವೆ ಆರಂಭಿಸಬಹುದು ಎಂದು ವಿಮಾನ ಸಂಸ್ಥೆಗಳು ಹೇಳಿವೆ. ಮತ್ತೊಂದು ವಿಮಾನ ಸಂಸ್ಥೆಯು ನಿತ್ಯವೂ ಬೆಂಗಳೂರಿನಿಂದ ಬೆಳಗ್ಗೆ ಹೊತ್ತು ಬೀದರ್‌ಗೆ ಮತ್ತು ಸಂಜೆ ಕಲಬುರ್ಗಿಗೆ ವಿಮಾನಸೇವೆ ಆರಂಭಿಸಲು ಯೋಚಿಸುತ್ತಿರುವುದಾಗಿ ಹೇಳಿದೆ. ಜತೆಗೆ ಬೆಂಗಳೂರು–ಕಲಬುರಗಿ –ಹೈದರಾಬಾದ್–ಬೆಂಗಳೂರು ಮಾರ್ಗವಾಗಿ ಸೇವೆ ಆರಂಭಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಈ ವೇಳೆ ತೊಗರಿ ಕಣಜ ಕಲಬುರಗಿ ಮತ್ತು ಬೀದರ್‌ಗೆ ವಿಮಾನ ಸೇವೆ ಆರಂಭಿಸಬೇಕು ಎಂದು ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಡಾ.ಶರಣಪ್ರಕಾಶ ಆರ್. ಪಾಟೀಲ್ ಆಗ್ರಹಿಸಿದ್ದಾರೆ.

ಉಪ ಚುನಾವಣೆಗೆ ಏ.9ಕ್ಕೆ ಮತದಾನ

ಬಾಗಲಕೋಟೆ: ಭಾರತ ಚುನಾವಣಾ ಆಯೋಗವು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದೆ. ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯನ್ನು ಪಾರದರ್ಶಕತೆಯಿಂದ ನಡೆಸಲು ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆಗೆ ಮಾ.16ರಂದು ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾ.23 ಕೊನೆಯ ದಿನವಾಗಿದೆ. ಮಾ.24 ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾ.26 ಕೊನೆಯ ದಿನವಾಗಿದೆ. ಏ. ರಂದು ಮತದಾನ ನಡೆಯಲಿದ್ದು, ಮತ ಎಣಿಕೆ ಮೇ 4ರಂದು ನಡೆಯಲಿದೆ.

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ

ಪುಟ ೧ ➡ ತೈಲ ಮಾರ್ಕೆಟಿಂಗ್ ಕಂಪನಿಯ ಮೊಬೈಲ್ ಅಪ್ಲಿಕೇಶನ್ ಮತ್ತು ಆಧಾರ ಫೇಸ್‌ಆರ್‌ಡಿ ಅಪ್ಲಿಕೇಶನ್ ಅನ್ನು ಬಳಸಿಕೊಂಡು ಜನರು ತಮ್ಮ ಮನೆಗಳಿಂದಲೇ ಆರಾಮವಾಗಿ ಪರಿಶೀಲಿಸಬಹುದು ಎಂದು ಅದು ಹೇಳಿದೆ. ಗ್ರಾಹಕರು ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಬಹುದು ಅಥವಾ ತಮ್ಮ ಎಲ್‌ಪಿಜಿ ವಿತರಕರನ್ನು ಸಂಪರ್ಕಿಸಬಹುದು. ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಭಾರತವು ಎಲ್‌ಪಿಜಿ ಕೊರತೆ ಎದುರಿಸುತ್ತಿದೆ.

ಎಲ್ಪಿಜಿ ವಿತರಣೆಗೆ ಹೊಸ ನೀತಿ

ಪುಟ ೧ ➡ ರೆಸ್ಟೋರೆಂಟ್, ಡಾಬಾ, ಹೋಟೆಲ್ ಮತ್ತು ಕೈಗಾರಿಕಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1 ಸಾವಿರ ಸಿಲಿಂಡರ್‌ಗಳನ್ನು ನಿಗದಿಪಡಿಸಲಾಗಿದೆ. ಬೀಜ ಸಂಸ್ಕರಣಾ ಉದ್ಯಮ, ಆಹಾರ ಸಂಸ್ಕರಣಾ ಉದ್ಯಮ, ಕೃಷಿ ಮತ್ತು ಸಂಬಂಧಿತ ವಲಯಗಳು, ಔಷಧೀಯ ಉದ್ಯಮ, ಮೀನುಗಾರಿಕೆ, ಪ್ರಾಣಿ ಸಂಗ್ರಹಾಲಯ, ಕ್ರೀಡಾ ಹಾಸ್ಟೆಲ್‌ಗಳು, ಕಾರ್ಪೊರೇಟ್ ಕ್ಯಾಂಟೀನ್‌ಗಳು, ಕೋಳಿ ಮತ್ತು ರೇಷ್ಮೆ ಸಾಕಾಣಿಕೆ ಉದ್ಯಮಗಳಿಗೆ ಪ್ರತಿದಿನ 500 ಸಿಲಿಂಡರ್ ಹಾಗೂ ಇತರೆ ಅಗತ್ಯಗಳಿಗೆ ನಿತ್ಯ 100 ಸಿಲಿಂಡರ್‌ಗಳನ್ನು ಪ್ರಕರಣದ ಆಧಾರದ ಮೇಲೆ ವಿತರಿಸಲು ರಾಜ್ಯ ಸರಕಾರ ಮುಂದಾಗಿದೆ.

ಎಲ್‌ಪಿಜಿ ಬಳಕೆ ಎಷ್ಟು?: 2025ರ ಡಿಸೆಂಬರ್‌ನಿಂದ 2026ರ ಫೆಬ್ರವರಿ ವರೆಗೆ ರಾಜ್ಯದಲ್ಲಿ ಒಟ್ಟು 76,544 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿ ಬಳಕೆಯಾಗಿದ್ದು, ಸರಾಸರಿ ಮಾಸಿಕ ಬಳಕೆಯು 25,515 ಮೆಟ್ರಿಕ್ ಟನ್ ಹಾಗೂ ದೈನಂದಿನ ಬಳಕೆಯು ಸರಾಸರಿ 850 ಮೆಟ್ರಿಕ್ ಟನ್ ಆಗಿದೆ. ಅದೇ ರೀತಿ ಆಟೋ ಎಲ್‌ಪಿಜಿ ದೈನಂದಿನ ಬಳಕೆಯು ಸರಾಸರಿ 56.7 ಮೆಟ್ರಿಕ್ ಟನ್. ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ, ರಾಜ್ಯದಲ್ಲಿ ದಿನನಿತ್ಯ ಸರಾಸರಿ 181.34 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿಯನ್ನು ನಿಯಂತ್ರಿತ ಹಂಚಿಕೆಗೆ ಮೀಸಲಿಡಲಾಗಿದೆ.

“ ಜನರು ಗಾಬರಿಯಾಗಬಾರದು. ಅಗತ್ಯಕ್ಕಿಂತ ಹೆಚ್ಚು ಸಿಲಿಂಡರ್ ಬುಕ್ ಮಾಡಬಾರದು, ಸಂಗ್ರಹಿಸಬಾರದು. ಯಾವುದೇ ತಾಂತ್ರಿಕ ಸಮಸ್ಯೆ ಕಂಡುಬಂದರೆ ತಕ್ಷಣ ಸಂಬಂಧಿತ ಕಂಪನಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುತ್ತದೆ. ಜನರಿಗೆ ಯಾವುದೇ ತೊಂದರೆ ಆಗದಂತೆ ಸರ್ಕಾರ ಕ್ರಮಕೈಗೊಳ್ಳಲಿದೆ.

■ **ಕೆ.ಎಚ್. ಮುನಿಯಪ್ಪ**, ಆಹಾರ ಸಚಿವ

ಅಗತ್ಯಕ್ಕಿಂತ ಹೆಚ್ಚು ಬುಕಿಂಗ್

ಎಲ್ಪಿಜಿ ಸಿಲಿಂಡರ್ ಸರಬರಾಜಿನ ಸ್ಥಿತಿಗತಿ ಕುರಿತು ಸೋಮವಾರ ನಡೆದ ಸಭೆ ಬಳಿಕ ಸಚಿವ ಕೆ.ಎಚ್.ಮುನಿಯಪ್ಪ ಮಾಧ್ಯಮಗಳೊಂದಿಗೆ ಮಾತನಾಡಿದರು. ರಾಜ್ಯದಲ್ಲಿ ಎಲ್ಪಿಜಿ ಸಿಲಿಂಡರ್ ಕೊರತೆ ಇಲ್ಲದೆ ಸರಬರಾಜು ನಿಯಮಿತವಾಗಿ ನಡೆಯುತ್ತಿದೆ. ಕೆಲವೆಡೆ ಜನರು ಆತಂಕದಿಂದ ಅಗತ್ಯಕ್ಕಿಂತ ಹೆಚ್ಚು ಬುಕ್ಕಿಂಗ್ ಮಾಡುತ್ತಿರುವುದರಿಂದ ಗೊಂದಲ ಉಂಟಾಗಿದೆ ಎಂದರು. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ 25ರಿಂದ 30 ದಿನಗಳಿಗೆ ಒಂದು ಸಿಲಿಂಡರ್ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 45 ದಿನಗಳಿಗೆ ಒಂದು ಸಿಲಿಂಡರ್ ಬಳಕೆಯಾಗುತ್ತದೆ ಎಂದರು.

ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ಹಿಂದೆ ನಮ್ಮ ಬಟ್ಟೆಯನ್ನು ನಾವೇ ಒಗೆಯಬೇಕಿತ್ತು, ನಮ್ಮ ತಟ್ಟೆಯನ್ನು ನಾವೇ ತೊಳೆಯಬೇಕಿತ್ತು,ಅಡಿಕೆಯನ್ನೂ ನಾವೇ ಹೆಕ್ಕಬೇಕಿತ್ತು, ದನಗಳನ್ನು ನಾವೇ ಮೇಯಿಸಬೇಕಿತ್ತು – ಡಾ/ ವೀರೇಂದ್ರ ಹೆಗ್ಗಡೆ

– ಇಂದು ನಾವು ಅದೆಲ್ಲವನ್ನೂ ಇನ್ನೊಬ್ಬರಿಂದ ಹಣ ಕೊಟ್ಟು ಮಾಡಿಸುವಷ್ಟು ಮುಂದುವರಿದಿದ್ದೇವೆ, ಆದರೆ ಅದಕ್ಕಾಗಿ ಮಾಡಿದ ಬ್ಯಾಂಕ್ ಸಾಲವನ್ನು ನಾವೇ ದುಡಿದು ನಾವೇ ಕಟ್ಟುತ್ತೇವೆ!

ದಿನ ಭವಿಷ್ಯ

ಮೇಷ
ಪ್ರಗತಿಪರ ದಿನ. ಉದ್ದೇಶಿಸಿದ ಕಾರ್ಯ ಪೂರ್ಣ. ಪ್ರೀತಿಯ ವಿಷಯದಲ್ಲಿ ಸಫಲತೆ. ವೃತ್ತಿಯಲ್ಲಿ ಉನ್ನತಿ, ಕೌಟುಂಬಿಕ ಸಾಮರಸ್ಯ.

ವೃಷಭ
ಕೆಲ ದಿನಗಳ ಪ್ರಕ್ಷುಬ್ಧತೆ ಕಳೆದು ಮನಸ್ಸು ಶಾಂತವಾಗಲಿದೆ. ಕಾರ್ಯ ಸಾಫಲ್ಯದಿಂದ ವಿಶ್ವಾಸ ವೃದ್ಧಿ. ಎಲ್ಲ ಸರಿಯಾಗಿ ನಿಭಾಯಿಸುವಿರಿ.

ಮಿಥುನ
ನೆಮ್ಮದಿ ಕಲಕುವ ಬೆಳವಣಿಗೆ. ನಿಮಗೆ ಧೈರ್ಯ ಕಡಿಮೆ, ಆದರಿಂದ ಗುರಿ ಸಾಧನೆ ಕಷ್ಟ. ಸ್ನೇಹಿತರಿಂದ ಹಣ ವಂಚನೆ ನಡೆದೀತು.

ಕಟಕ
ಕೆಲಸದಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಿ. ಚಂಚಲಚಿತ್ತ ಒಳಿತಲ್ಲ. ಅನಿರೀಕ್ಷಿತ ಧನಲಾಭ. ದೇವರ ಪ್ರಾರ್ಥನೆಯಿಂದ ಮನಸ್ಸಿಗೆ ಶಾಂತಿ.

ಸಿಂಹ
ನಿರ್ವಹಣೆ ಉತ್ತಮ. ಹಾಗಾಗಿ ಒಳ್ಳೆ ಫಲ ಸಿಗುವುದು. ಆದರೂ ಕೆಲವರ ಅವಕೃಪೆಗೆ ತುತ್ತಾಗುವಿರಿ. ಕೌಟುಂಬಿಕ ಭಿನ್ನಮತ, ಉದ್ವಿಗ್ನತೆ.

ಕನ್ಯಾ
ಉದ್ದೇಶಿಸಿದ ಕಾರ್ಯಕ್ಕೆ ವಿಘ್ನಗಳು. ಪ್ರಯತ್ನ ವಿಫಲ. ಮನಸ್ಸಿಗೆ ನಿರಾಶೆ. ಅತಿಯಾಗಿ ವಿಶ್ವಾಸವಿಟ್ಟವರೇ ಕೇಡು ಬಗೆಯುತ್ತಾರೆ.

ತುಲಾ
ಮಾಡಿದ ಕೆಲಸಕ್ಕೆ ಸೂಕ್ತ ಪ್ರತಿಫಲ ಸಿಗದಿದ್ದರೂ ನಿರಾಶೆ ಆಗದು. ಹಣದ ಹರಿವು ಸುಗಮ. ಉಳಿತಾಯವೂ ಸಾಧ್ಯ. ಮನಸ್ಸು ನಿರಾಳ.

ವೃಶ್ಚಿಕ
ಒತ್ತಡದ ದಿನ. ಅಧಿಕ ಹೊಣೆಗಾರಿಕೆ. ನಿಮ್ಮನ್ನು ದ್ವೇಷಿಸುವವರಿಂದ ದೂರ ಇರಿ. ಅನವಶ್ಯ ವೆಚ್ಚದ ಮೇಲೆ ನಿಯಂತ್ರಣ ಇಡಿ. ಕೌಟುಂಬಿಕ ಸಹಕಾರ.

ಧನು
ಯಾವುದೇ ವಿಷಯಕ್ಕೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಿ. ಅದು ನಿಮ್ಮ ಘನತೆ ಉಳಿಸುವುದು. ಗುರಿ ಸಾಧನೆ ನಿಮಗೆ ಕಷ್ಟವಾಗಲಾರದು.

ಮಕರ
ಇತ್ತೀಚಿನ ಹಿನ್ನಡೆಗಳಿಂದ ನೊಂದಿದ್ದರೆ ಇಂದು ನಿರಾಳತೆ ಸಿಗಲಿದೆ. ನಿಮಗೆ ಪೂರಕವಾದ ಬೆಳವಣಿಗೆ. ಆಪ್ತರ ಜತೆಗಿನ ಮುನಿಸು ಮಾಯ.

ಕುಂಭ
ವಿಶ್ವಾಸ ವೃದ್ಧಿಯ ಬೆಳವಣಿಗೆ. ಮನೆಯಲ್ಲಿ ಅಧಿಕ ಹೊಣೆಯ ಹೊರೆ. ಹಿರಿಯರಿಗೆ ಸಂಧಿ ನೋವಿನಿಂದ ನೆಮ್ಮದಿ ಸಿಗಬಹುದು.

ಮೀನ
ಇತರರ ಜತೆ ಸರಿಯಾಗಿ ವ್ಯವಹರಿಸಿ. ತಪ್ಪು ಕಲ್ಪನೆ ಮೂಡದಂತೆ ಎಚ್ಚರ ವಹಿಸಿ. ಸಣ್ಣ ಸಮಸ್ಯೆ ಕಡೆಗಣಿಸಬೇಡಿ, ಅದೇ ದೊಡ್ಡದಾದೀತು.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 7,0,6,2

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

ಪುಟ ೧ ➡ 243 ಸದಸ್ಯರ ಬಿಹಾರ ವಿಧಾನಸಭೆಯಲ್ಲಿ ಎನ್‌ಡಿಎಗೆ 202 ಸದಸ್ಯರ ಬೆಂಬಲ ಇರುವುದರಿಂದ ನಾಲ್ಕು ಸ್ಥಾನಗಳಲ್ಲಿ ಸುಲಭವಾಗಿ ಗೆಲುವು ಸಾಧಿಸಿತು. ಐದನೇ ಸ್ಥಾನಕ್ಕಾಗಿ ಪ್ರತಿಪಕ್ಷ ಆರ್‌ಜೆಡಿ ಪಕ್ಷದ ಅಮರೇಂದ್ರ ಧಾರಿ ಸಿಂಗ್ ಅವರನ್ನು ಕಣಕ್ಕಿಳಿಸಿ ಚುನಾವಣೆಯನ್ನು ಸ್ಪರ್ಧಾತ್ಮಕಗೊಳಿಸಿತು. ಎನ್‌ಡಿಎ ಅಭ್ಯರ್ಥಿಗಳಿಗೆ ಬೆಂಬಲವಾಗಿ ಮತ ಚಲಾಯಿಸಿದ ಮೈತ್ರಿ ಶಾಸಕರಿಗೆ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಧನ್ಯವಾದ ತಿಳಿಸಿದ್ದಾರೆ.

ಒಡಿಶಾದಲ್ಲಿ ನಾಲ್ವರು ಆಯ್ಕೆ: ಇನ್ನೊಂದೆಡೆ ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ನಾಲ್ವರು ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳಾದ ಮನ್ಮೋಹನ್ ಸಾಮಲ್ ಮತ್ತು ಸುಜೀತ್ ಕುಮಾರ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಕೇಂದ್ರ ಮಾಜಿ ಸಚಿವ ದಿಲೀಪ್ ರಾಯ್ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗಮನಾರ್ಹ ಜಯ ದಾಖಲಿಸಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿದ್ದ ಅವರು, ಬಿಜು ಜನತಾ ದಳ, ಕಾಂಗ್ರೆಸ್ ಮತ್ತು ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಡಾ. ದತ್ತೇಶ್ವರ ಹೋಟಾ ಅವರನ್ನು ಸೋಲಿಸಿದ್ದಾರೆ. ಈ ವೇಳೆ ಬಿಜು ಜನತಾ ದಳ ಮತ್ತು ಕಾಂಗ್ರೆಸ್ ಪಕ್ಷಗಳ ಕೆಲ ಶಾಸಕರು ಪಕ್ಷದ ವಿಪ್‌ಗೆ ವಿರುದ್ಧವಾಗಿ ದಿಲೀಪ್ ರಾಯ್ ಪರ ಮತ ಚಲಾಯಿಸಿದ ಘಟನೆ ಗಮನಸೆಳೆದಿದೆ. ಬಿಜು ಜನತಾ ದಳದ ಸಂತೃಪ್ತ ಮಿಶ್ರಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ಶಕ್ತಿ ಯೋಜನೆಯಲ್ಲಿ ಮಹಿಳೆಯರ 700 ಕೋಟಿ ಪ್ರಯಾಣ: ಸಿಎಂ

ಮಹಿಳೆಯರ ಪಾತ್ರ ಮಹತ್ವದ್ದು

ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯ ಗೆಲುವಿನಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯರ ಪಾತ್ರ ಮಹತ್ವವಾದುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ತಿಳಿಸಿದರು.



ಸೋಮವಾರ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದ ಆಯೋಜಿಸ ಲಾಗಿದ್ದ ಕಾರ್ಯಕಾರಿ ಸಭೆ ಮತ್ತು ತರಬೇತಿ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿ, 2013 ರಿಂದ 2018 ಮತ್ತು 2023ರಿಂದ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ. ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿಯೋಜನೆಯಿಂದ ಇದುವರೆಗೆ ಮಹಿಳೆಯರು 700 ಕೋಟಿ ಪ್ರಯಾಣ ಗಳನ್ನು ಕೈಗೊಂಡಿದ್ದಾರೆ. ಮಹಿಳಾ ಕೇಂದ್ರಿತ ಯೋಜನೆಗಳಿಂದ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲಾಗಿದೆ. ಸರ್ಕಾರದ ಗ್ಯಾರಂಟಿಗಳಿಂದ ಮಹಿಳೆಯರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ 1.26 ಕೋಟಿ ಮಹಿಳೆಯರಿಗೆ ಮಾಸಿಕ 2000 ರೂಗಳನ್ನು ನೀಡಲಾಗುತ್ತಿದ್ದು, ಇದರಿಂದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಸುಧಾರಿಸಿದೆ. ಆರ್ಥಿಕ ಸ್ವಾತಂತ್ರ್ಯದಿಂದ ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿದೆ ಎಂದರು.

ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಭಾಗ ವಹಿಸಿ: ಮಹಿಳೆಯರಲ್ಲಿ ನಾಯಕತ್ವದ ಗುಣ ಬಹಳ ಪ್ರಮುಖವಾಗಿದೆ. ಎಲ್ಲರಿಗೂ ಸಮಾನ ಅವಕಾಶ ದೊರೆತರೆ ಸಮಾನತೆಯನ್ನು ಸಾಧಿಸುವುದು ಸುಲಭವಾಗಿದೆ. ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್‌ನಲ್ಲಿ 1 ಲಕ್ಷಕ್ಕೂ ಹೆಚ್ಚು ಮಹಿಳಾ ಸದಸ್ಯರಿದ್ದು, ಭವಿಷ್ಯದಲ್ಲಿ ಈ ಸಂಖ್ಯೆ 2 ಲಕ್ಷಗಳಿಗೆ ವೃದ್ಧಿಸಬೇಕು. ಉಪಚುನಾವಣೆ ಸಮೀಸುತ್ತಿರುವುದರಿಂದ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಹಿಳಾ ಸದಸ್ಯರ ಪಾತ್ರ ಮಹತ್ವದ್ದಾಗಿದೆ. ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಮಹಿಳಾ ಸದಸ್ಯರ ಎರಡು ತಂಡಗಳನ್ನು ರಚಿಸಿ, ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಸೂಚಿಸಿದರು.

ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಅಲ್ಕಾ ಲಾಂಬಾ, ಕರ್ನಾಟಕ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಸೌಮ್ಯಾ ರೆಡ್ಡಿ, ಮಹಿಳಾ ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ಸೋಫಿಯಾ ಜುಬೇರಾ, ಪ್ರಧಾನ ಕಾರ್ಯದರ್ಶಿ ಸೇವಾ ಸೆಲ್ವಾನ್, ಶಾಸಕ ಮಂಥರ್ ಗೌಡ, ನಯನ ಮೋಟಮ್ಮ, ಮಾಜಿ ಸಚಿವ ರಾಣಿ ಸತೀಶ್ ಸೇರಿದಂತೆ ಮಹಿಳಾ ಕಾಂಗ್ರೆಸ್ ವಿಭಾಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬನ್ನಿ

ಬೆಂಗಳೂರು: ನಿಷ್ಠೆಯಿಂದ ಕೆಲಸ ಮಾಡಿದರೆ ಅಧಿಕಾರ ಮನೆ ಬಾಗಿಲಿಗೆ ಬರಲಿದೆ. ಮಹಿಳೆಯರು ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ



ಹೆಬ್ಬಾಳಕರ್ ಹೇಳಿದರು. ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ವತಿಯಿಂದ ಮಹಿಳಾ ಸಬಲೀಕರಣ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ನಡೆಯುತ್ತಿರುವ ಮಹಿಳಾ ಸಬಲೀಕರಣ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಆರ್‌ಎಸ್‌ಎಸ್ ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ, ಅದೇ ರೀತಿ ಪಕ್ಷದಲ್ಲಿ ಮಹಿಳಾ ಕಾಂಗ್ರೆಸ್ ಘಟಕವು ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ. ಉತ್ತಮ ಕೆಲಸ ಮಾಡಿದರೆ ಅಧಿಕಾರ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಮುಂಬರುವ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಎಲ್ಲಾ ವರ್ಗದವರನ್ನು ಗುರುತಿಸಿ ಟಿಕೆಟ್ ನೀಡಬೇಕು ಎಂದರು. ಸಂಘಟನೆಯಲ್ಲಿ ಒತ್ತು ನೀಡುವವರನ್ನು, ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವವರನ್ನು ಗುರುತಿಸಬೇಕು. ನಿಮ್ಮ ಅಕ್ಕಪಕ್ಕದ ಮನೆಯವರ ಮನಸ್ಸನ್ನು ಗೆದ್ದು, ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಮಾಡಬೇಕು. ನಿಸ್ವಾರ್ಥದಿಂದ ಪಕ್ಷದಲ್ಲಿ ಕೆಲಸ ಮಾಡಬೇಕು ಎಂದರು.

ಸಚಿವರು, ಸಂಸದರ ಸಭೆ ಇಂದು

ಪುಟ ೧ ➡ ಈ ಹಿಂದೆ ರಾಜ್ಯದ ನೀರಾವರಿ ಸಚಿವರಾಗಿದ್ದ ಸಚಿವ ಎಚ್.ಕೆ. ಪಾಟೀಲ್, ಎಂ.ಬಿ.ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಜತೆಗೆ ಮಂಗಳವಾರ ಹೊಸದಿಲ್ಲಿಗೆ ತೆರಳಲಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ನೀರಾವರಿ ಪ್ರಕರಣಗಳ ಕುರಿತು ರಾಜ್ಯದ ಅಡ್ವೋಕೆಟ್ ಜನರಲ್ ಹಾಗೂ ರಾಜ್ಯವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರತಿನಿಧಿಸುತ್ತಿರುವ ಹಿರಿಯ ವಕೀಲರ ಜತೆಗೆ ಚರ್ಚೆ ನಡೆಸಲಿದ್ದಾರೆ. ಸುಪ್ರೀಂಕೋರ್ಟ್ ವಿಚಾರಣೆಯಲ್ಲಿ ರಾಜ್ಯ ಸರ್ಕಾರ ತಗೆದುಕೊಳ್ಳಬೇಕಾದ ನಿರ್ಧಾರದ ಕುರಿತು ವಕೀಲರ ತಂಡದೊಂದಿಗೆ ಚರ್ಚಿಸಲಿದ್ದಾರೆ.

ಅದೇ ದಿನ ಸಂಜೆ ರಾಜ್ಯದ ಕೇಂದ್ರ ಸಚಿವರಾಗಿರುವ ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ. ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ಸೇರಿದಂತೆ ಎಲ್ಲ ಪಕ್ಷಗಳ ರಾಜ್ಯ ಸಂಸದರ ಜತೆಗೆ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬೇಕಾದ ಯೋಜನೆಗಳು ಅಸರಲ್ಲಿಯೂ ಪ್ರಮುಖವಾಗಿ ಮೇಕೆದಾಟು, ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ತುಂಗಭದ್ರಾ ರಾಷ್ಟ್ರೀಯ ಯೋಜನೆ ಘೋಷಣೆ ಕುರಿತಾಗಿ ಸಂಸದರೊಂದಿಗೆ ಚರ್ಚಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂತೆ ಮನವೊಲಿಸುವ ಪ್ರಯತ್ನ ಮಾಡಲಿದ್ದಾರೆ. ಬಳಿಕ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ.

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ಪುಟ ೧ ➡ ನ್ಯಾಯಾಧಿಕರಣ ಆದೇಶದ ಪ್ರಕಾರ ನಮ್ಮ ಪಾಲಿನ ನೀರಿನ ಬಳಕೆಗೆ ಯೋಜನೆ ಮಾಡುತ್ತಿದ್ದು, ಈಗಾಗಲೇ 26 ಸಾವಿರ ಕೋಟಿ ರೂ. ಮೊತ್ತದ ಕಾಮಗಾರಿಗಳನ್ನು ಆರಂಭಿಸಲಾಗಿದೆ. ನಾವು ಈಗಲೇ ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ ಮಾಡುತ್ತಿಲ್ಲ. 2010 ರಲ್ಲಿ ಆಗಿರುವ ಆದೇಶದ ಅನುಸಾರ ನಮ್ಮ ಪಾಲಿನ ನೀರು ಬಳಕೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

“ ತುಂಗಭದ್ರಾ ಅಣೆಕಟ್ಟೆಯಿಂದ ನಮಗೆ 30 ಟಿಎಂಸಿ ನೀರು ವ್ಯರ್ಥವಾಗುತ್ತಿದ್ದು, ಇದಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳಲು ಆಂಧ್ರ ಸರ್ಕಾರ ಸಹಕಾರ ನೀಡುತ್ತಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಸಂಸದರ ಜತೆ ಚರ್ಚಿಸಿ ಸರ್ಕಾರದ ಮೇಲೆ ಒತ್ತಡ ಹಾಕಲು ತೀರ್ಮಾನ ಮಾಡಲಾಗುತ್ತದೆ.

■ **ಶಿವಕುಮಾರ್**, ಡಿಸಿಎಂ

ಕೆ.ಎಚ್. ಪಾಟೀಲ್ ಅಪರೂಪದ ರಾಜಕಾರಣಿ

ಬೆಂಗಳೂರು: ಸಹಕಾರಿ ಧುರೀಣ ಕೆ.ಎಚ್. ಪಾಟೀಲರು ಅಪರೂಪದ ರಾಜಕಾರಣಿ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಸಹಕಾರಿ ರಂಗದ ಭೀಷ್ಮ ನಾಡು ಮೆಚ್ಚಿದ ನಾಯಕ ಕೆ. ಎಚ್; ಪಾಟೀಲ್‌ರ 101ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಮಾಡದಿರುವ ಕೆಲಸವಿಲ್ಲ ಸಾಮಾನ್ಯ ಗ್ರಾಮದಲ್ಲಿ ಹುಟ್ಟಿ ಪಂಚಾಯತಿ ಸದಸ್ಯರಾಗಿ, ಕಾಂಗ್ರೆಸ್ ಅಧ್ಯಕ್ಷರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಕೆ. ಎಚ್. ಪಾಟೀಲ್ ಅವರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರೆಂದರು.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಡವರು, ದಲಿತರು, ಅಲ್ಪಸಂಖ್ಯಾತರಲ್ಲಿ ಶಕ್ತಿ ತುಂಬುವ ಕೆಲಸ ಮಾಡಿದ್ದನ್ನು ಸ್ಮರಿಸಬೇಕು ಎಂದರು. ಕೆ ಎಚ್ ಪಾಟೀಲ್ ರ ಪುತ್ರ, ಸಚಿವರಾದ ಎಚ್. ಕೆ.ಪಾಟೀಲರು ಅವರ ತಂದೆಯವರು ನಡೆದ ದಾರಿಯಲ್ಲಿ ನಡೆಯುತ್ತಿದ್ದು, ಅವರಿಗಿಂತಲೂ ಹೆಚ್ಚು ಬೆಳೆಯಲಿ ಎಂದರು. ಮಾಜಿ ಸಿಎಂ ವೀರಪ್ಪ ಮೊಯ್ಲಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ , ಡಿಸಿಎಂ ಡಿ.ಕೆ. ಶಿವಕುಮಾರ್, ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಕೆ. ಎಚ್.ಮುನಿಯಪ್ಪ, ಎಚ್. ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಶಾಸಕರಿದ್ದರು.



ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ

ಪುಟ ೧ ➡ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾ ದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ. ಪ್ರಸ್ತುತ 22 ಭಾರತೀಯ ಧ್ವಜದ ಹಡಗುಗಳು ಪಶ್ಚಿಮ ಪರ್ಷಿಯನ್ ಕೊಲ್ಲಿಯಲ್ಲಿ ಉಳಿದುಕೊಂಡಿದ್ದು, ಸುರಕ್ಷಿತ ನಿರ್ಗಮನಕ್ಕೆ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ.

ಸಾರಿಗೆ ಸಮನ್ವಯ ಮತ್ತು ಬೆಂಬಲ: ಫೆ.28ರಂದು ಸಂಘರ್ಷ ಆರಂಭವಾದಾಗಿನಿಂದ, ಡಿಜಿ ಶಿಪ್ಪಿಂಗ್ ನಿಯಂತ್ರಣ ಕೊಠಡಿ, 8,400ಕ್ಕೂ ಹೆಚ್ಚು ಕರೆಗಳನ್ನು ನಿರ್ವಹಿಸಿದೆ. ಇಲ್ಲಿಯವರೆಗೆ ಒಟ್ಟು 286 ಭಾರತೀಯ ನಾವಿಕರನ್ನು ಸ್ವದೇಶಕ್ಕೆ ಕರೆತರಲಾಗಿದೆ. ವ್ಯಾಪಾರ ನಿರಂತರತೆಯನ್ನು ಕಾಪಾಡಿಕೊಳ್ಳಲು ಜವಾಹರಲಾಲ್ ನೆಹರು ಪೋರ್ಟ್ ಅಥಾರಿಟಿ ಸೇರಿದಂತೆ ಪ್ರಮುಖ ಬಂದರುಗಳಲ್ಲಿ ಲಂಗರು ಹಾಕುವ ಮತ್ತು ಸಂಗ್ರಹಣಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಹಾರ್ಮುಜ್ ಜಲಸಂಧಿಯ ದಿಗ್ಬಂಧನ ಮುಂದುವರಿದಿದ್ದರೂ, ರಷ್ಯಾದಂತಹ ಪರ್ಯಾಯ ಪೂರೈಕೆದಾರರಿಂದ ತೈಲ ಪಡೆಯುವ ಮೂಲಕ ಕೊರತೆ ನೀಗಿಸಲು ಯತ್ನಿಸಲಾಗುತ್ತಿದೆ.

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚೆಸಿಲ್ಲ: ಭಾರತ

ಪುಟ ೧ ➡ ಶಿಪ್ಪಿಂಗ್ ಮಾರ್ಗಗಳು ನಿರ್ಬಂಧಿತವಾಗಿದ್ದರೂ, ಎರಡು ಭಾರತೀಯ ಎಲ್‌ಪಿಜಿ ವಾಹಕ ನೌಕೆಗಳು ಶನಿವಾರ ಯಶಸ್ವಿಯಾಗಿ ಈ ಜಲಸಂಧಿ ದಾಟಿವೆ. ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ತಗ್ಗಿಸಲು ರಾಜತಾಂತ್ರಿಕ ಮಾರ್ಗ ಅಳವಡಿಸಿಕೊಳ್ಳಲು ಭಾರತ ಕರೆನೀಡಿದೆ.

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ: ಸೋನಿಯಾಗೆ ಎಚ್‌ಡಿಡಿ ಪತ್ರ

ಪುಟ ೧ ➡ ಇದು ಸಂಸತ್ತಿನ ಘನತೆಯನ್ನು ಕುಗ್ಗಿಸುತ್ತಿದೆ. ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆ ಎಂದು ಮಾಜಿ ಪ್ರಧಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಬಿಸ್ಕತ್ತು, ಪಕೋಡಾ ಸೇವನೆ ಅತಿರೇಕದ ಕ್ರಮ: ಸಂಸತ್ತಿನ ಮೆಟ್ಟಿಲುಗಳ ಮೇಲೆ ಚಹಾ ಸೇವನೆ ಮಾಡುವುದು ಸರಿಯಾದ ನಡವಳಿಕೆ ಅಲ್ಲ. ಈ ಹಿಂದೆ ವಿರೋಧ ಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಗೌರವಿಸಿ ಸಂಯಮದಿಂದ ವರ್ತಿಸಿದ್ದವು. ಸಂಸತ್ತಿನ ಮೆಟ್ಟಿಲುಗಳ ಮೇಲೆ ಕುಳಿತು ಚಹಾ, ಬಿಸ್ಕತ್ತು, ಪಕೋಡಾ ತಿನ್ನುವುದು ಅತಿರೇಕದ ಕ್ರಮಗಳು. ಇವು ಅನುಚಿತ ಎಂದು ಗೌಡರು ಟೀಕಿಸಿದ್ದಾರೆ.

ಪೀಠಕ್ಕೆ ತೋರುವ ಅಗೌರವ: ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿನೀತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಪೀಠಕ್ಕೆ ಅಗೌರವ ತೋರುವ, ಅಪಚಾರ ಎಸಗುವ ಕೆಲಸ ಆಗಬಾರದು. ನನ್ನ ಕಾಳಜಿ ಮತ್ತು ನನ್ನ ಉದ್ದೇಶವನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನನಗೆ ನಂಬಿಕೆಯಿದೆ. ನಾನು ಯಾರನ್ನೂ ಲಘುವಾಗಿ ನೋಡುವ ಅಥವಾ ಯಾರ ಉತ್ಸಾಹವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿಲ್ಲ. ಆದರೆ, ವಿರೋಧ ಪಕ್ಷದ ಹಿರಿಯ ಸ್ಥಾನದಲ್ಲಿರುವ ನೀವು, ನಿಮ್ಮ ರಾಜಕೀಯ ಅನುಭವ ಮತ್ತು ಪ್ರಬುದ್ಧತೆಯನ್ನು ಬಳಸಿಕೊಂಡು ನಿಮ್ಮ ಪಕ್ಷದ ನಾಯಕರು ಮತ್ತು ಇತರರೊಂದಿಗೆ ಮಾತನಾಡಿ ಸರಿಪಡಿಸಬೇಕು ಒತ್ತಾಯಿಸುತ್ತೇನೆ ಎಂದು ದೇವೇಗೌಡರು, ಸೋನಿಯಾ ಗಾಂಧಿ ಅವರನ್ನು ಪತ್ರದ ಮೂಲಕ ಆಗ್ರಹಿಸಿದ್ದಾರೆ.

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ

ಹೊಸದಿಲ್ಲಿ: ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ ಸಹ–ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು.



ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ನಾಸಿಕ್‌ನಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಶಾಖೆಯ ಸಂಪರ್ಕಕ್ಕೆ ಬಂದರು. ಅವರು ಪುಣೆಯಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು, ಕಾನ್ಪುರ ವಿಶ್ವವಿದ್ಯಾಲಯದಿಂದ ಎಂ.ಎ. (ಸಮಾಜಶಾಸ್ತ್ರ) ಮತ್ತು ಬಿ.ಎಡ್. ಪದವಿಗಳನ್ನು ಪಡೆದರು.

ತುರ್ತು ಪರಿಸ್ಥಿತಿಯ ಸಮಯದಲ್ಲಿ, ಅವರು ಕಾನ್ಪುರದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಪ್ರತಿಭಟನಾ ಚಳವಳಿಯಲ್ಲಿ ಮಹಿಳೆಯನ್ನು ಸಜ್ಜುಗೊಳಿಸುವಲ್ಲಿ ಪ್ರಮುಖಪಾತ್ರ ವಹಿಸಿದರು. ಅಶೋಕ್ ಸಿಂಘಾಲ್ ಮತ್ತು ಸಿಂಧುತಾಯಿ ಪಾಠಕ್ ಅವರಿಂದ ಪ್ರೇರಿತರಾದ ರೇಖಾತಾಯಿ, ರಾಷ್ಟ್ರೀಯ ಸೇವಿಕಾ ಸಮಿತಿಯ ಪೂರ್ಣಕಾಲಿಕ ಪ್ರಚಾರಿಕಾರಾದರು. ತಮ್ಮ ಇಡೀ ಜೀವನವನ್ನು ಸಂಘಟನಾ ಕಾರ್ಯಕ್ಕೆ ಮೀಸಲಿಟ್ಟು ಮತ್ತು ರಾಷ್ಟ್ರದ ಸೇವೆಯಲ್ಲಿ ಅವರು ಅವಿವಾಹಿತರಾಗಿ ಉಳಿಯಲು ಪ್ರತಿಜ್ಞೆ ಮಾಡಿದರು.

ರೇಖಾತಾಯಿ ಅವರು ದಿಲ್ಲಿ ಪ್ರಾಂತ ಪ್ರಚಾರಿಕಾ, ಉತ್ತರ ಕ್ಷೇತ್ರ ಪ್ರಚಾರಿಕಾ ಮತ್ತು ಅಖಿಲ ಭಾರತೀಯ ಪ್ರಚಾರಿಕಾ ಪ್ರಮುಖ್ ಸಹಿತ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಹಲವು ವರ್ಷಗಳ ಕಾಲ ಜಲಂಧರ್ ಕೇಂದ್ರ ಸ್ಥಾನವಾಗಿರಿಸಿ ಉತ್ತರ ಕ್ಷೇತ್ರದಾದ್ಯಂತ ಸಮಿತಿಕಾರ್ಯವನ್ನು ವಿಸ್ತರಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರ್ಯಾಣ ಮತ್ತು ಹಿಮಾಚಲ ಪ್ರದೇಶದಂತಹ ಸೂಕ್ಷ್ಮ ಹಾಗೂ ಗಡಿ ಪ್ರದೇಶಗಳಲ್ಲಿ ರಾಷ್ಟ್ರೀಯ ಸೇವಿಕಾ ಸಮಿತಿಯ ಕಾರ್ಯ ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಕಾಶ್ಮೀರದಲ್ಲಿ ಹಿಂದುಗಳ ಹತ್ಯಾಕಾಂಡದ ಸಮಯದಲ್ಲಿ ರೇಖಾ ತಾಯಿ ಅನೇಕ ಹುಡುಗಿಯರನ್ನು ರಕ್ಷಿಸಿದ್ದಾರೆ. ಹೆತ್ತವರನ್ನು ಕಳೆದುಕೊಂಡ ಹೆಣ್ಣುಮಕ್ಕಳಿಗಾಗಿ ಜಮ್ಮುವಿನಲ್ಲಿ ಅವರು ಆದಿತಿ ಹಾಸ್ಟೆಲ್ ಅನ್ನು ಸ್ಥಾಪಿಸಿದ್ದಾರೆ. ಲವ್ ಜಿಹಾದ್‌ನಲ್ಲಿ ಸಿಲುಕಿರುವ ಅನೇಕ ಹಿಂದು ಹುಡುಗಿಯರನ್ನು ರಕ್ಷಿಸುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ರೇಖಾ ರಾಜೆ ಅವರ ಪಾರ್ಥಿವ ಶರೀರವನ್ನು ದಿಲ್ಲಿಯಿಂದ ಕಾನ್ಪುರದ ಅವರ ಮನೆಗೆ ತರಲಾಯಿತು. ಅಲ್ಲಿ ಸಾರ್ವಜನಿಕ ದರ್ಶನದ ಬಳಿಕ ಅಂತಿಮ ಯಾತ್ರೆಯು ಭೈರವ ಘಾಟ್‌ಗೆ ತೆರಳಿ ಅಂತಿಮ ವಿಧಿವಿಧಾನಗಳೊಂದಿಗೆ ಅಂತ್ಯ ಸಂಸ್ಕಾರ ನಡೆಸಲಾಯಿತು.

ಸಚಿವರಿಂದ ಸಹಾಯವಾಣಿ ವ್ಯವಸ್ಥೆಗೆ ಚಾಲನೆ

ಬೆಂಗಳೂರು: ವ್ಯಸನಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಕಚೇರಿಯಲ್ಲಿ ಸಾರ್ವಜನಿಕರಿಗಾಗಿ ಸ್ಥಾಪಿಸಲಾದ ಸಹಾಯವಾಣಿ (ಹೆಲ್ಪ್‌ಲೈನ್) ವ್ಯವಸ್ಥೆಗೆ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಹಾಗೂ ಸಾರ್ವ ಜನಿಕರಲ್ಲಿ ಮದ್ಯಪಾನ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ರಾಜ್ಯದಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು.

ಮದ್ಯಪಾನ ಮತ್ತು ಮಾದಕ ವಸ್ತುಗಳ ಬಳಕೆ ವ್ಯಕ್ತಿಯ ಆರೋಗ್ಯ, ಕುಟುಂಬದ ಶಾಂತಿ ಹಾಗೂ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವುದರ ಜೊತೆಗೆ ಯುವ ಪೀಳಿಗೆಯ ಭವಿಷ್ಯಕ್ಕೂ ದೊಡ್ಡ ಅಪಾಯವನ್ನುಂಟು ಮಾಡುತ್ತಿದೆ. ಇದಲ್ಲದೆ ಸಮಾಜದಲ್ಲಿ ಹೆಚ್ಚುತ್ತಿರುವ ಅಕ್ರಮ ಮದ್ಯ ಸೇವನೆ, ಅಕ್ರಮ ಮಾರಾಟ ಹಾಗೂ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಿದೆ. ಈ ಸಂಬಂಧ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆತಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಮಂಡಳಿಯ ಸಹಾವಾಣಿ ಸಂಖ್ಯೆ: 080–22863230ಗೆ ಕರೆ ಮಾಡಿ ದೂರು ನೀಡಬಹುದು ಎಂದರು. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಮಾತನಾಡಿ, ಸಾರ್ವಜನಿಕರಿಂದ ಬರುವ ದೂರುಗಳು ಮತ್ತು ಮಾಹಿತಿಗಳನ್ನು ಗೌಪ್ಯವಾಗಿ ಪರಿಗಣಿಸಲಾಗುವುದಲ್ಲದೆ, ಸಂಬಂಧಪಟ್ಟವರ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಮದ್ಯ ಮತ್ತು ಮಾದಕ ವಸ್ತುಗಳಿಂದ ಸಮಾಜವನ್ನು ರಕ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಆದ್ದರಿಂದ ಸಾರ್ವಜನಿಕರು ಜಾಗೃತರಾಗಿದ್ದು ಇಂತಹ ಅಕ್ರಮ ಚಟುವಟಿಕೆಗಳ ವಿರುದ್ಧ ಧೈರ್ಯವಾಗಿ ಮಾಹಿತಿ ನೀಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಈ ಸಹಾಯವಾಣಿಯು, ಸರ್ಕಾರಿ ರಜಾ ದಿನಗಳು ಹೊರತುಪಡಿಸಿ ಕಚೇರಿ ಸಮಯದ ವೇಳೆ ಅಂದರೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ರವರೆಗೆ ಕಾರ್ಯನಿರ್ವಹಿಸಲಿದೆ. ಈ ವೇಳೆ ಕಲ್ಬುರ್ಗಿ ಡಿ.ಡಿ.ಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸೋಮಶೇಖರ್ ಗೊನಾಯಕ್, ಮಂಡಳಿ ಅಧ್ಯಕ್ಷರ ಕಾರ್ಯದರ್ಶಿ ನರಸಿಂಹಮೂರ್ತಿ, ಮಂಡಳಿ ಕಾರ್ಯದರ್ಶಿ ಎನ್.ಎಸ್. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ

ಬೆಂಗಳೂರು: ರಾಜ್ಯದ ರಾಯಚೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆಯಾಗಿದೆ. ಈ ಅಕಾಲಿಕ ಮಳೆಯು ಬಿಸಿಲಿನಿಂದ ಜನರಿಗೆ ತಂಪೆರೆದರೂ, ರಾಯಚೂರಿನ ಮಾವು ಬೆಳೆಗಾರರು ಮತ್ತು ಇತರೆ ರೈತರಿಗೆ ಬೆಳೆ ಹಾನಿಯ ಭೀತಿ ತಂದೊಡ್ಡಿದೆ.

ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೊಪ್ಪಳ ಜಿಲ್ಲೆ ಯಲಬುರ್ಗಾದ ಎನ್.ಜರಕುಂಟಿಯ ಮಂಜುನಾಥ್ (15) ಸಿಡಿಲಿಗೆ ಬಲಿಯಾಗಿದ್ದಾನೆ. ಬಿಸಿಲ ನಾಡು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮಲ್ಲದಗುಡ್ಡ ಸೇರಿದಂತೆ ವಿವಿಧೆಡೆ ಸುಮಾರು ಒಂದು ಗಂಟೆ ಕಾಲ ನಿರಂತರ ಆಲಿಕಲ್ಲು ಮಳೆಯಾಗಿದೆ. ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಮಳೆ ತಂಪು ನೀಡಿದ್ದರೂ, ಆಲಿಕಲ್ಲುಗಳ ಅಬ್ಬರ ಮಾವು ಬೆಳೆಗಾರರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಹೂವು ಬಿಟ್ಟಿದ್ದ ಮಾವಿನ ಗಿಡಗಳಿಗೆ ಆಲಿಕಲ್ಲು ಮಳೆ ಏಟು ನೀಡಿದ್ದು, ಬೆಳೆ ಹಾನಿಯಾಗುವ ಭೀತಿ ಎದುರಾಗಿದೆ.

ರಾಜ್ಯದ ಕರಾವಳಿ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆಗಳಲ್ಲಿ ಮಳೆಯಾಗಿದೆ. ಬೀದರ್‌ನಲ್ಲಿ ಆಲಿಕಲ್ಲು ಮಳೆಯಾಗಿದ್ರೆ, ಹುಬ್ಬಳ್ಳಿಯಲ್ಲಿ ಗುಡುಗು ಸಹಿತ ಭಾರೀ ಮಳೆಗೆ ಜನರು ಬೆಚ್ಚಿದ್ದಾರೆ. ಇತ್ತ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಾತ್ರ ಒಣಹವೆ ಮುಂದುವರಿದಿದೆ.



ಬೀದರ್ ನಗರದಲ್ಲಿ ಭಾರೀ ಬಿರುಸಿನ ಮಳೆಯಾಗಿದ್ದು ಸಂಜೆ ವೇಳೆಗೆ ಬಿರುಗಾಳಿ ಹಾಗೂ ಗುಡುಗು ಸಹಿತ ಭಾರೀ ಮಳೆಯಾಗಿದ್ದು, ಸುಡುಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆದಿದ್ದಾನೆ. ಧಾರವಾಡ, ಕೊಡಗು ಜಿಲ್ಲೆಯ ಮಡಿಕೇರಿ ನಗರ, ಕಕ್ಕಬ್ಬೆ, ನೆಲಜಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಮಳೆಯಾಗಿದೆ. ಕೋಲಾರ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ಮತ್ತು ಕಳಸ ಭಾಗದಲ್ಲಿ ಭಾರೀ ಮಳೆಯಾಗಿದ್ದರೆ, ಶೃಂಗೇರಿ ಹಾಗೂ ಚಿಕ್ಕಮಗಳೂರು ನಗರದಲ್ಲಿ ಸಾಧಾರಣ ಮಳೆಯಾಗಿದೆ. ಮತ್ತೊಂದೆಡೆ ರೈತರು ಜೋಳವನ್ನು ಕಟಾವು ಮಾಡಿ ಜೋಳ ರಾಶಿ ಮಾಡಲು ಸಿದ್ಧತೆ ನಡೆಸಿದ್ರು. ಈ ವೇಳೆ ಅಕಾಲಿಕ ಮಳೆಯಾಗಿದ್ದು, ಹೊಲದಲ್ಲಿ ಕಟಾವು ಮಾಡಿ ಜೋಡಿಸಿದ ಜೋಳ ಭಾರೀ ಮಳೆಯಿಂದಾಗಿ ಹಾನಿಯಾಗಿದೆ. ಕೈಗೆ ತುತ್ತು ಬಾಯಿಗೆ ಬರಲಿಲ್ಲ ಅಂತ ರೈತರು ಬೇಸರಗೊಂಡಿದ್ದಾರೆ.

ಸದನದ ಗಂಭೀರತೆ ಅರ್ಥ ಮಾಡಿಕೊಳ್ಳಿ: ಶಾಸಕ ಸುನೀಲ್

ಬೆಂಗಳೂರು: ಮುಖ್ಯಮಂತ್ರಿಗಳು ಸದನದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಶಾಸಕ ಸುನೀಲ್ ಕುಮಾರ್ ಒತ್ತಾಯಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆ ಸೋಮವಾರ ಮಾತನಾಡಿ, ಪ್ರಶ್ನೆಗಳಿಗೆ ಉತ್ತರ ನೀಡುವ ವೇಳೆ ಸಚಿವರು ಸದನದಲ್ಲಿ ಹಾಜರಿರುವಂತೆ ಎಚ್ಚರಿಕೆಯನ್ನು ಸರ್ಕಾರ ಕೊಟ್ಟಿದ್ದರೂ



ಪ್ರಯೋಜನವಾಗಿಲ್ಲ; ಇವತ್ತು 230 ಲಿಖಿತ ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಮಾತ್ರ ಸರ್ಕಾರ ಉತ್ತರ ಕೊಟ್ಟಿದೆ. ಇದು ಸಹಜವಾಗಿ ವಿಧಾನಸಭಾಧ್ಯಕ್ಷರಿಗೆ ಬೇಸರ ತರಿಸಿದೆ ಎಂದು ವಿಶ್ಲೇಷಿಸಿದರು.

ಸರ್ಕಾರದ ನಿಲುವನ್ನು ಖಂಡಿಸಿ ಇತಿಹಾಸದಲ್ಲೇ ಮೊದಲ ಬಾರಿಗೆ ಸಭಾಧ್ಯಕ್ಷರು ಅವರು ಪೀಠವನ್ನು ಬಿಟ್ಟು ಹೋಗಿದ್ದಾರೆ. ಇದು ಆಘಾತಕಾರಿ ಸಂಗತಿ ಎಂದು ತಿಳಿಸಿದರು. ಸರ್ಕಾರಕ್ಕೆ ಸದನ, ಸಂವಿಧಾನದ ಕುರಿತು ಹಾಗೂ ಸದನದ ನಡವಳಿಕೆ ಬಗ್ಗೆ ಗೌರವ ಇದ್ದರೆ, ಮುಖ್ಯಮಂತ್ರಿಗಳು ಸ್ವತಃ ಈ ವಿಚಾರದಲ್ಲಿ ಪ್ರವೇಶ ಮಾಡಿ ಪ್ರಶ್ನೆಗಳಿಗೆ ಉತ್ತರ ಕೊಡುವುದಷ್ಟೇ ಅಲ್ಲ; ಸದನವನ್ನು ಸಚಿವರು ಯಾವ ರೀತಿ ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಳ್ಳಬೇಕೆಂಬುದನ್ನು ಸ್ಪಷ್ಟ ಪಡಿಸಲಿ ಎಂದು ಒತ್ತಾಯಿಸಿದರು.

ಸಿಎಂ ಈ ವಿಷಯದಲ್ಲಿ ಅಸಹಾಯಕರಾಗಿದ್ದಾರೆ. ಕಳೆದ ಬಾರಿ ಅಧಿವೇಶನ ದಲ್ಲಿ ಎಲ್ಲ ಸಚಿವರು ಅಧಿವೇಶನದ ಸಂದರ್ಭದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕೆಂದು ಸ್ವತಃ ಸಿಎಂಗಳು ಸಚಿವರಿಗೆ ಪತ್ರ ಬರೆದಿದ್ದರು. ಸಿಎಂಗಳ ಪತ್ರಕ್ಕೆ ಬೆಲೆ ಇಲ್ಲ. ಆಡಳಿತ ಹಿಡಿತ ತಪ್ಪಿದೆ ಎಂಬುದು ಗೊತ್ತಾಗಿದೆ ಎಂದರು. ಇಡೀ ವರ್ಷದಲ್ಲಿ ಅಧಿ ವೇಶನ 40 ದಿನ ನಡೆಯುವುದೇ ಕಷ್ಟ. ಆ ಅಧಿವೇಶನದಲ್ಲಿ ಸದಸ್ಯರಿಗೆ ಸರಿಯಾದ ಉತ್ತರ ಸಿಗುತ್ತಿಲ್ಲ. ಯಾವುದೋ ಪ್ರಶ್ನೆಗೆ ಯಾವುದೋ ಉತ್ತರ ಕೊಡಲಾಗುತ್ತಿದೆ. ಇದೊಂದು ಪರಿಪಾಠವಾಗಿದೆ ಎಂದರು.

ಡಿಸಿಎಂ ಪರಿಶೀಲನೆ



ವಿಧಾನಸೌಧದ ಆವರಣದಲ್ಲಿ ತೆರೆದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಮಳಿಗೆಗೆ ಸೋಮವಾರ ಸಂಜೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಭೇಟಿ ನೀಡಿ, ನಿಗಮದ ಉತ್ಪನ್ನಗಳನ್ನು ಪರಿಶೀಲಿಸಿದರು. ಕೆಎಸ್ ಡಿಎಲ್ ಅಧ್ಯಕ್ಷ ಸಿ.ಎಸ್. ನಾಡಗೌಡ (ಅಪ್ಪಾಜಿ) ಹಾಜರಿದ್ದರು.

ಅಮರೇಶ, ಹೆನ್ರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಬೆಂಗಳೂರು: ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕಥಾ ಸಂಕಲನ ಹಾಗೂ ಕೊಂಕಣಿ ಸಾಹಿತಿ ಮತ್ತು ಪತ್ರಕರ್ತ ಮಂಗಳೂರಿನ ಹೆನ್ರಿ ಮೆಂಡೊನ್ಸಾ





ಅವರ ರುಪಾನಿ ಆನಿ ರೂಪಕಾಂ ಸಾಹಿತ್ಯ ವಿಮರ್ಶೆ ಕೃತಿಗೆ 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಈ ಪ್ರಶಸ್ತಿಯು 1 ಲಕ್ಷ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಡಾ. ಜಯಲಲಿತ ಮತ್ತು ಸಹನಾ ಕಾಂತಬೈಲು ಅವರಿದ್ದ ತಜ್ಞರ ಸಮಿತಿಯು ಈ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 2025ರ ಜ.30ರಂದು ಆರಂಭವಾದ ಸುದೀರ್ಘ ಆಯ್ಕೆ ಪ್ರಕ್ರಿಯೆಯ ನಂತರ ಈ ಅಧಿಕೃತ ಘೋಷಣೆ ಹೊರಬಿದ್ದಿದೆ.

ರಾಯಚೂರು ಜಿಲ್ಲೆಯವರಾದ ಅಮರೇಶ ನುಗಡೋಣಿ ಅವರು, ಗ್ರಾಮೀಣ ಬದುಕಿನ ಸಮಸ್ಯೆಗಳಂತಹ ವಿಷಯ ಗಳನ್ನು ತಮ್ಮ ಕಥೆಗಳಲ್ಲಿ ನೈಜವಾಗಿ ಚಿತ್ರಿಸುವುದಕ್ಕೆ ಹೆಸರುವಾಸಿ ಯಾಗಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾಗಿದ್ದಾರೆ. ಮಂಗಳೂರಿನ ಹೆನ್ರಿ ಮೆಂಡೊನ್ಸಾ ಅವರು ಕೊಂಕಣಿ ಸಾಹಿತ್ಯದ ಪ್ರಮುಖ ಕವಿ, ಸಣ್ಣ ಕಥೆಗಾರ, ವಿಮರ್ಶಕ ಮತ್ತು ಸಂಪಾದಕರಾಗಿದ್ದು, ಇವರು ಕೇವಲ ಸಾಹಿತಿಯಾಗಿ ಮಾತ್ರವಲ್ಲದೆ, ಕೊಂಕಣಿ ಸಾಹಿತ್ಯವನ್ನು ಡಿಜಿಟಲ್ ಲೋಕಕ್ಕೆ ಕೊಂಡೊಯ್ಯುವಲ್ಲಿ ಮತ್ತು ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಕಿರುಸುದ್ದಿ

ಆಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿ

ವಿಧಾನಪರಿಷತ್: ರಾಜ್ಯ ಸರ್ಕಾರವೇ ಆಂಬುಲೆನ್ಸ್‌ಗಳ ಕೇಂದ್ರಿಕೃತ ನಿರ್ವಹಣಾ ವ್ಯವಸ್ಥೆಯನ್ನು 112 ಅಡಿಯಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದ್ದು, 3 ತಿಂಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಟಿ.ಎನ್. ಜವರಾಯಿಗೌಡ ಅವರು ಆ್ಯಂಬುಲೆನ್ಸ್ ವ್ಯವಸ್ಥೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯ ಆ್ಯಂಬುಲೆನ್ಸ್ ಗಳನ್ನು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ 112 ಎಂಬ ಕೇಂದ್ರಿಕೃತ ನಿರ್ವ ಹಣಾ ವ್ಯವಸ್ಥೆಯನ್ನು ಸರ್ಕಾರವೇ ವಹಿಸಿಕೊಳ್ಳಲಿದೆ. ಈ ನೂತನ ವ್ಯವಸ್ಥೆ 3 ತಿಂಗಳಲ್ಲಿ ಅನುಷ್ಠಾನವಾಗುವ ಸಾಧ್ಯತೆ ಇದ್ದು, ತಾಂತ್ರಿಕತೆಯ ಅಳವಡಿಕೆಯ ಕಾರ್ಯ ಪ್ರಗತಿ ಯಲ್ಲಿದೆ ಎಂದು ಹೇಳಿದರು. ಅದೇ ರೀತಿ ಆ್ಯಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿಯನ್ನೂ ಸರ್ಕಾರ ಶೀಘ್ರ ದಲ್ಲಿಯೇ ಕೈಗೊಳ್ಳಲಿದೆ. ಕೇಂದ್ರ ಸರ್ಕಾರದ ಮಾನದಂಡ ಗಳ ಅನ್ವಯ ರಾಜ್ಯದಲ್ಲಿ ಆ್ಯಂಬುಲೆನ್ಸ್‌ಗಳು ಸಮರ್ಪಕ ವಾಗಿವೆ, ಆ್ಯಂಬುಲೆನ್ಸ್‌ಗಳ ಕೊರತೆ ರಾಜ್ಯದಲ್ಲಿ ಇಲ್ಲ. ಆರೋಗ್ಯ ಕವಚ ವ್ಯಾಪ್ತಿಯಲ್ಲಿ 715 ಹಾಗೂ ರಾಜ್ಯದ 1 ಸಾವಿರ ಒಟ್ಟಾರೆಯಾಗಿ 1,715 ಆ್ಯಂಬುಲೆನ್ಸ್‌ಗಳು ಕಾರ್ಯನಿರ್ವ ಹಿಸುತ್ತಿದ್ದು, ಇನ್ನೂ ಹೆಚ್ಚುವರಿಯಾಗಿ 262 ಆ್ಯಂಬುಲೆನ್ಸ್‌ಗಳ ಖರೀದಿಗೆ ಸರ್ಕಾರ ಮುಂದಾಗಿದೆ ಎಂದರು.

ವಾರದಲ್ಲಿ ನಾಲ್ಕು ಗಂಟೆ ದೈಹಿಕ ಶಿಕ್ಷಣಕ್ಕೆ ಮೀಸಲು

ವಿಧಾನಪರಿಷತ್: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಾರದಲ್ಲಿ ಪ್ರತಿ ತರಗತಿಗೆ 4 ತಾಸನ್ನು ದೈಹಿಕ ಶಿಕ್ಷಣಕ್ಕೆ ಮೀಸಲಿಡಲಾಗಿದೆ. ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ಪಿರಿಯಡ್‌ನಲ್ಲಿ ಬೋಧಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಚಿದಾನಂದ ಗೌಡ ಕೇಳಿದ ಪ್ರಶ್ನೆ ವೇಳೆ ಪ್ರತಿಕ್ರಿಯಿಸಿದ ಅವರು, ರಾಜ್ಯದ ಪ್ರಾಥಮಿಕ ಶಿಕ್ಷಣದಲ್ಲಿ 6,771 ದೈಹಿಕ ಶಿಕ್ಷಕರ ಹುದ್ದೆ ಮಂಜೂರಾಗಿದ್ದು, ಈ ಪೈಕಿ 3,361 ಹುದ್ದೆ ಖಾಲಿ ಇದೆ. ಪ್ರೌಢ ಶಾಲೆಗಳಲ್ಲಿ 5,223 ಹುದ್ದೆ ಮಂಜೂರಾಗಿದೆ. 1,841 ಹುದ್ದೆ ಖಾಲಿ ಉಳಿದಿವೆ. ಮುಂದಿನ 15 ಸಾವಿರ ಶಿಕ್ಷಕರ ನೇಮಕಾತಿಯ ಸಂದರ್ಭದಲ್ಲಿ ದೈಹಿಕ ಶಿಕ್ಷಕರ ನೇಮಕ್ಕೆ ಹೆಚ್ಚು ಒತ್ತು ನೀಡುವುದಾಗಿ ಸಚಿವರು ಭರವಸೆ ನೀಡಿದರು. ಚಿದಾನಂದ ಗೌಡ ಮಾತನಾಡಿ, ಉತ್ತಮ ಮನಸ್ಸಿನೊಂದಿಗೆ ಉತ್ತಮ ದೈಹಿಕ ಆರೋಗ್ಯವು ಅಗತ್ಯ. ಆದ್ದರಿಂದ ಮಕ್ಕಳ ದೈಹಿಕ ಶಿಕ್ಷಣ ಚಟುವಟಿಕೆಗೆ ಕಡಿವಾಣ ಹಾಕಬಾರದು ಎಂದು ಒತ್ತಾಯಿಸಿದರು.

ರಾಜ್ಯಮಟ್ಟದ ಸಮಿತಿ ರಚನೆ

ವಿಧಾನಪರಿಷತ್: ರಾಜ್ಯದ ಶಿಕ್ಷಣ ಮಹಾವಿದ್ಯಾಲಯಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆಗಾಗಿ ಐವರು ಸದಸ್ಯರನ್ನೊಳ ಗೊಂಡ ರಾಜ್ಯಮಟ್ಟದ ಸಮಿತಿ ರಚಿಸಲಾಗಿದ್ದು, ಈ ಸಮಿತಿ ವರದಿ ಆಧರಿಸಿ ಶುಲ್ಕ ಪರಿಷ್ಕರಣೆಯ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಸದಸ್ಯ ಮಧು ಜಿ. ಮಾದೇಗೌಡ ಅವರು ಬಿಇಡಿ ಮಹಾವಿದ್ಯಾಲಯಗಳ ಪ್ರವೇಶ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಶುಲ್ಕ ಪರಿಷ್ಕರಣೆ ವಿಷಯವಾಗಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ಸಹ ನಡೆದಿದ್ದು, ಸಮಗ್ರವಾಗಿ ಚರ್ಚೆ ನಡೆಸಲಾಗಿದೆ. ಶುಲ್ಕ ಪರಿಷ್ಕರಣೆಗೆ ಸಮಿತಿ ವರದಿ ನೀಡಿದ ಬಳಿಕವೇ ಸರ್ಕಾರ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುತ್ತಿದೆ ಎಂದರು.

ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಹೇಳಿಕೆ

ದೇವಸ್ಥಾನ, ಶಾಲೆಗಳ ಆಸ್ತಿಗಳಿಗೆ ಕೈ ಹಾಕಲ್ಲ

ವಿಧಾನಸಭೆ: ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒತ್ತುವರಿಯನ್ನು ತೆರವುಗೊಳಿಸಿ ಆಸ್ತಿಗಳನ್ನು ಮರಳಿ ಪಡೆಯಲು ಎಲ್ಲಾ ಕ್ರಮಗಳನ್ನು



ಕೈಗೊಳ್ಳಲಾಗಿದೆ. ಆದರೆ ಯಾವುದೇ ದೇವಸ್ಥಾನ, ಶಾಲೆಗಳಿಗೆ ಕೈ ಹಾಕುವುದಿಲ್ಲ ಎಂದು ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಎಂ.ವೈ. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ 1,12,862 ಎಕರೆ ವಕ್ಫ್ ಆಸ್ತಿ ಇದೆ. ಈ ಆಸ್ತಿ ಸರ್ಕಾರದಿಂದ ಬಂದದ್ದಲ್ಲ. ಖಾಸಗಿ ವ್ಯಕ್ತಿಗಳು ಸಮಾಜದ ಅಭಿವೃದ್ಧಿಗೆ ಕೊಟ್ಟಿರುವುದು. ಅದರಲ್ಲಿ ಕೇವಲ 20,054 ಎಕರೆಗಳು ನಮ್ಮ ಬಳಿಯಿದೆ. 17,969 ಎಕರೆಗಳನ್ನು ಅತಿಕ್ರಮಣ ಮಾಡಲಾಗಿದೆ. 47,263 ಎಕರೆಗಳು ಇನಾಂ ರದ್ದತಿ ಕಾಯ್ದೆಯಡಿ ಮತ್ತು 23,627 ಎಕರೆಗಳು ಭೂ ಸುಧಾರಣಾ ಕಾಯ್ದೆಯಿಂದಾಗಿ ನಮ್ಮ ಕೈ ಬಿಟ್ಟು ಹೋಗಿವೆ. ವಕ್ಫ್ ಆಸ್ತಿಯನ್ನು ಒತ್ತುವರಿ ಮಾಡಿದವರು ಮುಸ್ಲಿಂ ಸಮುದಾಯದವರೇ ಎಂದು ಹೇಳಿದರು.

ವಕ್ಫ್ ಆಸ್ತಿ ಒತ್ತುವರಿ ತೆರವಿಗಾಗಿ ರಾಜ್ಯಾದ್ಯಂತ ವಕ್ಫ್ ಅದಾಲತ್ ಗಳನ್ನು ನಡೆಸಲಾಗಿದೆ. ವಕ್ಫ್ ಅದಾಲತ್‌ನ ಬಗ್ಗೆ ಹಿಂದೆ ಪ್ರತಿಪಕ್ಷಗಳು ಟೀಕೆ ಮಾಡಿದ್ದವು. ಆದರೆ, ಈ ಅದಾಲತ್ ನಡೆಸಿರುವುದು ವಕ್ಫ್ ಆಸ್ತಿ ಉಳಿಸಲು. ದೇವಸ್ಥಾನ, ಶಾಲೆಗಳಿಗೆ ಬಳಕೆಯಾಗಿರುವ ವಕ್ಫ್ ಆಸ್ತಿಗಳನ್ನು ನಾವು ಹಾಗೆಯೇ ಬಿಟ್ಟಿದ್ದೇವೆ. ಖಾಸಗಿ ವ್ಯಕ್ತಿಗಳು ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವು ಮಾಡುತ್ತಿದ್ದೇವೆ ಎಂದು ಸಚಿವರು ಸ್ಪಷ್ಟಪಡಿಸಿದರು.

ವಕ್ಫ್ ಆಸ್ತಿಯಲ್ಲಿ ಬೇಸಾಯ ಮಾಡುತ್ತಿದ್ದರೆ ರೈತರಿಗೆ ನೀಡಿ

ಈ ವೇಳೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ವಕ್ಫ್ ಆಸ್ತಿ ಒತ್ತುವರಿ ತೆರವು ಮಾಡಿ. ಅದಕ್ಕೆ ನಮ್ಮ ಆಕ್ಷೇಪವಿಲ್ಲ. ಹಿಂದೆ ದೇವಸ್ಥಾನಗಳಿಗೂ ಬಹಳಷ್ಟು ಇನಾಂ ಭೂಮಿ ಇತ್ತು. ಭೂ ಸುಧಾರಣಾ ಕಾಯ್ದೆಯಡಿ ಉಳುವ ರೈತರಿಗೆ ನೀಡಲಾಗಿದೆ. ಅದೇ ರೀತಿ ವಕ್ಫ್ ಆಸ್ತಿಯಲ್ಲಿ ಯಾರಾದರೂ ಬೇಸಾಯ ಮಾಡುತ್ತಿದ್ದರೆ ಅದನ್ನು ಅವರಿಗೇ ಕೊಟ್ಟುಬಿಡಿ. ಅತಿಕ್ರಮಣದ ಬಗ್ಗೆ ತನಿಖೆ ಮಾಡಿ ಎಂದು ನಾವೂ ಹೇಳುತ್ತಿದ್ದೇವೆ. ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲ್ ಇರುವ ಜಾಗ ಸಹ ವಕ್ಫ್ ಆಸ್ತಿ. ಆ ಬಗ್ಗೆಯೂ ಸಚಿವರೇ ಮಾತನಾಡಿ ಎಂದು ಹೇಳಿದರು.ಅದಕ್ಕೆ ಸಚಿವರು ಅದು ಸುಪ್ರೀಂ ಕೋರ್ಟ್‌ನಲ್ಲಿದೆ ಎಂದು ಉತ್ತರಿಸಿದರು. ಸರ್ಕಾರ ಯಾವುದೇ ದೇವಾಲಯಗಳು ಅಥವಾ ಶಿಕ್ಷಣ ಸಂಸ್ಥೆಗಳ ಜಮೀನನ್ನು ವಕ್ಫ್ ಆಸ್ತಿ ಎಂದು ಹೇಳಿಕೊಳ್ಳುವ ಮೂಲಕ ಅವುಗಳ ಮೇಲೆ ಕೈ ಹಾಕುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಸ್ಮಶಾನ ಭೂಮಿ ಮಂಜೂರಿಗೆ ಕ್ರಮ

ವಿಧಾನಸಭೆ: ಸ್ಮಶಾನ ಇಲ್ಲದ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರಿಗೆ ಸರ್ಕಾರಿ ಜಮೀನು ಇಲ್ಲದಿದ್ದರೆ, ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಹಣ ನೀಡಿ



ಖಾಸಗಿ ಜಮೀನು ಖರೀದಿಗೆ ಸರ್ಕಾರ ಸಿದ್ಧ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಪ್ರಭು ಚೌಹಾಣ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಕಳೆದ 70 ವರ್ಷಗಳಿಂದ ಎಲ್ಲಾ ಸರ್ಕಾರಗಳೂ ಇರುವ ಭೂಮಿಯನ್ನೆಲ್ಲಾ ರೈತರಿಗೆ ಹಾಗೂ ವಿವಿಧ ಜನಪರ ಯೋಜನೆಗಳಿಗೆ ಮಂಜೂರು ಮಾಡಿದೆ. ಪ್ರಸ್ತುತ ಸ್ಮಶಾನಕ್ಕೂ ಭೂಮಿ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಹತ್ತು ವರ್ಷಗಳಿಂದ ಎಲ್ಲಾ ಸರ್ಕಾರಗಳೂ ವಸತಿ ಪ್ರದೇಶಗಳಿಗೆ ಅವಶ್ಯ ಇರುವಷ್ಟು ಸ್ಮಶಾನ ಭೂಮಿ ನೀಡಬೇಕು ಎಂದು ಪ್ರಯತ್ನಿಸಿದೆ. ಈ ವಿಚಾರದಲ್ಲಿ ಹೈಕೋರ್ಟ್ ಸಹ ಸರ್ಕಾರದ ಬೆನ್ನುಹತ್ತಿದೆ. ಸರ್ಕಾರಿ ಜಮೀನು ಇದ್ದಲ್ಲಿ ಆ ಭೂಮಿಯನ್ನೇ ಸ್ಮಶಾನಕ್ಕೆ ಕಾಯ್ದಿರಿಸಲಾಗಿದೆ. ಸರ್ಕಾರಿ ಜಮೀನು ಇಲ್ಲದಿದ್ದ ಭಾಗಗಳಲ್ಲಿ ಸ್ಮಶಾನ ಭೂಮಿ ನೀಡುವ ಸಲುವಾಗಿ ಕಳೆದ 3 ವರ್ಷದಲ್ಲಿ 58 ಕೋಟಿ ರೂ. ಕೊಟ್ಟು ಭೂಮಿಯನ್ನು ಖರೀದಿ ಮಾಡುವ ಹಂತಕ್ಕೆ ಬಂದು ನಿಂತಿದ್ದೇವೆ ಎಂದು ವಿಷಾದಿಸಿದರು.

ಔರಾದ್ ತಾಲೂಕಿನ ಪರಿಸ್ಥಿತಿ ಬಗ್ಗೆಯೂ ಸದನಕ್ಕೆ ಮಾಹಿತಿ ನೀಡಿದ ಅವರು, ಔರಾದ್ ತಾಲೂಕಿನ 154 ವಸತಿ ಪ್ರದೇಶಗಳ ಪೈಕಿ 9 ಪ್ರದೇಶಗಳಲ್ಲಿ ಸ್ಮಶಾನ ಇಲ್ಲ ಎಂಬ ವರದಿ ಇದೆ. ಈ 9 ಗ್ರಾಮಗಳ ಪೈಕಿ 2 ಗ್ರಾಮಗಳಿಗೆ ಆ ಗ್ರಾಮದ ಮಿತಿಯಲ್ಲೇ ಸರ್ಕಾರಿ ಭೂಮಿ ಲಭ್ಯ ಇದ್ದು, ಒಂದು ವಾರದಲ್ಲಿ ಸ್ಮಶಾನ ಭೂಮಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಲಾಗಿದೆ.

ಇನ್ನೂ 7 ವಸತಿ ಪ್ರದೇಶಗಳಿಗೆ ಪಕ್ಕದ ಗ್ರಾಮದಲ್ಲಿ ಭೂಮಿ ಇದ್ದು, ಅದನ್ನು 15 ದಿನಗಳ ಒಳಗೆ ಕಾಯ್ದಿರಿಸಲು ಸೂಚಿಸಲಾಗಿದೆ ಎಂದರು.

ಬಗರ್‌ಹುಕುಂ ಸಾಗುವಳಿ ಸಮಿತಿ ರಚಿಸಿಲ್ಲ

ವಿಧಾನಸಭೆ: ರಾಜ್ಯದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ರಚನೆಯಾಗಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಡಾ. ಅವಿನಾಶ್ ಜಾಧವ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಒಟ್ಟು 175 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಿತಿ ರಚಿಸಲಾಗಿದೆ. ಅಲ್ಲದೇ 16 ಹೆಚ್ಚುವರಿ ಸಮಿತಿ ರಚಿಸಿದ್ದು, ಪ್ರಸ್ತ 191 ಬಗರ್ ಹುಕುಂ ಸಮಿತಿಗಳಿವೆ. ಬೈಂದೂರು ಮತ್ತು ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಸಮಿತಿಗಳಿಗೆ ಸಂಬಂಧಿಸಿ ಪ್ರಕರಣಗಳು ನ್ಯಾಯಾಲಯದಲ್ಲಿವೆ ಎಂದರು. ಮೊದಲು ತಾಲೂಕುವಾರು ಸಮಿತಿ ರಚನೆ ಮಾಡಲಾಗುತ್ತಿತ್ತು. ಈಗ ವಿಧಾನಸಭಾ ಕ್ಷೇತ್ರವಾರು ಸಮಿತಿ ರಚಿಸಲಾಗುತ್ತಿದೆ. ಒಂದು ವೇಳೆ ಹೆಚ್ಚುವರಿ ಸಮಿತಿಯ ಅಗತ್ಯವಿದ್ದರೆ ಹೆಚ್ಚುವರಿ ಸಮಿತಿ ರಚಿಸುವುದಕ್ಕೂ ಅವಕಾಶವಿದೆ ಎಂದರು.

ಉತ್ತರ ನೀಡದ ಅಧಿಕಾರಿಗಳ ಅಮಾನತು

ವಿಧಾನಸಭೆ: ಸದನದಲ್ಲಿ ಕೇಳಲಾಗುವ ಲಿಖಿತ ಪ್ರಶ್ನೆಗಳಿಗೆ ವಿವಿಧ ಇಲಾಖೆಗಳಿಂದ ಬರುವ ಉತ್ತರಗಳಲ್ಲಿ ವಿಳಂಬ ಆಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಉತ್ತರ ನೀಡುವಲ್ಲಿ ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು.



ಉತ್ತರದಲ್ಲಿ ಆಗುತ್ತಿರುವ ವಿಳಂಬಕ್ಕೆ ಸಭಾಧ್ಯಕ್ಷರು ಅಸಮಾಧಾನಗೊಂಡ ಬೆಳಗ್ಗೆ ಸಭಾತ್ಯಾಗ ಮಾಡಿದ್ದ ಬಗ್ಗೆ ಮಧ್ಯಾಹ್ನದ ನಂತರ ಕಲಾಪ ಆರಂಭವಾಗುತ್ತಿದಂತೆ ಸರ್ಕಾರದ ಪರವಾಗಿ ಉತ್ತರಿಸಿದ ಪರಮೇಶ್ವರ ಅವರು, ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ಸಭಾಧ್ಯಕ್ಷರ ತೀರ್ಮಾನವನ್ನು ಸ್ವಾಗತಿಸುವೆ, ಸಚಿವರು ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿಮಾಡಬೇಕು, ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು, ಕೆಲವು ಅಧಿಕಾರಿಗಳು ಸದನಕ್ಕೆ ಬರುವುದಿಲ್ಲ. ಅಧಿಕಾರಿಗಳಿಗೆ ಗಂಭೀರತೆ ಇಲ್ಲ. ಮುಖ್ಯಕಾರ್ಯದರ್ಶಿಗಳು ಅಧಿಕಾರಿಗಳ ಸಭೆ ಕರೆಯಬೇಕು, ಅವರು ಕೈ ಚೆಲ್ಲಿ ಕೂತಿದ್ದಾರೆ, ಸದನದಲ್ಲಿ ಏನು ಮಾಡಿದೆ ಎಂದು ಕ್ಷೇತ್ರದ ಜನ ನಮ್ಮನ್ನು ಕೇಳುತ್ತಾರೆ. ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಕೆಲವು ಐಎಎಸ್ ಅಧಿಕಾರಿಗಳು 8 ರಿಂದ 10 ತಿಂಗಳು ಕಚೇರಿಗೆ ಬಂದೇ ಇಲ್ಲ. ಅವರಿಗೆ ಗಾಲ್ಫ್ ಆಡುವುದಕ್ಕೆ ಸಮಯ ಇರುತ್ತೆ ಸದನಕ್ಕೆ ಬರಲು ಸಮಯ ಇರಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

ಟಿ-20 ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಜಯ: ಶ್ಲಾಘನೆ

ವಿಧಾನಪರಿಷತ್: ಇತ್ತೀಚೆಗೆ ಟಿ-20 ವಿಶ್ವ ಕಪ್‌ನಲ್ಲಿ ಜಯ ಗಳಿಸಿದ ಭಾರತ ತಂಡಕ್ಕೆ ಸೋಮವಾರ ಮೇಲ್ಮನೆಯಲ್ಲಿ ಸದಸ್ಯರೆಲ್ಲರೂ ಶ್ಲಾಘನೀಯ ವ್ಯಕ್ತಪಡಿಸಿದರು. ಸದನದಲ್ಲಿ ಸದಸ್ಯ ಡಿ.ಎಸ್. ಅರುಣ್ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದು, ಟಿ-20 ವಿಶ್ವಕಪ್‌ನಲ್ಲಿ ಭಾರತ ಗೆಲುವು ಸಾಧಿಸಿದೆ. ಆದ್ದರಿಂದ ಈ ಗೆಲುವಿನ ಗರಿಯನ್ನು ಮುಡಿಗೇರಿಸಿಕೊಂಡಿರುವ ನಮ್ಮ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ನಂತರ ಸದನದ ಸದಸ್ಯರೆಲ್ಲರೂ ಮೇಜು ತಟ್ಟಿ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಆಗ ಸಭಾಪತಿ ಪೀಠದಲ್ಲಿದ್ದ ಎಂ.ಕೆ. ಪ್ರಾಣೇಶ್ ಅವರು ಅಭಿನಂದನಾ ಪತ್ರವನ್ನು ಬಿಸಿಸಿಐ ಸಂಸ್ಥೆಗೆ ಕಳುಹಿಸಲಾಗುವುದು ಎಂದು ಹೇಳಿದರು.

ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕ ಅಂಗೀಕಾರ

ವಿಧಾನಸಭೆ: 2026ನೇ ಸಾಲಿನ ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರಗೊಂಡಿತು. ವಿಧೇಯಕವನ್ನು ಮಂಡಿಸಿ ಮಾತನಾಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು, ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯು ದುರ್ನಡತೆ ಅಥವಾ ಅಸಮರ್ಪಕ ಕಾರ್ಯವೈಖರಿಯಿಂದ ಅವರನ್ನು ವರ್ಗಾವಣೆ ಮಾಡಬೇಕಾದಲ್ಲಿ ಸರ್ಕಾರದ ಅನುಮತಿ ಬೇಕಾಗಿತ್ತು ಈ ವಿಧೇಯಕದಿಂದ ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯ ವರ್ಗಾವಣೆಯನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಪಿಇಬಿಗೆ ವರ್ಗಾವಣೆ ಅಧಿಕಾರ: ಕರ್ತವ್ಯ ಲೋಪ, ದುರ್ನಡತೆ ಅಥವಾ ಅಶಿಸ್ತು ತೋರುವ ಡಿವೈಎಸ್ಪಿ ಶ್ರೇಣಿಯವರೆಗಿನ ಅಧಿಕಾರಿಗಳನ್ನು ಸರ್ಕಾರದ ಪೂರ್ವಾನುಮತಿಗಾಗಿ ಕಾಯದೆ ನೇರವಾಗಿ ವರ್ಗಾವಣೆ ಮಾಡುವ ಅಧಿಕಾರವನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ (ಪಿಇಬಿ) ನೀಡಲು ಉದ್ದೇಶಿಸಲಾಗಿದೆ. ಈ ಮೊದಲು ಯಾವುದೇ ಅಧಿಕಾರಿಯನ್ನು ವರ್ಗಾಯಿಸಲು ಕನಿಷ್ಠ 2 ವರ್ಷಗಳ ಕಾಲಾವಕಾಶ ಇರಬೇಕಿತ್ತು. ಆದರೆ ಹೊಸ ತಿದ್ದುಪಡಿಯ ಪ್ರಕಾರ, ಗಂಭೀರ ಲೋಪಗಳು ಕಂಡುಬಂದಲ್ಲಿ ಈ ಕನಿಷ್ಠ ಅವಧಿಯ ನಿಯಮ ಅನ್ವಯಿಸುವುದಿಲ್ಲ.

ಅನಧಿಕೃತ ಜಾಹೀರಾತು ಪ್ಲಾಸ್ಟಿಕ್ ಬಳಕೆಗೆ ದಂಡ

ವಿಧಾನಸಭೆ: ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸುವ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರವಾಯಿತು.

ಈ ತಿದ್ದುಪಡಿ ವಿಧೇಯಕದಲ್ಲಿ ನಗರಸಭೆ ವ್ಯಾಪ್ತಿಯ ಸಾರ್ವನಿಕ ಇಲ್ಲವೇ ಖಾಸಗಿ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸಲು ಶುಲ್ಕ ಪಾವತಿ ಮಾಡಬೇಕಿದ್ದು, ಸ್ಥಳೀಯ ಪೌರ ಪಾಲಿಕೆಯ ಅನುಮತಿ ಇಲ್ಲದೇ ಪಾಲಿಕೆ ಪ್ರದೇಶದ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶಿಸುವಂತಿಲ್ಲ. ಜಾಹೀರಾತು ಉಲ್ಲಂಘನೆ ಮತ್ತು ಶುಲ್ಕ ಬಾಕಿ ಇದ್ದಲ್ಲಿ ಅನುಮತಿ ಸಿಗುವುದಿಲ್ಲ.

ಅನಧಿಕೃತ ಜಾಹೀರಾತುಗಳ ತೆರವು: ಅನುಮತಿ ಮುಕ್ತಾಯದ ನಂತರವೂ ಜಾಹೀರಾತು ಪ್ರದರ್ಶಿಸಿದಲ್ಲಿ ಅದನ್ನು ತೆರವುಗೊಳಿಸಬಹುದಾಗಿದ್ದು, ಅಧಿಕೃತ ಮತ್ತು ಅನಧಿಕೃತ ಜಾಹೀರಾತು ಶುಲ್ಕವನ್ನು ಪಾವತಿಸದಿದ್ದಲ್ಲಿ ಶುಲ್ಕ ಅಥವಾ ದಂಡದ ಬಾಕಿ ದಿನದಿಂದ ಪಾವತಿವರೆಗೆ ವಾರ್ಷಿಕ ಶೇ.18ರ ಬಡ್ಡಿ ದರದಲ್ಲಿ ದಂಡ ವಿಧಸಬಹುದಾಗಿದೆ. ಜಾಹೀರಾತು ಆಕಾರದ ಮೇಲೆ ಶುಲ್ಕ ನಿಗದಿ ಮಾಡಲಾಗುತ್ತಿದೆ.

ವಿಧೇಯಕವನ್ನು ಮಂಡಿಸಿ ಮಾತನಾಡಿದ ಸಚಿವ ಬೈರತಿ ಸುರೇಶ್ ಅವರು, ಜಾಹೀರಾತಿಗೆ ಶುಲ್ಕ ವಿಧಿಸುವ ಕುರಿತಾದ ಈ ತಿದ್ದುಪಡಿ ವಿಧೇಯಕದಲ್ಲಿ ಸ್ವಂತ ಜಾಗದಲ್ಲಿ ಫಲಕ ಅಳವಡಿಸುವುದು, ಸರ್ಕಾರಿ ಜಾಗದಲ್ಲಿ ಖಾಸಗಿ ಫಲಕ ಅಳವಡಿಸುವುದು ಹಾಗೂ ಸರ್ಕಾರಿ ಜಾಗದಲ್ಲಿ ಸರ್ಕಾರಿ ಫಲಕ ಅಳವಡಿಸಲು ಶುಲ್ಕ ನಿಗದಿಪಡಿಸಲಾಗುವುದು ಎಂದರು.

ಪ್ಲಾಸ್ಟಿಕ್ ಬಳಸಿದರೆ ದಂಡ: ಸಾರ್ವಜನಿಕರಿಗೆ ತೊಂದರೆ ಆಗದ ಜಾಗದಲ್ಲಿ ಜಾಹೀರಾತು ಹಾಕಲು ಅವಕಾಶ ನೀಡಲಾಗುವುದು, ಜಾಹೀರಾತಿನ ವಿನ್ಯಾಸದ ಆಧಾರದ ಮೇಲೆ ಶುಲ್ಕ ನಿಗದಿಪಡಿಸಲಾಗುವುದು. ಫ್ಲೆಕ್ಸ್, ಬ್ಯಾನರ್ ಕೂಡಾ ತಿದ್ದುಪಡಿ ವಿಧೇಯಕದಲ್ಲಿ ಬರಲಿದ್ದು, ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸಲಾಗುವುದು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ

ಅರೆ ವೈದ್ಯಕೀಯ ಕಾಲೇಜು ಮುಚ್ಚುವ ಭೀತಿ


ವಿಧಾನಪರಿಷತ್: ನ್ಯಾಷನಲ್ ಕಮೀಷನ್ ಫಾರ್ ಅಲೈಡ್ ಆ್ಯಂಡ್ ಹೆಲ್ತ್ ಕೇರ್ ಪ್ರೊಫೆಶನ್ಸ್ (ಎನ್ ಸಿಎಎಚ್‌ಪಿ) ಸುತ್ತೋಲೆಯಿಂದಾಗಿ ರಾಜ್ಯದಲ್ಲಿರುವ ಪ್ಯಾರಾ ಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿ ಉಂಟಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ ವ್ಯಕ್ತಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಐವಾನ್ ಡಿಸೋಜಾ ಅವರು ಈ ಬಗ್ಗೆ ಪ್ರಸ್ತಾಪಿಸಿದ್ದು, ಎಸ್‌ಎಸ್‌ಎಲ್‌ಸಿ ನಂತರ ಈ ಕೋರ್ಸ್ ಅನ್ನು ರಾಜ್ಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈಗ ಪಿಯುಸಿಯಲ್ಲಿ ವಿಜ್ಞಾನ ತಗೆದುಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

ಡಿಪ್ಲೊಮಾ ಕೋರ್ಸ್‌ಗಳನ್ನು ಪದವಿಗೆ ಸಮವಾಗಿ ಮೇಲ್ದರ್ಜೆಗೆ ಏರಿಸಬೇಕು ಎಂಬ ನಿಯಮ ಅಳವಡಿಸಲು ತೀರ್ಮಾನಿಸಲಾಗಿದೆ. ಆದರೆ, ಈ ನಿಯಮಗಳನ್ನು ಸರಳೀಕರಿಸುವಂತೆ ಆಯೋಗದ ಅಧ್ಯಕ್ಷರೊಂದಿಗೆ ಮಾತನಾಡಿದ್ದೇವೆ. ಅವರು, ಈ ಬಗ್ಗೆ ಸಭೆ ಕರೆದು ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಇದು ದೇಶವ್ಯಾಪಿ ಜಾರಿಗೆ ಬರುವ ನಿಯಮ ಎಂದು ಸಚಿವರು ಹೇಳಿದರು.

ಇದಕ್ಕೂ ಮೊದಲು ಐವಾನ್ ಡಿಸೋಜಾ, ಈವರೆಗೂ ಎಸ್‌ಎಸ್‌ಎಲ್‌ಸಿ ನಂತರ ವೈದ್ಯಕೀಯ ಕ್ಷೇತ್ರದ ತರಬೇತಿ ಪಡೆಯಲು ಅವಕಾಶವಿತ್ತು. ಆದರೆ, ಇನ್ನೂ ಮುಂದೆ ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶ ಎಂದು ನಿಯಮ ರೂಪಿಸಿರುವುದು ಹೊಸ ಶೈಕ್ಷಣಿಕ ಬಿಕ್ಕಟ್ಟಿಗೆ ನಾಂದಿಯಾಗಿದೆ. ಈ ನೂತನ ನಿಯಮವನ್ನು 2026-27ನೇ ಸಾಲಿನಿಂದಲೇ ಜಾರಿಗೆ ತರಲು ಸೂಚಿಸಿದೆ. ಇದರಿಂದ ರಾಜ್ಯದಲ್ಲಿ ಪ್ರಸ್ತುತ 32 ಸರ್ಕಾರಿ ಹಾಗೂ 608 ಖಾಸಗಿ ಕಾಲೇಜು ಸೇರಿ 640 ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಗಳಿವೆ. ಹೊಸ ನಿಯಮ ಜಾರಿಯಾದರೆ 450 ರಿಂದ 500 ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಕೊರತೆ ಉಂಟಾಗಲಿದೆ ಎಂದು ತಿಳಿಸಿದರು.


ನೀಟ್ ತರಬೇತಿಗೆ ಒತ್ತು



ವಿಧಾನಪರಿಷತ್: ನೀಟ್ ಪರೀಕ್ಷೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇನ್ನಷ್ಟೂ ಪರಿಣಾಮಕಾರಿಯಾದ ತರಬೇತಿ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಮೇಲ್ಮನೆ ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು 3 ಲಕ್ಷ ರೂ. ಶುಲ್ಕ ನೀಡಿ ನೀಟ್ ತರಬೇತಿ ಪಡೆದುಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು.ಇದಕ್ಕೆ ಉತ್ತರಿಸಿದ ಶರಣಪ್ರಕಾಶ್ ಪಾಟೀಲ, ನೀಟ್ ವ್ಯವಸ್ಥೆಯಿಂದ ರಾಜ್ಯದ ಸೀಟ್‌ಗಳಿಗೆ ಯಾವ ಕೊರತೆ ಇಲ್ಲ. ನೀಟ್ ಸೀಟ್‌ಗಳ ಸಂಖ್ಯೆ ಕಡಿಮೆಯಾಗಿಲ್ಲ. ನೀಟ್ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಎಂದು ನಾವು ನಿರ್ಣಯವನ್ನಷ್ಟೇ ಸ್ವೀಕರಿಸಿದ್ದೇವೆ. ಆದರೆ, ಸುಪ್ರೀಂಕೋರ್ಟ್ ನೀಟ್ ವ್ಯವಸ್ಥೆಯ ಪರವಾಗಿ ತೀರ್ಪು ನೀಡಿದೆ. ಹೀಗಾಗಿ ಸರ್ಕಾರ ಹಲವು ಉಪಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸದನಕ್ಕೆ ಸಚಿವರೇ ಬರಲ್ಲ: ಛಲವಾದಿ ನಾರಾಯಣಸ್ವಾಮಿ

ವಿಧಾನಪರಿಷತ್: ಸದನಕ್ಕೆ ಕಡ್ಡಾಯ ಹಾಜರಾತಿ ಇದ್ದರೂ, ಸಚಿವರು ಹಾಜರಾ ಗಿಲ್ಲ. ಅಧಿಕಾರಿಗಳೇ ಇಲ್ಲದಿದ್ದರೆ ಹೇಗೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸಭಾಪತಿ ಗಳನ್ನು ಪ್ರಶ್ನಿಸಿದರು.



ಸದಸ್ಯರ 126 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೆಂದು ತಿಳಿದು ಬಂದಿದೆ. ನಮ್ಮ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು, ಯಾವಾಗ ಪ್ರಶ್ನೆ ಕೇಳಿದರೂ ಅವ ರಿಗೆ ಸಮರ್ಪಕವಾಗಿ ಉತ್ತರ ಬಂದಿಲ್ಲ. ಇಲ್ಲಿವರೆಗೂ ಪ್ರಶ್ನೆ ಮಾಡುತ್ತಿದ್ದಾರೆ. ನಾವು ಉತ್ತರ ಕೊಡಲಾರದ ಪ್ರಶ್ನೆಯನ್ನು ಕೇಳುತ್ತಿದ್ದೀವಾ? ಎಂದು ಛಲವಾದಿ ಗರಂ ಆದರು. ಸದಸ್ಯ ಭೋಜೆಗೌಡ ಅವರು, ಕೆಳಮನೆಯಲ್ಲಿ ಸ್ಪೀಕರ್ ಗರಂ ಆಗಿದ್ದರು. ಅಧಿ ಕಾರಿಗಳ, ಸಚಿವರ ವರ್ತನೆಗೆ ಬೇಸರ ವ್ಯಕ್ತಪಡಿಸಿದ್ದಾರೆ. ನಮ್ಮಲ್ಲೂ ಉತ್ತರ ಸಿಕ್ಕಿಲ್ಲ, ಗಂಭೀರವಾಗಿ ವಿಚಾರ ತೆಗೆದುಕೊಂಡಿಲ್ಲ. ಹೀಗಾದರೆ ಏನು ಮಾಡಬೇಕು ಎಂದು ಅಸಮಾಧಾನ ಹೊರಹಾಕಿದರು.

ಇದಕ್ಕೆ ಬೇಸರ ವ್ಯಕ್ತಪಡಿಸಿದ ಸಭಾಪತಿ, ನಾನೂ ಈ ಬಗ್ಗೆ ಸರ್ಕಾರಕ್ಕೆ ಹೇಳಿದ್ದೇನೆ. ಸರ್ಕಾರ ಕ್ರಮ ಕೈಗೊಳ್ಳಬೇಕು, ಉತ್ತರ ನೀಡಲು ಕೆಲ ಸಚಿವರು ಒಂದು ತಿಂಗಳು ಕಾಲಾವಕಾಶ ಕೇಳುತ್ತಾರೆ. ಸದನ ನಡೆಯುವಾಗ ಮಾಹಿತಿ ಪಡೆಯಬೇಕಲ್ಲವೇ ಎಂದರು.

ಸಭಾನಾಯಕ ಬೋಸರಾಜು ಮಾತನಾಡಿ, ಸಮಸ್ಯೆ ಸರಿಪಡಿಸುವ ಪ್ರಯತ್ನ ಮಾಡಲಾಗುತ್ತದೆ. ಸಿಎಂ ಗಮನಕ್ಕೂ ತರಲಾಗುತ್ತದೆ. ಮುಂದೆ ಹೀಗಾಗದಂತೆ ನೋಡಿಕೊಳ್ಳಲಾಗುತ್ತದೆ ಎಂದರು. ಮತ್ತೆ ಸಭಾಪತಿ ಪ್ರತಿಕ್ರಿಯಿಸಿ, ಉತ್ತರ ನೀಡದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ಶಿಶುಪಾಲನಾ ರಜೆ: 15 ದಿನಗೊಳಗೆ ಮಂಜೂರು

ವಿಧಾನಪರಿಷತ್: ಶಿಕ್ಷಕಿಯರು ಮಾತೃತ್ವ ರಜೆಯೊಂದಿಗೆ ಶಿಶುಪಾಲನಾ ರಜೆಯನ್ನು ಸಂಯೋಜಿಸಿ ಉಪಯೋಗಿಸಿಕೊಳ್ಳಲು ಇಚ್ಚಿಸಿದ್ದಲ್ಲಿ ಅಥವಾ ಶಿಶುಪಾಲನಾ ರಜೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ರಜಾ ಮನವಿ ಸ್ವೀಕೃತವಾದ 15 ದಿನಗೊಳಗೆ ರಜೆಯನ್ನು ಮಂಜೂರು ಮಾಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ವೈ.ಎಂ. ಸತೀಶ್ ಅವರು ಶಿಕ್ಷಕಿಯರಿಗೆ ಶಿಶುಪಾಲನಾ ರಜೆ ಮಂಜೂರು ಮಾಡಲಿರುವ ಮಾನದಂಡಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾತೃತ್ವದ ವರ್ಗಾವಣೆಗೆ ಹೊಸ ಕೆಟಗರಿಯೊಂದನ್ನು ಪ್ರಾರಂಭಿಸಲಾಗುವುದು. ಮಾತೃತ್ವ ರಜಾ ಮನವಿ ಸ್ವೀಕೃತಗೊಂಡ 15 ದಿನಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ಮಾತೃತ್ವ ರಜೆಯನ್ನು ಮಂಜೂರು ಮಾಡುವ ನೀತಿಯನ್ನು ರೂಪಿಸುತ್ತೇವೆ ಎಂದು ಸಚಿವರು ಭರವಸೆ ನೀಡಿದರು.

ಸಂಪಾದಕೀಯ

ವಿಧಾನಸಭಾ ಮತಸಮರ

ಕೊಲ್ಲಿಯಲ್ಲಿ ನಡೆದಿರುವ ಸಶಸ್ತ್ರ ಯುದ್ಧವು ಭಾರತದಲ್ಲೂ ಕಂಪನವನ್ನೆಬ್ಬಿಸಿ, ಜನಜೀವನದ ಮೇಲೆ ಪರಿಣಾಮ ಬೀರಿರುವ ಮಧ್ಯೆಯೇ ನಾಲ್ಕು ರಾಜ್ಯಗಳಲ್ಲಿ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಇದೀಗ 'ಮತಯುದ್ಧ'ಕ್ಕೆ ಸನ್ನದ್ಧತೆ ನಡೆದಿದೆ. ಅಸ್ಸಾಂ, ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳ್ನಾಡು ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ವಿಧಾನಸಭಾ ಚುನಾವಣೆ ನಡೆಸಲು ದಿನಾಂಕಗಳನ್ನು ಪ್ರಕಟಿಸಲಾಗಿದೆ. ಅದರ ಜತೆಗೇ ಕರ್ನಾಟಕದಲ್ಲಿ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯೂ ನಡೆಯಲಿದೆ. ಮೇ 4ರಂದು ಈ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಲಿದೆ.

ಕೆಲವೊಮ್ಮೆ ಹಲರಾಜ್ಯಗಳ ವಿಧಾನಸಭಾ ಚುನಾವಣೆಗಳು ಲೋಕಸಭಾ ಚುನಾವಣೆಗೆ ಸೆಮಿಫೈನಲ್ ಎಂಬಂತೆ ಬಣ್ಣಿಸಲ್ಪಡುವುದಿದೆ. ಆದರೆ ಈ ಬಾರಿ ಅಂತಹ ಆಯಾಮಗಳೇನೂ ಇಲ್ಲದಿದ್ದರೂ ಪ್ರತಿಯೊಂದು ರಾಜ್ಯದ ಚುನಾವಣೆಯೂ ಅದರದ್ದೇ ಆದ ಕಾರಣಗಳಿಗಾಗಿ ಮಹತ್ವ ಪಡೆದಿರುವುದು ಸುಳ್ಳಲ್ಲ. ಈ ನಿಟ್ಟಿನಲ್ಲಿ ಪ.ಬಂಗಾಳ ಚುನಾವಣೆಯು ಇಡೀ ದೇಶದಲ್ಲೇ ಎಲ್ಲರ ಕುತೂಹಲ ಕೆರಳಿಸಿದೆ. 15 ವರ್ಷಗಳಿಂದ ಅಧಿಕಾರದಲ್ಲಿರುವ



ಮಮತಾ ಬ್ಯಾನರ್ಜಿ ಇನ್ನೊಂದು ಅವಧಿಗೆ ಅಧಿಕಾರದಲ್ಲಿ ಮುಂದುವರಿಯುವರೆ ಅಥವಾ ಈ ಬಾರಿಯಾದರೂ ಎನ್‌ಡಿಎ ಕೂಟವು ಆಕೆಯನ್ನು ಅಧಿಕಾರದಿಂದ ಕೆಳಗಿಳಿಸಲು ಶಕ್ತವಾಗುವುದೆ ಎಂಬ ನಿಟ್ಟಿನಲ್ಲಿ ಈ ಕುತೂಹಲ ಉಂಟಾಗಿದೆ. ಪಶ್ಚಿಮ ಬಂಗಾಳದಲ್ಲಿ ನಡೆಸಿರುವ ಚುನಾವಣಾ ಮತಪಟ್ಟಿಯ ವಿಶೇಷ ಪರಿಷ್ಕರಣೆಯು(ಎಸ್‌ಐಆರ್) ಫಲಿತಾಂಶದ ಮೇಲೆ ಬೀರಲಿರುವ ಪರಿಣಾಮದ ಕುರಿತಂತೆಯೂ ಲೆಕ್ಕಾಚಾರಗಳು ನಡೆದಿವೆ. ಈ ಎಸ್‌ಐಆರ್ ಮಮತಾ ಅವರ ಓಲೈಕೆ ರಾಜಕಾರಣಕ್ಕೆ ದೊಡ್ಡ ಹೊಡೆತ ನೀಡಲಿದೆ ಎಂಬ ಮಾತುಗಳು ಕೇಳಿಬರುತ್ತಿದ್ದು ಅದರ ಸತ್ಯಾಸತ್ಯತೆ ಚುನಾವಣೆಯಿಂದ ಸಾಬೀತಾಗಲಿದೆ.

ತಮಿಳುನಾಡು ಮತ್ತು ಕೇರಳದಲ್ಲಿ ಆಡಳಿತ ಬದಲಾವಣೆಯಾಗುವುದೆ ಅಥವಾ ಆಡಳಿತಾರೂಢ ಪಕ್ಷಗಳೇ ಅಧಿಕಾರಕ್ಕೇರುವವೆ ಎಂಬ ಜಿಜ್ಞಾಸೆ ಆರಂಭವಾಗಿದೆ. ತಮಿಳುನಾಡಲ್ಲಿ ಆಳುವ ಡಿಎಂಕೆ ವಿರುದ್ಧ ಆಡಳಿತ ವಿರೋಧಿ ಅಲೆ ಎದ್ದಿರುವುದು ಸುಳ್ಳಲ್ಲ. ಅಣ್ಣಾಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟವು ಅದರ ಲಾಭ ಪಡೆಯಲು ಯತ್ನಿಸುತ್ತಿವೆ. ಇದರ ಮಧ್ಯೆಯೆ ಚಿತ್ರನಟ ವಿಜಯ್ ಅವರ ಹೊಸ ಪಕ್ಷವು ಯಾವ ಪಕ್ಷಕ್ಕೆ ಹೆಚ್ಚು ಹೊಡೆತ ನೀಡಲು ಸಫಲವಾಗುವುದೆಂಬ ಲೆಕ್ಕಾಚಾರಗಳೂ ಆರಂಭವಾಗಿವೆ. ನಿರೀಕ್ಷೆಯಂತೆ ಡಿಎಂಕೆಗೇ ಅದರ ಹೊಡೆತ ಹೆಚ್ಚಾದರೆ ಅದು ಅಣ್ಣಾಡಿಎಂಕೆ ಗೆಲುವನ್ನು ಸುಗಮಗೊಳಿಸಬಹುದು. ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಕೂಡಾ ಆಡಳಿತವಿರೋಧಿ ಅಲೆ ಎದುರಿಸುತ್ತಿದ್ದು, ಈ ಬಾರಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರ ಕಬಳಿಸಿಕೊಂಡರೂ ಅಚ್ಚರಿ ಪಡಬೇಕಾಗಿಲ್ಲ. ಅಸ್ಸಾಂನಲ್ಲಿ ಬಿಜೆಪಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಅವರು ಜನಪ್ರಿಯತೆಯ ತುತ್ತತುದಿಯಲ್ಲಿರುವುದರಿಂದ ಅವರು ಮತ್ತೊಂದು ಅವಧಿಗೆ ಅಧಿಕಾರ ಹಿಡಿಯುವುದು ಖಚಿತ ಎಂಬಂತಹ ಸ್ಥಿತಿಯಿದೆ. ಪುದುಚೇರಿಯಲ್ಲಿ ಕೂಡಾ ಬಿಜೆಪಿ ಬೆಂಬಲದೊಂದಿಗೆ ಸರಕಾರ ನಡೆಸುತ್ತಿರುವ ಎಐಎನ್‌ಆರ್‌ಸಿ ಇನ್ನೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವುದು ಅದು ಅಧಿಕಾರದಲ್ಲಿ ಮುಂದುವರಿಯಲು ನೆರವೀಯಬಹುದು.

ಒಟ್ಟಿನಲ್ಲಿ ಮುಂಬರುವ ಈ ವಿಧಾನಸಭಾ ಚುನಾವಣೆಗಳು ರಾಷ್ಟ್ರೀಯ ಪಕ್ಷಗಳ ಜತೆಗೇ ಕೆಲವು ಪ್ರಾದೇಶಿಕ ಪಕ್ಷಗಳಿಗೂ ಅತ್ಯಂತ ಮಹತ್ವದ್ದಾಗಿವೆ.

ಧೈರ್ಯವನ್ನು ಬಿಡುವುದಿಲ್ಲ

ಲೋಕೇऽನಂತಾನಿ ಕಷ್ಟಾನಿ ನೋಜ್ಝೇದ್ ಧೈರ್ಯಂ ತಥಾಪಿ ವಾ।
ಅರಣ್ಯಾನಿ ವಹನ್ ಶೈಲಃ ಸ್ಥಿರತಾಂ ನೈವ ಮುಂಚತಿ॥ -ಸುವಚನ ಶತಕಂ

ಈ ಪ್ರಪಂಚದಲ್ಲಿ ಕೊನೆಯಿಲ್ಲದ ಎಷ್ಟೋ ಕಷ್ಟಗಳಿವೆ. ಆದರೂ ಮನುಷ್ಯನು ಧೈರ್ಯವನ್ನು ಬಿಡಬಾರದು. ಬೆಟ್ಟವು ದೊಡ್ಡ ಅಡವಿಯನ್ನು ಹೊತ್ತಾಗಲೂ ತನ್ನ ಸ್ಥೈರ್ಯವನ್ನು ಬಿಡುವುದಿಲ್ಲ. -ಎಂಬುದು ಶ್ಲೋಕಾರ್ಥ.

ಕಷ್ಟಕ್ಕೆ ಕೊನೆಯೆಂಬುದಿಲ್ಲ. ಜೀವನದುದ್ದಕ್ಕೂ ಅನೇಕ ಬಗೆಯ ಕಷ್ಟಗಳು ಎದುರಾಗುತ್ತವೆ. ಕಷ್ಟಕ್ಕೆ ಅಂಜಿ ಬದುಕುವವನ ಇಷ್ಟಾರ್ಥ ಸಿದ್ಧಿಸುವುದಲ್ಲ. ಕಷ್ಟಕ್ಕೆ ಮುಖಾಮುಖಿಯಾಗಬೇಕೇ ವಿನಾ ಬೆನ್ನು ಹಾಕಬಾರದು. ಕಷ್ಟವನ್ನು ಮೆಟ್ಟಿ ಬದುಕುವುದೇ ನಿಜವಾದ ಬದುಕು.



ಮೂರ್ಖತ್ವವೇ ಕಷ್ಟ. ಯೌವನದಲ್ಲಿ ಬಡತನ ಇನ್ನೊಂದು ಬಗೆಯ ಕಷ್ಟ. ಪರಾನ್ನ, ಪರಗೃಹವಾಸ ಇನ್ನೂ ಕಷ್ಟ. 'ಕಷ್ಟಾ ಖಲು ಆತ್ಮಶಂಕಾ ನಾಮ' ತನಗೆ ತನ್ನ ಮೇಲೆ ವಿಶ್ವಾಸವಿಲ್ಲದಿರುವುದು ನಿಜಕ್ಕೂ ಕಷ್ಟ. ಇನ್ನೊಬ್ಬರ ಅಧೀನದಲ್ಲಿ ಕೆಲಸ ಮಾಡುವುದು ಕಷ್ಟ. ಹೀಗೆ ಹೇಳುತ್ತಾ ಹೋದರೆ ಎಲ್ಲವೂ ಕಷ್ಟವೇ. ಇವೆಲ್ಲವೂ ಕಷ್ಟವನ್ನು ಎದುರಿಸುವ ತಾಕತ್ತಿಲ್ಲದವರಿಗೆ ಮಾತ್ರ. ಉತ್ಸಾಹಿಯಾದ ಮನುಷ್ಯ ದುಸ್ಸಾಧ್ಯವನ್ನೂ ಸಾಧ್ಯವಾಗಿಸಬಲ್ಲ. ಅಂತಹ ಸ್ವ ತಾಕತ್ತನ್ನು ಎಲ್ಲರೂ ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು. ಪ್ರಯತ್ನಶೀಲನಿಗೆ ಅಸಾಧ್ಯವೆಂಬುದಿಲ್ಲ.

ಕಷ್ಟಕ್ಕೆ ಅಂಜುವವನು ಮನುಷ್ಯನಾಗಲು ಯೋಗ್ಯನಲ್ಲ. ವಿಷಮ ಸ್ಥಿತಿಯಲ್ಲಿಯೂ ಕಷ್ಟಕ್ಕಂಜಬಾರದು. ಧೈರ್ಯದಿಂದ ಮುನ್ನುಗ್ಗಿ ಎದುರಿಸಬೇಕು. ಲೋಕದಲ್ಲಿ ಯಾರಿಗೂ ಕೇವಲ ಕಷ್ಟವಾಗಲಿ ಕೇವಲ ಸುಖವಾಗಲಿ ಇಲ್ಲವೇ ಇಲ್ಲ. ಜೀವನವೇ ಕಷ್ಟ-ಸುಖಗಳ ಮಿಶ್ರಣ. ಕಷ್ಟವನ್ನೂ ಸುಖಾಂತಗೊಳಿಸುವವನೇ ಜೀವನದಲ್ಲಿ ಸುಖದ ಕ್ಷಣಗಳನ್ನು ಅನುಭವಿಸಬಲ್ಲ.

ಇದಕ್ಕೆ ಕವಿಯು ಕೊಡುವುದು ಬೆಟ್ಟಗಳ ಉದಾಹರಣೆಯನ್ನು. ಯಾವುದೇ ಬೆಟ್ಟವನ್ನು ನೋಡಿದರೂ ಅಲ್ಲಿ ಸಾಕಷ್ಟು ಕಲ್ಲು ಬಂಡೆಗಳಿವೆ. ಹೆಮ್ಮರಗಳು ಬೆಳೆದು ನಿಂತಿವೆ. ಇವುಗಳನ್ನು ಹೊತ್ತಾಗಲೂ ಬೆಟ್ಟವೆಂದೂ ಮಿಸುಕುವುದಿಲ್ಲ. ವ್ಯಥೆ ಪಡುವುದಿಲ್ಲ. ಧೈರ್ಯದಿಂದ ಅವೆಲ್ಲವನ್ನೂ ಹೊತ್ತುಕೊಳ್ಳುತ್ತದೆ. ಬೇಸರದ ಛಾಯೆಯೇ ಇಲ್ಲ. ಸ್ಥಿರತೆಯನ್ನು ಕಳೆದುಕೊಳ್ಳುವುದಿಲ್ಲ. ನಾವು ಶಾಂತವಾಗಿ ಸುತ್ತಲೂ ಕಣ್ಣಾಡಿಸಿದಾಗ ಇಂತಹ ಹತ್ತಾರು ದೃಷ್ಟಾಂತಗಳು ಸಿಗುತ್ತವೆ. ಘಟನೆಗಳ ಗೋಚರವಾಗುತ್ತವೆ. ಇವುಗಳಿಂದ ಪಾಠ ಕಲಿತವನೇ ಜಾಣ. ಮನುಷ್ಯ ಪ್ರಕೃತಿಯಿಂದ ಪಾಠ ಕಲಿಯಬೇಕು. ಪ್ರಕೃತಿ ಕಲಿಸಿದ ಪಾಠ ಜೀವನೋತ್ಕರ್ಷಕ್ಕೆ ಕಾರಣವಾಗುತ್ತದೆ.

'ಧೈರ್ಯಂ ಸರ್ವತ್ರ ಸಾಧನಮ್' ಎಂಬ ಲೋಕೋಕ್ತಿ ಹುಟ್ಟಿಕೊಂಡಿರುವುದೇ ಈ ಕಾರಣಕ್ಕಾಗಿ. ಬದುಕನ್ನು ಧೈರ್ಯದ ಆಧಾರದಲ್ಲಿ ಕಟ್ಟಿಕೊಳ್ಳಬೇಕು. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಎದೆಗುಂದಬಾರದು. ವ್ಯಥೆ ಪಡಬಾರದು. ಸಾಧನಾ ಪಥದಲ್ಲಿ ಭಗವಂತನಿತ್ತ ಸವಾಲು ಎಂಬುದಾಗಿ ಸ್ವೀಕರಿಸಿ ಮುಂದುವರಿಯಬೇಕು.

ವಜ್ರದ ವ್ಯಾಪಾರಿಯ ಅಪ್ರತಿಮ ಗೋಸೇವೆ



ದೇಶದಲ್ಲಿ ಸಾವಯವ ಕೃಷಿ, ನೈಸರ್ಗಿಕ ಕೃಷಿ ಹಾಗೂ ಶೂನ್ಯ ಬಂಡವಾಳದ ಕೃಷಿಯಲ್ಲಿ ತೊಡಗಿಸಿಕೊಂಡ ಬಹುತೇಕ ರೈತರಿಗೆ ಗುಜರಾತ್‌ನ ಬನ್ನಿ ಗೀರ್ ಗೋಶಾಲೆಯ ಸಂಸ್ಥಾಪಕರಾದ ಗೋಪಾಲ್ ಸುತಾರಿಯಾ ಅತ್ಯಂತ ಚಿರಪರಿಚಿತರು. ಭಾರತದ ಪ್ರಾಚೀನ ಕೃಷಿ ಸಂಪ್ರದಾಯಗಳನ್ನು ಪುನರುಜ್ಜೀವನಗೊಳಿಸುತ್ತಿರುವ ಇವರ ಕಾರ್ಯ ಅತ್ಯಂತ ಶ್ಲಾಘನೀಯವಾದ್ದು. ಪಾರಂಪರಿಕ ಕೃಷಿಯನ್ನು ಜೀವಂತಗೊಳಿಸುವ ಮತ್ತು ಉತ್ತೇಜಿಸುವ ನಿಟ್ಟಿನಲ್ಲಿ ಇವರ ಸಂಶೋಧನೆಯ ಫಲವೇ ಗೋಕೃಪಾಮಮೃತ ಎಂಬುದು ಬಹುತೇಕ ಕೃಷಿಕರಿಗೆ ತಿಳಿದ ವಿಚಾರ. ಹೀಗೆ ಕೃಷಿ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡುತ್ತಿರುವ ಈ ದ್ರಾವಣದ ಪಿತಾಮಹರಾದ ಇವರ ಗೋಪಾಲನೆಯ ಕುರಿತ ಒಂದು ಸಣ್ಣ ಪರಿಚಯದ ಪ್ರಯತ್ನವಿದು.

ಗೋಕೃಪಾಮಮೃತ ಎಂಬ ಒಂದು ದ್ರಾವಣವೇ ಗೋಪಾಲ್ ಸುತಾರಿಯ ಇಚ್ಛಿಸಿದ್ದಲ್ಲಿ ದೇಶದ ಶ್ರೀಮಂತರ ಪಟ್ಟಿಯಲ್ಲಿ ಇವರನ್ನು ಒಬ್ಬರನ್ನಾಗಿಸುತ್ತಿತ್ತು. ಆದರೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಇವರು ಗೋವುಗಳ ಮತ್ತು ರೈತರ ಹಿತಕ್ಕಾಗಿ ಇದನ್ನು ಸಂಪೂರ್ಣ ಉಚಿತವಾಗಿ ನೀಡುವ ಸಂಕಲ್ಪವನ್ನು ಮಾಡಿದ್ದಾರೆ. ಇವರ ಈ ಸಂಕಲ್ಪಕ್ಕೆ ಕನೇರಿ ಮಠದ ಕಾಡ ಸಿದ್ದೇಶ್ವರ ಸ್ವಾಮಿಗಳು ಸೇರಿದಂತೆ ಸಾಕಷ್ಟು ಮಠಾಧಿಪತಿಗಳು, ಸಮಾಜದ ಗಣ್ಯ ವ್ಯಕ್ತಿಗಳು ಹಾಗೂ ರೈತರು ಕೈಜೋಡಿಸುತ್ತಿರುವುದು ಇವರ ಪರಿಶ್ರಮಕ್ಕೆ ಸಾರ್ಥಕತೆಯನ್ನು ತಂದಿದೆ. ಇವರು ಹಿಂದೆ ಒಬ್ಬ ವಜ್ರದ ವ್ಯಾಪಾರಿಯಾಗಿದ್ದು, ಗುಜರಾತ್‌ನ ಗೋಸೇವಾ ಆಯೋಗದ ಡೈರೆಕ್ಟರ್ ಸಹ ಆಗಿದ್ದರು. ಹತ್ತು ತಲೆಮಾರು ಕುಳಿತು ತಿಂದರೂ ಕರಗದಷ್ಟು ಸಂಪತ್ತು ಇಂದಿಗೂ ಇವರಲ್ಲಿದೆ. ಆದರೆ ಇವರಿಗೇಕೋ ಈ ಸಂಪತ್ತು ಗೋಸಂಪತ್ತಿನ ಮುಂದೆ ಕ್ಷುಲ್ಲಕವೆನಿಸಿದೆ. ಸನಾತನ ಭಾರತೀಯ ಪರಂಪರೆಗಳಲ್ಲಿನ ವೈಜ್ಞಾನಿಕ ತಳಹದಿ ಇವರ ಅಂತರಾಳವನ್ನು ಬಡಿದೆಬ್ಬಿಸಿದೆ. ಈ ಕಾರಣದಿಂದಲೇ ಇವರು ಗೋಆಧಾರಿತ ವ್ಯವಸ್ಥೆಯೊಂದಿಗೆ ಗೋಶಾಲೆ ಮತ್ತು ಗುರುಕುಲವನ್ನು ಸ್ಥಾಪಿಸಿ ಗೋಪಾಲನೆ, ಧರ್ಮಪಾಲನೆ ಮಾಡುವ ಮೂಲಕ, ಭೂತಾಯಿಯ ಒಡಲನ್ನು ವಿಷಮುಕ್ತವನ್ನಾಗಿಸುವ ಶ್ರೇಷ್ಠ ಕಾರ್ಯವನ್ನು ಮಾಡುತ್ತಿದ್ದಾರೆ. ಇವರಿಗೆ ಈ ದೇಶದ ಸಂಪ್ರದಾಯ ಮತ್ತು ಜೀವನಶೈಲಿಯೊಂದಿಗಿನ ಆಧ್ಯಾತ್ಮಿಕ ಚಿಂತನೆಯ ಬಗ್ಗೆ ಗಾಢವಾದ ಒಲವಿದೆ. ಅಷ್ಟೇ ಬೇಸರ ಇತ್ತೀಚಿನ ಆಧುನಿಕ ಸಂಪ್ರದಾಯದ ಮೇಲೆಯೂ ಇದೆ. ನಮ್ಮ ಹಿರಿಯರು ನಾವು ಬದುಕುವ ಜೀವನದೊಂದಿಗೆ ಒಂದು ಆಧ್ಯಾತ್ಮಿಕ ಚಿಂತನೆಯನ್ನು ಅಳವಡಿಸಿದ್ದರು. ಗೋವಿನ ಮಹತ್ವದ ಅರಿವು ಅವರಿಗೆ ಅಂದೇ ಇದ್ದದ್ದರಿಂದ ಅದನ್ನು ಜೀವನದೊಂದಿಗೆ ಜೋಡಿಸಿದ್ದರು ಮತ್ತು ಗೋವಿನ ಉಪ ಉತ್ಪನ್ನಗಳಿಂದ ಕೃಷಿಯನ್ನು ಮಾಡಿ ಆರೋಗ್ಯಯುತ ಜೀವನವನ್ನು ತಮ್ಮದಾಗಿಸಿಕೊಂಡಿದ್ದರು ಎಂಬೆಲ್ಲಾ ನಿಲುವು ಗಟ್ಟಿಯಾಗಿ ಇವರಲ್ಲಿ ಬೇರೂರಿದೆ.

ನಾವಿಂದು ನಮ್ಮ ಹಿರಿಯರು ಹಾಕಿಕೊಟ್ಟ ಆ ಎಲ್ಲಾ ಬದುಕಿಗೆ ಪೂರಕವಾಗುವ ಅಂಶಗಳನ್ನು ಕಡೆಗಣಿಸಿ ಗೋಮಾತೆಯನ್ನು ನಿರ್ಲಕ್ಷಿಸಿದ್ದೇವೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸಿ ಭೂಮಾತೆಯನ್ನು ಅಪವಿತ್ರಗೊಳಿಸುತ್ತಿದ್ದೇವೆ. ನಾವು ವಿಷವನ್ನು ತಿನ್ನುವುದರೊಂದಿಗೆ ಇಡೀ ವಿಶ್ವಕ್ಕೆ ವಿಷವನ್ನು ಉಣಬಡಿಸುತ್ತಿದ್ದೇವೆ. ನಮ್ಮ ಹಿರಿಯರು ತೋರಿಸಿದ ದಾರಿಯಲ್ಲಿ ನಮಗೇಕೆ ಸಾಗಲಾಗುತ್ತಿಲ್ಲ, ಎಂದೆಲ್ಲಾ ಚಿಂತನೆ ಮಾಡಿದಾಗ ಇವರಿಗೆ ಸತ್ಯದ ದರ್ಶನವಾಗಿದೆ. ಕೂಡಲೇ ತಮ್ಮ ವ್ಯಾಪಾರಕ್ಕೆ ತಾರ್ಕಿಕ ಅಂತ್ಯ ಹಾಡಿ, ಒಂದಷ್ಟು ಗೀರ್ ಜಾತಿಯ ಗೋವುಗಳನ್ನು ತಂದು ಒಂದೆಡೆ ಸಾಕಲು ಪ್ರಾರಂಭಿಸುತ್ತಾರೆ. ಗೋವುಗಳನ್ನು ಕಟ್ಟಿಹಾಕಿ ಸಾಕುವುದು ಸಹ ಒಂದು ರೀತಿಯ ಶೋಷಣೆಯೆಂದು ಭಾವಿಸಿ, ಎಲ್ಲಾ ಗೋವುಗಳನ್ನು ಕಟ್ಟಿಹಾಕದೆ ಮುಕ್ತವಾಗಿ ಬಿಟ್ಟು ಸಾಕಲಾರಂಭಿಸುತ್ತಾರೆ. ಬೇಕೆಂದಾಗ ಅವುಗಳೇ ಹೋಗಿ ಮೇವು ತಿಂದು, ನೀರು ಕುಡಿದು ಬರುವ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ.

ಇವರು ಹೇಳುವಂತೆ, ಗೋವುಗಳಿಗೆ ಅತಿ ಹೆಚ್ಚು ತಿನ್ನಿಸಿದಷ್ಟು ಹೆಚ್ಚೆಚ್ಚು ಹಾಲನ್ನು ನೀಡುತ್ತವೆ ಎಂಬ ತಪ್ಪು ಕಲ್ಪನೆ ನಮ್ಮಲ್ಲಿದೆಯಂತೆ. ಆದರೆ ನಮ್ಮ ಸನಾತನ ಸಂಸ್ಕೃತಿಯಲ್ಲಿ ಗೋವುಗಳಿಗೆ ಹೊಟ್ಟೆ ತುಂಬಾ ಮೇವನ್ನು ಕೊಟ್ಟ ನಂತರ, ಅದು ಎಷ್ಟು ಹಾಲನ್ನು ನೀಡಬೇಕು ಎಂಬುದನ್ನು ಅದೇ ಸ್ವತಃ ನಿರ್ಧರಿಸುತ್ತದೆ. ಈ ಕಾರಣದಿಂದ ವೇದಗಳಲ್ಲಿ ಹೇಳಿರುವಂತೆ ಗೋವಿನ ಕೆಚ್ಚಲಿನ ಮೇಲೆ ಮೊದಲಿಗೆ ಅದರ ಕರುವಿಗೆ ಮಾತ್ರ ಅಧಿಕಾರವಿದೆ. ಆನಂತರವೇ ಮನುಷ್ಯನಿಗೆ ಎಂಬ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ, ಗೋವಿನ ಕೆಚ್ಚಲಿನ ತೊಟ್ಟಲ್ಲಿ ಎರಡು ಅದರ ಕರುವಿಗೆ ಬಿಟ್ಟು, ಇನ್ನೆರಡು ತೊಟ್ಟುಗಳಲ್ಲಿರುವ ಹಾಲನ್ನು ಮಾತ್ರ ಕರೆಯುವ ವ್ಯವಸ್ಥೆಯನ್ನು ರೂಪಿಸಿದ್ದಾರೆ. ತಮ್ಮಲ್ಲಿ ದೊರೆಯುವ ಗೋವಿನ ಸಗಣಿ, ಗೋಮೂತ್ರದೊಂದಿಗೆ ಸ್ಲರಿಯನ್ನು ಬಳಸಿ ಅವಶ್ಯಕವಾದ ಮೇವನ್ನು ಬೆಳೆದುಕೊಳ್ಳುತ್ತಿದ್ದಾರೆ.



ಸಾಮಾನ್ಯವಾಗಿ ವಿಶ್ವದಾದ್ಯಂತ ಗೋವುಗಳನ್ನು ಒಂದೆರಡು ಕರು ಹಾಕಿದ ನಂತರ ಕಸಾಯಿಖಾನೆಗೆ ಕಳುಹಿಸಲಾಗುತ್ತದೆ. ಭಾರತದಲ್ಲಿ ಈ ಪ್ರಮಾಣ ಕೊಂಚ ಕಡಿಮೆ ಇದ್ದು, ಇಲ್ಲಿ ನಾಲ್ಕೈದು ಕರು ಹಾಕಿದ ನಂತರ ಆ ಗೋವು ಕಡಿಮೆ ಹಾಲು ನೀಡುತ್ತದೆ ಎಂಬ ನೆಪವೊಡ್ಡಿ ಕಸಾಯಿಖಾನೆಗೆ ಅಟ್ಟಲಾಗುತ್ತದೆ. ಆದರೆ ಇವರಲ್ಲಿರುವ ಗೋವುಗಳ ಆಯುಷ್ಯದ ಬಗ್ಗೆ ತಿಳಿದರೆ ನೀವು ಬೆಕ್ಕಸ ಬೆರಗಾಗುತ್ತೀರಿ. ಇಲ್ಲಿ ಕೆಲವೊಂದು ಗೋವುಗಳು ಸುಮಾರು 15 ಕರು ಹಾಕಿದ ನಂತರವೂ ಇಂದಿಗೂ 20ರಿಂದ 30 ಲೀಟರ್ ಹಾಲನ್ನು ಪ್ರತಿನಿತ್ಯ ನೀಡುತ್ತಿವೆ. ಇವು ನೀಡುತ್ತಿರುವ ಹಾಲಿನಲ್ಲಿ ದೇಹಕ್ಕೆ ಅತ್ಯವಶ್ಯಕವಾದ ಕೊಬ್ಬಿನಾಂಶ ಹೆಚ್ಚಿರುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ವಿದೇಶಿ ತಳಿಗಳ 50 ಲೀಟರ್ ಹಾಲಿನಲ್ಲಿರುವಂತಹ ಕೊಬ್ಬಿನಾಂಶ ಇವರಲ್ಲಿನ ಗೋವುಗಳ 30 ಲೀಟರ್ ಹಾಲಿನಲ್ಲಿಯೇ ಸಿಗುತ್ತಿದೆ. ಯಾವುದೇ ಗೋವಿನಿಂದ ಬಲವಂತವಾಗಿ ಹಾಲನ್ನು ಕರೆಯುವ ಪರಿಪಾಠವೇ ಇಲ್ಲಿಲ್ಲ. ಹೆಸರು ಕರೆದ ಕೂಡಲೇ ಆಯಾ ಗೋವುಗಳು ಹಾಲು ಕರೆಯುವ ಸ್ಥಳಕ್ಕೆ ಖುದ್ದಾಗಿ ಹೋಗಿ ಹಾಲನ್ನು ನೀಡಿ ಬರುತ್ತವೆ. ಹೀಗೆ ಮನಸೋ ಇಚ್ಛೆ ನೀಡುತ್ತಿರುವ ಈ ಹಾಲಿಗೆ ಸಾಕಷ್ಟು ಬೇಡಿಕೆಯಿದೆ. ಅಚ್ಚರಿ ಎಂದರೆ ವೇದಗಳಲ್ಲಿ ಹೇಳಿರುವಂತೆ ಗೋವು ಸಾಯುವವರೆಗೂ ಹಾಲನ್ನು ನೀಡುತ್ತಿದ್ದ ಚಿತ್ರಣವನ್ನು ಇಲ್ಲಿ ಪುನರ್ಜೀವಗೊಳಿಸುವ ನಿಟ್ಟಿನಲ್ಲಿ ಕಾರ್ಯ ನಡೆಯುತ್ತಿದೆ.

ಇಲ್ಲಿಯ ಪ್ರತಿಯೊಂದು ಗೋವು ಪ್ರಕೃತಿದತ್ತವಾಗಿ ಬೆಳವಣಿಗೆ ಕಾಣುತ್ತಿದೆ. ಇಲ್ಲಿಯ ಎರಡು ವರ್ಷದ ಗೋವಿನ ದೇಹದಾರ್ಢ್ಯತೆ ಬೇರೆಡೆಯಲ್ಲಿನ ಸುಮಾರು ಐದು ವರ್ಷದ ಗೋವಿಗೆ ಸರಿಸಮಾನದಂತೆ ಕಂಡುಬರುತ್ತದೆ. ಇಲ್ಲಿಯ ಯಾವುದೇ ಗೋವಿಗೆ ಇಂದಿನವರೆಗೂ ಆಧುನಿಕ ವಿಜ್ಞಾನ ಹೇಳುವಂತಹ ಯಾವುದೇ ಅಲೋಪತಿ ಔಷಧಿಯನ್ನು ಕೊಟ್ಟಿಲ್ಲ. ಸಾಮಾನ್ಯವಾಗಿ ಕೊಡಲೇಬೇಕಾದ ಹೊಟ್ಟೆ ಹುಳದ ಔಷಧಿಯನ್ನು ನೀಡಿಯೇ ಇಲ್ಲ. 15 ದಿನಕ್ಕೊಮ್ಮೆ ಬೇವಿನ ಮರದ ಸೊಪ್ಪನ್ನು ಗೋವುಗಳಿಗೆ ತಿನ್ನಿಸುವ ವ್ಯವಸ್ಥೆ ಇದೆ. ಅನಾರೋಗ್ಯದಿಂದ ಬಳಲುವ ಗೋವುಗಳು ಈ ಸೊಪ್ಪನ್ನು ತಿಂದು ಆರೋಗ್ಯವಂತವಾಗುತ್ತಿವೆ. ಇದರಿಂದ ಗೋವುಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿರುವುದು ಆನಂತರ ಬೆಳಕಿಗೆ ಬಂದಿದೆ.

ಗೋಪಾಲ್ ಸುತಾರಿಯಾ ಹೇಳುವಂತೆ ಗೀರ್ ಜಾತಿಯ ಗೋವಿನಲ್ಲಿ ಸುಮಾರು 15 ವಿವಿಧ ಗೋತ್ರಗಳಿವೆ. ಇಂತಹ ಸುಮಾರು 12 ವಿವಿಧ ಗೋತ್ರದ ಗೋವುಗಳನ್ನು ಇವರಲ್ಲಿ ಕಾಣಬಹುದು. ಇಂದು ವಿಶ್ವದಲ್ಲಿಯೇ ಅತಿ ಹೆಚ್ಚು ಗೀರ್ ತಳಿಗಳನ್ನು ಹೊಂದಿರುವ ಬ್ರೆಜಿಲ್‌ನಲ್ಲಿಯೂ ಕೇವಲ ಒಂದೇ ಗೋತ್ರದ ತಳಿಗಳಿವೆ. ಮನುಷ್ಯರಂತೆ ಇಲ್ಲಿಯೂ ಸಹ ತಳಿ ಅಭಿವೃದ್ಧಿ ಗೋತ್ರದ ಜೋಡಣೆಯೊಂದಿಗೆ ಆಗುತ್ತಿದೆ. ಈ ಕಾರಣಕ್ಕಾಗಿಯೇ ಪ್ರತಿಯೊಂದು ತಳಿಯ ಹಿಂದಿನ ಐದಾರು ತಲೆಮಾರಿನ ಮಾಹಿತಿಯನ್ನು ಸಂಗ್ರಹಿಸಿ ಇಡಲಾಗಿದೆ. ಯಾವ ಗೋತ್ರದ ಗೋವಿಗೆ ಮತ್ತ್ಯಾವ ಗೋತ್ರದ ತಳಿಯೊಂದಿಗೆ ಸೇರಿಸಬೇಕು ಎಂಬುದು ಒಂದು ವರ್ಷದ ಮೊದಲೇ ನಿರ್ಧರಿಸಲಾಗಿರುತ್ತದೆ. ಹೀಗೆ ಅವುಗಳ ವಂಶವಾಹಿಯ ಮೇಲೆಯೇ ಇಲ್ಲಿ ತಳಿ ಸಂವರ್ಧನೆಯ ಕಾರ್ಯ ಸಾಗುತ್ತಿದೆ.

ಇಲ್ಲಿಯ ಹಾಲು ಮತ್ತು ತುಪ್ಪಕ್ಕೆ ಸಾಕಷ್ಟು ಬೇಡಿಕೆಯಿದೆ. ಇಲ್ಲಿಯ ಗೋಉತ್ಪನ್ನಗಳಿಂದ ಕೆಲವೊಂದಿಷ್ಟು ಔಷಧಿಗಳನ್ನು ತಯಾರಿಸಲಾಗುತ್ತಿದೆ. ಇವರ ಈ ಗೋತೀರ್ಥ ವಿದ್ಯಾಪೀಠದಲ್ಲಿ ಸಂವರ್ಧನೆಗೊಂಡ ತಳಿಗಳಿಗೆ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ಬೇಡಿಕೆ ಇದೆ. ಆದರೆ ಮೂಲತಃ ವಜ್ರದ ವ್ಯಾಪಾರಿಯಾಗಿರುವ ಇವರು, ಇದರಿಂದ ಹಣ ಮಾಡುವ ಉದ್ದೇಶವಿಲ್ಲದೆ ಇಂತಹ ಅವಕಾಶಗಳೆಲ್ಲವನ್ನು ತಿರಸ್ಕರಿಸಿದ್ದಾರೆ. ಗುಜರಾತ್‌ನ ಈ ಪರಿಪೂರ್ಣ ಗೋಶಾಲೆಯನ್ನು ಮತ್ತು ಇವರನ್ನು ನೋಡಲು ದೇಶದ ಮೂಲೆ ಮೂಲೆಗಳಿಂದ ಜನ ಪ್ರತಿನಿತ್ಯ ಬಂದು ಹೋಗುತ್ತಿದ್ದಾರೆ. ಹೀಗೆ ಬಂದವರೆಲ್ಲರಿಗೂ ಗೋವಿನ ಸಾಕಾಣಿಕೆಯ ಕುರಿತ ಸಂಪೂರ್ಣ ಮಾಹಿತಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಸ್ವತಃ ಗೋಪಾಲ್ ಸುತಾರಿಯಾರವರೇ ಕೆಲವೊಮ್ಮೆ ಬಂದಂತ ಆಸಕ್ತರಿಗೆ ಗೋಪಾಲನೆ ಮತ್ತು ಕೃಷಿಯ ಕುರಿತಂತೆ ಸಮಗ್ರವಾಗಿ ವಿವರಿಸುವುದು ಇದೆ. ಇದೆಲ್ಲದರ ಜೊತೆಗೆ ಇಲ್ಲೊಂದು ವಿಶೇಷವಾದ ಗುರುಕುಲ ವ್ಯವಸ್ಥೆ ಸದ್ದಿಲ್ಲದೇ ಗೋಆಧಾರಿತವಾಗಿಯೇ ನಡೆಯುತ್ತಿದೆ.

ಭಾರತ ಪ್ರವರ್ಧಮಾನಕ್ಕೆ ಬರುವುದನ್ನು ಅಮೆರಿಕ ಸಹಿಸದು

ಉತ್ಪಲ್ ಕುಮಾರ್

ಇತ್ತೀಚೆಗೆ ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದ ಕಾರ್ಯಕ್ರಮದಲ್ಲಿ ಅಮೆರಿಕದ ವಿದೇಶಾಂಗ ಸಹಕಾರ್ಯದರ್ಶಿ ಕ್ರಿಸ್ಟೋಫರ್ ಲಾಂಡ್ ರಾಜತಾಂತ್ರಿಕತೆಯ ಪಾಲಿಗೆ ನಿಷ್ಠುರವೇ ಎನಿಸಬಹುದಾದ ಮಾತುಗಳನ್ನಾಡಿದರು. "ನಾವು 20 ವರ್ಷಗಳ ಹಿಂದೆ ಚೀನಾಕ್ಕೆ ಸಂಬಂಧಿಸಿ ಎಸಗಿದ ತಪ್ಪುಗಳನ್ನು ಈಗ ಭಾರತಕ್ಕೆ ಸಂಬಂಧಿಸಿ ಮತ್ತೆ ಎಸಗಲಾರೆವು ಎಂಬುದನ್ನು ಭಾರತವು ಅರಿತುಕೊಳ್ಳಬೇಕು" ಎಂದು ಅವರು ಹೇಳಿದರು. ಅದನ್ನು ಮತ್ತಷ್ಟು ವಿವರಿಸಿದ ಅವರು, "ನಾವು ನಿಮಗೆ ಎಲ್ಲಾ ಬಗೆಯ ಮಾರುಕಟ್ಟೆಯ ಅಭಿವೃದ್ಧಿಗೆ ನೆರವು ನೀಡುತ್ತೇವೆ. ಆದರೆ ಕೊನೆಗೆ ಹಲವಾರು ವಾಣಿಜ್ಯಿಕ ವಿಷಯಗಳಲ್ಲಿ ನಮ್ಮನ್ನೇ ಸೋಲಿಸುತ್ತೀರಿ. ಅದಕ್ಕಿನ್ನು ಅವಕಾಶ ನೀಡುವುದಿಲ್ಲ" ಎಂದರು.

ಯಾವುದೇ ರಾಜತಾಂತ್ರಿಕ ನಯವಿನಯವಿಲ್ಲದ ಈ ಮಾತಿನ ಸಂದೇಶವು ಸ್ಪಷ್ಟವಾಗಿದೆ. ಚೀನಾ ತನ್ನ ವಿರೋಧಿಯಾಗಿ ಬೆಳೆಯಲು ತಾನೇ ಅವಕಾಶ ಮಾಡಿಕೊಟ್ಟಿರುವುದಾಗಿ ಅಮೆರಿಕ ನಂಬುತ್ತಿದೆ ಹಾಗೂ ಅದೇ ತಪ್ಪನ್ನು ಭಾರತಕ್ಕೆ ಸಂಬಂಧಿಸಿ ಎಸಗಬಾರದು ಎಂದು ಭಾವಿಸಿದೆ. ಭಾರತದ ನೀತಿ ನಿರೂಪಕರು ಈ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಹಾಗೂ ಹೆಚ್ಚು ಆಳವಾಗಿ ವಿಶ್ಲೇಷಣೆ ಮಾಡಬೇಕಾಗಿದೆ. ಏಕೆಂದರೆ ಇದರ ಹಿಂದೆ ಜಾಗತಿಕ 'ಶಕ್ತಿ ರಾಜಕೀಯ'ದ ಕಹಿಸತ್ಯ ಅಡಗಿದೆ. ಯಾವುದೇ ಸೂಪರ್ ಪವರ್ ಇನ್ನೊಂದು ರಾಷ್ಟ್ರದೊಂದಿಗೆ ಎಷ್ಟೇ ಉತ್ತಮ ಸಂಬಂಧ ಹೊಂದಿದ್ದರೂ ಆ ರಾಷ್ಟ್ರವು ಸೂಪರ್‌ಪವರ್ ಆಗಿ ಬೆಳೆಯಲು ತಾನಾಗಿ ಅವಕಾಶ ನೀಡಲಾರದು ಎಂಬುದು ಇದರ ಹಿಂದಿನ ಸಂದೇಶವಾಗಿದೆ.

ಕೆಲವಾರು ದಶಕಗಳಿಂದ ಅಮೆರಿಕದ ನೀತಿನಿರೂಪಕರು ಚೀನಾವು ಎಷ್ಟೇ ಶಕ್ತಿಶಾಲಿಯಾಗಿ ಬೆಳೆದರೂ ಅದನ್ನು ತಾವು ನಿಯಂತ್ರಿಸಬಹುದು ಎಂದು ಭಾವಿಸಿಕೊಂಡು ಬಂದಿದ್ದರು. ಡೆಂಗ್ ಕ್ಸಿಯೋಪಿಂಗ್ ಚೀನಾದ್ದು ಶಾಂತಿಯುತ ಬೆಳವಣಿಗೆ ಎಂದು ಜಗತ್ತಿಗೆ ನಂಬಿಸಿದ್ದರು. ಆದರೆ ಆಂತರ್ಯದಲ್ಲಿ "ನಿಮ್ಮ ಸಾಮರ್ಥ್ಯವನ್ನು ಯಾರ ಕಣ್ಣಿಗೂ ಕಾಣದಂತೆ ಅಡಗಿಸಿಡಿ, ಸಮಯ ಬಂದಾಗ ಅದನ್ನು ಪ್ರದರ್ಶಿಸಿ" ಎಂಬುದು ಅವರ ನೀತಿಯಾಗಿತ್ತು. ಬಳಿಕ ಚೀನಾ ಈ ನೀತಿಯನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿತು. ಮೂರು ದಶಕಗಳಿಂದ ಸದ್ದಿಲ್ಲದೆ ಪಾಶ್ಚಿಮಾತ್ಯ ತಂತ್ರಜ್ಞಾನವನ್ನು, ಬಂಡವಾಳವನ್ನು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಬೆಳೆಸಿಕೊಂಡು ಬಂದಿತು. ಅದರ ಪರಿಣಾಮವು ಎಲ್ಲರ ಕಣ್ಣಿಗೆ ಗೋಚರಿಸುವ ವೇಳೆಗೆ, ಚೀನಾವು ವಿಶ್ವದ ಎರಡನೇ ಅತ್ಯಂತ ದೊಡ್ಡ ಆರ್ಥಿಕ ಶಕ್ತಿಯಾಗಿ ಹಾಗೂ ಅಮೆರಿಕಕ್ಕೆ ಸಮರ್ಥ ತಂತ್ರಜ್ಞಾನ ವಿರೋಧಿಯಾಗಿ ಬೆಳೆದು ನಿಂತಾಗಿತ್ತು.

ಪಾಶ್ಚಿಮಾತ್ಯ ರಾಷ್ಟ್ರಗಳೇ ನಿರ್ಮಿಸಿದ ವ್ಯವಸ್ಥೆಯೊಳಗೆ ಚೀನಾವು ಅತ್ಯಂತ ಶಕ್ತಿಶಾಲಿಯಾಗಿ ಬೆಳೆಯಲು ತಾವೇ ಅವಕಾಶ ಮಾಡಿಕೊಟ್ಟಿದ್ದೇವೆ ಎಂಬುದಾಗಿ ಅಮೆರಿಕ ಈಗ ಭಾವಿಸಿದೆ. ಭಾರತವನ್ನು ಕೂಡಾ ಅಮೆರಿಕ ಈಗ ಅದೇ ಆಯಾಮದಿಂದ ನೋಡುತ್ತಿದೆ.

ಜಪಾನ್‌ನ ನಿದರ್ಶನ

ಯಾವುದಾದರೊಂದು ದೇಶವು ಪ್ರಬಲವಾಗಿ ಬೆಳೆಯದಂತೆ ಮಾಡಲು ಅಮೆರಿಕವು ಏನು ಮಾಡಲೂ ಸಿದ್ಧ ಎಂಬುದನ್ನು ಅರಿಯಬೇಕಾದರೆ ಜಪಾನ್‌ನತ್ತ ನೋಡಬೇಕು. 1980ರ ದಶಕದಲ್ಲಿ ಜಪಾನ್ ಅತ್ಯಂತ ವೇಗವಾಗಿ ಬೆಳೆಯುತ್ತಿತ್ತು. ಅದನ್ನು ಯಾರೂ ತಡೆಯುವಂತಿರಲಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಜಪಾನಿ ಆಟೋಮೊಬೈಲ್‌ಗಳು, ಎಲೆಕ್ಟ್ರಾನಿಕ್ಸ್ ಮೇಲುಗೈ ಸಾಧಿಸಿದ್ದವು. ಮುಂದಿನ ದಿನಗಳಲ್ಲಿ ಜಪಾನ್ ಸೂಪರ್‌ಪವರ್ ಆಗಿ ಬೆಳೆದು ಅಮೆರಿಕದ ಕೈಗಾರಿಕೆಗಳು ಕುಗ್ಗಲಿದೆ ಎಂಬುದಾಗಿ ಅಮೆರಿಕನ್ ಪತ್ರಿಕೆಗಳೆಲ್ಲಾ ಬರೆಯುತ್ತಿದ್ದವು.



ಇದನ್ನು ಕಂಡ ಅಮೆರಿಕವು 1985ರಲ್ಲಿ ಜಪಾನ್‌ನೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದ ಜಪಾನ್ ಪಾಲಿಗೆ ಮಾರಕವಾಯಿತು. ಇದರ ಕಾರಣದಿಂದಾಗಿ ಜಪಾನಿನ ಕರೆನ್ಸಿಯ ಬೆಲೆ ಕುಸಿಯಿತು. ಅವುಗಳ ಉಪಕರಣಗಳ ಬೆಲೆ ಮಾರುಕಟ್ಟೆಯಲ್ಲಿ ಏರುವಂತಾಯಿತು. ಈ ಬೆಳವಣಿಗೆ ಜಪಾನಿನ ಅಭಿವೃದ್ಧಿಯ ಬಲೂನಿಗೆ ಸೂಜಿಯಿಂದ ಚುಚ್ಚಿದಂತಾಯಿತು. ಅಲ್ಲಿಂದ ಬಳಿಕ ಜಪಾನಿನ ಆರ್ಥಿಕ ಪ್ರಗತಿ ಸ್ಥಗಿತಗೊಂಡಿತು.ಕೆಲವು ದಶಕಗಳ ಕಾಲ ಜಪಾನ್ ಇದೇ ರೀತಿಯ ಆರ್ಥಿಕ ಸ್ಥಾಗಿತ್ಯವನ್ನು ಅನುಭವಿಸಿತು.

ಜಪಾನಿನ ಪ್ರಗತಿಯನ್ನು ಯಾವುದೇ ಯುದ್ಧ ಅಥವಾ ನಿರ್ಬಂಧಗಳು ತಡೆದುದಲ್ಲ. ಸ್ನೇಹಯುತ ರಾಜತಾಂತ್ರಿಕತೆ ಮತ್ತು ಆರ್ಥಿಕ ಕುಟಿಲತೆಯ ಮೂಲಕ ಅಮೆರಿಕ ಇದನ್ನು ಸಾಧಿಸಿತು.

ಅಮೆರಿಕ -ಭಾರತ ಸಂಬಂಧ ಸರಳವಲ್ಲ

ಅಮೆರಿಕದೊಂದಿಗಿನ ಭಾರತದ ಸಂಬಂಧವು ಎಂದಿಗೂ ಸರಳವಾಗಿರಲಿಲ್ಲ. ಅದು ಸಂಕೀರ್ಣವಾಗಿದೆ. ಹಲವಾರು ಏಳುಬೀಳುಗಳನ್ನು ಕಾಣುತ್ತಲೇ ಬಂದಿದೆ. ಅಮೆರಿಕವು ತನ್ನ ಹಿತಾಸಕ್ತಿಗೆ ಅನುಗುಣವಾಗಿ ಯಾವುದೇ ದೇಶದೊಂದಿಗಿನ ಸಂಬಂಧವನ್ನು ತನಗೆ ಬೇಕಾದಂತೆ ಬದಲಿಸುತ್ತದೆ. "ಅಮೆರಿಕದ ಜತೆ ಕೈಜೋಡಿಸಿ ಸಾಗುವುದೆಂದರೆ ಗ್ಲಾಸ್ ಚೂರುಗಳ ಮೇಲೆ ನಡೆದಂತೆ. ಯಾವಾಗ ಗಾಜಿನ ಚೂರೊಂದು ಚುಚ್ಚುವುದೆಂದು ಹೇಳಲಾಗದು" ಎಂಬುದಾಗಿ ಖ್ಯಾತ ಲೇಖಕರೊಬ್ಬರು ಬಣ್ಣಿಸುತ್ತಾರೆ.

ಅಮೆರಿಕವು ಭಾರತವನ್ನು ಚೀನಾದ ಪಟ್ಟಕದ ಮೂಲಕವೇ ನೋಡುತ್ತದೆ. ಚೀನಾಕ್ಕೆ ಪ್ರತಿಶಕ್ತಿಯಾಗಿ ಭಾರತವು ಬೆಳೆಯಬೇಕು ಎಂಬುದು ಅಮೆರಿಕದ ಇಂಗಿತ. ಆದರೆ ಭಾರತವು ಅಮೆರಿಕಕ್ಕಿಂತ ಬಲಿಷ್ಠವಾಗಿ ಬೆಳೆಯುವುದನ್ನು ಅದು ಸಹಿಸದು. ಕ್ರಿಸ್ಟೋಫರ್ ಹೇಳಿದಂತೆ ಬಲಿಷ್ಠ ಭಾರತವು ಅಮೆರಿಕಕ್ಕೆ ಒಂದು ಸಮಸ್ಯೆಯನ್ನು ಪರಿಹರಿಸಬಲ್ಲುದಾದರೂ ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಬಲ್ಲುದು.

ಭಾರತದ ಅಭಿವೃದ್ಧಿಯು ಪಾಶ್ಚಾತ್ಯ ರಣತಂತ್ರ ವ್ಯವಸ್ಥೆಯಲ್ಲಿ ಕೆಲಮಟ್ಟಿನ ಅಸಹನೆಯನ್ನು ಸೃಷ್ಟಿಸಿದೆ. "ಯಾವಾಗಲೂ ಬಂದೂಕು ಹಿಡಿದವನೇ ನಮ್ಮ ವೈರಿಯಾಗಿರುವುದಿಲ್ಲ. ಕೆಲವೊಮ್ಮೆ ನಗು ಚೆಲ್ಲುತ್ತಾ ಕೊಡುಗೆಯನ್ನು ಕೈಯಲ್ಲಿ ಹಿಡಿದವನು ನಮ್ಮ ವೈರಿಯಾಗಿರುವ ಸಾಧ್ಯತೆಗಳಿವೆ" ಎಂದು ಮಾಜಿ ಗುಪ್ತಚರ ಮುಖ್ಯಸ್ಥ ವಿಕ್ರಮ್ ಸೂದ್ ಹೇಳುತ್ತಾರೆ. ಅದು ಅಮೆರಿಕಕ್ಕೆ ಅನ್ವಯಿಸುತ್ತದೆ. ಸೂದ್ ಹೇಳುತ್ತಾರೆ "ಭಾರತದ ಆತ್ಮನಿರ್ಭರ ರಾಷ್ಟ್ರೀಯತೆಯೆಂಬುದು ಪಾಶ್ಚಿಮಾತ್ಯ ಅಧಿಕಾರದ ಕಾರಿಡಾರ್‌ನಲ್ಲಿ ಸಹ್ಯವೆನಿಸದ ವಿಷಯವಾಗಿದೆ. ಆರ್ಥಿಕ ಶಕ್ತಿ, ಮಿಲಿಟರಿ ಶಕ್ತಿ ಮತ್ತು ಪರಮಾಣು ಶಕ್ತಿ ಹೊಂದಿರುವ ಎರಡು ಸ್ವಾವಲಂಬಿಯಾದ ಹಾಗೂ ಸ್ವತಂತ್ರವಾದ ರಾಷ್ಟ್ರಗಳು ಏಷ್ಯಾದಲ್ಲಿ ಬೆಳೆಯುವುದು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭೀತಿ ಸೃಷ್ಟಿಸುತ್ತದೆ. ಪಾಶ್ಚಿಮಾತ್ಯ ಕಾರ್ಪೋರೇಟ್ ಜಗತ್ತಂತೂ ಆ ಬೆಳವಣಿಗೆಯನ್ನು ಆತಂಕದಿಂದಲೇ ನೋಡುತ್ತದೆ"

ಹಿಂದೊಮ್ಮೆ ಚೀನಾ ಬೆಳೆಯಲು ಅವಕಾಶ ಮಾಡಿಕೊಟ್ಟು ಈಗ ಅದರಿಂದಲೇ ಬೆದರಿಕೆಗೊಳಗಾಗಿರುವ ಅಮೆರಿಕವು ಭಾರತವನ್ನು ಅದೇ ತಕ್ಕಡಿಯಲ್ಲಿ ತೂಗಲಾರದಾದರೂ ಸದ್ಯಕ್ಕೆ ಭಾರತ-ಪಾಕಿಸ್ತಾನ ಸಂಬಂಧದ ಕುರಿತಂತೆ ತನ್ನ ದ್ವಂದ್ವ ನೀತಿ ಮುಂದುವರಿಸುವುದು ಖಂಡಿತ. ಭಾರತವು ಸದಾ ಪಾಕಿಸ್ತಾನದೆಡೆಗೆ ಅನುಮಾನದಿಂದ ನೋಡುವಂತೆ ಮಾಡಲು ಪಾಕಿಸ್ತಾನಕ್ಕೆ ಕುಮ್ಮಕ್ಕು ನೀಡಬಹುದು. ಇದೇ ವೇಳೆ ಭಾರತವು ತನ್ನ ಮಾರುಕಟ್ಟೆಯನ್ನು ಅಮೆರಿಕನ್ ಉತ್ಪನ್ನಗಳಿಗೆ ಮುಕ್ತಗೊಳಿಸುವಂತೆ ಒತ್ತಡ ಹೇರಬಹುದು ಎಂದು ಅವರು ನುಡಿಯುತ್ತಾರೆ.

ಆದರೆ ಸಂಪೂರ್ಣವಾಗಿ ಭಾರತದ ವಿರೋಧ ಕಟ್ಟಿಕೊಳ್ಳುವುದನ್ನು ಅಮೆರಿಕ ಬಯಸಲಾರದು ಎಂದೂ ಹೇಳಲಾಗುತ್ತದೆ. ಅಧಿಕಾರಕೇಂದ್ರವು ಪೂರ್ವದೆಡೆಗೆ ವಾಲುತ್ತಿರುವಾಗ ಭಾರತವನ್ನು ಸಂಪೂರ್ಣ ಕಡೆಗಣಿಸುವ ತಪ್ಪನ್ನು ಅಮೆರಿಕ ಮಾಡಲಾರದು. ಕಳೆದ 300 ವರ್ಷಗಳಲ್ಲಿ ಇದೇ ಮೊದಲ ಬಾರಿ ಯಾವುದೇ ಐರೋಪ್ಯ ದೇಶವು ಜಗತ್ತಿನ ಅತೀ ದೊಡ್ಡ ಮೂರು ಆರ್ಥಿಕ ಶಕ್ತಿಗಳಲ್ಲಿ ಇಲ್ಲವಾಗಿರುವುದನ್ನು ಗಮನಿಸಬೇಕು.

ಭಾರತದ ಮಹತ್ವ ಇರುವುದು ಅದರ ಆರ್ಥಿಕ ಸಾಮರ್ಥ್ಯದಲ್ಲಿ ಮಾತ್ರವಷ್ಟೇ ಅಲ್ಲ. ಅದು ಹೊಂದಿರುವ ವ್ಯೂಹಾತ್ಮಕ ಭೌಗೋಳಿಕ ಕ್ಷೇತ್ರದಲ್ಲಿಯೂ. ಇಂಡೋ ಪೆಸಿಫಿಕ್ ವಲಯದಲ್ಲಿ ಚೀನಾದ ಪ್ರಭಾವವನ್ನು ತಗ್ಗಿಸಬೇಕಾದರೆ ಅಮೆರಿಕಕ್ಕೆ ಭಾರತದ ಅಗತ್ಯವಿದೆ. ಈಗಿನ ಜಾಗತಿಕ ಚದುರಂಗದ ಹಾಸಿನಲ್ಲಿ ಭಾರತವು ಪಾಲುದಾರನೂ ಆಗಬಲ್ಲುದು, ಸಮರ್ಥ ವೈರಿಯೂ ಆಗಬಲ್ಲುದು.

ಸವಾಲಿರುವುದು ಭಾರತದಲ್ಲೆ

ಈಗ ಚೀನಾದ ಆರ್ಥಿಕತೆಯು ನಿಧಾನಗೊಂಡಿರುವುದರಿಂದ ತಾವು ಭಾರತವನ್ನು ನಿಭಾಯಿಸುವಲ್ಲಿ ಹೆಚ್ಚಿನ ನಿಯಂತ್ರಣ ಹೊಂದಿರುವುದಾಗಿ ಅಮೆರಿಕನ್ನರು ಭಾವಿಸಿದ್ದಾರೆ. ಚೀನಾದ ಕುಸಿಯುತ್ತಿರುವ ಆರ್ಥಿಕತೆಯ ಕಾರಣದಿಂದ ಅಮೆರಿಕಕ್ಕೆ ತನ್ನ ಪ್ರಾಬಲ್ಯ ಉಳಿಸಿಕೊಳ್ಳಲು ಸಾಧ್ಯವಾಗಲಿದೆ ಎಂದವರು ಭಾವಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಮುಂದಿನ ಎರಡು ದಶಕಗಳು ಅತ್ಯಂತ ಮಹತ್ವದ್ದಾಗಿವೆ. ಭಾರತದ ಭವಿಷ್ಯವನ್ನು ನಿರ್ಧರಿಸುವುದು ಅಮೆರಿಕ ಅಥವಾ ಚೀನಾಗಳಲ್ಲ. ಬದಲಾಗಿ ಭಾರತದಲ್ಲೇ ಇದು ನಿರ್ಧರಿಸಲ್ಪಡುವುದು. ಭಾರತವು ತನ್ನ ಆರ್ಥಿಕತೆ ಮತ್ತು ಶಿಕ್ಷಣದಲ್ಲಿ ಭಾರೀ ಸುಧಾರಣೆ ತರಬೇಕಾಗಿದೆ. ಇದು ನಾವು ಸೂಪರ್‌ಪವರ್ ಹಾದಿಯಲ್ಲಿ ಸಾಗುತ್ತೇವೆಯೇ ಅಥವಾ ಜಪಾನ್‌ನಂತೆ ಸ್ಥಗಿತಗೊಳ್ಳುತ್ತೇವೆಯೇ ಎಂಬುದನ್ನು ನಿರ್ಧರಿಸಲಿದೆ. ರಾಜಕೀಯದಲ್ಲಿ ಉಚಿತ ಕೊಡುಗೆಗಳ ಚಾಳಿ ಕೊನೆಗೊಳ್ಳಬೇಕು. ಅದೇರೀತಿ ಶಿಕ್ಷಣದಲ್ಲಿ ಮೆರಿಟ್‌ಗೆ ಹೆಚ್ಚು ಆದ್ಯತೆ ಸಿಗುವಂತಾಗಬೇಕು.

'ಅಮೆರಿಕವು ಭಾರತವನ್ನು ಚೀನಾದ ವಿರುದ್ಧವಾಗಿ ತನ್ನ ಪಾಲುದಾರನಾಗಿರಲು ಬಯಸುತ್ತದೆ. ಆದರೆ ಭಾರತವು ಮತ್ತೊಂದು ಚೀನಾವಾಗಿ ರೂಪುಗೊಳ್ಳುವುದನ್ನು ಬಯಸುವುದಿಲ್ಲ' ಎಂಬುದನ್ನು ಕ್ರಿಸ್ಟೋಫರ್ ಲಾಂಡ್ ಅವರ ಹೇಳಿಕೆಯು ಸ್ಪಷ್ಟಪಡಿಸಿದೆ.

ಭಾರತಕ್ಕೆ ಇಲ್ಲಿನ ಸಂದೇಶ ಸರಳವಾಗಿದೆ ಮತ್ತು ಸ್ಪಷ್ಟವಾಗಿದೆ. ಯಾವುದೇ ಸೂಪರ್‌ಪವರ್ ತನಗೆ ಪ್ರತಿಸ್ಪರ್ಧಿ ಬೆಳೆಯುವುದನ್ನು ಇಷ್ಟಪಡುವುದಿಲ್ಲ. ಭಾರತವು 21ನೇ ಶತಮಾನದ ನಿರ್ಣಾಯಕ ಶಕ್ತಿಯಾಗಿ ಬೆಳೆಯಬೇಕಾಗಿರುವುದು ಜಾಗತಿಕ ಸಹಕಾರಕ್ಕಿಂತಲೂ ಹೆಚ್ಚಾಗಿ ತನ್ನದೇ ಸ್ವಸಾಮರ್ಥ್ಯದಿಂದ !

ವಿಜ್ಞಾನ ಮತ್ತು ಧಾರ್ಮಿಕತೆಯ ಸಂಯೋಗ...

ಜಿ. ನಂದಕುಮಾರ್

ಕೃತಕ ಬುದ್ಧಿಮತ್ತೆಯನ್ನು ಭವಿಷ್ಯದ ತಂತ್ರಜ್ಞಾನ ಎಂದು ಈಗ ಪರಿಗಣಿಸಲಾಗುತ್ತದೆ. ಆದರೆ ಚಾಟ್ ಜಿಪಿಟಿಯಂತಹ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಇತ್ತೀಚೆಗೆ ಉಂಟಾಗಿರುವ ಕೆಲವು ಅನೂಹ್ಯ ಬೆಳವಣಿಗೆಗಳು ವೈಜ್ಞಾನಿಕ ಸಮುದಾಯ ಮತ್ತು ನಾಗರಿಕ ಸಮಾಜವನ್ನು ಅಲ್ಲಾಡಿಸಿದೆ. ಕೃತಕ ಬುದ್ಧಿಮತ್ತೆಯನ್ನು ಅನೈತಿಕ ಉದ್ದೇಶಗಳಿಗಾಗಿ ಬಳಸಬಹುದೇ, ಅದು ಮಾನವ ಬುದ್ಧಿಮತ್ತೆಗೇ ಅಂತ್ಯ ಹಾಡಬಹುದೇ ಎಂಬ ಪ್ರಶ್ನೆಗಳು ಉದಿಸಲಾರಂಭಿಸಿವೆ. ಈ ಪ್ರಶ್ನೆಗಳೆಲ್ಲ ನಮ್ಮ ವಿಜ್ಞಾನ ಸಮುದಾಯದ ಪರಿಗಣನೆಗೆ ಬರಬೇಕಾದ ವಿಷಯಗಳು ಹಾಗೂ ಅವರು ಇದಕ್ಕೆ ಸ್ಪಷ್ಟ ಉತ್ತರ ಕಂಡುಕೊಳ್ಳಬೇಕಾಗಿದೆ. ಇವೆಲ್ಲದರ ಹೊರತಾಗಿಯೂ ನನ್ನಂತಹ ಸಾಮಾನ್ಯ ಜನರು, ಮುಂದೊಂದು ದಿನ ಕೃತಕ ಬುದ್ಧಿಮತ್ತೆಯು ಮಾನವ ಬುದ್ಧಿಮತ್ತೆಯನ್ನು ಮೀರಿ ಬೆಳೆಯಬಹುದೆಂಬ ಆತಂಕಕ್ಕೆ ಒಳಗಾಗಿರುವುದು ಸುಳ್ಳಲ್ಲ.

ಈವರೆಗೆ ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿವಂತಿಕೆಯ ಇನ್ನೊಂದು ಸ್ತರದ ಅಭಿವೃದ್ಧಿಯೆಂದು ಭಾವಿಸಲಾಗಿತ್ತು. ವಿಜ್ಞಾನ, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಮನುಕುಲವು ಈಗ ತನ್ನ ಜೈವಿಕ ಮಿತಿಯನ್ನು ಮೀರಿ ಜೀವನಿಯಮವನ್ನೇ ಬದಲಿಸಲು ಹಾಗೂ ಆ ಮೂಲಕ 'ಕೃತಕ ಜೀವಿ'ಗಳನ್ನು ಸೃಷ್ಟಿಸಲು ಯತ್ನಿಸುತ್ತಿದೆ. ಮಾನವ ಬುದ್ಧಿಮತ್ತೆಯು ನಶಿಸಿ ಹೋದ ಭವಿಷ್ಯದ ಜಗತ್ತೊಂದನ್ನು ಕಲ್ಪಿಸಿಕೊಳ್ಳುವುದೆಂದರೆ ಅದು ಒಂದು ರೀತಿಯಲ್ಲಿ ಮನುಕುಲದ ವಿನಾಶದಂತೆಯೂ ಕಂಡುಬರುತ್ತದೆ. ಕೃತಕ ಬುದ್ಧಿಮತ್ತೆಯು ಅಧಿಕ ಶಕ್ತಿಯ ಯಂತ್ರ ಮಾನವರನ್ನು ಅಥವಾ ಡೇಟಾಪ್ರೊಸೆಸರ್‌ಗಳನ್ನು ಸೃಷ್ಟಿಸಿ ಮನುಷ್ಯರನ್ನೇ ಮೀರಿ ಸಾಗಬಹುದು.

ಈ ಯುಗದಲ್ಲೇ ನಾವು ತಂತ್ರಜ್ಞಾನವು ನಮ್ಮನ್ನು ಶೋಷಿಸಲು ಅವಕಾಶ ಮಾಡಿಕೊಟ್ಟಿದ್ದೇವೆ.ನಮ್ಮ ಆರೋಗ್ಯ, ಸಂಪತ್ತು ಮತ್ತು ದೈನಂದಿನ ವ್ಯವಹಾರದ ಕುರಿತಂತೆ ಈ ಮೊದಲು ವೈದ್ಯರು, ಆರ್ಥಿಕ ತಜ್ಞರು, ಸೇವಾ ಕ್ಷೇತ್ರದವರು ನಿರ್ಧಾರ ತೆಗೆದುಕೊಳ್ಳುತ್ತಿದ್ದರೆ ಈಗ ಅವೆಲ್ಲವನ್ನು ಆ್ಯಲ್ಗರಿದಮ್‌ಗಳು ನಿರ್ಧರಿಸುತ್ತವೆ. ಕೃತಕ ಬುದ್ಧಿಮತ್ತೆ ಆಧರಿತ ಆಲ್ಗರಿದಮ್‌ಗಳು ಮನುಷ್ಯನ ಪ್ರಗತಿಗೆ ಬಹಳಷ್ಟು ಕೊಡುಗೆ ನೀಡುತ್ತವಾದರೂ ಅವುಗಳ ವರ್ತನೆಯ ಅಶ್ಚಿತತೆಯು ಬೆದರಿಕೆಯನ್ನೂ ಒಡ್ಡಿರುವುದು ಸುಳ್ಳಲ್ಲ. ಡಾ. ಫ್ರಾಂಕ್‌ಸ್ಟೈನ್‌ನ ಕಲ್ಪನೆಯು ಈಗ ಕೇವಲ ಫ್ಯಾಂಟಸಿಯಾಗಿ ಉಳಿದಿಲ್ಲ. 'ಡೇಟಾಯಿಸಂ' ಅಥವಾ 'ಡೇಟಾ ರಿಲಿಜನ್' ರೂಪು ಪಡೆಯುವುದರೊಂದಿಗೆ ಇದು ಅಪಾಯದ ಹಾದಿ ತುಳಿದಿದೆ.

ಡೇಟಾ ರಿಲಿಜನ್ ಜೀವಿಗಳನ್ನು ಕೂಡಾ ಬಯೋಕೆಮಿಕಲ್ ಆಲ್ಗರಿದಮ್‌ನಂತೆಯೆ ಪರಿಗಣಿಸುತ್ತದೆ. ತಜ್ಞನೊಬ್ಬ ಹೇಳುವ ಪ್ರಕಾರ 'ಡೇಟಾಯಿಸಂ ಪ್ರಾಣಿಗಳು ಮತ್ತು ಯಂತ್ರಗಳ ನಡುವಿನ ಭೇದವನ್ನು ಅಳಿಸಿಹಾಕುತ್ತದೆ. ಅಂತಿಮವಾಗಿ ಅದು ಬಯೋಕೆಮಿಕಲ್ ಆಲ್ಗರಿದಮ್‌ಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕೆಂದು ನಿರೀಕ್ಷಿಸುತ್ತದೆ" ಡೇಟಾಯಿಸಂ ಎಂಬುದು ಮಾನವ ಜನಾಂಗದ ಅಸ್ತಿತ್ವವನ್ನೆ ನಾಶಗೊಳಿಸುವ ಬೆದರಿಕೆಯಂತೆ ಕಂಡುಬರುತ್ತದೆ. ಮಾನವ ಬುದ್ಧಿಮತ್ತೆಯ ಜಾಗದಲ್ಲಿ ಕೃತಕ ಬುದ್ಧಿಮತ್ತೆಯನ್ನು ನೆಲೆಗೊಳಿಸಬೇಕೆಂದು ಬಯಸುತ್ತದೆ. ಮಾನವಕೇಂದ್ರಿತ ಜಗತ್ತು ಡೇಟಾ ಕೇಂದ್ರಿತ ಜಗತ್ತಾಗಿ ಪರಿವರ್ತನೆಗೊಂಡಾಗ ಎಲ್ಲ ಡೇಟಾಗಳ ಸಂಸ್ಕರಣೆ ಮತ್ತು ನಿರ್ಧಾರ ತಾಳುವ ಪ್ರಕ್ರಿಯೆನ್ನು ಒಂದು ಕೇಂದ್ರೀಯ ಪ್ರೊಸೆಸರ್ ನಡೆಸುತ್ತದೆ. ಇಂತಹ ನರಕಸ್ವರೂಪಿ ವ್ಯವಸ್ಥೆಯು ಒಂದು ರೀತಿಯಲ್ಲಿ ಕಮ್ಯುನಿಸ್ಟ್ ವ್ಯವಸ್ಥೆಯೇ ಆಗಿದೆ ಎಂದು ತಜ್ಞರು ಹೇಳುತ್ತಾರೆ.

ಇಂತಹ ಸ್ವ-ವಿನಾಶಿ ಪರಿಸ್ಥಿತಿಯಿಂದ ಹೇಗೆ ಪಾರಾಗುವುದು ಎಂಬುದನ್ನು ಚಿಂತಿಸುವುದು ತಂತ್ರಜ್ಞರು ಮತ್ತು ವಿಜ್ಞಾನಿಗಳ ಕಾರ್ಯವಾದರೂ ಇಂತಹುದೊಂದು ವಕ್ರಹಾದಿ ತುಳಿಯಲು ಕಾರಣವೇನು ಎಂಬುದನ್ನು ತಿಳಿಯುವುದು ನಮ್ಮ ಕರ್ತವ್ಯವಾಗಿದೆ.

ನಿಜವಾದ ಸಮಸ್ಯೆಯಿರುವುದು ಮನುಷ್ಯನ ಜ್ಞಾನವನ್ನು ವಿಭಾಗೀಕರಣಗೊಳಿಸಿರುವುದರಲ್ಲಿ ಹಾಗೂ ಮಾನವನ ಧಾರ್ಮಿಕ ಆಯಾಮವನ್ನು ಕಡೆಗಣಿಸಿ ಆತನನ್ನು ಕೇವಲ ಬಯೋಕೆಮಿಕಲ್ ವಸ್ತು ಎಂಬಂತೆ ಪರಿಗಣಿಸಿರುವಲ್ಲಿ. ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿಮತ್ತೆಗೆ ಸವಾಲೊಡ್ಡುವಂತೆ ಬೆಳೆದರೆ, ಅದಕ್ಕೆ ಹಿಂದೂ ಚಿಂತನೆಯ ಪ್ರಕಾರ ಪರಿಹಾರ ಮಾರ್ಗವೆಂದರೆ ಉನ್ನತ ಮಾನಸಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು. ಈ ನಿಟ್ಟಿನಲ್ಲಿ ಪುರಾತನ ಹಿಂದು ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಮೇಳೈಸಿದ ಶ್ರೀ ಅರವಿಂದರ ಚಿಂತನೆ ನೆರವಿಗೆ ಬರಬಲ್ಲುದು. ಇದು ಒಂದು ರೀತಿಯಲ್ಲಿ ವಿಕಾಸವಾದಿ ಧಾರ್ಮಿಕತೆ ಎಂದು ಹೇಳಬಹುದು.

ಅರವಿಂದರು ಪ್ರಜ್ಞಾವಂತಿಕೆಯನ್ನು ಕೇವಲ ಬುದ್ಧಿವಂತಿಕೆಗೆ ಸೀಮಿತಗೊಳಿಸುವುದಿಲ್ಲ. ಮನಸ್ಸೆಂಬುದು ಪ್ರಜ್ಞೆಯೆಂದು ಕರೆಯಲ್ಪಡುವ ಬಹುಸ್ತರದ ವಾಸ್ತವತೆಯ ಒಂದು ಸ್ತರ ಮಾತ್ರ ಎನ್ನುತ್ತಾರವರು. "ಪ್ರಸಕ್ತ ಮನುಕುಲವು ವಿಕಾಸವಾದಿ ಬಿಕ್ಕಟ್ಟು ಎದುರಿಸುತ್ತಿದೆ. ಮಾನವನು ಎಂತಹ ನಾಗರಿಕತೆ ವ್ಯವಸ್ಥೆಯನ್ನು ಸ್ಥಾಪಿಸಿದ್ದಾನೆಂದರೆ ಅದು ಆತನ ಸೀಮಿತ ಮಾನಸಿಕ ಸಾಮರ್ಥ್ಯಕ್ಕೆ ಮತ್ತು ಅರಿವಿಗೆ ಎಟುಕದ್ದಾಗಿದೆ. ಆತನ ಧಾರ್ಮಿಕ ಮತ್ತು ನೈತಿಕ ತಿಳಿವಿಗೂ ಸಿಲುಕದ್ದಾಗಿದೆ" ಎನ್ನುತ್ತಾರವರು.

ಕೃತಕ ಬುದ್ಧಿಮತ್ತೆ ಮನುಷ್ಯನ ಮೇಲೆಯೆ ನಿಯಂತ್ರಣ ಸಾಧಿಸುವುದನ್ನು ತಡೆಯಲು ಇರುವ ಸಾಧನೀಯ ದಾರಿಯೆಂದರೆ ನಮ್ಮ ಮಾನವ ಬುದ್ಧಿಶಕ್ತಿಯನ್ನೆ ಇನ್ನೊಂದು ಸ್ತರ ಮೇಲಕ್ಕೆ ಕೊಂಡೊಯ್ಯುವುದು ಹಾಗೂ ಸುಪರ್‌ಮೈಂಡ್‌ನ ಅಪರಿಮಿತ ಶಕ್ತಿಯ ಸಾಧ್ಯತೆಗಳನ್ನು ಪರಿಶೀಲಿಸುವುದು. ಇದರ ಸರಳ ಅರ್ಥವೆಂದರೆ ನಮ್ಮ ಮನಸ್ಸನ್ನು ಮತ್ತು ಬುದ್ಧಿಮತ್ತೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು ಹಾಗೂ ಅದನ್ನು ಯಂತ್ರದ ಬುದ್ಧಿಮತ್ತೆಗಿಂತ ಹೆಚ್ಚು ಶಕ್ತಿಶಾಲಿ ಮತ್ತು ವಿಶಾಲವನ್ನಾಗಿಸುವುದು.

ಅರವಿಂದರು ಹೇಳುವ ಪ್ರಕಾರ ಸುಪರ್‌ಮೈಂಡ್ ಎನ್ನುವುದು ಎಲ್ಲದರ ಬಗ್ಗೆಯೂ ಸಂಪೂರ್ಣ ಅರಿವಿರುವ ಪರಿಪೂರ್ಣ ಹಾಗೂ ಸಮಗ್ರ ಜ್ಞಾನ. ಮನುಷ್ಯ ತನ್ನ ಈಗಿನ ಸೀಮಿತ ಬುದ್ಧಿಮತ್ತೆಯಿಂದ ಈ ಹಂತಕ್ಕೆ ಮೇಲೇರಲು ಸಾಧ್ಯವಿದೆ. ಪ್ರಜ್ಞಾವಂತಿಕೆಯನ್ನು ಬೆಳೆಸುವ ಮೂಲಕ ಹಾಗೂ ಬದುಕಿನಲ್ಲಿ ಧಾರ್ಮಿಕ ಪ್ರಗತಿ ಸಾಧಿಸುವ ಮೂಲಕ ಮಾನವ ಬುದ್ಧಿವಂತಿಕೆಯ ಸದುಪಯೋಗ ಪಡೆದುಕೊಳ್ಳಬಹುದು. ಇದು ಕೃತಕ ಬುದ್ಧಿಮತ್ತೆಯು ಒಡ್ಡುವ ಸವಾಲುಗಳನ್ನು ಮತ್ತು ಅಪಾಯಗಳನ್ನು ಎದುರಿಸಲು ನಮಗೆ ನೆರವೀಯಬಲ್ಲುದು.

ಕಿರುಸುದ್ದಿ

ಇಂದು ಹೆಜಮಾಡಿಯಲ್ಲಿ ಸ್ಫೂರ್ತಿ ಕಾರ್ಯಕ್ರಮ

ಹೆಜಮಾಡಿ: ಬಿಲ್ಲವರ ಸಂಘದ ಸಹಯೋಗದೊಂದಿಗೆ ಯುವವಾಹಿನಿ ಹೆಜಮಾಡಿ ಘಟಕ,ಹೆಜಮಾಡಿ ಬಿಲ್ಲವರ ಸಂಘ ಮಹಿಳಾ ಮಂಡಳಿ ಮತ್ತು ಬಿರುವೆರ್ ಬ್ರದರ್ಸ್ ಹೆಜಮಾಡಿಯ ಜಂಟಿ ಆಶ್ರಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಸ್ತ್ರೀ ಸ್ಫೂರ್ತಿ–2026 ಕಾರ್ಯಕ್ರಮವು ಮಾರ್ಚ್ 17 ರ ಮಂಗಳವಾರ ಸಂಜೆ 5 ಕ್ಕೆ ಹೆಜಮಾಡಿ ಬಿಲ್ಲವರ ಸಂಘದಲ್ಲಿ ನಡೆಯಲಿದೆ.

. ಕಾರ್ಯಕ್ರಮವನ್ನು ಮುಲ್ಕಿ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಶ್ವೇತ ಪಳ್ಳಿ ಉದ್ಘಾಟಿಸಲಿದ್ದು ಅಧ್ಯಕ್ಷತೆಯನ್ನು ಹೆಜಮಾಡಿ ಬಿಲ್ಲವರ ಸಂಘದ ಅಧ್ಯಕ್ಷ ಮೋಹನ್ ದಾಸ್ ಹೆಜಮಾಡಿ ವಹಿಸಲಿದ್ದಾರೆ. ಯುವವಾಹಿನಿ ಕೇಂದ್ರ ಸಮಿತಿಯಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು,ಹೆಜಮಾಡಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ದಯಾನಂದ್ ಹೆಜಮಾಡಿ, ಯುವವಾಹಿನಿ ಹೆಜಮಾಡಿ ಘಟಕದ ಅಧ್ಯಕ್ಷ ನಿಶಾಂಕ್ ಎಸ್ ಕೋಟ್ಯಾನ್, ಹೆಜಮಾಡಿ ಬಿಲ್ಲವರ ಸಂಘ ಮಹಿಳಾ ಮಂಡಳಿಯ ಅಧ್ಯಕ್ಷೆ ಲಾವಣ್ಯ ಪ್ರಭೋದ್, ಬಿರುವೆರ್ ಬ್ರದರ್ಸ್ ಹೆಜಮಾಡಿಯ ಅಧ್ಯಕ್ಷ ಮನೋಜ್ ಸುವರ್ಣ ಭಾಗವಹಿಸಲಿದ್ದಾರೆ ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಕಬಡ್ಡಿ ಕ್ರೀಡಾಪಟು ಧನಲಕ್ಷ್ಮೀ ಪೂಜಾರಿ ಯವರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮಕ್ಕೆ ಮೊದಲು ಆಗಮಿಸಿದ ಅದೃಷ್ಟಶಾಲಿ ವಿಜೇತರಿಗೆ ಬಹುಮಾನ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕೊಲಕಾಡಿ ಶಿರಿಡಿ ಸಾಯಿಬಾಬಾ ಮಂದಿರ ಶ್ರೀರಾಮ ನವಮಿ ಉತ್ಸವ ಮಾ. 26ರಂದು

ಮುಲ್ಕಿ: ಕೊಲಕಾಡಿಯ ಶ್ರೀ ಶಿರಿಡಿ ಸಾಯಿಬಾಬಾ ಮಂದಿರದಲ್ಲಿ ಮಾ. 26 ರ ಗುರುವಾರದಂದು 15ನೇ ವರ್ಷದ ವೇದಮೂರ್ತಿ ಶ್ರೀ ವಾದಿರಾಜ ಉಪಾಧ್ಯಾಯ ಕುಂಜರಗಿರಿಯವರ ಮಾರ್ಗದರ್ಶನದಲ್ಲಿ 15ನೇ ವರ್ಷದ ಶ್ರೀರಾಮನವಮಿ ಉತ್ಸವ ನಡೆಯಲಿದೆ. ಮಾ 26 ರ ಗುರುವಾರ ಬೆಳಿಗ್ಗೆ ಕಾಕಡ ಆರತಿ, ಭಾಸ್ಕರ ಕಾಂಚನ್ ರಿಂದ ಸ್ಯಾಕ್ಸೋಫೋನ್ ವಾದನ,ಬೆಳಿಗ್ಗೆ 8.45ಕ್ಕೆ ಭಜನಾ ಜ್ಯೋತಿ ಉದ್ಘಾಟನೆಯನ್ನು ಗುತ್ತಿನಾರ್ ಸುಧಾಕರ ಶೆಟ್ಟಿ ದೆಪ್ಪುಣಿಗುತ್ತು ನೆರವೇರಿಸಲಿದ್ದು ಬೆಳಿಗ್ಗೆಯಿಂದ ರಾತ್ರಿ 8.30 ರ ವರೆಗೆ ವಿವಿಧ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮ,ಮಧ್ಯಾಹ್ನ ಮಹಾ ಮಂಗಳಾರತಿ,ಮಹಾ ಅನ್ನಸಂತರ್ಪಣೆ,ಸಂಜೆ 5 ಕ್ಕೆ ಪಲ್ಲಕ್ಕಿ ಉತ್ಸವ,ರಾತ್ರಿ ಮಹಾ ಮಂಗಳಾರತಿ ನಡೆಯಲಿದೆ

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶ್ರೀ ದುರ್ಗಾಪರಮೇಶ್ವರೀ ಬಯಲಾಟ ಸಮಿತಿ, ಅಳದಂಗಡಿ, ಬೆಳ್ತಂಗಡಿ (ತಾ).
2. ಗಿರಿಜಾ ವಿ. ಶೆಟ್ಟಿ, ಕೊಳಕೆಬೈಲು, ಪರಾರಿ, ತಿರುವೈಲು – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
3. ಸುಮತಿ ಲಕ್ಷ್ಮಣ ಶೆಟ್ಟಿ, 'ಲಕ್ಷ್ಮೀ ನಿವಾಸ', ಸೂರಿಂಜೆ – ಪೊನ್ನಗಿರಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರದಲ್ಲಿ.
4. ದೇವತಾ ಭಜನಾ ಮಂದಿರ, ದೇವಗಿರಿ, ತಿಂಗಳಾಡಿ, ಪುತ್ತೂರು.
5. ನಿತ್ಯಾನಂದ ಡಿ. ಸಾಲ್ಯಾನ್, ಗುಂಡ್ಯಡ್ಕ ನ್ಯೂ ಹೌಸ್, ಮಾರ್ನೆ, ಅಜೆಕಾರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
6. ದಿ। ವಾಸುದೇವ ಸ್ಮರಣಾರ್ಥ ಪತ್ನಿ ಲಕ್ಷ್ಮೀ ಮತ್ತು ಮಕ್ಕಳು, ಪಿಲಿಕುಳ, ಮೂಡುಶೆಡ್ಡೆ ಶಿವಶಕ್ತಿ ಭಜನಾ ಮಂದಿರದ ಬಳಿ.
7. ಡಾ। ದಯಾನಂದ ಬೊಮ್ಮಯ ಶೆಟ್ಟಿ ಮತ್ತು ಕುಟುಂಬಿಕರು, ಕಿನ್ನಿಗೋಳಿ – ಕಟೀಲು ಗೋಪಾಲಕೃಷ್ಣ ಆಸ್ರಣ್ಣ ಸಭಾ ಭವನ.

ಶ್ರೀ ಧರ್ಮಸ್ಥಳ ಮೇಳ
ಕೊಳವಾರ ಮೇಲುಕೊಪ್ಪದಲ್ಲಿ
ಶ್ರೀ ತ್ರಿಪುರಾಂತಕ ಮಲ್ಲಿಕಾರ್ಜುನ ದೇವಸ್ಥಾನ ಕೊಳವಾರ

ಶ್ರೀ ಸಾಲಿಗ್ರಾಮ ಮೇಳ
ಶಿವಮೊಗ್ಗ-ತೀರ್ಥಹಳ್ಳಿಯ ಮೃಗವಧೆಯಲ್ಲಿ -
ವಿಷ್ಣುವರ್ಧನ

ಶ್ರೀ ಪೆರ್ಡೂರು ಮೇಳ
ಮಂಕಿಯ ಕೊಪ್ಪದಮಕ್ಕಿಯಲ್ಲಿ -
ಶ್ರೀಕೃಷ್ಣಲೀಲಾಮೃತ

ಶ್ರೀ ಹನುಮಗಿರಿ ಮೇಳ
ಕಾರ್ಕಳದ ನೆಕ್ಲಾಜೆಯಲ್ಲಿ

ಶ್ರೀ ಪಾವಂಜೆ ಮೇಳ
ಹೆಜಮಾಡಿಯ ಬಿಲ್ಲವ ಭವನದಲ್ಲಿ
ಬಪ್ಪನಾಡು ಕ್ಷೇತ್ರ ಮಹಾತ್ಮೆ



ಕೊಂಬಾಡಿ ಶ್ರೀ ದುರ್ಗಾಪರಮೇಶ್ವರೀ ನಾಗಕನ್ನಿಕಾ ದೇವಸ್ಥಾನದ ವಾರ್ಷಿಕ ಜಾತ್ರೆ ಏ.1 ರಂದು ಜರುಗಲಿದ್ದು, ಆಮಂತ್ರಣ ಪತ್ರಿಕೆ ಭಾನುವಾರ ಬಿಡುಗಡೆಗೊಂಡಿತು. ಈ ಸಂಧರ್ಭ ಆಡಳಿತ ಮೊಕ್ತೇಸರರಾದ ಬಾಲಕೃಷ್ಣಕೊಟ್ಟಾರಿ, ರಮಾನಂದ ಭಂಡಾರಿ,ಮೊಹನ್ ಉಜ್ಜೋಡಿ, ರಂಜನ್ ಬಿಜ್ಜೈ, ಮಾಜಿ ಕಾರ್ಪೊರೇಟರ್ ರಾಜೇಶ್ ಕೆ., ಸಾವಿತ್ರಿ ಜೆ.ಕೋಟ್ಯಾನ್, ಕೃಷ್ಣಪ್ಪ, ರಾಘವ ಕೊಂಬಾಡಿ, ಆನಂದ ಶೆಟ್ಟಿ, ನಾಗೇಶ್ ಕೋಟ್ಯಾನ್, ನವೀನ್ ಕೋಟ್ಯಾನ್, ಸದಾನಂದ ದೇವಾಡಿಗ, ದುರ್ಗೇಶ್, ಪುಷ್ಪರಾಜ್, ಪ್ರಶಾಂತ್, ಸುರೇಶ್ ಬಿಜ್ಜೆ, ದಿನೇಶ್, ಗೀತಾ ಲಕ್ಷ್ಮೀಶ್, ಮೋಹಿನಿ ಕೆ., ಅರುಣಾ ದಿನೇಶ, ನಳಿನಿ, ವಿಶ್ವಹಿಂದು ಪರಿಷತ್ತಿನ ಕೀರ್ತನ್, ಶ್ಯಾಮ ರಾಜ್ ಭಟ್, ನಾರಾಯಣ ಮೂರ್ತಿ, ವೀರೇಂದ್ರ ಬಿಜ್ಜೈ,ಮನೀಷ್ ಮುಂತಾದವರು ಉಪಸ್ಥಿತರಿದ್ದರು.

ಸಸಿಹಿತ್ಲು ಶ್ರೀ ಸಾರಂತಾಯ ಗರೋಡಿ ಉಳ್ಳಾಯ ದೈವಸ್ಥಾನ
ಮಾ.20: ದೃಢಕಲಶಾಭಿಷೇಕ ಕಾಲಾವಧಿ ನೇಮ

ಮುಲ್ಕಿ: ಸಸಿಹಿತ್ಲು ಶ್ರೀ ಸಾರಂತಾಯ ಗರೋಡಿ ಉಳ್ಳಾಯ ದೈವಸ್ಥಾನದಲ್ಲಿ ಮಾ. 20ರಿಂದ ಮಾ. 24ರವರೆಗೆ ದೃಢಕಲಶಾಭಿಷೇಕ ಹಾಗೂ ಕಾಲಾವಧಿ ನೇಮೋತ್ಸವ ನಡೆಯಲಿದೆ. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಮಾ. 20ರಂದು ರಾತ್ರಿ ಗಂಟೆ 7 ಕ್ಕೆ ವಾಸ್ತು ಪೂಜೆ, ಮಾ.21ರಂದು ಬೆಳಿಗ್ಗೆ 8 ಕ್ಕೆ ನಾಗದೇವರಿಗೆ ತನುತಂಬಿಲ, ಬ್ರಹ್ಮರಿಗೆ ತಂಬಿಲ ಸೇವೆ, ರಕ್ತೇಶ್ವರಿ ದೇವಿಗೆ ಹೂವಿನ ಪೂಜೆ, ದೈವಗಳ ಶುದ್ಧೀಕರಣ, ದೃಢಕಲಶ ನಡೆಯಲಿದೆ.

ಸಂಜೆ ಗಂಟೆ 7ಕ್ಕೆ ಶ್ರೀ ಕ್ಷೇತ್ರದಲ್ಲಿ ಕಾಂತುಲಕಣ ಗಡಿಪ್ರದಾನರ ಭಂಡಾರ ಮನೆಯ ತಂಬಿಲ ಸೇವೆ. ಕಾಂತಾಬಾರೆ ಬೂದಾಬಾರೆಯರಿಗೆ ಅನ್ನನೈವೇದ್ಯ, ಆಗೇಲು ಸೇವೆ, ಮಾಣಿಬಾಲೆ ಮಾಯಂದಲ್ ಆಗೇಲು ಸೇವೆ, ಪ್ರಸಾದ ವಿತರಣೆ. ಅನ್ನಸಂತರ್ಪಣೆ (ಕಾಂತುಲಕಣ ಗಡಿಪ್ರದಾನ ಮನೆತನದವರಿಂದ)

ಮಾ22 ರಂದು ಸಂಜೆ ಗಂಟೆ 4 ಕ್ಕೆ ಚಪ್ಪರ ಏರುವುದು, ಭಂಡಾರ ತರಲು ಖಂಡಿಗೆ ಬೀಡಿಗೆ ತೆರಳುವುದು, ರಾತ್ರಿ ಗಂಟೆ 9 ಕ್ಕೆ ಕ್ಷೇತ್ರ ಖಂಡಿಗೆ ಧರ್ಮರಸು ಉಳ್ಳಾಯ ಮತ್ತು ಸಹಪರಿವಾರ ದೈವಗಳ ಭಂಡಾರ ಶ್ರೀ ಕ್ಷೇತ್ರಕ್ಕೆ ಬರುವುದು, ಮತ್ತು ಕಾಂತುಲಕಣ ಗಡಿಪ್ರದಾನರ ಮನೆಯಿಂದ ದೈವಗಳ ಭಂಡಾರ ಆಗಮನ, ಧ್ವಜಾರೋಹಣ, ಅನ್ನಸಂತರ್ಪಣೆ. ಮಾ.23ರಂದು ಬೆಳಿಗ್ಗೆ ಗಂಟೆ 5 ಉಳ್ಳಾಯ ದೈವದ ನೇಮೋತ್ಸವ, ಇಷ್ಟದೇವತೆ, ಮೂಲಮಹಿಷಂದಾಯ, ಬಬ್ಬರ್ಯ ಹಾಗೂ ಪರಿವಾರ ದೈವಗಳ ನೇಮ ಮತ್ತು ಕಾಂತಾಬಾರೆ ಬೂದಾಬಾರೆಯರಿಗೆ, ಮಾಯಂದಾಲ್ ಶಕ್ತಿಗೆ ಪಂಚಕಜ್ಜಾಯ ಸೇವೆ ನಡೆಯಲಿದೆ.

ಮಧ್ಯಾಹ್ನ 12.30ರಿಂದ ಅನ್ನಸಂತರ್ಪಣೆ, ಮಧ್ಯಾಹ್ನ 3.30ರಿಂದ ಓಡ್ಯಂತಾಯ ದೈವದ ನೇಮೋತ್ಸವ, ರಾತ್ರಿ ಗಂಟೆ 9ರಿಂದ ಜಾರಂದಾಯ ಬಂಟ, ಜುಮಾದಿ ಬಂಟ, ಕೊಡಮಣಿತಾಯ, ಖಂಡಿಗೆ ಬೀಡಿನ ಕಾಂತೇರಿ ಜುಮಾದಿ, ಪಿಲಿಚಾಮುಂಡಿ ದೈವಗಳ ನೇಮ ನಡೆಯಲಿದೆ.

ಮಾ. 24ರಂದು ಬೆಳಿಗ್ಗೆ ಗಂಟೆ 5ಕ್ಕೆ ಧ್ವಜಾವರೋಹಣ, ಕಾಂತುಲಕಣ ಗಡಿಪ್ರದಾನರ ಮನೆಗೆ ಹಾಗೂ ಖಂಡಿಗೆ ಬೀಡಿಗೆ ಭಂಡಾರ ನಿರ್ಗಮನ ಕಾರ್ಯಕ್ರಮ ನಡೆಯಲಿದೆ ಎಂದು ಕ್ಷೇತ್ರದ ಆಡಳಿತ ಮಂಡಳಿಯ ಪ್ರಕಟಣೆ ತಿಳಿಸಿದೆ.

ಜಿಲ್ಲಾಡಳಿತ, ವಿವಿಧ ಸಂಘಗಳ ಸಹಕಾರದಲ್ಲಿ ಜಿಲ್ಲೆಯ ವಿವಿಧೆಡೆ ಸ್ವಚ್ಛತಾ ಕಾರ್ಯಕ್ರಮ
ಸ್ವಚ್ಛ, ಸುಂದರ ಕೊಡಗು ಅಭಿಯಾನಕ್ಕೆ ಚಾಲನೆ

ಮಡಿಕೇರಿ: ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಸೋಮವಾರ ಕೊಡಗು ಜಿಲ್ಲೆಯ ಪ್ರಸಿದ್ಧ ಪುಣ್ಯ ಕ್ಷೇತ್ರಗಳು, ಪ್ರವಾಸಿ ಸ್ಥಳಗಳು, ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅರಣ್ಯ, ಪ್ರವಾಸೋದ್ಯಮ ಹಾಗೂ ಪ್ರವಾಸೋದ್ಯಮ ಇಲಾಖೆಯ ಪಾಲುದಾರರು ಹಾಗೂ ಇತರರ ಸಹಕಾರದಲ್ಲಿ ಸ್ವಚ್ಛ ಹಾಗೂ ಸುಂದರ ಕೊಡಗು ಅಭಿಯಾನ ನಡೆಯಿತು.

ನಗರದ ರಾಜಾಸೀಟು ಉದ್ಯಾನವನದಲ್ಲಿ ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಉಪವಿಭಾಗಾಧಿಕಾರಿ ನಿತಿನ್ ಚಕ್ಕಿ, ಕೂರ್ಗ್ ಹೋಟೆಲ್ ಮತ್ತು ರೆಸಾರ್ಟ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕಾರ್ಯಪ್ಪ, ಹೋಂ ಸ್ಟೇ ಅಸೋಸಿಯೇಷನ್ ಅಧ್ಯಕ್ಷ ಮೋಂತಿ ಗಣೇಶ್, ಪ್ರವಾಸೋದ್ಯಮ ಪಾಲುದಾರರಾದ ಬಿ.ಜಿ.ಅನಂತಶಯನ, ಜಿ.ಚಿದ್ವಿಲಾಸ್, ಎಫ್ ಎಂಸಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ರಾಘವ, ಓಂಕಾರೇಶ್ವರ ದೇವಸ್ಥಾನದ ಅಧ್ಯಕ್ಷ ಚುಮ್ಮಿ ದೇವಯ್ಯ, ಟೂರ್ ಅಂಡ್ ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷ ವಸಂತ, ಕೂರ್ಗ್ ಹೋಟೆಲ್ ಮತ್ತು ರೆಸಾರ್ಟ್ ಅಸೋಸಿಯೇಷನ್ ಕಾರ್ಯದರ್ಶಿ ನಾಸೀರ್, ಪ್ರವಾಸೋದ್ಯಮ ಇಲಾಖೆಯ ಸಮಾಲೋಚಕರಾದ ಜತಿನ್, ಇತರರು ಹಾಜರಿದ್ದು ಅಭಿಯಾನಕ್ಕೆ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಅವರು ಮಡಿಕೇರಿ ನಗರದಲ್ಲಿ ಅರ್ಧ ಲೀಟರ್ ಮತ್ತು ಒಂದು ಲೀಟರ್ ಬಾಟಲಿ ನೀರನ್ನು ನಿಷೇಧಿಸಲಾಗಿದೆ. ಇದರಿಂದ ಪ್ಲಾಸ್ಟಿಕ್ ಬಳಕೆ ಸಾಧ್ಯವಾದಷ್ಟು ನಿಯಂತ್ರಣಕ್ಕೆ ಬಂದಿದೆ. ಅದೇ ರೀತಿ ಮುಂದುವರೆಯಬೇಕು. ಪ್ಲಾಸ್ಟಿಕ್ ಬಳಕೆಯನ್ನು ಹಂತ ಹಂತವಾಗಿ ಕಡಿಮೆ ಮಾಡಬೇಕು ಎಂದರು. ಉಪ ವಿಭಾಗಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರಾದ ನಿತಿನ್ ಚಕ್ಕಿ ಅವರು ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿರಬೇಕು. ಪ್ಲಾಸ್ಟಿಕ್‌ನ್ನು ಬಳಸಬಾರದು. ಶುಚಿತ್ವಕ್ಕೆ ಒತ್ತು ಕೊಟ್ಟಲ್ಲಿ ಉತ್ತಮ ಪರಿಸರ ಮತ್ತು ಆರೋಗ್ಯವನ್ನು ಕಾಣಬಹುದು ಎಂದು ತಿಳಿಸಿದರು.

ಹೋಟೆಲ್‌ಮತ್ತುರೆಸಾರ್ಟ್‌ಅಸೋಷಿಯೇಷನ್ ಅಧ್ಯಕ್ಷ ದಿನೇಶ್ ಕಾರ್ಯಪ್ಪ ಅವರು, ಕೊಡಗು ಜಿಲ್ಲೆ ತಾಲೂಕು ಹಾಗೂ ಪ್ರವಾಸಿ ಸ್ಥಳಗಳಲ್ಲಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಹಚ್ಚಹಸಿರಿನ ಕೊಡಗು ಮತ್ತಷ್ಟು ಸುಂದರವಾಗಿರಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಿದ್ದಾರೆ ಎಂದರು.

ಹೋಂ ಸ್ಟೇ ಅಸೋಷಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್ ಅವರು ಮಾತನಾಡಿ, ಉತ್ತಮ ಪರಿಸರಕ್ಕೆ ಒತ್ತು ಕೊಟ್ಟರೆ ಪ್ರವಾಸಿಗರನ್ನು ಮತ್ತಷ್ಟು ಸೆಳೆಯಬಹುದಾಗಿದೆ. ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸುವಂತಾಗಬೇಕು ಎಂದು ನುಡಿದರು.

ಪ್ರವಾಸೋದ್ಯಮ ಪಾಲುದಾರ ಬಿ.ಜಿ.ಅನಂತಶಯನ ಅವರು ಮಾತನಾಡಿ, ಪ್ರವಾಸಿಗರಿಗೆ ಪ್ರವಾಸಿ ಸ್ಥಳಗಳಲ್ಲಿ ಉತ್ತಮ ವಾತಾವರಣ ನಿರ್ಮಾಣ ಮಾಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

> ಕಾವೇರಿ ನಿಸರ್ಗಧಾಮ ಎನ್.ಟಿ.ಸಿ. ಹಾಗೂ ಕೂರ್ಗ್ ರಿವೇರ್ ರೆಸಾರ್ಟ್ ಮತ್ತು ಅರಣ್ಯ ಅಧಿಕಾರಿಗಳ ಸಹಯೋಗದೊಂದಿಗೆ ಸುಮಾರು 50 ಜನರು ಕಾವೇರಿ ನಿಸರ್ಗಧಾಮ ಮುಂಭಾಗದಿಂದ ಗುಡ್ಡೆಹೊಸೂರು ರಸ್ತೆಯ ಎರಡೂ ಬದಿಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡರು. ರಸ್ತೆ ಇಕ್ಕೆಡೆಗಳಲ್ಲಿ ಕಸದ ರಾಶಿಯೇ ಸಂಗ್ರಹವಾಗಿತ್ತು. ಆಯಾಯ ಗ್ರಾಮ ಪಂಚಾಯತ್‌ಗಳು ಒಂದು ನಿರ್ದಿಷ್ಟ ಜಾಗದಲ್ಲಿ ಕಸದ ತೊಟ್ಟಿ ಇಟ್ಟರೆ ಈ ಕಸವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು ಎಂಬ ಅಭಿಪ್ರಾಯ ಈ ಸಂದರ್ಭ ಕೇಳಿಬಂದಿತು.

ಪ್ರಸಿದ್ಧ ಪುಣ್ಯ ಕ್ಷೇತ್ರಗಳಾದ ತಲಕಾವೇರಿ, ಓಂಕಾರೇಶ್ವರ ದೇವಸ್ಥಾನ, ಭಾಗಮಂಡಲ, ಪ್ರವಾಸಿ ಸ್ಥಳಗಳಾದ ಮಡಿಕೇರಿ ತಾಲೂಕಿನ ಅಬ್ಬಿ ಜಲಪಾತ, ನಾಲ್ಕುನಾಡು ಅರಮನೆ, ರಾಜರ ಗದ್ದುಗೆ, ರಾಜಾಸೀಟು, ಕೋಟೆ, ಅಬ್ಬಿ ಜಲಪಾತ, ಚೇಲಾವರ ಜಲಪಾತ. ಕುಶಾಲನಗರ ತಾಲೂಕಿನ ದುಬಾರೆ ರಿವರ್ ರ್ಯಾಫ್ಟಿಂಗ್, ಕಾವೇರಿ ನಿಸರ್ಗಧಾಮ, ಹಾರಂಗಿ ಜಲಾಶಯ, ಹಾರಂಗಿ ಉದ್ಯಾನವನ ಆನೆ ಶಿಬಿರ ಮತ್ತು ಹಿನ್ನೀರಿನ ಸಾಹಸ ಕ್ರೀಡೆ ಸ್ಥಳಗಳು, ಚಿಕ್ಲಿ ಹೊಳೆ. ಸೋಮವಾರಪೇಟೆ ತಾಲೂಕಿನ ಹೊನ್ನಮ್ಮ ಕೆರೆ, ಮಕ್ಕಳ ಗುಡಿ ಬೆಟ್ಟ, ಕೋಟೆ ಬೆಟ್ಟ, ಸೂರ್ಲಬ್ಬಿ ಜಲಪಾತ ಮತ್ತು ಮಲ್ಲಳ್ಳಿ ಜಲಪಾತ, ಹಾಗೆಯೇ ಪೊನ್ನಂಪೇಟೆ ತಾಲೂಕಿನ ಬರಪೊಳೆ ರಿವರ್ ರ್ಯಾಫ್ಟಿಂಗ್ ಮತ್ತು ಇರ್ಪು ಜಲಪಾತಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಯಿತು.

ಹಾಗೆಯೇ ಮಡಿಕೇರಿ ನಗರದಲ್ಲಿ ವೀರಾಜಪೇಟೆ ರಸ್ತೆ, ಭಾಗಮಂಡಲ- ತಲಕಾವೇರಿ ರಸ್ತೆ (ಮಂಗಳೂರು ರಸ್ತೆ), ಮಡಿಕೇರಿ–ಸಿದ್ದಾಪುರ ರಸ್ತೆ ಮತ್ತು ಮಡಿಕೇರಿ–ಮೈಸೂರು ರಸ್ತೆಗಳಲ್ಲಿ ಎರಡು ಕಿ.ಮೀ.ವರೆಗೆ ಸ್ವಚ್ಛತೆ ಮಾಡಲಾಯಿತು.

ಕುಶಾಲನಗರದಲ್ಲಿ ಕೊಪ್ಪ ಗೇಟಿನಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ, ಸೋಮೇಶ್ವರ ದೇವಸ್ಥಾನದಿಂದ ಕೋಣಮಾರಮ್ಮ ದೇವಸ್ಥಾನ ವೃತ್ತದಮುಖಾಂತರಐಬಿರಸ್ತೆಗಾಗಿಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ, ತಾವರೆಕೆರೆಯಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ ಮತ್ತು ಅಯ್ಯಪ್ಪ ಸ್ವಾಮಿ ದೇವಸ್ಥಾನದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಸ್ವಚ್ಛತಾ ಅಭಿಯಾನ ನಡೆಯಿತು. ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ನಾಗೇಂದ್ರ ಪ್ರಸಾದ್ (ಕುಶಾಲನಗರ), ರಿವರ್ ರ್ಯಾಫ್ಟಿಂಗ್ ಅಸೋಸಿಯೇಷನ್ (ದುಬಾರೆ), ಸೋಮವಾರಪೇಟೆ ಹೋಂ ಸ್ಟೇ ಅಸೋಸಿಯೇಷನ್ ಅಧ್ಯಕ್ಷ ರೋಹಿತ್ (ಸೋಮವಾರಪೇಟೆ) ಇತರರು ಆಯಾಯ ತಾಲೂಕಿನಲ್ಲಿ ಪಾಲ್ಗೊಂಡಿದ್ದರು.

ಮಂಗಳಾದೇವಿ ದೇವಳದ ಜಾತ್ರೆಯಲ್ಲಿ ಮಕ್ಕಿಮನೆ ಕಲಾವೃಂದದ ನೃತ್ಯ ವೈಭವ



ಮಂಗಳೂರು: ಇತಿಹಾಸ ಪ್ರಸಿದ್ಧ ಮಂಗಳಾದೇವಿ ದೇವಸ್ಥಾನದಲ್ಲಿ ನಡೆಯುತ್ತಿರುವ ವಾರ್ಷಿಕ ಜಾತ್ರಾ ಮಹೋತ್ಸವ 2026ರ ಅಂಗವಾಗಿ ಇತ್ತೀಚೆಗೆ ಮಲ್ಲಿಕಾ ಕಲಾವೃಂದ ಮಂಗಳೂರು ಆಶ್ರಯದಲ್ಲಿ ಮಕ್ಕಿಮನೆ ಕಲಾವೃಂದ ಮಂಗಳೂರು ಬಳಗದ ಕಲಾವಿದರಿಂದ 'ನೃತ್ಯ ವೈಭವ' ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಕಲಾವಿದರ ಮನಮೋಹಕ ನೃತ್ಯ ಪ್ರದರ್ಶನಗಳು ಪ್ರೇಕ್ಷಕರ ಮನಗೆದ್ದು ಎಲ್ಲರಿಂದಲೂ ಭಾರೀ ಪ್ರಶಂಸೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ, ಇತ್ತೀಚೆಗೆ 'ಕನ್ನಡ ಉಳಿಸಿ ಬೆಳೆಸಿ' ಅಭಿಯಾನದ ಮಾಧ್ಯಮ ವಕ್ತಾರರಾಗಿ ಆಯ್ಕೆಯಾದ ಸುದೇಶ್ ಕುಮಾರ್ ಮಂಗಳೂರು ಅವರನ್ನು ಸನ್ಮಾನಿಸಲಾಯಿತು.

ಮಲ್ಲಿಕಾ ಕಲಾವೃಂದದ ಕಾರ್ಯಾಧ್ಯಕ್ಷ ಸುಧಾಕರ ರಾವ್ ಪೇಜಾವರ, ಭಾರತೀಯ ಜೈನ್ ಮಿಲನ್ ಮಂಗಳೂರು ಅಧ್ಯಕ್ಷ ರತ್ನಾಕರ ಜೈನ್, ಶ್ರೀ ರತ್ನ ಪ್ರತಿಷ್ಠಾನ ಅಧ್ಯಕ್ಷ ಮಾಧವ ಶಿವಮೊಗ್ಗ ಹಾಗೂ ವಿನಯಾನಂದ, ಪ್ರಿಯದರ್ಶಿನಿ ಜೈನ್, ರಿಮಾ ಜಗನ್ನಾಥ್, ಆಶಿಶ್ ಅಂಚನ್, ಲಾವಣ್ಯ ರವಿ ಶಾಂತಿ, ನೇಹಾ ಅಮಿನ್, ಸುದೇಶ್ ಜೈನ್ ಮಕ್ಕಿಮನೆ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಶ್ರೇಯಾ ದಾಸ್ ನಿರೂಪಿಸಿದರು. ಶ್ರೀಲತಾ ಜೈನ್, ಚಂದ್ರಾವತಿ, ಮನಸ್ವಿ, ತನುಸ್ವಿ, ಗೌರವ್ ಜೈನ್ ಹಾಗೂ ಇತರರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಕಾರಂತರ ಕಾದಂಬರಿಗಳು ಚಾರಿತ್ರಿಕ ದಾಖಲೆಗಳು : ಡಾ.ವಿದ್ಯಾಲತಾ



ಉಡುಪಿ: ಡಾ.ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕರಾವಳಿಯ ಬದುಕನ್ನು ಚಿತ್ರಿಸಿದ್ದಾರೆ. ಇಲ್ಲಿಯ ಬದುಕಿನ ಜಾತಿ ವ್ಯವಸ್ಥೆ ಲಿಂಗ ಅಸಮಾನತೆ ಮತ್ತು ಪ್ರಕೃತಿ ಮನುಷ್ಯನ ಸಂಬಂಧದ ಚಿತ್ರಣಗಳಿವೆ. ಈ ದೃಷ್ಟಿಯಿಂದ ಅವರ ಕಾದಂಬರಿಗಳು ಕರಾವಳಿ ಬದುಕಿನ ಚಾರಿತ್ರಿಕ ದಾಖಲೆಗಳಾಗಿವೆ. ಇದಕ್ಕೆ ಅವರ ಚೋಮನದುಡಿ ಕಾದಂಬರಿ ಒಳ್ಳೆಯ ಉದಾಹರಣೆ ಎಂದು ಸೈಂಟ್ ಸಿರಿಯನ್ ಕಾಲೇಜು ಬ್ರಹ್ಮಾವರ ಸಹ ಪ್ರಾಧ್ಯಪಕಿ ಡಾ.ವಿದ್ಯಾಲತಾ ಡಿ. ಹೇಳಿದರು.

ಕೋಟ ಪಡುಕೆರೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಡಾ.ಶಿವರಾಮ ಕಾರಂತ ಟ್ರಸ್ಟ್, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ಉಡುಪಿ ಜಿಲ್ಲಾ ಲೇಖಕಿಯರ ಮತ್ತು ವಾಚಕಿಯರ ಸಂಘದ ಸಂಯುಕ್ತ ಆಶ್ರಯದಲ್ಲಿ ನಡೆದ ಮಹಿಳಾ ದಿನಾಚರಣಾ ಸಪ್ತಾಹ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಉಪನ್ಯಾಸ ನೀಡಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಆಶಯ ಭಾಷಣ ಮಾಡಿದ ಡಾ.ಶಿವರಾಮ ಕಾರಂತ ಟ್ರಸ್ಟಿನ ಅಧ್ಯಕ್ಷ ಡಾ. ಗಣನಾಥ ಎಕ್ಕಾರು, ಸಂವಿಧಾನಿಕ ಮೌಲ್ಯವನ್ನು ಕಾರಂತರು ತಮ್ಮ ಕೃತಿಗಳಲ್ಲಿ ಹೇಳಿದ್ದಾರೆ. ಕಾರಂತರನ್ನು ಕೇಂದ್ರವಾಗಿಟ್ಟುಕೊಂಡು ಯುವ ಸಮೂಹಕ್ಕೆ ಸಂವಿಧಾನಿಕ ಮೌಲ್ಯಗಳನ್ನು ತಲುಪಿಸುವುದು ಟ್ರಸ್ಟಿನ ಮುಖ್ಯ ಉದ್ದೇಶವಾಗಿದೆ ಎಂದರು. ಕಾಲೇಜಿನ ಪ್ರಾಧ್ಯಪಕ ರಮೇಶ್ ಆಚಾರ್, ಉಡುಪಿಜಿಲ್ಲಾಲೇಖಕಿಯರಮತ್ತು ವಾಚಕಿಯರ ಸಂಘದ ಸಂಘಟನಾ ಕಾರ್ಯದರ್ಶಿ ಶಾಲಿನಿ ಯು ಬಿ ಉಪಸ್ಥಿತರಿದ್ದರು.

ಕಾಲೇಜಿನ ಉಪನ್ಯಾಸಕ ರಾಮಚಂದ್ರ ಭಟ್ ಸ್ವಾಗತಿಸಿ, ಕನ್ನಡ ವಿಭಾಗದ ಸಹ ಪ್ರಾಧ್ಯಪಕ ಡಾ. ಪ್ರಕಾಶ್ ನಿರೂಪಿಸಿ, ವಂದಿಸಿದರು.

ಸಂಸದರಿಂದ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಪುಸ್ತಕ ಬಿಡುಗಡೆ



ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು, ಮೈಸೂರು– ಕೊಡಗು ಜಿಲ್ಲೆ ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೊಡಗು ಜಿಲ್ಲೆಯಲ್ಲಿ 3125 ರೈತರಿಗೆ ವಿತರಿಸುವ ರೈತರ ಅಧ್ಯಯನ ಕೈಪಿಡಿ, ನೈಸರ್ಗಿಕ ಕೃಷಿ ರೈತರ ದಿನಚರಿ ಪುಸ್ತಕ, ನೈಸರ್ಗಿಕ ಕೃಷಿ ಕುರಿತು ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು ಮತ್ತು ಕೃಷಿ ಇಲಾಖೆಯಿಂದ ರೈತರಿಗೆ ದೊರೆಯುವ ಸೌಲಭ್ಯಗಳ ಪುಸ್ತಕಗಳನ್ನು ತಮ್ಮ ಮೈಸೂರು ಕಚೇರಿಯಲ್ಲಿ ಬಿಡುಗಡೆ ಮಾಡಿದರು.

ಈ ಯೋಜನೆಯು ಕೇಂದ್ರ ಸರ್ಕಾರದ ಶೇ. 60 ರಷ್ಟು ಹಾಗೂ ರಾಜ್ಯ ಸರ್ಕಾರದ ಶೇ.40 ರಷ್ಟು ಅನುದಾನದೊಂದಿಗೆ ಕೊಡಗು ಜಿಲ್ಲೆಯಲ್ಲಿ ಅನುಷ್ಠಾಗೊಳ್ಳುತ್ತಿದೆ. ಈ ಯೋಜನೆಯಡಿ 50 ಜನ ಗುಚ್ಛ ಸಂಪನ್ಮೂಲ ವ್ಯಕ್ತಿ (ಎರಡು ಗ್ರಾಮ ಪಂಚಾಯತ್‌ಗಳಿಗೆ ಒಬ್ಬರಂತೆ) 17 ಜನ ಸಂಪನ್ಮೂಲ ವ್ಯಕ್ತಿಗಳ ಸಹಯೋಗದೊಂದಿಗೆ ಕೊಡಗು ಜಿಲ್ಲೆಯಲ್ಲಿ ನೈಸರ್ಗಿಕ ಕೃಷಿ ಅನುಸರಿಸುವ ರೈತರಿಗೆ ಮಾರ್ಗದರ್ಶನ, ತರಬೇತಿ ನೀಡಲಾಗುತ್ತದೆ.

> ಕೇಂದ್ರ ಸರ್ಕಾರದ ಶೇ. 60 ರಷ್ಟು ಹಾಗೂ ರಾಜ್ಯ ಸರ್ಕಾರದ ಶೇ.40 ರಷ್ಟು ಅನುದಾನದೊಂದಿಗೆ ಕೊಡಗು ಜಿಲ್ಲೆಯಲ್ಲಿ ಅನುಷ್ಠಾಗೊಳ್ಳುತ್ತಿದೆ.

ಬಿಡುಗಡೆ ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲೆಯ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್ ಚಂದ್ರಶೇಖರ್ ಮತ್ತು ಉಪ ಕೃಷಿ ನಿರ್ದೇಶಕ ಡಿ.ಎಸ್.ಸೋಮಶೇಖರ್ ಹಾಜರಿದ್ದರು..

ಆಲಂಕಾರಿನಲ್ಲಿ 110 ಕೆ.ವಿ. ವಿದ್ಯುತ್ ಉಪ ಕೇಂದ್ರದ ಬೇಡಿಕೆ
ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯರಿಂದ ಇಂಧನ ಸಚಿವರಿಗೆ ಮನವಿ

ಕಡಬ: ಕಡಬ ತಾಲೂಕಿಗೆ ಗುಣಮಟ್ಟದ ವಿದ್ಯುತ್ ಪೂರೈಕೆಯ ಉದ್ದೇಶದಿಂದ ಆಲಂಕಾರಿನಲ್ಲಿ ಕೆಪಿಟಿಸಿಎಲ್ ವತಿಯಿಂದ ಸ್ಥಾಪಿಸಲು ಉದ್ದೇಶಿಸಿರುವ 110 ಕೆ.ವಿ. ಸಾಮರ್ಥ್ಯದ ಉಪ ಕೇಂದ್ರದ ಕಾಮಗಾರಿಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಇಂಧನ ಸಚಿವ ಕೆ.ಜೆ ಜಾರ್ಜ್ ಅವರಿಗೆ ಮನವಿ ಮಾಡಿದರು.

110 ಕೆ.ವಿ. ಸಾಮರ್ಥ್ಯದ ಉಪ ಕೇಂದ್ರ ಸ್ಥಾಪಿಸಲು ಆಲಂಕಾರಿನಲ್ಲಿ 3 ಎಕ್ರೆ ಜಾಗವನ್ನು 10 ವರ್ಷಗಳ ಹಿಂದೆಯೇ ಕಾದಿರಿಸಲಾಗಿದೆ. ಸದ್ರಿ ಯೋಜನೆಗೆ ಮಾಡಾವು 110 ಕೆ.ವಿ. ಉಪ ಕೇಂದ್ರದಿಂದ ಟ್ಯಾಪಿಂಗ್ ಮಾಡಿ ಸವಣೂರು ಮುಖಾಂತರ ಆಲಂಕಾರಿಗೆ ವಿದ್ಯುತ್ ಲೈನ್ ಹಾದು ಬರುವಂತೆ ಯೋಜನೆಯಲ್ಲಿ ಅಂದಾಜಿಸಲಾಗಿತ್ತು. ಸದ್ರಿ ವಿದ್ಯುತ್ ಲೈನ್ ಹಾದು ಬರುವುದಕ್ಕೆ ಆ ಭಾಗದ ರೈತರು ತೀವ್ರ ವಿರೋಧ ವ್ಯಕ್ತಪಡಿಸಿರುವುದರಿಂದ ಯೋಜನೆಯು ನೆನೆಗುದಿಗೆ ಬಿದ್ದಿದೆ.



ಕೆಪಿಟಿಸಿಎಲ್ ವತಿಯಿಂದ ಉಪ್ಪಿನಂಗಡಿ ಸಮೀಪ ಕರ್ವೇಲ್ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 110 ಕೆ.ವಿ. ಸಾಮರ್ಥ್ಯದ ಉಪ ಕೇಂದ್ರದ ಕಾಮಗಾರಿಗೆ ಪುತ್ತೂರು ಶಾಸಕ ಅಶೋಕ್ ಕುಮಾರ್‌ರೈ ಶಿಲಾನ್ಯಾಸ ನೆರವೇರಿಸಿ, ಆಲಂಕಾರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 110 ಕೆ.ವಿ. ಸಾಮರ್ಥ್ಯದ ಉಪಕೇಂದ್ರದ ಕಾಮಗಾರಿಯು ವಿದ್ಯುತ್ ಲೈನ್ ವಿರೋಧದಿಂದಾಗಿ ಬಾಕಿಯಾಗಿರುವುದನ್ನು ಮನಗಂಡು, ಸದ್ರಿ ಕರ್ವೇಲ್ ಉಪಕೇಂದ್ರದಿಂದ ಉಪ್ಪಿನಂಗಡಿ ಮುಖಾಂತರ ಕಡಬ ಹೋಗುವ ರಸ್ತೆ ಬದಿಯಲ್ಲಿ ವಿದ್ಯುತ್ ಲೈನ್ ಮಾಡಿಕೊಂಡು ಯೋಜನೆಯನ್ನು ಪೂರ್ಣಗೊಳಿಸಲು ಇಲಾಖೆಗೆ ಸಲಹೆಯನ್ನು ನೀಡಿದ್ದರು.

ಸದ್ರಿ ಯೋಜನೆಗೆ ಸಂಬಂಧಿಸಿ ಸುಳ್ಯ ಶಾಸಕರು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರನ್ನು ನಿಯೋಗದೊಂದಿಗೆ ವಿಧಾನಸೌಧದಲ್ಲಿ ಭೇಟಿ ಮಾಡಿ, ಕರ್ವೇಲ್‌ನಿಂದ ವಿದ್ಯುತ್ ಲೈನ್ ಟ್ಯಾಪಿಂಗ್ ಮಾಡಿ, ಉಪ್ಪಿನಂಗಡಿಯಿಂದ ಸುಬ್ರಹ್ಮಣ್ಯಕ್ಕೆ ಬರುವ ಹೆದ್ದಾರಿಯ ಬದಿಯಿಂದ ವಿದ್ಯುತ್ ಲೈನ್ ಹಾದು ಆಲಂಕಾರಿನಲ್ಲಿ ಸ್ಥಾಪಿಸಲು ಉದ್ದೇಶಿರುವ 110 ಕೆ.ವಿ. ಸಾಮರ್ಥ್ಯದ ಉಪ ಕೇಂದ್ರದ ಕಾಮಗಾರಿಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಕೆಪಿಟಿಸಿಎಲ್‌ಗೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದ್ದಾರೆ.

ಶಾಸಕರೊಂದಿಗೆ ಕಡಬ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಪೂವಪ್ಪ ನಾಯ್ಕ ಎಸ್. ಶಾಂತಿಗುರಿ, ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮಾಜಿ ಉಪಾಧ್ಯಕ್ಷ ಪ್ರದೀಪ್ ರೈ ಮನವಳಿಕೆ, ಆಲಂಕಾರು ಗ್ರಾ.ಪಂ. ಮಾಜಿ ಅಧ್ಯಕ್ಷ ಜಯಕರ ಪೂಜಾರಿ ಕಲ್ಲೇರಿ ಮತ್ತಿತರರು ಉಪಸ್ಥಿತರಿದ್ದರು.

ಶುಭವರ್ಣ ಯಕ್ಷ ಸಂಪದ ಮರಕಡ ಮಂಗಳೂರು ಇದರ ಆಶ್ರಯದಲ್ಲಿ
ಶುಭವರ್ಣ ಪುಸ್ತಕ ಮನೆ ಪುಟ್ಟ ನೆಲೆ ಆರಂಭ

ಮಂಗಳೂರು: ಶುಭವರ್ಣ ಯಕ್ಷ ಸಂಪದ ಮರಕಡ ಮಂಗಳೂರು ಇದರ ಆಶ್ರಯದಲ್ಲಿ ಶುಭವರ್ಣ ಪುಸ್ತಕ ಮನೆ ಓದುಗರಿಗೊಂದು ಪುಟ್ಟ ನೆಲೆ ಆರಂಭ ಸಂಭ್ರಮ ಕಾರ್ಯಕ್ರಮ ಮರಕಡ ಕುಮೇರು ಮನೆ ಶ್ರೀಮತಿ ಲಿಂಗಮ್ಮ ತನಿಯಪ್ಪ ಕೋಟ್ಯಾನ್ ಸ್ಮೃತಿ ಸೌಧದಲ್ಲಿ ಭಾನುವಾರ ನಡೆಯಿತು.

ಈ ವೇಳೆ ಮಾತನಾಡಿದ ಕುಳಾಯಿ ಯಕ್ಷ ಮಂಜೂಷ ನಿರ್ದೇಶಕಿ ವಿದ್ಯಾ ಕೋಳ್ಯೂರು, ಯಕ್ಷಗಾನ ಜೀವನದ ಪರಿಪೂರ್ಣತೆಯತ್ತ ಸಾಗಲು ಈ ವಾಚನಾಲಯ ಸ್ಥಾಪನೆ ಒಂದು ದೊಡ್ಡ ಹೆಜ್ಜೆ. ಎಲ್ಲಾ ಯಕ್ಷಗಾನ ಕೇಂದ್ರದಲ್ಲೂ ಇಂತಹ ಗ್ರಂಥಾಲಯವಿದ್ದರೆ ಯಕ್ಷಗಾನ ವಿದ್ಯಾರ್ಥಿಗೆ ಇನ್ನೂ ಬೆಳೆಯುವುದಕ್ಕೆ ಸಾಧ್ಯವಿದೆ ಎಂದರು.

ಪ್ರಮುಖರಾದ ರವಿಚಂದ್ರ ಡಿ.ಶೆಟ್ಟಿ ಐಕಳಬಾವ, ಹಿರಿಯ ಯಕ್ಷಗುರು ಶಿವರಾಮ ಪಣಂಬೂರು, ಕೊಟ್ಟಾರದ ಎ.ಜೆ.ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಪ್ರಾಂಶುಪಾಲ ಡಾ.ವಿಜಯ ಕುಮಾರ್, ಉಪನ್ಯಾಸಕ ಹಾಗೂ ಕಟೀಲು ಮೇಳದ ಕಲಾವಿದ ಡಾ.ಶ್ರುತಕೀರ್ತಿರಾಜ ಉಜಿರೆ, ಛಾಂದಸ, ಕಟೀಲು ಮೇಳದ ಭಾಗವತ ಅಂಡಾಲ ದೇವಿಪ್ರಸಾದ ಶೆಟ್ಟಿ, ಭಾಗವತ ದಯಾನಂದ ಕೋಡಿಕಲ್, ಯಕ್ಷ ಸುಧಾಂಶು ಕುಲಶೇಖರ ನಿರ್ದೇಶಕ ಸುಧಾಕರ ಸಾಲ್ಯಾನ್ ಉಪಸ್ಥಿತರಿದ್ದರು. ಸಂಸ್ಥೆಯ ನಿರ್ದೇಶಕ ಲಕ್ಷ್ಮಣ ಕುಮಾರ್ ಮರಕಡ ಸ್ವಾಗತಿಸಿ, ವಂದಿಸಿದರು.



ಪುತ್ತೂರು ಮಾರುಕಟ್ಟೆ ಧಾರಣೆ

16-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	260 - 460
ಚೋಲ್ ಅಡಿಕೆ	:	505 - 530
ಡಬಲ್ ಚೋಲ್	:	505 - 530
ಹೊಸ ಪಟೋರ	:	340 - 390
ಹಳೆ ಪಟೋರ	:	380 - 410
ಹೊಸ ಉಳ್ಳಿ	:	115 - 290
ಹಳೆ ಉಳ್ಳಿ	:	105 - 290
ಹೊಸ ಕೋಕಾ	:	325 - 345
ಹಳೆ ಕೋಕಾ	:	330 - 350
ಹೊಸ ಕರಿಗೋಟು	:	230 - 260
ಹಳೆ ಕರಿಗೋಟು	:	230 - 260
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು : 465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1 -	211.50
ಆರ್‌ಎಸ್‌ಎಸ್ 2 -	197.00
ಸ್ಕ್ರಾಪ್ 1 -	130.00
ಸ್ಕ್ರಾಪ್ 2 -	128.00

PUBLIC NOTICE

This is to notify the General Public that, my client Mr. MOHAMMAD SHAREEF O. S/o Abdula, aged about 35 years, residing at # 1549/1, Sharmi Shanavas Irani House, Shasthri Nagar West, Trivandrum Taluk, Arannoor Ward 45, Thiruvananthpuram, Karamana, KeralalState-695002, is absolute owner of Schedule Property situated at Netaneghemudnoor Village of Puttur Taluk and within the Registration Sub-District of Puttur Taluk, D.K. he represented to me that, the originals of the mother document (Title Deeds) pertaining to the aforesaid property i.e, Sale Deed, dated 20-08-2022 Book NoI, Registered as Document No. PUT-1-03246-2022-23, CD No. PUTD 1509 is executed by Mr. Abdul Raheeman in favour of Smt Suharabi before the file of the Sub Registrar of Puttur Taluk has been lost and not traceable. Any person/s or financial institution/s having any claim over the said property may lodge their objection in writing with necessary documentary evidence with the undersigned within 7 days from this date. No such claim will be entertained thereafter.

SCHEDULE
DESCRIPTION OF THE PROPERTY

Non-Agricultural immovable property situated at Netanighemudnoor Grama Panchayath of Puttur Taluk and within the limits of registration Sub-District of Puttur, D.K.District and comprised in:-

Sy. No.	Kissam	Extent A-C	Property No.
281/23	Converted	0.12.00 (485.622771 sq.mtr)	2/293/4

(Previous Survey No.281/7)

Property No.151100402600121406 with all rights of way, right of water and other mamool rights appurtenant thereto.

BOUNDARIES:
North- S.No.280, South - S.No. 281/7, East-S.No. 281/7, West-S.No 281/24

Sd/- ZITA PRIYA MORAS
B.A. LL.B.
OFF.2nd Floor, Medifair Complex Karangalpady, Mangalore-575003.
Tel. Ph. No 9844828957
Mangalore
16.03.2026

ಕರ್ನಾಟಕ ಗೃಹ ಮಂಡಳಿ

Karnataka Housing Board

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/AEF/STP/Suryanagara 4th Ph/ KHB/2025-26/ SE0355 Dated: 12.03.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ/ಕಸಬಾ ಹೋಬಳಿಯ ಸೂರ್ಯನಗರ 4ನೇ ಹಂತದ ಕರ್ನಾಟಕ ಗೃಹ ಮಂಡಳಿ ಬಡಾವಣೆಯ ಬ್ಲಾಕ್-1 ರಲ್ಲಿ 20 MLD ಸಾಮರ್ಥ್ಯದ STP ಮತ್ತು ಬ್ಲಾಕ್ 12 ರಲ್ಲಿ 5 MLD ಸಾಮರ್ಥ್ಯದ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಟೆಂಡರ್ ಅನ್ನು ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 25.03.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/6284/ಆಕಾರ್/2025-26

ಕರ್ನಾಟಕ ಸರ್ಕಾರ
ಕಾರ್ಯದರ್ಶಿ, ಕರಾವಳಿ ಅಭಿವೃದ್ಧಿ ಮಂಡಳಿ

ನಂ.06, ಮಂಗಳೂರು ಮಹಾನಗರ ಪಾಲಿಕೆ,
ವಾಣೀಜ್ಯ ಸಂಕೀರ್ಣ, 2ನೇ ಮಹಡಿ, ಲಾಲ್‌ಬಾಗ್, ಮಂಗಳೂರು-575003
ದೂರವಾಣಿ : 0824-2457389 E-mail ID: karavali.123@gmail.com

ಕ್ರ.ಸಂ: ಕಾ/ಕ.ಅ.ಪ್ರಾ/ಮಂ/2025-26/696 ದಿನಾಂಕ: 13.03.2026

ಇ-ಟೆಂಡರ್ ಪ್ರಕಟಣೆ

ಕರಾವಳಿ ಅಭಿವೃದ್ಧಿ ಮಂಡಳಿ, ಮಂಗಳೂರು ಇದರ ವತಿಯಿಂದ ಹೊರ ಗುತ್ತಿಗೆ ಆಧಾರದ ಮೇಲೆ ಕಛೇರಿ ಸಿಬ್ಬಂದಿಗಳು, ಮೂರು ವಲಯಾಧಿಕಾರಿ ಸಿಬ್ಬಂದಿಗಳ ಸೇವೆಯನ್ನು ಒಂದು ವರ್ಷದ ಗುತ್ತಿಗೆ ಅವಧಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಪಡೆಯಲು ಎರಡು ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಹೊರಗುತ್ತಿಗೆ ಸೇವೆ	ಗುತ್ತಿಗೆ ಅವಧಿ	ಗುತ್ತಿಗೆ ಮೊತ್ತ (ರೂ.ಗಳಲ್ಲಿ)	ಇ ಎಂ ಡಿ ಮೊತ್ತ (ರೂ.ಗಳಲ್ಲಿ)
1	ಕಛೇರಿ ಸಿಬ್ಬಂದಿ ಮತ್ತು ವಲಯಾಧಿಕಾರಿಗಳು - ಒಟ್ಟು 08 ಸಂಖ್ಯೆಯ ಸಿಬ್ಬಂದಿಗಳ ಸೇವೆ	ಒಂದು ವರ್ಷ	27,62,000/-	55,250/-

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 31.03.2026 ಅಪರಾಹ್ನ 5:00 ಗಂಟೆಗೆ, (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.04.2026 ಅಪರಾಹ್ನ 05:10 ಗಂಟೆಗೆ (3) ಹಣಕಾಸು ಬಿಡ್ ತೆರೆಯುವ ದಿನಾಂಕ: 02.04.2026 ಪೂರ್ವಾಹ್ನ 11:00 ಗಂಟೆಗೆ. ಬಿಡ್ಡುದಾರರು ಟೆಂಡರಿನ ವಿವರಗಳು ಹಾಗೂ ಟೆಂಡರ್ ಸಲ್ಲಿಸುವ ದಿನಾಂಕದ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ ಜಾಲತಾಣ https://kppp.karnataka.gov.in ನಲ್ಲಿ ಮಾಹಿತಿ -ಪಡೆದು ತಮ್ಮ ಬಿಡ್‌ಗಳನ್ನು ಅಪಲೋಡ್ ಮಾಡಬಹುದು.
(ಕೆ.ಪಿ.ಪಿ ಪೋರ್ಟಲ್ ಟೆಂಡರ್ ಉಲ್ಲೇಖ: **PPMSD/2025-26/SE0017/CALL-2)**
ಈ ಗುತ್ತಿಗೆ ಕುರಿತು ಯಾವುದೇ ಸೇರ್ಪಡೆ/ತಿದ್ದುಪಡಿಗಳಿದ್ದಲ್ಲಿ (**Corrigendum/ Addendum**) ಅವುಗಳನ್ನು ಕೆ.ಪಿ.ಪಿ ಪೋರ್ಟಲ್ ಜಾಲತಾಣದಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ ದೂರವಾಣಿ ಸಂಖ್ಯೆ: 0824-42457389 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯದರ್ಶಿ
ಕರಾವಳಿ ಅಭಿವೃದ್ಧಿ ಮಂಡಳಿ, ಮಂಗಳೂರು

DIPR/DK/KSMCA/1759/2025-26 dt.16.03.26

ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ನಂ.ಎಫ್.ಬಿ.8, 1ನೇ ಮಹಡಿ, ಜಿಲ್ಲಾಡಳಿತ ಭವನ,
ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ: 08156-277113, Email:dcpocbpur@gmail.com

ಸಂಖ್ಯೆ: ಜಿಮರಘ/ಚಿಪುರ/ಬಾ.ವಾ.ದ/2025-26
ದಿನಾಂಕ: 10.03.2026

ಬಾಹ್ಯ ಮೂಲದಿಂದ ವಾಹನ ಸೇವೆ ಪಡೆಯಲು ದರಪಟ್ಟಿ ಆಹ್ವಾನಿಸಿರುವ ಬಗ್ಗೆ

2026-27ನೇ ಸಾಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿಕ್ಕಬಳ್ಳಾಪುರ ಕಛೇರಿಗೆ ಪಾಲನೆ, ಪೋಷಣೆ, ರಕ್ಷಣೆ ಅಗತ್ಯವಿರುವ ಅಥವಾ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳನ್ನು ಸಂರಕ್ಷಿಸುವ ಸಲುವಾಗಿ, ಮಕ್ಕಳಾ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಲು ಜಿಲ್ಲಾದ್ಯಂತ ಮಿಷನ್ ವಾತ್ಸಲ್ಯ ಯೋಜನೆಯಡಿ ಬರುವ ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಹಾಗೂ ಕಛೇರಿಯ ಉಪಯೋಗಕ್ಕಾಗಿ ಬಾಹ್ಯಮೂಲದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ ವಾಹನ ಸೇವೆ ಪಡೆಯಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ.

(1) ದರಪಟ್ಟಿ ಪ್ರಾರಂಭಿಸುವ ದಿನಾಂಕ: 11.03.2026 (2) ದರಪಟ್ಟಿ ಸಲ್ಲಿಸಲು ಕೊನೆಯ ದಿನಾಂಕ: 10.04.2026 ಸಂಜೆ 05:30 ಕ್ಕೆ (3) ತಾಂತ್ರಿಕ ದರಪಟ್ಟಿ ತೆರೆಯುವ ದಿನಾಂಕ: 13.04.2026 ಬೆಳಗ್ಗೆ 11:00 ಕ್ಕೆ (4) ಆರ್ಥಿಕ ದರಪಟ್ಟಿ ತೆರೆಯುವ ದಿನಾಂಕ: 16.04.2026 ಬೆಳಗ್ಗೆ 11:00 ಕ್ಕೆ. (5) ಅಂದಾಜು ಮೊತ್ತ: ರೂ. 4.99 ಲಕ್ಷ. (6) ಇ.ಎಂ.ಡಿ ಮೊತ್ತ: ರೂ. 12,500/- ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿಕ್ಕಬಳ್ಳಾಪುರ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 08156-277113.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಚಿಕ್ಕಬಳ್ಳಾಪುರ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:484/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ

eepredkpl@gmail.com,

ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2025-26/3173 ದಿನಾಂಕ: 12/03/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW- 1, 2, 3 ಮತ್ತು 4ರ ಪ್ರಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ಪಿ.ಡಬ್ಲೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "kppp.karnataka.gov.in ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ, ಮಾನ್ಯ ಮುಖ್ಯ ಮಂತ್ರಿಗಳ ಮೂಲಕಸೌಕರ್ಯ ಅಭಿವೃದ್ಧಿ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು "kppp.karnataka.gov.in ಪೋರ್ಟಲ್" ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ ಆಹ್ವಾನಿಸಲಾಗಿದೆ.

1) ಕುಕನೂರು ತಾಲೂಕಿನ ಮಂಡಲಗೇರಿ -ಮಾಳೇಕೊಪ್ಪ ರಸ್ತೆ ನಿರ್ಮಾಣ.CALL-3 INDENT NO:21285 ಟೆಂಡರಗಿಟ್ಟ ಮೊತ್ತ ರೂ79.57 ಲಕ್ಷ ,ಇಎಂಡಿ159500.00 6ತಿಂಗಳು
2) ಕುಕನೂರು ತಾಲೂಕಿನ ಮನ್ನಾಪುರ ಗ್ರಾಮದಿಂದ ಹಳ್ಳಿಕೇರಿವರೆಗೆ ರಸ್ತೆ ನಿರ್ಮಾಣ.CALL-2 INDENT NO:21022 ಟೆಂಡರಗಿಟ್ಟ ಮೊತ್ತ ರೂ 127.35 ಲಕ್ಷ ,ಇಎಂಡಿ 191000.00 6ತಿಂಗಳು

ಸಾಮಾನ್ಯ ಸೂಚನೆಗಳು:- 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ kppp.karnataka.gov.in portal ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ ವಿವರ: ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **17.03.2026** ಸಮಯ 10.00 ಗಂಟೆ ನಂತರ ದಿಂದ **26.03.2026** ಸಮಯ 16.00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **17.03.2026** ಸಮಯ 11.00 ಗಂಟೆ ನಂತರ ದಿಂದ: **26.03.2026** ಸಮಯ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ: **27.03.2026** ಕಚೇರಿ ಸಮಯದಲ್ಲಿ ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ ಕೊಪ್ಪಳ.

ಡಿಐಪಿಆರ್/ಕೊಪ್ಪಳ/758/ಕೆಎಸ್‌ಎಂಸಿಎ/2025-26

CHANGE OF NAME

I, **ROSHAN KUMAR** S/o Manmohan Bangera, aged 47 years, R/at # 8-17-150/17, Matha Kripa, Marappa Colony, Near Bockapatna Junior College, Bockapatna PO., Kodialbail Mangalore-575003 have changed my name from **ROSHAN KUMAR** to **ROSHAN KUMAR BANGERA** for all future purposes vide affidavit sworn and signed before the Notary Gangadhara Ullal at Mangalore dated 16-03-2026.

ಸಹಕಾರ ಸಂಘಗಳ ಉಪ ನಿಬಂಧಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯ ಜನತಾ ಬಜಾರ್ ಕಟ್ಟಡ, 1ನೇ ಮಹಡಿ, ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು.
ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರ ನ್ಯಾಯಾಲಯದಿಂದ
ದಾವಾ ಸಂಖ್ಯೆ: ಜೆಆರ್‌ಎಂ/ಡಿಡಿಎಸ್/380/2025-26
ವಿಚಾರಣಾ ಸ್ಥಳ : ಸಹಕಾರ ಸಂಘಗಳ ಉಪನಿಬಂಧಕರ ನ್ಯಾಯಾಲಯ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ವಾದಿ: ಮುಖ್ಯಕಾರ್ಯನಿರ್ವಹಣಾಧಿಕಾರಿ, ದಕ್ಷಿಣ ಕನ್ನಡ ಕೃಷಿ ಅಭಿವೃದ್ಧಿ ಸಹಕಾರಿ ಸಂಘ ನಿ. ಭಾರತ್ ಬಿಲ್ಡಿಂಗ್, ನಂ. 105, 1ನೇ ಮಹಡಿ, ಪಿ.ಎಮ್. ರಾವ್ ರಸ್ತೆ, ಹಂಪನಕಟ್ಟ, ಮಂಗಳೂರು ಶಾಖೆ - ಫರಂಗಿಪೇಟೆ, ಬಂಟ್ವಾಳ ತಾಲೂಕು.

ವಿರುದ್ಧ

ಪ್ರತಿವಾದಿಗಳು:
1) **M.No.126 ಶ್ರೀ ರಾಜು ಸಿ.**
ಶ್ರೀ ಚೆನ್ನಪ್ಪ ಎಸ್.ರವರ ಮಗ, ವಾಸ ನಂಬ್ರ #2-210(10) ವಿಮಲೇಶ್ ನಿಲಯ, ಕಿಲ್ಪಾಡಿ, ಕೆಂಚನಕೆರೆ ಮೂಲ್ಕಿ ಮಂಗಳೂರು ತಾಲೂಕು - 574 154
2) **M.No.155 ಶ್ರೀ ಪ್ರಭು ರಾಜ್**
ಶ್ರೀ ರಾಜು ಸಿ.ರವರ ಮಗ #2-210(10) ವಿಮಲೇಶ್ ನಿಲಯ, ಕಿಲ್ಪಾಡಿ, ಕೆಂಚನಕೆರೆ ಮೂಲ್ಕಿ ಮಂಗಳೂರು ತಾಲೂಕು - 574 154
3) **M.No.515 ಶ್ರೀ ಶಶಿಧರ ಕೆ.**
ದಿವಂಗತ ಸಂಕಪ್ಪ ಗಟ್ಟಿಯವರ ಮಗ "ಅಶ್ವಿನಿ ನಿಲಯ" ರಾಜರಾಜೇಶ್ವರಿ ಭಜನಾ ಮಂಡಳಿಯ ಬಳಿ ಕುತ್ತಾರಪದವು, ಮುನ್ನೂರು ಅಂಚೆ, ಉಳ್ಳಾಲ ತಾಲೂಕು - 575 017.

ಸಮನ್ಸ್

ವಾದಿಯು ಸಾಲದ ವಸೂಲಾತಿಗಾಗಿ ಪ್ರತಿವಾದಿಗಳ ವಿರುದ್ಧ ಮೇಲಿನ ದಾವೆಯನ್ನು ದಾಖಲಿಸಿರುತ್ತಾರೆ. ಪ್ರಕರಣದ ವಿಚಾರಣೆಯು ನಡೆಯುತ್ತಿದ್ದು, ಪ್ರತಿವಾದಿ 1, 2, 3 ರವರಿಗೆ ನೋಟೀಸು ಜಾರಿಯಾಗದ ಕಾರಣ ಹಾಗೂ ವಿಚಾರಣೆಗೆ ಗೈರು ಹಾಜರಾದ ಕಾರಣ ಪತ್ರಿಕಾ ಪ್ರಕಟಣೆ ಜಾಹಿರಾತು ಮೂಲಕ ನೋಟೀಸು ನೀಡಲು ಆದೇಶಿಸಲಾಗಿದೆ. **ದಿನಾಂಕ:10.04.2026 ರ ಪೂರ್ವಾಹ್ನ 11.00 ಗಂಟೆಗೆ** ಸದರಿ ದಾವೆಯ ವಿಚಾರಣೆಗೆ ಹಾಜರಾಗುವಂತೆ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಈ ನೋಟೀಸನ್ನು ಸ್ವಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ದಿನಾಂಕ:13.03.2026 ರಂದು ನೀಡಲಾಗಿದೆ.

ಸಹಿ/- ಸಹಕಾರ ಸಂಘಗಳ ಉಪ ನಿಬಂಧಕರು,
ದ.ಕ. ಜಿಲ್ಲೆ, ಮಂಗಳೂರು

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ-570018
ಸಹಾಯವಾಣಿ ಸಂಖ್ಯೆ : 0821-2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್.18/2025-26 ದಿನಾಂಕ: 13.03.2026

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವಾಪ್ತಿಯಲ್ಲಿ 2025-26ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ-04 ನಿಯಮದಂತೆ ಕೆ.ಪಿ.ಪಿ. ಪೋರ್ಟಲ್ ಮೂಲಕ ಕಾಮಗಾರಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಸಿವಿಲ್ ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in ಇ-ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಅರ್ಹ ಗುತ್ತಿಗೆದಾರರಿಂದ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 30.03.2026 ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:01.04.2026 ಬೆಳಗ್ಗೆ 11:00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಪೂರ್ಣಗೊಂಡ ಕಾಮಗಾರಿಗೆ ನಗರಸಭೆ ನಿಧಿಯ ಅನುದಾನಕ್ಕೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.

ಕ್ರ. ಸಂ.	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
01	DMA/2025-26/RD/WORK_ INDENT56215	200.00	2,54,000/-

ಸಹಿ/- ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿಸಾಯಿ/1841/2025-26

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ॥ ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು-560029.
ಫೋನ್: 26096832/26096910 ಫ್ಯಾಕ್ಸ್: 080-25536105 ಇಮೇಲ್: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್-887/2025-26 ದಿನಾಂಕ: 16.03.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸಾಮಗ್ರಿಯ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Item Description	Qty (No/kg)	EMD (Rs.)
1	Supply of EVP Flex Boards to KMF Central Office and KMF Milk Unions.	6259 No	42,000/-
2	Supply of Formaldehyde to KMF Cattle Feed Plant Hassan for a Period of Three months.	25000 Kg	18,000/-

ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು **ದಿನಾಂಕ: 30.03.2026** ರಂದು **05.00** ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ವಸೂಲಾತಿ ಅಧಿಕಾರಿಗಳು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯ
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ (ನಿ.441)

'ಸೌಹಾರ್ದ ಸಹಕಾರಿ ಸೌಧ'

68,1 ನೇ ಮಹಡಿ,17 ಮತ್ತು 18 ನೇ ಅಡ್ಡ ರಸ್ತೆ ಮಧ್ಯೆ- ಮಾರ್ಗೊಸಾ ರಸ್ತೆ ಮಲೇಶ್ವರಂ ಬೆಂಗಳೂರು - 560055

ದಾವಾ ಸಂಖ್ಯೆ : DRD- ಕ.ರಾ.ಸೌ.ಸಂ.ಸ.ನಿ/1105/2023-24

ಸ್ಥಿರಾಸ್ತಿ ಬಹಿರಂಗ ಹರಾಜು ಪ್ರಕಟಣೆ

ಇಪಿ ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/140/ 2025-26

ವಾದಿ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪ್ರಣವ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಒಂದನೇ ಮಹಡಿ ಜಯರಾಮ್ ಪ್ರಸಾದ್ ಬಿಲ್ಡಿಂಗ್, ಏರ್‌ಪೋರ್ಟ್ ರೋಡ್, ವೋಕ್ಸ್ ವ್ಯಾಗನ್ ಶೋರೂಂ ಎದುರು, ಯೆಯ್ಯಾಡಿ, ಮಂಗಳೂರು - 575008

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ಕಾಣಿಸಿದ ಸಾಲಗಾರರಿಂದ ಪ್ರಣವ ಸೌಹಾರ್ದ ಸಹಕಾರಿ ಸಂಘ ನಿಯಮಿತ ಯೆಯ್ಯಾಡಿ ಶಾಖೆ ಇವರಿಗೆ ಬರಲಿರುವ ಮೊಬಲಗಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರ ನ್ಯಾಯಾಲಯದಲ್ಲಿ ಅಮಲ್ದಾರಿ ಅರ್ಜಿಯ ಪ್ರಕಾರ ಸ್ಥಿರಾಸ್ತಿಗಳನ್ನು ಸಹಕಾರಿ ಕಾಯ್ದೆಯನ್ವಯ ದಿನಾಂಕ 26/03/2026 ನೇ ಗುರುವಾರ ಬೆಳಿಗ್ಗೆ 11 ಕ್ಕೆ ಸಂಘದ ಶಾಖಾ ಕಚೇರಿ, # 3-8/6 1ನೇ ಮಹಡಿ, ಪುನೀತ್ ಕಾಂಪ್ಲೆಕ್ಸ್, ಶಿಬ್ರಿಕೆರೆ ಪೋಸ್ಟ್ ಎಡಪದವು ಮಂಗಳೂರು ಇಲ್ಲಿ ಈ ಕೆಳಗೆ ನಮೂದಿಸಿದ ಸ್ಥಿರಾಸ್ತಿಯನ್ನು ಬಹಿರಂಗವಾಗಿ ಹರಾಜು ಮಾಡಲಾಗುವುದು. ಆಸಕ್ತಿಯುಳ್ಳವರು ಈ ಏಲಂನಲ್ಲಿ ಭಾಗವಹಿಸಬಹುದು. ಅತ್ಯಧಿಕ ಬಿಡ್ಡುದಾರನಿಗೆ ಮಾರಾಟದ ಸಂಬಂಧದಲ್ಲಿ ವಾಡಿಕೆಯಲ್ಲಿರುವ ಷರತ್ತುಗೊಳಪಟ್ಟು ಸೊತ್ತುಗಳನ್ನು ಮಾರಾಟ ಮಾಡಲಾಗುವುದು.

ತಾಲೂಕು ಗ್ರಾಮ	ಸುಸ್ತಿದಾರನ ಹೆಸರು		ಸುಸ್ತಿದಾರನಿಗೆ ಸೇರಿದ ಮಾರಾಟ ಮಾಡಬೇಕಾದ ಸ್ಥಿರ ಸ್ವತ್ತುಗಳ ವಿವರ, ಭೂಮಿಯ ಸ.ನಂ.ಅಂದಾಜು ವಿಸ್ತೀರ್ಣ	ದಾವೆಯ ಮೊಬಲಗು
ತೆಂಕ ಎಡಪದವು ಗ್ರಾಮ ಗುರುಪುರ ಹೋಬಳಿ ಮಂಗಳೂರು ತಾಲೂಕು	ಸಾಲಗಾರರು ಗುರುರಾಜ್ ಎನ್.ಕೆ. ಬಿನ್. ನಾಗಪ್ಪ ಫ್ಲಾಟ್ ಸಂಖ್ಯೆ : 302, ಇನ್‌ಲ್ಯಾಂಡ್ ಮೆಜೆಸ್ಟಿಕ್, ವೇರ್ ಹೌಸ್ ರೋಡ್, ಮಣ್ಣಗುಡ್ಡ ಮಂಗಳೂರು - 575003 ಸಾಲಗಾರರು ಶ್ರೀಮತಿ ನಮಿತ ಗುರುರಾಜ್ ಕೋಂ ಗುರುರಾಜ್ ಎನ್.ಕೆ. ಫ್ಲಾಟ್ ಸಂಖ್ಯೆ : 302 ಇನ್ ಲ್ಯಾಂಡ್ ಮೆಜೆಸ್ಟಿಕ್, ವೇರ್ ಹೌಸ್ ರೋಡ್, ಮಣ್ಣಗುಡ್ಡ ಮಂಗಳೂರು - 575003 ಜಾಮೀನುದಾರರು ಶ್ರೀ ಸೂರಜ್ ಎನ್.ಆಳ್ವ ಬಿನ್ ಕೆ.ಎನ್. ಆಳ್ವ ಡೋರ್ ನಂ: 15-1-3 ಕೊಲಾಸೋ ನರ್ಸಿಂಗ್ ಹೋಮ್ ಎದುರುಗಡೆ, ಬೆಂದೂರು, ಕಂಕನಾಡಿ ಮಂಗಳೂರು - 575002 ಜಾಮೀನುದಾರರು ಶ್ರೀ ಸುಪ್ರೀತ್ ಆಳ್ವ ಬಿನ್. ಕೆ.ಎನ್. ಆಳ್ವ ಡೋರ್ ನಂ. 15-1-3, ಕೊಲಾಸೋ ನರ್ಸಿಂಗ್‌ಹೋಮ್ ಎದುರುಗಡೆ ಬೆಂದೂರು, ಕಂಕನಾಡಿ, ಮಂಗಳೂರು- 575002 ಜಾಮೀನುದಾರರು ಶ್ರೀ ನವೀನ್ ಶೆಟ್ಟಿ ಬಿನ್ ಎಚ್. ವಿಶ್ವನಾಥ ಶೆಟ್ಟಿ ಡೋರ್ ನಂ 22-2-336/1 ಸುಧೀರ್ ನಿವಾಸ್, ಅರೆಕೆರೆ, ಮುಳಿಹಿತ್ಲು ಬೋಳಾರ್, ಮಂಗಳೂರು-575001 ಜಾಮೀನುದಾರರು ಶ್ರೀ ದೇವರಾಜ ಕೋಟ್ಯಾಲ ಬಿನ್. ನಾಗಪ ಡೋರ್ ನಂ. 10-159/2(2) ಪದವು, 4ನೇ ಕ್ರಾಸ್, ಪ್ರಶಾಂತಿ ರೋಡ್, ಗಣಮಜಲು, ಶಕ್ತಿನಗರ, ಮಂಗಳೂರು - 575016	   	**ಷೆಡ್ಯೂಲ್ ಸ್ವತ್ತಿನ ವಿವರ** Schedule A : Non Agricultural Immovable Property in Thenka Yedapadavu village, Gurupura hobli, Mangaluru Taluk with in Moodabidri Sub registration District of DK Dist & Comprised in : Item No. 1, S.No. 171, S.D.No.: 5 Part, Kissam : Non Agricultural, Extent A-C : 0-02.65, as per Plan : Site No.1 Item No. 2, S.No. : 171, S.D.No:4 Part, Kissam: Non Agricultaral, Extent A-C : 0-01.95, as per plan : Site no.1 Total : 0-04.60 with all Mamool easementary rights of way, water etc, appurtances thereto. form 9 & 11A details : District D.K., Block : Mangaluru, Grama panchayath : Yedapadavu, Village : Thenka yedapadavu, Property ID No. 151100304900220939, Survey No. 171/5, area of land : 107.50 square meters, Property ID No :151100304900220957, SY No.171/4 - area of land : 78.89 square meters, Boundaries of the item No.1 of the above Property : North : portion of the SY. No. 171/4, South : Remaining portion of the same SY No, East : Portion of the SY NO.171/8b2, west : Road Boundaries of the item No 2 of the above Property North : Remaining portion of the same S.Y.No, South : Portion of the SY.No. 171/15 East : Portion of the SY.No. 171/8b2, West : Road Schedule 'B' SCHEDULE (Description of the Property) Non-agricultural immovable property in Tenkayedapadavu Village, Gurupura Hobli, Mangalore Taluk, within Moodbidri Sub-Registration District of D. K. District and comprised in: Item No:1, S. No.: 171, S. D. No.: 5 part, Kissam: Non-agricultural, Extent A-C: 0-02.79, As per plan: Site No.9 Item No :2, S. No.: 171, S. D. No.: 4 part, Kissam: Non-agricultural, Extent A-C: 0-02.42, As per plan: Site No.9 Total: 0-05.21 With all mamool and easementary rights of way, water etc., appurtenant thereto. Form 9 and 11A details: District: D K, Block: Mangalore, Grama Panchayath: Yedapadavu, Village: Tenka Yedapadavu, Property ID No: 151100304900220947, Survey No. 171/5, Area of land : 112.92 Sq. meters., Property ID No : 151100304900220952, SY No:171/4 - area of land : 98.03 Sq. meters, Boundaries of the item no.1 of the above property:- North : Portion of the SY No.171/4 South : Remaining portion of the same Sy.No. East : Road. West : Road. Boundaries of the item no.2 of the above property:- North : Remaining portion of the same Sy. No. South : Portion of the SY No.171/4 East : Road, West : Road. Schedule 'C' SCHEDULE (Description of the Property) Non-agricultural immovable property in TENKA YEDAPADAVU Village, Gurupura Hobli, Mangalore Taluk, within Moodbidri Sub-Registration District of D. K. District and comprised in Item No:1, SY No.: 171, 5. D. No.: 4 part. Kissam: Non-agricultural, Extent A-C: 0-04.10, As per plan: Site No.13, With all mamool and easementary rights of way, water rights etc., appurtenant thereto Form 9 and 11A details: District: DK, Block : Mangalore, Grama Panchayath: Yedapadavu, Village: Tenka Yedapadavu, Property ID No: 151100304900220956, Survey No. 171/4, Area of land : 165.71 Sq. meters. Boundaries of the item no.1 of the above property: North: Remaining portion of the same Sy.No., South : Remaining portion of the same SY No. East : Portion of the SY No. 171/8b2., West : Road	ರೂ. 25,89,107/- ಮತ್ತು ಇತರ ಖರ್ಚು

ವಿ.ಸೂ.: ಏಲಂನ್ನು ಅತ್ಯಧಿಕ ಬಿಡ್ಡುದಾರರಿಗೆ ಮಾರಾಟದ ವಾಡಿಕೆಯಲ್ಲಿರುವ ಷರ್ತಗಳಿಗೊಳಪಟ್ಟು ಸ್ತಿರಾಸ್ತಿಯನ್ನು ಮಾರಾಟ ಮಾಡಲಾಗುವುದು. ಏಲಂನಲ್ಲಿ ಭಾಗವಹಿಸುವವರು ರೂ.1000/ನ್ನು ಭದ್ರತಾ ಠೇವಣಿಯಾಗಿ ಸಂಘಕ್ಕೆ ಪಾವತಿಸಿ ರಶೀದಿ ಪಡೆಯತಕ್ಕದ್ದು. ಯಶಸ್ವಿ ಬಿಡ್ಡುದಾರರು ಏಲಂ ಆದ ತಕ್ಷಣ ಏಲಂ ಮೊಬಲಗಿನ 25% ಅಂಶವನ್ನು ಕೂಡಲೇ ನ್ಯಾಯಾಲಯಕ್ಕೆ ಪಾವತಿಸಿ ಉಳಿದ ಅಂಶವನ್ನು ಹರಾಜು ಆದ ದಿನಾಂಕದಿಂದ 45 ದಿವಸದ ಒಳಗೆ ಪಾವತಿಸತಕ್ಕದ್ದು. ಜೊತೆಗೆ ಏಲಂ ಮೊತ್ತಕ್ಕೆ ಸಾಕಾಗುವಷ್ಟು ಠಸೆ ಪತ್ರದ ಮೌಲ್ಯವನ್ನು 15 ದಿವಸದೊಳಗೆ ಪಾವತಿಸತಕ್ಕದ್ದು. ಹೆಚ್ಚಿನ ವಿವರಗಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪ್ರಣವ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಒಂದನೇ ಮಹಡಿ ಜಯರಾಮ್ ಪ್ರಸಾದ್ ಬಿಲ್ಡಿಂಗ್, ಏರ್‌ಪೋರ್ಟ್ ರೋಡ್, ವೋಕ್ಸ್ ವ್ಯಾಗನ್ ಶೋರೂಂ ಎದುರು, ಯೆಯ್ಯಾಡಿ, ಮಂಗಳೂರು - 575008, ಫೋ : 0824 2987088 ಇವರನ್ನು ಸಂಪರ್ಕಿಸಿ.

ಸ್ಥಳ : ಮಂಗಳೂರು
ದಿನಾಂಕ : 11.03.2026

(ನ್ಯಾಯಾಲಯದ ಆದೇಶದಂತೆ)

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಪ್ರಣವ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಒಂದನೇ ಮಹಡಿ ಜಯರಾಮ್ ಪ್ರಸಾದ್ ಬಿಲ್ಡಿಂಗ್, ಏರ್‌ಪೋರ್ಟ್ ರೋಡ್, ವೋಕ್ಸ್ ವ್ಯಾಗನ್ ಶೋರೂಂ ಎದುರು, ಯೆಯ್ಯಾಡಿ, ಮಂಗಳೂರು - 575008

ವಸೂಲಾತಿ ಅಧಿಕಾರಿಗಳು
(ನಿ.441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕ.ರಾ.ಸೌ.ಸಂ.ಸ.ನಿ.,
ಬೆಂಗಳೂರು

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ: ತಾಂತ್ರಿಕ : ಜೆಇ(309) : 2025-26 ದಿನಾಂಕ: 16-03-2026

ಟೆಂಡರು ಪ್ರಕಟಣೆ(2ನೇ ಕರೆ)

ಈ ಕೆಳಗೆ ತಿಳಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಇ-ಟೆಂಡರನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ **http://kppp.karnataka.gov.in** ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ **Standard Tender Document KW-4** ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಟ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. ಇಂಡೆಟ್ ಸಂಖ್ಯೆ **84/CALL-2, 85/CALL-2, 86/CALL-2** ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25-03-2026 ಅಪರಾಹ್ನ 5.00 ಗಂಟೆ (17-00 ಗಂಟೆ) ಒಳಗೆ ಸಲ್ಲಿಸತಕ್ಕದ್ದು ಹಾಗೂ ಇಂಡೆಟ್ ಸಂಖ್ಯೆ **82/CALL-2** ಮತ್ತು **83/CALL-2** ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07-04-2026 ಅಪರಾಹ್ನ 5.00 ಗಂಟೆ (17-00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/1758/25-26 dt.16.03.2026

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2025-26/8611 ದಿನಾಂಕ: 13/03/2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಅಡಿ 1 ಕಾಮಗಾರಿ ಇದ್ದು, ಗುತ್ತಿಗೆ ಇಟ್ಟ ಮೊತ್ತ ರೂ. 57.80 ಲಕ್ಷ ಇರುವ ಕಾಮಗಾರಿಗೆ KPP Portal ಮುಖಾಂತರ ನೊಂದಾಯಿತ ಕೆ.ಪಿ.ಡಬ್ಲ್ಯೂ.ಡಿ. ಎಂ.ಪ್ಯಾನಲ್ಡ/ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ Consultancy ರಿಂದ Services ನಲ್ಲಿ ಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:20-03-2026 ರಂದು (11.00 ಗಂಟೆಗೆ),2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:23-03-2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :25-03-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):27-03-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗ ದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-2086/KSMCA/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-45) ಡ್ರಾ ಮಾರ್ಚ್ 16ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BH 616697 (KANNUR)

Consolation Prize Rs.5,000/-
BA 616697 BB 616697 BC 616697 BD 616697
BE 616697 BF 616697 BG 616697 BJ 616697
BK 616697 BL 616697 BM 616697

2nd Prize Rs.30,00,000/- [30 Lakhs]
BL 140050 (ADOOR)

3rd Prize Rs.5,00,000/- [5 Lakhs]
BM 624132 (PALAKKAD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0743 1357 2580 2882 2953 3023 4908 4914 5922 5977 6171 6258 6335 7126 7409 7796 7899 8573 8844

5th Prize Rs.2,000/-
0632 0716 2499 5486 8797 9481

6th Prize Rs.1,000/-
0799 1023 1624 1732 1788 1837 2515 2874 3031 3210 3320 3927 4313 4812 5256 5870 6023 6363 6633 7042 7359 7598 7611 7844 9031

7th Prize Rs.500/-
0087 0241 0336 0337 0506 0566 0654 0830 0853 0866 0879 1059 1658 1735 1915 1929 2012 2064 2094 2189 2230 2490 2537 2710 2746 2991 3005 3096 3411 3649 3735 3815 3940 4049 4419 4729 4736 4760 4939 4962 5091 5096 5119 5198 5535 5675 5761 5916 5954 5968 6080 6235 6237 6579 6730 6981 7067 7108 7237 7239 7765 7885 8493 8644 8651 8680 8779 8887 9066 9219 9226 9296 9416 9597 9610 9936

8th Prize Rs.200/-
0258 0267 0771 0808 1020 1042 1303 1318 1396 1724 1783 1876 1983 2057 2221 2252 2409 2428 2560 2897 3055 3142 3169 3444 3489 3571 3634 3855 3857 4129 4147 4157 4169 4180 4181 4236 4417 4428 4537 4583 4605 4730 4849 4995 5019 5205 5273 5343 5664 5779 5848 5878 5897 6052 6183 6295 6318 6396 6469 6487 6488 6606 6679 6698 6701 6947 7000 7410 7519 7643 7670 7748 7918 7958 7970 8020 8029 8038 8132 8238 8329 8380 8499 8572 8949 9016 9086 9199 9389 9469 9510 9526 9662 9815

9th Prize Rs.100/-
0088 0091 0120 0149 0181 0282 0396 0412 0441 0487 0524 0602 0640 0665 0803 0829 0992 1004 1032 1086 1087 1332 1349 1537 1589 1606 1621 1635 1817 1819 1856 1872 1969 2074 2211 2262 2372 2383 2408 2456 2467 2559 2639 2877 2899 2978 3033 3054 3336 3347 3581 3600 3706 3715 3748 3751 3833 3884 3910 4030 4103 4133 4186 4195 4368 4414 4425 4520 4552 4623 4698 4709 4828 4896 4921 4930 5050 5054 5062 5095 5251 5293 5522 5541 5546 5558 5574 5596 5620 5621 5707 5725 5775 5791 5924 6012 6256 6293 6409 6413 6490 6587 6823 6833 6894 6936 7009 7012 7023 7030 7119 7225 7366 7445 7548 7654 7686 7914 7959 7965 7988 8007 8037 8129 8335 8344 8548 8735 8907 9040 9049 9054 9056 9103 9128 9154 9222 9545 9549 9559 9587 9736 9754 9805

ಕಿರುಸುದ್ದಿ

ಮಂಗಳೂರಿಗೆ ಶಿವಾಲಿಕ್?



ಮಂಗಳೂರು: ಭಾರತೀಯ ತೈಲ ನಿಗಮ ಲಿಮಿಟೆಡ್ ನೇತೃತ್ವದಲ್ಲಿ 'ಶಿವಾಲಿಕ್' ಹೆಸರಿನ ಹಡಗಿನ ಮೂಲಕ ಎಲ್‌ಪಿಜಿ ಸಾಗಾಟವಾಗುತ್ತಿದ್ದು, ಸೋಮವಾರ ಮುಂದ್ರಾ ಬಂದರಿನ ಎಲ್‌ಪಿಜಿ ಟರ್ಮಿನಲ್‌ಗೆ ಆಗಮಿಸಿದೆ. ಹಾರ್ಮುಜ್ ಜಲಮಾರ್ಗವಾಗಿ ಬಂದ ಈ ಹಡಗಿನಲ್ಲಿ ಒಟ್ಟು 46,000 ಮೆಟ್ರಿಕ್ ಟನ್ ಎಲ್‌ಪಿಜಿ ಸಾಗಾಣಿಕೆ ಮಾಡಲಾಗಿದೆ. ಇದರಲ್ಲಿ ಸುಮಾರು 20,000 ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ಮುಂದ್ರಾ ಬಂದರಿನಲ್ಲಿ ಇಳಿಸಲಾಗುವುದು. ಉಳಿದ 26,000 ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ನ್ಯೂ ಮಂಗಳೂರು ಬಂದರಿನ ಸಮುದ್ರದಲ್ಲಿರುವ ಸಿಂಗಲ್ ಪಾಯಿಂಟ್ ಮೂರಿಂಗ್ ಸೌಲಭ್ಯದಲ್ಲಿ ಇಳಿಸಲು ಯೋಜಿಸಲಾಗಿದೆ.

ಎಚ್.ಎಂ.ಪೆರ್ನಾಲ್ ಮುಡಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗರಿ

ಮಂಗಳೂರು: ಮಂಗಳೂರಿನ ಖ್ಯಾತ ಕೊಂಕಣಿ ಸಾಹಿತಿ ಎಚ್.ಎಂ. ಪೆರ್ನಾಲ್ (ಹೆನ್ರಿ ಮೆಂಡೋನ್ಸಾ) ಅವರಿಗೆ 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಪೆರ್ನಾಲ್ ಅವರ ಪ್ರಶಂಸಿತ ಸಾಹಿತ್ಯ ವಿಮರ್ಶೆ ಕೃತಿಯಾದ ಕೊಂಕಣಿ ಕಾವ್ಯೆಂ: ರುಪಾಂ ಆನಿ ರೂಪಕಾಂ (2021) ಗೆ ಈ ಪ್ರಶಸ್ತಿ ನೀಡಲಾಗಿದೆ.



ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಭಾರತ ಸರಕಾರ ಸಾಹಿತ್ಯಕ್ಕಾಗಿ ನೀಡುವ ದೇಶದ ಅತ್ಯುನ್ನತ ಪ್ರಶಸ್ತಿಯಾಗಿದ್ದು, ಪ್ರತೀ ವರ್ಷ 22 ಅನುಸೂಚಿತ ಭಾಷೆಗಳ ಜೊತೆಗೆ ಇಂಗ್ಲಿಷ್ ಮತ್ತು ರಾಜಸ್ಥಾನಿ ಹೀಗೆ 24 ಭಾಷೆಗಳ ಉತ್ಕೃಷ್ಟ ಕೃತಿಗಳನ್ನು ಆಯ್ದು ಈ ಪುರಸ್ಕಾರ ನೀಡಲಾಗುತ್ತದೆ. ಪೆರ್ನಾಲ್ ಅವರ ಪ್ರಸ್ತುತ ಕೊಂಕಣಿ ಕಾವ್ಯೆಂ: ರುಪಾಂ ಆನಿ ರೂಪಕಾಂ ಕೃತಿಯು ಸಾಹಿತ್ಯ ವಿಮರ್ಶೆ ವಿಭಾಗದಲ್ಲಿ ಪ್ರಶಸ್ತಿ ಪಡೆದ ಮೊದಲ ಕೊಂಕಣಿ ಕೃತಿಯಾಗಿದೆ. ಈ ಕೃತಿಗೆ ಮೊದಲು 2021 ರಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯಿಂದ ಉತ್ತಮ ಪುಸ್ತಕ ಪ್ರಶಸ್ತಿ ಮತ್ತು 2023 ರಲ್ಲಿ ಗೋವಾ ಕೊಂಕಣಿ ಅಕಾಡೆಮಿಯಿಂದ ಉತ್ತಮ ಪುಸ್ತಕ ಪ್ರಶಸ್ತಿ ಲಭಿಸಿತ್ತು. ಈ ಪುಸ್ತಕಕ್ಕೆ ಜ್ಞಾನಪೀಠ ಪ್ರಶಸ್ತಿ ವಿಜೇತ ಕೊಂಕಣಿ ಸಾಹಿತಿ ದಾಮೋದರ್ ಮೌಜೋ ಅವರ ವಿಸ್ತೃತ ಮುನ್ನುಡಿ ಬರೆದಿದ್ದು, ಮಂಗಳೂರಿನ ಕವಿತಾ ಪಬ್ಲಿಕೇಷನ್ಸ್ ಈ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಮಂಜೇಶ್ವರ: ಅಪ್ರಾಪ್ತರು ಚಲಾಯಿಸಿದ ಎರಡು ದ್ವಿಚಕ್ರ ವಾಹನಗಳು ವಶಕ್ಕೆ

ಮಂಜೇಶ್ವರ: ಅಪ್ರಾಪ್ತರು ದ್ವಿಚಕ್ರ ಸಹಿತ ವಾಹನ ಚಲಾಯಿಸುತ್ತಿರುವ ಸಂಖ್ಯೆ ವ್ಯಾಪಕಗೊಂಡಿದ್ದು, ಈ ಹಿನ್ನೆಲೆಯಲ್ಲಿ ಮಂಜೇಶ್ವರ ಪೊಲೀಸರಿಂದ ವಿವಿಧೆಡೆ ವಾಹನ ತಪಾಸಣೆಯನ್ನು ಬಿರುಸುಗೊಳಿಸಲಾಗಿದೆ. ಶನಿವಾರ ಸಂಜೆ ಬೇಕೂರು ಮಸೀದಿ ಬಳಿಯ ರಸ್ತೆಯಲ್ಲಿ ಹಾಗೂ ಭಾನುವಾರ ಮುಂಜಾನೆ ತಲಪಾಡಿಯಲ್ಲಿ ವಾಹನ ತಪಾಸಣೆ ವೇಳೆ ಅಪ್ರಾಪ್ತರು ಸಂಚಾರ ಮಾಡುತ್ತಿದ್ದ ಎರಡು ಸ್ಕೂಟರ್‌ನ್ನು ವಶಕ್ಕೆ ತೆಗೆದುಕೊಂಡಿದ್ದು. ಈ ಸಂಬಂಧ ಬಾಲಕರ ಪೋಷಕರ ವಿರುದ್ಧ ಪ್ರಕರಣ ದಾಖಲಿಸಿ ನೋಟೀಸ್ ನೀಡಲಾಗಿದೆ.

ನ್ಯಾಯಾಧೀಶರಾಗಿ ಆಯ್ಕೆಯಾದ ಹಿರಿಯ ವಿದ್ಯಾರ್ಥಿಗಳಿಗೆ ಅಭಿನಂದನೆ

ವಿದ್ಯಾರ್ಥಿಗಳು ದೇಶದ ಭವಿಷ್ಯ

ಪುತ್ತೂರು: ನೆಹರೂನಗರದಲ್ಲಿರುವ ವಿವೇಕಾನಂದ ಕಾನೂನು ಮಹಾವಿದ್ಯಾಲಯದಲ್ಲಿ ಹಿರಿಯ ವಿದ್ಯಾರ್ಥಿ ಸಂಘದ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ 2025ನೇ ಸಾಲಿನ ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾದ ನಾಲ್ವರು ಹಿರಿಯ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು. ವಿವೇಕಾನಂದ ಕಾನೂನು ಮಹಾವಿದ್ಯಾಲಯದ 2013– 16 ಬ್ಯಾಚ್ ನ 3 ವರ್ಷದ ಎಲ್. ಎಲ್. ಬಿ. ಪದವಿ ಪಡೆದ ದೀಪಿಕಾ ಎಸ್., 2013 – 18 ಬ್ಯಾಚ್ ನಲ್ಲಿ 5 ವರ್ಷದ ಬಿ.ಎ.ಎಲ್. ಎಲ್. ಬಿ. ಪಡೆದ ಮನೋಜ್ ಕುಮಾರ್ ಯು., 2016 – 19 ಬ್ಯಾಚ್ ನಲ್ಲಿ 3 ವರ್ಷದ ಎಲ್. ಎಲ್. ಬಿ. ಪದವಿ ಪಡೆದಿದ್ದ ಧನ್ಯ ಎಂ. ಕೆ. ಹಾಗೂ 2019–24 ಬ್ಯಾಚ್ ನಲ್ಲಿ 5 ವರ್ಷದ ಬಿ.ಎ. ಎಲ್. ಎಲ್. ಬಿ. ವ್ಯಾಸಂಗ ಮಾಡಿದ ಮಂಜುನಾಥ್ ಶಿವಲಿಂಗಪ್ಪ ಜಿ. ಅವರನ್ನು ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಡಾ. ಕೆ. ಎಂ. ಕೃಷ್ಣ ಭಟ್ ಸಾಧಕರನ್ನು ಸನ್ಮಾನಿಸಿದರು.



ವಿಶೇಷ ಹುದ್ದೆಯಾಗಿದೆ

ನಂತರ ಮಾತನಾಡಿದ ಅವರು, ನ್ಯಾಯಾಮೂರ್ತಿ ಹುದ್ದೆಯೆಂದರೆ ಈ ದೇಶದಲ್ಲಿ ವಿಶಿಷ್ಟ ಗೌರವ ಹಾಗೂ ಅತ್ಯಂತ ಜವಾಬ್ದಾರಿಯುತ ಸ್ಥಾನವನ್ನು ಅಲಂಕರಿಸುವ ಒಂದು ವಿಶೇಷ ಹುದ್ದೆಯಾಗಿದೆ. ನಮ್ಮ ವಿವೇಕಾನಂದ ಕಾನೂನು ಮಹಾವಿದ್ಯಾಲಯದ ನಾಲ್ವರು ಹಿರಿಯ ವಿದ್ಯಾರ್ಥಿಗಳು ಅಂತಹ ಗೌರವಯುತ ಸ್ಥಾನಕ್ಕೆ ಆಯ್ಕೆಯಾಗಿರುವುದು ಅತ್ಯಂತ ವಿಶೇಷವಾಗಿದೆ. ವಿದ್ಯಾರ್ಥಿಗಳು ದೇಶದ ಭವಿಷ್ಯ. ಅದರಲ್ಲಿಯೂ ಕಾನೂನು ಕಲಿಯುವ ಪ್ರತಿಯೊಬ್ಬ ವಿದ್ಯಾರ್ಥಿಯು ದೇಶದ ಭವಿಷ್ಯ ಬದಲಿಸುವಷ್ಟು ಸಾಧನೆ ಮಾಡಲು ಸಾಧ್ಯವಿದೆ ಎಂದರು. ವಿದ್ಯಾರ್ಥಿಗಳು ಜೀವನದಲ್ಲಿ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸಲು ಸತತ ಪ್ರಯತ್ನಿಸಬೇಕು. ಕಾನೂನು ವಿದ್ಯಾರ್ಥಿಗಳಿಗೆ ಆಧುನಿಕ ಕಾಲ ಘಟ್ಟದಲ್ಲಿ ಹಲವಾರು ಅವಕಾಶಗಳಿದ್ದು, ಅದರ ಸದುಪಯೋಗ ಪಡಿಸಿ ಸಾಧನೆ ಮಾಡಬೇಕು ಎಂದರು.

ದೇವಳಕ್ಕೆ ಸಮಾನವಾದ ಸ್ಥಾನ

ಅತಿಥಿ ಪುತ್ತೂರಿನ ಜಿಡೆಕಲ್ಲಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಸುಬ್ಬಪ್ಪ ಕೈಕಂಬ ಮಾತನಾಡಿ, ನ್ಯಾಯಾಂಗ ಕ್ಷೇತ್ರ ಎನ್ನುವುದು ದೇವ ಸ್ಥಾನಕ್ಕೆ ಸಮಾನ ವಾದ ಸ್ಥಾನ ಹೊಂದಿದೆ. ಅಂತಹ ನ್ಯಾಯಾಂಗ ಕ್ಷೇತ್ರದಲ್ಲಿ ನ್ಯಾಯಾಧೀಶರಾಗಿ ಆಯ್ಕೆಯಾಗುವುದೆಂದರೆ ಅತ್ಯಂತ ವಿಶೇಷವಾದ ಸಾಧನೆಯಾಗಿದೆ. ಅಂತಹ ನಾಲ್ವರು ಸಾಧಕರನ್ನು ಸಮಾಜಕ್ಕೆ ನೀಡಿರುವ ವಿವೇಕಾನಂದ ಕಾನೂನು ಮಹಾವಿದ್ಯಾಲಯ ಅಭಿನಂದನಾರ್ಹ. ಇಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಶಿಕ್ಷಣವಂತರಾಗಿ, ಅಧ್ಯಯನ ಮಾಡಿದ ಕಾಲೇಜಿಗೆ, ಶಿಕ್ಷಕರಿಗೆ ಕೀರ್ತಿ ತರುವ ಕೆಲಸ ಮಾಡಬೇಕು. ಅದೇ ರೀತಿ ತಂದೆ ತಾಯಂದಿರು ಮಕ್ಕಳಿಗೆ ತಮ್ಮ ಸರ್ವಸ್ವವನ್ನೆ ತ್ಯಾಗ ಮಾಡಿ ಶಿಕ್ಷಣ ನೀಡುತ್ತಿರುತ್ತಾರೆ. ಅದನ್ನು ಅರಿತು ಕೊಂಡು ವಿದ್ಯಾರ್ಥಿಗಳು ಕಠಿಣ ಪರಿಶ್ರಮ, ನಿರಂತರವಾದ ಓದುವ ಹವ್ಯಾಸ ಬೆಳೆಸಿಕೊಂಡು ಸಮಾಜವೇ ತಿರುಗಿ ನೋಡುವಂತಹ ಸಾಧನೆ ಮಾಡಿ ಎಂದರು.

ಸಾಧನೆ ಹೆಮ್ಮೆಯ ವಿಷಯ

ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಸಂಚಾಲಕರಾದ ವಿಜಯ ನಾರಾಯಣ ಕೆ.ಎಂ. ಪ್ರಾಸ್ತವಿಕವಾಗಿ ಮಾತನಾಡಿ, ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳು ಈ ರೀತಿಯ ಸಾಧನೆ ಮಾಡಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ ಎಂದ ಅವರು ನಮ್ಮ ಸಂಸ್ಥೆಯ ಪ್ರತಿಯೊಬ್ಬ ಕಾನೂನು ವಿದ್ಯಾರ್ಥಿ ಈ ರೀತಿಯ ಸಾಧನೆ ಮಾಡಬೇಕು ಎಂದರು.

ಸನ್ಮಾನಿತರಾದ ದೀಪಿಕಾ ಎಸ್., ಮನೋಜ್ ಕುಮಾರ್ ಯು., ಧನ್ಯ ಎಂ. ಕೆ. ಹಾಗೂ ಮಂಜುನಾಥ್ ಶಿವಲಿಂಗಪ್ಪ ಜಿ. ಮಾತನಾಡಿ, ಕಾಲೇಜಿನ ಜೊತೆಗಿನ ಒಡನಾಟ ಹಂಚಿಕೊಂಡರು. ಅದೇ ರೀತಿ ಹಿರಿಯ ವಿದ್ಯಾರ್ಥಿ ಸಂಘದ ಪ್ರದಾನ ಕಾರ್ಯದರ್ಶಿ ದೀಪಕ್ ಬೊಳ್ವಾರ್ ಶುಭಹಾರೈಸಿದರು.

ವೇದಿಕೆಯಲ್ಲಿ ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಕಾನೂನು ವಿಭಾಗದ ನಿರ್ದೇಶಕರಾದ ಡಾ. ಬಿ.ಕೆ. ರವೀಂದ್ರ ಉಪಸ್ಥಿತ ರಿದ್ದರು. ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ರಾದ ಅಕ್ಷತಾ ಎ. ಪಿ. ಸ್ವಾಗತಿಸಿ, ಕಾನೂನು ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸುಭಾಷಿಣಿ ಜೆ. ವಂದಿಸಿದರು. ಆಂಗ್ಲ ಭಾಷಾ ಸಹಾಯಕ ಪ್ರಾಧ್ಯಾಪಕಿ ಸಂಧ್ಯಾ ಪಿ.ಎಂ. ನಿರೂಪಿಸಿದರು.

ಸಾಧಕ ವಿದ್ಯಾರ್ಥಿಗಳ ಪೋಷಕರು, ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಬೋಧಕ- ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಸಂದರ್ಭ ಉಪಸ್ಥಿತರಿದ್ದರು.

ಉಡುಪಿಯಲ್ಲಿ ಮತಾಂತರದ ಸಂಚು

'ಸಮಾಧಾನ ಮಹೋತ್ಸವ'ಕ್ಕೆ ತಡೆ ನೀಡಲು ಹಿಂಜಾವೇ ಆಗ್ರಹ



ಉಡುಪಿ: ನಗರದ ಮಿಷನ್ ಕಂಪೌಂಡ್ ಮೈದಾನದಲ್ಲಿ ಮಾ. 20 ರಿಂದ 22 ರವರೆಗೆ ಆಯೋಜಿಸಲಾಗಿರುವ 'ಸಮಾಧಾನ ಮಹೋತ್ಸವ' ಕಾರ್ಯಕ್ರಮವು ಕೇವಲ ಮತಾಂತರದ ಪಿತೂರಿಯಾಗಿದ್ದು, ಜಿಲ್ಲಾಡಳಿತವು ಈ ಕೂಡಲೇ ಇದರ ಅನುಮತಿಯನ್ನು ರದ್ದುಗೊಳಿಸಬೇಕು ಎಂದು ಹಿಂದು ಜಾಗರಣ ವೇದಿಕೆಯ ಮುಖಂಡ ಶ್ರೀಕಾಂತ್ ಶೆಟ್ಟಿ ಆಗ್ರಹಿಸಿದ್ದಾರೆ.

ಸೋಮವಾರ ಉಡುಪಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿನ ಮತಾಂತರವಾದಿ ಮೋಹನ್ ಸಿ. ಲಾಝುರಸ್ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ಈ ವ್ಯಕ್ತಿಯು ಈ ಹಿಂದೆ ಹಿಂದು ದೇವಾಲಯಗಳನ್ನು 'ಸೈತಾನನ ಗುಡಿಗಳು' ಎಂದು ಕರೆದು ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತಂದಿರುವ ಇತಿಹಾಸ ಹೊಂದಿದ್ದಾರೆ. ಇದೇ ಕಾರಣಕ್ಕಾಗಿ ತಮಿಳುನಾಡಿನ ವಿವಿಧ ಜಿಲ್ಲೆಗಳಲ್ಲಿ ಇವರ ಮೇಲೆ ದ್ವೇಷಪೂರಿತ ಭಾಷಣಕ್ಕೆ ಸಂಬಂಧಿಸಿದಂತೆ ಐಪಿಸಿ ಸೆಕ್ಷನ್ 153ಎ ಮತ್ತು 295ಎ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿವೆ ಎಂಬುದನ್ನು ವಿವರಿಸಿದರು.

ಈ ಕಾರ್ಯಕ್ರಮದ ಹಿಂದೆ ಅವೈಜ್ಞಾನಿಕ ಮೌಢ್ಯಗಳ ಪ್ರದರ್ಶನವಿದೆ ಎಂದು ದೂರಿದ ಅವರು, ಕೇವಲ ಒಂದು ಚಿಟಿಕೆ ಹೊಡೆದರೆ ಸಾಕು ಲಿವರ್ ಸಮಸ್ಯೆ ಗುಣಪಡಿಸುತ್ತೇವೆ ಅಥವಾ ಕಿಡ್ನಿ ಕಲ್ಲುಗಳನ್ನು ಹೊರತೆಗೆಯುತ್ತೇವೆ ಎಂಬ ಹಸಿ ಸುಳ್ಳುಗಳನ್ನು ಹೇಳಿ ಜನರನ್ನು ವಂಚಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹೀಗೆ ರೋಗ ವಾಸಿ ಮಾಡುವ ಆಮಿಷವೊಡ್ಡಿ ಅಮಾಯಕ ಜನರನ್ನು ಮತಾಂತರದ ಜಾಲಕ್ಕೆ ಎಳೆಯುವುದು ಇವರ ಮುಖ್ಯ ಉದ್ದೇಶವಾಗಿದೆ ಎಂದು ಅವರು ಆರೋಪಿಸಿದರು.

ಇದಲ್ಲದೆ, ಈ ಕಾರ್ಯಕ್ರಮಕ್ಕೆ ಹಣಕಾಸಿನ ನೆರವು ನೀಡುತ್ತಿರುವ ಜೀಸಸ್ ರಿಡೀಮ್ಸ್ ಸಂಸ್ಥೆಯ ವಿದೇಶಿ ದೇಣಿಗೆ ಪರವಾನಗಿಯನ್ನು ಕೇಂದ್ರ ಗೃಹ ಸಚಿವಾಲಯವು ಅಮಾನತುಗೊಳಿಸಿದೆ. ವಿದೇಶಿ ಹಣವನ್ನು ದುರುಪಯೋಗಪಡಿಸಿಕೊಂಡು ಸಮಾಜದಲ್ಲಿ ಕೋಮು ಸೌಹಾರ್ದ ಕೆಡಿಸುವ ಕೆಲಸಕ್ಕೆ ಬಳಸಲಾಗುತ್ತಿದೆ ಎಂಬುದು ಈ ಮೂಲಕ ಸಾಬೀತಾಗಿದೆ ಎಂದು ಅವರು ಪ್ರತಿಪಾದಿಸಿದರು.

ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದ ಅವರು, ಉಡುಪಿ ಜಿಲ್ಲೆಯ ಶಾಂತಿಯುತ ವಾತಾವರಣವನ್ನು ಕೆಡಿಸಲು ಹೊರಗಿನಿಂದ ಬರುವ ಇಂತಹ ಶಕ್ತಿಗಳಿಗೆ ಅವಕಾಶ ನೀಡಬಾರದು. ಒಂದು ವೇಳೆ ಸಮಾಧಾನ ಮಹೋತ್ಸವಕ್ಕೆ ತಡೆ ನೀಡದಿದ್ದರೆ ಜಿಲ್ಲೆಯಾದ್ಯಂತ ತೀವ್ರ ಸ್ವರೂಪದ ಪ್ರತಿಭಟನೆ ನಡೆಸಲಾಗುವುದು ಮತ್ತು ಮುಂದಾಗುವ ಅನಾಹುತಗಳಿಗೆ ಜಿಲ್ಲಾಡಳಿತವೇ ನೇರ ಹೊಣೆಯಾಗಲಿದೆ ಎಂದು ಅವರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಹಿಂದೂ ಜಾಗರಣಾ ವೇದಿಕೆಯ ಪ್ರಮುಖರಾದ ರಾಜೇಶ್ ಉಚ್ಚಿಲ, ರತ್ನಾಕರ ಅಮೀನ್, ಗುರುಪ್ರಸಾದ್ ನಾರಾವಿ, ನಗರಸಭೆ ಸದಸ್ಯ ವಿಜಯ್ ಕೊಡವೂರು ಉಪಸ್ಥಿತರಿದ್ದರು.

ಐನ್ ಮನೆಯಿಂದ ಚಿನ್ನಾಭರಣ ಕಳವು: ನಾಲ್ವರ ಸೆರೆ



ಮಡಿಕೇರಿ: ಕೊಡವ ಕುಟುಂಬದ ಐನ್ ಮನೆಯಲ್ಲಿದ್ದ ಬೆಳ್ಳಿ ಹಾಗೂ ಚಿನ್ನಾಭರಣ ಕಳವು ಮಾಡಿದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಪೊನ್ನಂಪೇಟೆ ಬಿಳೂರು ಗ್ರಾಮದ ಕ್ಯಾಲಿ ಕುಟ್ಟಪ್ಪ ಎ.ಎ.ಅಲಿಯಾಸ್ ಕರಣ್ (19), ಹಾತೂರು ಗ್ರಾಮದ ವಿ.ಎಸ್.ಯಶವಂತ್ (20), ಹಾಸನ ಜಿಲ್ಲೆಯ ತೇಜೂರು ನಿವಾಸಿ ಹರ್ಷನ್ ವೈ. (19), ಮೈಸೂರು ಬೋಗಾದಿಯ ಸಿಎಫ್‌ಟಿಆರ್‌ಐ ಲೇಔಟ್ ನಿವಾಸಿ ಶ್ರೇಯಸ್ ಡಿ.ಬಂಧಿತ ಆರೋಪಿ ಗಳಾಗಿದ್ದು, ಅವರಿಂದ 50,700 ರೂ. ನಗದು, 2.422 ಕೆ.ಜಿ. ಬೆಳ್ಳಿ, 5.5 ಗ್ರಾಂ ಚಿನ್ನ, ಒಂದು ದ್ವಿಚಕ್ರ ವಾಹನ ಹಾಗೂ 4 ಮೊಬೈಲ್ ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೀಳೂರು ಗ್ರಾಮದಲ್ಲಿನ ಆದೇಂಗಡ ಕುಟುಂಬದ ಐನ್‌ಮನೆಯಲ್ಲಿ ಪೊನ್ನಪ್ಪಸಂತೆಯ ಕಲ್ಲುಗುಡ್ಡೆ ಈಶ್ವರ ದೇವಸ್ಥಾನದ ಪಾರಂಪರಿಕ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಆದೇಂಗಡ ಕುಟುಂಬಸ್ಥರ ಸುಪರ್ದಿ ಯಲ್ಲಿಡ ಲಾಗಿತ್ತು. ಫೆ.23ರಂದು ಐನ್‌ಮನೆಯಲ್ಲಿಟ್ಟಿದ್ದ ಅಂದಾಜು 40 ಗ್ರಾ. ಚಿನ್ನ ಮತ್ತು 2.5 ಕೆ.ಜಿ ಬೆಳ್ಳಿ ಆಭರಣಗಳು ಕಳವಾಗಿದ್ದು, ಈ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ವೀರಾಜಪೇಟೆ ಉಪ ವಿಭಾಗದ ಡಿವೈಎಸ್ಪಿ ಮಹೇಶ್ ಕುಮಾರ್, ಗೋಣಿಕೊಪ್ಪ ವೃತ್ತದ ಸಿಪಿಐ ಶಿವರಾಜ್ ಆರ್. ಮುಧೋಳ್, ಪೊನ್ನಂಪೇಟೆ ಠಾಣೆಯ ಪಿಎಸ್‌ಐ ನವೀನ್.ಜಿ, ಗೋಣಿಕೊಪ್ಪ ಠಾಣೆ ಪಿಎಸ್‌ಐ ಪ್ರದೀಪ್ ಕುಮಾರ್.ಬಿ.ಕೆ, ಎ.ಎಸ್.ಐಗಳಾದ ದೇವರಾಜು, ಗೋವರ್ಧನ್, ಹೆಚ್.ಸಿಗಳಾದ ಪಿ.ಎ.ಮಹಮದ್ ಅಲಿ, ಸುನಿಲ್, ಹೇಮಲತಾ ರೈ, ಪಿ.ಸಿಗಳಾದ ಸಂತೋಷ್, ವೇಣುಗೋಪಾಲ್, ಪುನೀತ್, ಪ್ರವೀಣ್, ಬಾಳಪ್ಪ, ತಾಂತ್ರಿಕ ವಿಭಾಗದ ಸಿಬ್ಬಂದಿಗಳಾದ ರಾಜೇಶ್, ಶರತ್ ರೈ ಅವರುಗಳು ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಣಿ.ಆರ್.ಎನ್. ಅವರು ತಿಳಿಸಿದ್ದಾರೆ.

ಕಾಪು: ಟೆಂಪೋ-ಸ್ಕೂಟರ್ ಡಿಕ್ಕಿ; ಸವಾರನಿಗೆ ಗಾಯ

ಉಡುಪಿ: ಕಟಪಾಡಿ ಸಂತೆ ಮಾರುಕಟ್ಟೆ ಬಳಿ ಶಿರ್ವ–ಕಟಪಾಡಿ ಮುಖ್ಯರಸ್ತೆಯಲ್ಲಿ ಟೆಂಪೋ ಮತ್ತು ಸ್ಕೂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸ್ಕೂಟರ್ ಸವಾರರೊಬ್ಬರು ಗಂಭೀರ ಗಾಯಗೊಂಡಿದ್ದಾರೆ. ಕಾಪು ಏಣಗುಡ್ಡೆ ನಿವಾಸಿ ಸುಜಿತ್ ಸಂಜೀವ ಕೋಟ್ಯಾನ್ (38) ಗಾಯಗೊಂಡವರು. ಟೆಂಪೋ ಚಾಲಕ ಯಾವುದೇ ಸೂಚನೆ ನೀಡದೆ ಒಮ್ಮೆಲೆ ಅಜಾಗರೂಕತೆಯಿಂದ ಮುಖ್ಯ ರಸ್ತೆಗೆ ವಾಹನ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಗಾಯಾಳುವನ್ನು ಉಡುಪಿ ಆದರ್ಶ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಾಪು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐರ್ಲೆಂಡಿನಲ್ಲಿ ಮೃತಪಟ್ಟ ಸಾಂಜೋ ಸುನಿಲ್ ಸಾವಿನ ಪ್ರಕರಣದ ಬಗ್ಗೆ ಸಂಶಯ

ಪ್ರಕರಣದ ಸಮಗ್ರ ತನಿಖೆ ನಡೆಸಿ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಆಗ್ರಹ

ಕಡಬ: ಐರ್ಲೆಂಡ್‌ನಲ್ಲಿ ಇತ್ತೀಚೆಗೆ ಸಂಶಯಾಸ್ಪದವಾಗಿ ಸಾವನ್ನಪ್ಪಿದ ಕಡಬ ತಾಲೂಕಿನ ಕುಟ್ರುಪ್ಪಾಡಿ ನಿವಾಸಿ ಸಾಂಜೋ ಸುನಿಲ್ ಅವರ ಸಾವಿನ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಕಡಬ ಕ್ರಿಶ್ಚಿಯನ್ ಲೈಟ್ನಿಂಗ್ ಕ್ಲಬ್ ಹಾಗೂ ಕಡಬ ಮಲಯಾಳಿ ಫ್ರೆಂಡ್ಸ್ ಸಂಘಟನೆಗಳ ನೇತೃತ್ವದಲ್ಲಿ ಭಾನುವಾರ ನಡೆದ ಪ್ರತಿಭಟನಾ ಮೆರವಣಿಗೆಯ ಬಳಿಕ ಕಡಬದ ಸೈಂಟ್ ಜೋಕಿಮ್ಸ್ ಸಭಾಭವನದಲ್ಲಿ ಸಭೆ ಜರಗಿತು.



ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಜಿ.ಪಂ. ಮಾಜಿ ಸದಸ್ಯ ಪಿ.ಪಿ.ವರ್ಗೀಸ್ ಅವರು ವಿದೇಶದಲ್ಲಿ ಉದ್ಯೋಗ ಮಾಡಿ ಬದುಕು ಕಟ್ಟಿಕೊಳ್ಳುವ ಉದ್ದೇಶದಿಂದ ಹೋಗಿದ್ದ ಸಾಂಜೋ ಸುನಿಲ್ ಅವರ ಸಾವು ಆತಂಕಕಾರಿಯಾಗಿದೆ. ಸಾವಿನ ಸುತ್ತ ಸಾರ್ವಜನಿಕರಿಗೆ ಹಲವು ಅನುಮಾನ ಮೂಡಿದೆ. ಪ್ರಕರಣದ ಸಂಪೂರ್ಣ ಸತ್ಯ ಹೊರಬರಬೇಕು ಎಂಬುದು ಎಲ್ಲರ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ನಾನು ಈಗಾಗಲೇ ಕರ್ನಾಟಕ ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿ ಪ್ರಕರಣದ ಸಮಗ್ರ ತನಿಖೆಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದೇನೆ ಎಂದು ಹೇಳಿದರು.

ಬಿಜೆಪಿ ಮುಖಂಡ ಡಾ. ಅನಿಲ್ ಈಶೋ ಮಾತನಾಡಿ ಸಾಂಜೋ ಸುನಿಲ್ ಅವರ ಮೃತದೇಹವನ್ನು ಊರಿಗೆ ತರಲು ಸಂಸದ ಕ್ಯಾ| ಬ್ರಿಜೇಶ್ ಚೌಟಾ ಅವರು ಅಲ್ಲಿನ ರಾಯಭಾರ ಕಚೇರಿಯನ್ನು ಸಂಪರ್ಕಿಸಿ ನೆರವು ನೀಡಿದ್ದರು. ಸಂಸದರ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ರಾಯಭಾರಿ ಕಚೇರಿಯನ್ನು ಸಂಪರ್ಕಿಸಿ ಪ್ರಕರಣದ ಸಂಪೂರ್ಣ ತನಿಖೆ ನಡೆಯುವಂತೆ ಕ್ರಮ ಕಗೊಳ್ಳುವ ಭರವಸೆ ದೊರೆತಿದೆ. ಮೃತರ ಕುಟುಂಬಕ್ಕೆ ನ್ಯಾಯ ಒದಗಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಕಡಬ ಕ್ರಿಶ್ಚಿಯನ್ ಲೈಟ್ನಿಂಗ್ ಕ್ಲಬ್‌ನ ಕಾರ್ಯದರ್ಶಿ ಕ್ಲೆವಿಯರ್ ಬೇಬಿ ಮಾತನಾಡಿ, ಸಾಂಜೋ ಸುನಿಲ್ ಮದುವೆಯಾಗಿ ಕೆಲವೇ ತಿಂಗಳು ಕಳೆದ ಬಳಿಕ ಉದ್ಯೋಗ ನಿಮಿತ್ತ ಇಸ್ರೇಲ್‌ಗೆ ತೆರಳಿದ್ದರು. ಬಳಿಕ ಉದ್ಯೋಗ ಮಾಡಿಕೊಂಡು ಪತ್ನಿಯೊಂದಿಗೆ ವಾಸಿಸುವ ಉದ್ದೇಶದಿಂದ ಪತ್ನಿ ಲಿಷ್ಮಾ ಫಿಲಿಪ್ ಅವರ ಡಿಪೆಂಡೆಂಟ್ ವೀಸಾದ ಮೂಲಕ ಐರ್ಲೆಂಡ್‌ಗೆ ತೆರಳಿದ್ದರು. ಐರ್ಲೆಂಡ್‌ಗೆ ತೆರಳಿ ಕೇವಲ 28ನೇ ದಿನಕ್ಕೆ ಅವರ ಮೃತದೇಹ ಸಂಶಯಾಸ್ಪದ ಪರಿಸ್ಥಿತಿಯಲ್ಲಿ ಪತ್ತೆಯಾಗಿತ್ತು. ಇದು ಆತ್ಮಹತ್ಯೆಯಲ್ಲ ಅದೊಂದು ವ್ಯವಸ್ಥಿತ ಕೊಲೆಯಾಗಿದೆ. ಅಲ್ಲಿ ಅನ್ಯ ವ್ಯಕ್ತಿಯೊಬ್ಬರ ಕೈವಾಡವಿರುವ ಬಗ್ಗೆ ಸಂಶಯವಿದೆ. ಆ ಶಂಕಿತ ವ್ಯಕ್ತಿ ಹಾಗೂ ಲಿಷ್ಮಾ ಫಿಲಿಪ್ ಅವರಿಗೆ ಅತಿಯಾದ ಸಲುಗೆ ಇರುವುದರಿಂದ ನಮಗೆ ಆ ವ್ಯಕ್ತಿಯ ಬಗ್ಗೆ ಸಂಶಯವಿದೆ ಎಂದು ಆರೋಪಿಸಿದರು. ಸಾವಿನ ಬಗ್ಗೆ ಐರ್ಲೆಂಡ್‌ನಲ್ಲಿ ನಡೆದಿರುವ ಶವ ಪರೀಕ್ಷೆ ಹಾಗೂ ತನಿಖಾ ವರದಿಯನ್ನು ತರಿಸಿಕೊಂಡು ಸಮಗ್ರ ತನಿಖೆ ನಡೆಸಬೇಕು. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಈ ಬಗ್ಗೆ ಮುತವರ್ಜಿವಹಿಸಿ ಸಮಗ್ರ ತನಿಖೆ ನಡೆಸುವಲ್ಲಿ ಕ್ರಮವಹಿಸಬೇಕು. ಆ ಮೂಲಕ ಸಾರ್ವಜನಿಕರಲ್ಲಿ ಮೂಡಿರುವ ಅನುಮಾನಗಳಿಗೆ ತೆರೆ ಎಳೆಯಬೇಕು ಎಂದು ಆಗ್ರಹಿಸಿದರು.

ಕಡಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಭಿಲಾಷ್ ಪಿ.ಕೆ., ಕಡಬದ ಕ್ರಿಶ್ಚಿಯನ್ ಲಟ್ನಿಂಗ್ ಕ್ಲಬ್ ಮತ್ತು ಮಲಯಾಳಿ ಫ್ರೆಂಡ್ಸ್ ಸಂಘಟನೆಯ ಪ್ರಮುಖರಾದ ಶ್ಯಾಂಡೋ ಕೆ.ಪಿ., ಶಾಜಿ ಕೆ.ಜಾನ್, ಬಿನೋಯ್ ಮ್ಯಾಥ್ಯೂ, ಮನೋಜ್ ಕೋಡಿಂಬಾಳ, ಉಷಾ ಮನೋಜ್, ಸುಜಿತ್ ಪಿ.ಕೆ., ಬಿಜೆಪಿ ಮುಖಂಡ ಅಶೋಕ್ ಕುಮಾರ್ ಪಿ., ಸಾಮಾಜಿಕ ಕಾರ್ಯಕರ್ತ ಆಲಿ ಎಂ.ಎ., ಜೋಸ್ ಅಂಚೇರಿ, ಥಾಮಸ್ ಇಡೆಯಾಳ, ಸಜಿ ಉರುಂಬಿಲ್, ಸಾಂಜೋ ತಂದೆ ಸುನಿಲ್ ಹಾಗೂ ಮನೆಯವರು ಉಪಸ್ಥಿತರಿದ್ದರು.

ಬಾವಿ ಕೆಲಸ ಮಾಡುತ್ತಿದ್ದಾಗ ಆಯತಪ್ಪಿ ಬಿದ್ದು ವೃದ್ಧ ಸಾವು

ಉಡುಪಿ: ಬಾವಿಗೆ ರಿಂಗ್ ಅಳವಡಿಸಿ ಸಿಮೆಂಟ್ ಪ್ಯಾಚ್ ವರ್ಕ್ ಕೆಲಸ ಮಾಡುತ್ತಿದ್ದ ಹಿರಿಯರೊಬ್ಬರು ಆಯತಪ್ಪಿ ಬಾವಿಗೆ ಬಿದ್ದು ಮೃತಪಟ್ಟ ಘಟನೆ ಉಪ್ಪೂರು ಗ್ರಾಮದಲ್ಲಿ ಸಂಭವಿಸಿದೆ. ಲಕ್ಷ್ಮಣ ಆಚಾರ್ಯ (75) ಮೃತ ದುರ್ದೈವಿ. ಭಾನುವಾರ ಸಂಜೆ 4.30ರ ಸುಮಾರಿಗೆ ಬಾವಿಯೊಳಗೆ ಕೆಲಸ ಮಾಡುತ್ತಿದ್ದಾಗ ಇವರು ನೀರಿಗೆ ಬಿದ್ದಿದ್ದಾರೆ. ನೀರಿನಲ್ಲಿ ಬಿದ್ದಾಗ ತಲೆಯ ಹಿಂಭಾಗಕ್ಕೆ ಆದ ಗಾಯದಿಂದಾಗಿ ಅವರು ಕೊನೆಯುಸಿರೆಳೆದಿದ್ದಾರೆ ಎನ್ನಲಾಗಿದೆ. ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಲಿ ವಿಷ ಸೇವಿಸಿ ಚಿಕಿತ್ಸೆಯಲ್ಲಿದ್ದ ಪೆಟ್ರೋಲ್ ಬಂಕ್ ನೌಕರ ಮೃತ್ಯು

ಮಂಜೇಶ್ವರ: ಇಲಿ ವಿಷ ಸೇವಿಸಿ ದೇರಳಕಟ್ಟೆ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದ ಯುವಕ ಮೃತಪಟ್ಟಿದ್ದಾರೆ. ಉಪ್ಪಳ ಪೆಟ್ರೋಲ್ ಬಂಕ್‌ನ ನೌಕರ, ಮಂಗಳೂರು ಅಮರ್ ಆಳ್ವ ರಸ್ತೆ ಶಾಂತಾ ಆಳ್ವ ಕಂಪೌಂಡ್‌ನ ಆಕೇಶ್ (25) ಮೃತಪಟ್ಟವರು. ಆಕೇಶ್ ಕಳೆದ ಒಂದು ವರ್ಷದಿಂದ ಆರಿಕ್ಕಾಡಿ ಕಾರ್ಳೆಯಲ್ಲಿರುವ ತಾಯಿಯ ಮನೆಯಲ್ಲಿ ವಾಸಿಸುತ್ತಿದ್ದರು. ಮಾರ್ಚ್ 6ರಂದು ಬೆಳಗ್ಗೆ ಅವರು ಮನೆಯಲ್ಲಿ ಇಲಿ ವಿಷ ಸೇವಿಸಿ ಅಸ್ವಸ್ಥ ಸ್ಥಿತಿಯಲ್ಲಿ ಕಂಡುಬಂದಿದ್ದರು ಕೂಡಲೇ ಕುಂಬಳೆ ಜಿಲ್ಲಾ ಸಹಕಾರಿ ಆಸ್ಪತ್ರೆಗೆ ತಲುಪಿಸಲಾಗಿತ್ತು. ಸ್ಥಿತಿ ಗಂಭೀರವಾಗಿರುವುದರಿಂದ ಬಳಿಕ ದೇರಳಕಟ್ಟೆ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಚಿಕಿತ್ಸೆ ಮಧ್ಯೆ ಶನಿವಾರ ಸಾವು ಸಂಭವಿಸಿತು. ಕುಂಬಳೆ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಹೇಶ್ ಮತ್ತು ರಾಧ ದಂಪತಿಯ ಪುತ್ರನಾದ ಮೃತರು ಸಹೋದರಿ ಆಶಿಕಾ ಅವರನ್ನು ಅಗಲಿದ್ದಾರೆ.

ನಿಧನ ಸುದ್ದಿ

ಪೊಳಲಿ ನಾರಾಯಣ ಭಟ್

ಬಂಟ್ವಾಳ: ತಾಲೂಕಿನ ಇತಿಹಾಸ ಪ್ರಸಿದ್ಧ ಶ್ರೀ ಕ್ಷೇತ್ರ ಪೊಳಲಿಯಲ್ಲಿ ಪ್ರದಾನ ಅರ್ಚಕರಾದ ಪೊಳಲಿ ನಾರಾಯಣ ಭಟ್ (78) ಅವರು ಭಾನುವಾರ ರಾತ್ರಿ ನಿಧನರಾದರು. ಪೊಳಲಿ ದಿ. ಪದ್ಮನಾಭ ಭಟ್ ಅವರ ಪುತ್ರರಾಗಿದ್ದು, ಪಾರಂಪರಿಕವಾಗಿ ಬಂದಿರುವ ಶ್ರೀ ಕ್ಷೇತ್ರ ಪೊಳಲಿಯಲ್ಲಿ ಸುಮಾರು 50 ವರ್ಷ ಮೇಲ್ಪಟ್ಟು ಅರ್ಚಕರಾಗಿ ಸೇವೆ ಸಲ್ಲಿಸಿದ್ದಾರೆ. ಮೃತರು ಸಹೋದರರು, ಸಹೋದರಿಯರು, ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ. ಶನಿವಾರವಷ್ಟೆ ಪೊಳಲಿಯ ಜಾತ್ರೋತ್ಸವಕ್ಕೆ ದಿನ ನಿಗದಿಯಾಗಿತ್ತು. ಕ್ಷೇತ್ರದ ಸಂಭ್ರಮಕ್ಕೆ ಸಿದ್ಧತೆಗಳು ಶುರುವಾಗುತ್ತಿದ್ದಂತೆಯೇ, ಇಡೀ ಪೂಜಾ ವಿಧಿವಿಧಾನಗಳನ್ನು ಮುನ್ನಡೆಸಬೇಕಿದ್ದ ಹಿರಿಯ ಚೇತನವೇ ಅಸ್ತಂಗತವಾಗಿದೆ. ಇವರ ನಿಧನಕ್ಕೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್, ಮಾಜಿ ಸಚಿವ ರಮಾನಾಥ ರೈ ಸೇರಿದಂತೆ ಹಲವಾರು ಗಣ್ಯರು ಸಂತಾಪ ಸೂಚಿಸಿದ್ದಾರೆ.



ಬಿ.ಎಂ.ಮಾಧವ ಸಂಗಮ್

ಮಂಜೇಶ್ವರ: ಹಿರಿಯ ಹೋಟೆಲ್ ಉದ್ಯಮಿ ಹೊಸಂಗಡಿ ಪೆಲಪ್ಪಾಡಿ ನಿವಾಸಿ ಬಿ.ಎಂ. ಮಾಧವ ಸಂಗಮ್ (74) ಅಲ್ಪಕಾಲದ ಅಸೌಖ್ಯದಿಂದ ಶುಕ್ರವಾರ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಈ ಹಿಂದೆ ಹೊಸಂಗಡಿ ಪೇಟೆಯ ಸಂಗಮ್ ಹೋಟೆಲ್‌ನ ಮಾಲಕರಾಗಿದ್ದರು. ಸಿಪಿಎಂನ ಮಂಜೇಶ್ವರ ಲೋಕಲ್ ಸಮಿತಿಯ ಹಿರಿಯ ಸದಸ್ಯರಾಗಿದ್ದರು. ಅಲ್ಲದೆ ಕನಿಲ ಶ್ರೀ ಭಗವತೀ ಕ್ಷೇತ್ರದ ಬ್ರಹ್ಮಕಲಶ ಸಮಿತಿ, ಮಂಜೇಶ್ವರ ಕೊಟ್ಟಗಂ ಬಂಗೇರ ತರವಾಡಿನ ಗೌರವ ಸಲಹೆಗಾರ, ರಾಮತ್ತ ಮಜಲ್ ರುದ್ರಭೂಮಿ ಅಭಿವೃದ್ಧಿ ಸಮಿತಿಯಲ್ಲಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ವೇದಾವತಿ, ಮಕ್ಕಳಾದ ವಿನಯಕುಮಾರ್, ಸಂತೋಷ್, ಸಂದೀಪ್, ಚೇತನ ಕುಮಾರಿ ಅವರನ್ನು ಅಗಲಿದ್ದಾರೆ.



ಚಂದ್ರ ನಾಯ್ಕ ಕಾಪುತಮೂಲೆ

ಪುತ್ತೂರು: ಕಡಬ ತಾಲೂಕು ಪಾಲ್ತಾಡಿ ಗ್ರಾಮದ ಚೆನ್ನಾವರ ಕಾಪುತಮೂಲೆ ನಿವಾಸಿ ಕೃಷಿಕ ಚಂದ್ರ ನಾಯ್ಕ (66) ಮಾ.5ರಂದು ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಪಾಲ್ತಾಡು ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕಿ ಗುಲಾಬಿ, ಮಕ್ಕಳಾದ ಪತ್ರಕರ್ತ ಪ್ರವೀಣ್ ಚೆನ್ನಾವರ, ಪುತ್ತೂರು ತಾಲೂಕು ಮರಾಠಿ ಯುವ ವೇದಿಕೆಯ ಅಧ್ಯಕ್ಷ ನವೀನ್ ಕುಮಾರ್, ಬೆಂಗಳೂರಿನ ಭೀಮಾ ಗೋಲ್ಡ್ ಪ್ರೈವೇಟ್ ಲಿಮಿಟೆಡ್‌ನ ಲೆಕ್ಕಾಧಿಕಾರಿ ಪ್ರಶಾಂತ್ ಕುಮಾರ್ ಅವರನ್ನು ಅಗಲಿದ್ದಾರೆ.

ಮೃತರ ಮನೆಗೆ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಜಿಲ್ಲಾ ಕೃಷಿಕ ಸಮಾಜದ ಪ್ರಧಾನ ಕಾರ್ಯದರ್ಶಿ ರಾಕೇಶ್ ರೈ ಕೆಡೆಂಜಿ, ರಾಮಕೃಷ್ಣಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕ ಬಿ. ದಯಾಕರ ಆಳ್ವ, ಪುತ್ತೂರು ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷೆ ಇಂದಿರಾ ಬಿ.ಕೆ., ಕಾಣಿಯೂರು ಸವಣೂರು ರೈತ ಉತ್ಪಾದಕ ಕಂಪನಿ ಅಧ್ಯಕ್ಷ ಗಿರಿಶಂಕರ ಸುಲಾಯ, ಸವಣೂರು ಪ್ರಾ.ಕೃ.ಪ.ಸ. ಸಂಘದ ಉಪಾಧ್ಯಕ್ಷ ಚೇತನ್ ಕುಮಾರ್ ಕೋಡಿಬೈಲು, ಕಡಬ ತಾಲೂಕು ಜನಜಾಗೃತಿ ವೇದಿಕೆಯ ಅಧ್ಯಕ್ಷ ಮಹೇಶ್ ಕೆ., ಪುತ್ತೂರು ಮರಾಟಿ ಸಮಾಜ ಸೇವಾ ಸಂಘದ ಅಧ್ಯಕ್ಷ ಕರುಣಾಕರ ನಾಯ್ಕ ಪಾಂಗ್ಲಾಯಿ, ಕರ್ನಾಟಕ ಲ್ಯಾಂಪ್ ಸಹಕಾರ ಮಹಾಮಂಡಳ ನಿಯಮಿತದ ಉಪಾಧ್ಯಕ್ಷ ಮಂಜುನಾಥ ಎನ್.ಎಸ್., ಪುತ್ತೂರು ಲ್ಯಾಂಪ್ಸ್ ಸೊಸೈಟಿ ಅಧ್ಯಕ್ಷ ಪೂವಪ್ಪ ನಾಯ್ಕ ಕುಂಞಕುಮೇರು, ಪುತ್ತೂರು ಮರಾಟಿ ಯುವ ವೇದಿಕೆಯ ಮಾಜಿ ಅಧ್ಯಕ್ಷ ಅಶೋಕ ನಾಯ್ಕ ಸೊರಕೆ, ಸವಣೂರು ಗ್ರಾ.ಪಂ. ಮಾಜಿ ಅಧ್ಯಕ್ಷೆ ಸುಂದರಿ ಬಿ.ಎಸ್., ಮಾಜಿ ಸದಸ್ಯರಾದ ವಿನೋದಾ ರೈ,ಸತೀಶ್ ಅಂಗಡಿಮೂಲೆ, ಸತೀಶ್ ಬಲ್ಯಾಯ, ಸಾಮಾಜಿಕ ಮುಂದಾಳು ರಾಮಕೃಷ್ಣ ಪ್ರಭು, ಬಂಬಿಲ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರಾದ ಅನ್ನಪೂರ್ಣ ಪ್ರಸಾದ್ ರೈ ಬೈಲಾಡಿ, ವಿಠಲ ಶೆಟ್ಟಿ ಬಂಬಿಲ, ವಿದ್ಯುತ್ ಗುತ್ತಿಗೆದಾರರ ಸಂಘದ ಪುತ್ತೂರು ವಲಯ ಉಪಾಧ್ಯಕ್ಷ ಸುಬ್ರಾಯ ಗೌಡ, ದೀಕ್ಷಿತ್ ಜೈನ್ ಚೆನ್ನಾವರಗಡಿಗುತ್ತು, ಮಂಜುನಾಥನಗರ ಸಿದ್ಧಿ ವಿನಾಯಕ ಸೇವಾ ಸಂಘದ ಅಧ್ಯಕ್ಷ ಪ್ರವೀಣ್ ಬಂಬಿಲದೋಳ, ಚೆನ್ನಾವರ ಅಭ್ಯುದಯ ಯುವಕ ಮಂಡಲ, ಸವಣೂರು ಯುವಕ ಮಂಡಲ, ಮಂಜುನಾಥ ನಗರ ವಿವೇಕಾನಂದ ಯುವಕ ಮಂಡಲದ ಪದಾಧಿಕಾರಿಗಳು, ಸದಸ್ಯರು ಸಹಿತ ಹಲವಾರು ಮಂದಿ ಭೇಟಿ ನೀಡಿದರು.



ದೇವಮ್ಮ

ಬೆಳ್ತಂಗಡಿ: ತಾಲೂಕಿನ ಬಾರ್ಯ ಗ್ರಾಮದ ಮೂರುಗೋಳಿ ನಿವಾಸಿ ದೇವಮ್ಮ (65) ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.



ಕೃಷ್ಣಪ್ಪ ನಾಯ್ಕ ನೆಕ್ಕಿಲು

ಪುತ್ತೂರು: ಪುತ್ತೂರು ತಾಲೂಕಿನ ಸರ್ವೆ ಗ್ರಾಮದ ನೆಕ್ಕಿಲು ದಿ. ನಾರಾಯಣ ನಾಯ್ಕ ಅವರ ಪುತ್ರ ಕೃಷ್ಣಪ್ಪ ನಾಯ್ಕ ನೆಕ್ಕಿಲು (62) ಮಾ.15ರಂದು ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಮೃತರು ಪತ್ನಿ ರಾಜೀವಿ, ಮಕ್ಕಳಾದ ವನಿತಾ, ಅನಿತಾ ಅವರನ್ನು ಅಗಲಿದ್ದಾರೆ.



ವಿದ್ಯುತ್ ತಂತಿಯಿಂದ ಕೃಷಿಗೆ ಯಾವ ಹಾನಿಯೂ ಇಲ್ಲ: ಪೂರ್ಣಪ್ರಜ್ಞ ಬೇಳೂರು

ಕೃಷಿ ಮೌಲ್ಯವರ್ಧನೆ ಚಿಂತನೆ ನಡೆಯಲಿ

ಉಡುಪಿಯಿಂದ ನೆರೆಯ ಕಾಸರಗೋಡಿಗೆ ಅಂತಾರಾಜ್ಯ 400 ಕೆವಿ ಪವರ್ ಟ್ರಾನ್ಸ್ಮಿಷನ್ ಲೈನ್ ಕಾಮಗಾರಿ ನಡೆಯುತ್ತಿದ್ದು, ಈ ಹಿನ್ನಲೆಯಲ್ಲಿ ಅನೇಕ ಕಡೆಗಳಲ್ಲಿ ಕೃಷಿ ಜಮೀನು ನಾಶವಾಗಿದೆ. ರೈತರಿಗೆ ಧೈರ್ಯ ತುಂಬುವ, ಅವರ ಕೃಷಿ ಚಟುವಟಿಕೆಗಳಿಗೆ ಪರ್ಯಾಯ ಮಾರ್ಗೋಪಾಯಗಳನ್ನು ತಿಳಿಸುವ ನಿಟ್ಟಿನಲ್ಲಿ ಮೂಡುಬಿದಿರೆಯ ಪತ್ರಕರ್ತರು ಜೋಗ ವ್ಯಾಪ್ತಿಯ ವಿದ್ಯುತ್ ಯೋಜನಾ ಪರಿಸರದ ಅಧ್ಯಯನಾತ್ಮಕ ಪ್ರವಾಸ ಕೈಗೊಂಡರು. ಇದೇ ಸಂದರ್ಭದಲ್ಲಿ ಮಾಧ್ಯಮ, ಹೋರಾಟ, ಪರಿಸರ, ಕೃಷಿ ಕ್ಷೇತ್ರಗಳಲ್ಲಿ ಅಪಾರ ಸಂಶೋಧನೆ, ಸಾಧನೆ ಮಾಡಿದ ಪೂರ್ಣಪ್ರಜ್ಞ ಬೇಳೂರು ಜೊತೆಗೆ ಸಂವಾದ ಏರ್ಪಡಿಸಿತ್ತು. ಈ ಸಂದರ್ಭದಲ್ಲಿ ವ್ಯಕ್ತವಾದ ಮಾಹಿತಿಗಳ ಸಂಕ್ಷಿಪ್ತ ನೋಟ ಇಲ್ಲಿದೆ...

▸ **ಹರೀಶ್ ಕೆ.ಆದೂರು**





ಮೂಡುಬಿದಿರೆ: 400ಕೆವಿ ವಿದ್ಯುತ್ ತಂತಿಗಳ ಕೆಳಗೆ ಕಳೆದ 60 ವರುಷಗಳಿಂದ ನಿರಂತರವಾಗಿ ಕೃಷಿ ಚಟುವಟಿಕೆಗಳು ನಡೆಯುತ್ತಲೇ ಇವೆ. ಭತ್ತದ ಗದ್ದೆಗಳಲ್ಲಿ ವಿದ್ಯುತ್ ತಂತಿಯ ಅಡಿ ಭಾಗದಲ್ಲಿಯೇ ಕೃಷಿ ಚಟುವಟಿಕೆಗಳನ್ನು ಮುಂದುವರಿಸಲಾಗುತ್ತಿದೆ. ಎತ್ತರೆತ್ತರ ಬೆಳೆಯುವ ತೆಂಗು ಕಂಗುಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಕೃಷಿಗಳಿಗೆ ಅವಕಾಶವಿದೆ. ಕೃಷಿಯ ಮೌಲ್ಯವರ್ಧನೆಯ ಬಗ್ಗೆ ಕೃಷಿಕರು ಚಿತ್ತ ಹರಿಸಬೇಕಾಗಿದೆ. ಇದಾದಲ್ಲಿ ಮಾತ್ರ ಕೃಷಿಕ ತನ್ನ ಜಮೀನಿನಲ್ಲಿ ಹೊನ್ನು ಬೆಳೆಯಲು ಸಾಧ್ಯ ಎನ್ನುತ್ತಾರೆ ಪೂರ್ಣಪ್ರಜ್ಞ ಬೇಳೂರು.

ಯೋಜನೆಗಳು ಹಲವು ಬರುತ್ತದೆ. ಹಾಗಾದ ಮಾತ್ರಕ್ಕೆ ಎಲ್ಲಾ ಯೋಜನೆಗಳಿಂದ ನಾವು ಭೂಮಿ ಕಳೆದುಕೊಂಡೆವು ಅಥವಾ ಇನ್ನೇನೋ ಸಮಸ್ಯೆ ಆಯಿತು ಎಂದು ಕೈಕಟ್ಟಿ ಕೂರುವುದಲ್ಲ. ಬದಲಾಗಿ ಕೃಷಿಯಲ್ಲಿ ಏನು ಹೊಸತನ ಮಾಡಬಹುದು. ಸಂಘಟಿತವಾಗಿ ಹೇಗೆ ಆದಾಯದ ಮೂಲಕ ಹೆಚ್ಚಿಸಬಹುದು ಎಂಬುದರ ಬಗ್ಗೆ ಕೃಷಿಕರು ಚಿಂತಿಸಬೇಕಾಗಿದೆ ಎಂದರು.

ಮಾಹಿತಿ ಪಡೆದುಕೊಳ್ಳಿ

ಅನೇಕ ಸಂದರ್ಭಗಳಲ್ಲಿ ನಮಗೆ ಮಾಹಿತಿಯಿಲ್ಲ ಎಂದು ರೈತರು ಕೈಕಟ್ಟಿ ಕೂರುತ್ತಾರೆ. ಎಷ್ಟು ಸಾರಿ ಗ್ರಾಮ ಪಂಚಾಯತ್‌ಗಳಿಗೆ ಕೃಷಿಕರು ಹೋಗಿದ್ದಾರೆ? ಕೃಷಿಕರು ಹೋಗಿ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ, ಕೊಳ್ಳುತ್ತಿದ್ದಾರೆ? ಎಂದು ಪ್ರಾಮಾಣಿಕವಾಗಿ ಪ್ರಶ್ನೆ ಮಾಡಬೇಕಾಗಿದೆ. ಅಭಿವೃದ್ಧಿ ಯೋಜನೆಗಳ ಬಗ್ಗೆ ಗ್ರಾಮ ಪಂಚಾಯತ್‌ಗಳಿಗೆ ಮುಂಚಿತವಾಗಿ ಮಾಹಿತಿ ನೀಡಲಾಗುತ್ತದೆ. ಎಲ್ಲಾ ಯೋಜನೆಗಳ ವಿವರಗಳು ಗ್ರಾಮ ಪಂಚಾಯತ್ ಕಚೇರಿಗಳಲ್ಲಿ ಲಭ್ಯವಿರುತ್ತವೆ. ಕೆಲವೊಮ್ಮೆ ರೈತರಿಗೆ ಇಂತಹ ಯೋಜನೆಗಳ ಬಗ್ಗೆ ತಪ್ಪು ಮಾಹಿತಿ ನೀಡಲಾಗುತ್ತದೆ ಎಂದರು.

ವಿದ್ಯುತ್ ಕೃಷಿ ಮತ್ತು ಮನೆ ಬಳಕೆಗೆ ಬಹಳ ಮುಖ್ಯವಾಗಿದೆ. ಅಭಿವೃದ್ಧಿ ಬಗ್ಗೆ ರೈತರು ತಮ್ಮ ಮನೋಭಾವವನ್ನು ಬದಲಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹೈಟೆನ್ಷನ್ ವಿದ್ಯುತ್ ಲೈನ್‌ಗಳ ಕೆಳಗೆ ಕೂಡ ಕೃಷಿ ಮಾಡುವ ಸಾಧ್ಯತೆಗಳ ಬಗ್ಗೆ ರೈತರಿಗೆ ತಿಳುವಳಿಕೆ ನೀಡುವಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ ಎಂದು ಅವರು ಒತ್ತಿಹೇಳಿದರು. ಉದಾಹರಣೆಗೆ ಬಾಳೆ, ಅಕ್ಕಿ, ತರಕಾರಿಗಳು, ಕಬ್ಬು ಮತ್ತು ಹಣ್ಣು ಬೆಳೆಗಳನ್ನು ಬೆಳೆಸಬಹುದು. ಇದರ ಬಗ್ಗೆ ಸೂಕ್ತ ಅರಿವು ಮೂಡಿಸುವ ಕಾರ್ಯ ಮಾಧ್ಯಮಗಳ ಮೂಲಕ ಆಗುವಂತಾಗಲಿ ಎಂದರು.

ತರಕಾರಿ ಬೆಳೆ ಬೆಳೆಯಿರಿ



ವಿದ್ಯುತ್ ತಂತಿ ಹಾದುಹೋದ ಪ್ರದೇಶದಲ್ಲಿ ತರಕಾರಿ ಬೆಳೆ ಬೆಳೆಯಬಹದು. ಅಥವಾ ಭತ್ತದ ಕೃಷಿ ಮಾಡಬಹುದು. ತಂತಿ ಹಾದುಹೋಗುವ ಕೆಳಭಾಗದಲ್ಲಿ ಅಂತಹ ಸಮಸ್ಯೆಗಳೇನೂ ನಮ್ಮೂರಲ್ಲಿ ದಾಖಲಾಗಿಲ್ಲ. ಮಳೆಗಾಲದಲ್ಲಿ ನಮಗೆ ಹೆದರಿಕೆಯಾಗುತ್ತಿತ್ತು. ಈಗ 60 ವರುಷಗಳು ಕಳೆದಿವೆ. ಯಾವೊಂದು ಅನಾಹುತಗಳೂ ಸಂಭವಿಸಿಲ್ಲ. ಹಾಗಾಗಿ ತೊಂದರೆಯೇನಿಲ್ಲ.

■ ದುರ್ಗಪ್ಪ, ಸ್ಥಳೀಯ ಕೃಷಿಕರು, ತಾಳಗುಪ್ಪ

ಸೌತೆ, ಕಾಳುಮೆಣಸು ಸೂಕ್ತ



ಕರಾವಳಿ ಭಾಗದಲ್ಲಿ ನಾಮದ ಸೌತೆಗೆ ಉತ್ತಮ ಬೇಡಿಕೆಯಿದೆ. ವಿದ್ಯುತ್ ತಂತಿ ಹಾದುಹೋಗುವ ಪ್ರದೇಶದ ಕೆಳಭಾಗದಲ್ಲಿ ರೈತರು ಈ ತರಕಾರಿ ಬೆಳೆ ಬೆಳೆಯಬಹುದು. ಕಾಳು ಮೆಣಸು ಸಹ ಬೆಳೆಯಬಹುದು. ಬುಷ್ ಪೆಪ್ಪರ್ ಚೆನ್ನಾಗಿ ಬರುತ್ತದೆ. ಇದರ ಬಗ್ಗೆ ಗಮನ ಹರಿಸಬಹುದು. ಗಡ್ಡೆ ಗೆಣಸುಗಳು, ತರಕಾರಿಗಳನ್ನು ಯಥೇಚ್ಛವಾಗಿ ಮಾಡಬಹುದು. ಕಬ್ಬು ಅಥವಾ ಜೋಳ, ಮೇವಿನ ಹುಲ್ಲು ಹೀಗೆ ಹಲವು ರೀತಿಯಲ್ಲಿ ಯೋಜನೆ ಮಾಡಬಹುದು

■ ಗಣೇಶ್, ಕೃಷಿಕರು, ತಾಳಗುಪ್ಪ

ಪರಿಸರಕ್ಕೆ ದೊಡ್ಡ ಪ್ರಮಾಣದಲ್ಲಿ ಮಾರಕವಾಗುತ್ತಿಲ್ಲ

ಆನಂದಪುರದ ಸಮೀಪದಲ್ಲಿ ಮನೆ, ಗದ್ದೆ, ಮಸೀದಿಗಳ ಸಮೀಪದಲ್ಲಿ, ವಾಸಸ್ಥಳದ ಪರಿಸರದಲ್ಲಿ ಬೃಹತ್ ವಿದ್ಯುತ್ ತಂತಿಗಳು ಹಾದುಹೋಗಿರುವುದನ್ನು ಕಣ್ಣಾರೆ ವೀಕ್ಷಿಸಿದ ಅಧ್ಯಯನ ತಂಡ ಸ್ಥಳ ಪರಿಶೀಲನೆ ನಡೆಸಿತು. ಅದಾದನಂತರ ಹೊಸಗುಂದ ಪರಿಸರದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಅಡ್ಡವಾಗಿ ಸಾಗಿದ ವಿದ್ಯುತ್ ತಂತಿಗಳು, ಕಾರಿಡಾರ್ ಪ್ರದೇಶಗಳನ್ನು ವೀಕ್ಷಿಸಿದರು. ವಾಹನಗಳು, ಬೃಹತ್ ವಾಹನಗಳು ಸಾಗುತ್ತಿದ್ದು, ಯಾವುದೇ ತೊಂದರೆ ಉಂಟಾಗುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಿಕೊಂಡರು. ಸಾಗರ, ತಾಳಗುಪ್ಪ ಪರಿಸರದಲ್ಲಿ ಅಪಾರ ಪ್ರಮಾಣದ ಭತ್ತದ ಗದ್ದೆಯ ನಡುವೆಯೇ ವಿದ್ಯುತ್ ತಂತಿ ಹಾದುಹೋಗುತ್ತಿದ್ದುದನ್ನು ವೀಕ್ಷಿಸಿದರು. ಗದ್ದೆಯ ಮಧ್ಯೆಯೇ ಇರುವ ವಿದ್ಯುತ್ ಗೋಪುರಗಳ ಅಡಿಯಲ್ಲಿ ಗದ್ದೆ ನಿರ್ಮಾಣವಾಗಿತ್ತು. ಕರೆಯ ಮಧ್ಯೆಯೇ ಗೋಪುರ ನಿರ್ಮಾಣವಾಗಿರುವುದನ್ನು ವೀಕ್ಷಿಸಿ, ಮಾಹಿತಿ ಸಂಗ್ರಹ ಮಾಡಲಾಯಿತು. ಒಟ್ಟಿನಲ್ಲಿ ಬೃಹತ್ ಪ್ರಮಾಣದ ವಿದ್ಯುತ್ ತಂತಿಗಳಿಂದ ಪರಿಸರಕ್ಕೆ ದೊಡ್ಡ ಪ್ರಮಾಣದಲ್ಲಿ ಮಾರಕವಾಗುತ್ತಿಲ್ಲ ಎಂಬ ಅಂಶ ದೃಢಗೊಂಡಿತು.



78 ವರುಷಗಳು

1948ರಲ್ಲಿ (ಹಿಂದೆ ಕೃಷ್ಣರಾಜೇಂದ್ರ ಜಲವಿದ್ಯುತ್ ಯೋಜನೆ, ನಂತರ ಮಹಾತ್ಮ ಗಾಂಧಿ ಜಲವಿದ್ಯುತ್ ಯೋಜನೆ) 1948ರಲ್ಲಿ ಕಾರ್ಯಾರಂಭವಾಯಿತು. 1943ರಲ್ಲಿ ಮೈಸೂರು ಸರ್ಕಾರದಿಂದ ಪ್ರಾರಂಭವಾಯಿತು. ವಿದ್ಯುತ್ ಉತ್ಪಾದನಾ ಘಟಕ 1948 ಕಾರ್ಯಾರಂಭ ಮಾಡಿತು. ಆರಂಭಿಕ ಸಾಮರ್ಥ್ಯ ಸುಮಾರು 120 ಮೆಗಾವಾಟ್ ಮಾತ್ರವಾಗಿತ್ತು. ಈಗ ಅತಿ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗಳಾಗುತ್ತಿವೆ. ಇಲ್ಲಿ ಉತ್ಪಾದನೆಯಾದ ವಿದ್ಯುತ್ ಕರ್ನಾಟಕದ ವಿವಿಧ ಭಾಗಗಳಿಗೆ ರಾಜ್ಯ ವಿದ್ಯುತ್ ಜಾಲದ ಮೂಲಕ ಹಂಚಿಕೆಯಾಗುತ್ತದೆ. 110 ಕೆ.ವಿ. ಸಾಮರ್ಥ್ಯದ ವಿದ್ಯುತ್ ಲೈನ್, 220 ಕೆವಿ ಹಾಗೂ 400 ಕೆವಿ ಸಾಮರ್ಥ್ಯದ ವಿದ್ಯುತ್‌ನ್ನು ತಂತಿಗಳ ಮೂಲಕ ಹರಿಸಲಾಗುತ್ತಿದೆ. ಈ ವಿದ್ಯುತ್ ಉತ್ಪದಾನಾ ವಿಧಾನ, ಹಂಚಿಕೆಗಳು ಹಾಗೂ ಪ್ರಸರಣದ ವ್ಯವಸ್ಥೆಯನ್ನು ಸಮರ್ಪಕವಾಗಿ ಅಧ್ಯಯನ ತಂಡ ಅಧ್ಯಯನ ಮಾಡಿತು.

ಪುತ್ತೂರು ಶ್ರೀಮಹಾಲಿಂಗೇಶ್ವರ ದೇವರ ಜಾತ್ರೆಗೆ ಕ್ಷಣಗಣನೆ

ರಥಬೀದಿಗೆ 'ಬ್ರಹ್ಮರಥ' ಆಗಮನ



ಪುತ್ತೂರು: ಇತಿಹಾಸ ಪ್ರಸಿದ್ಧ ಮಹತೋಭಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಏ.10ರಿಂದ ನಡೆಯುವ ಜಾತ್ರೋತ್ಸವದ ಹಿನ್ನಲೆಯಲ್ಲಿ ಮಾ.16 ರಂದು ಸೋಮವಾರ ಬೆಳಗ್ಗೆ ಬ್ರಹ್ಮರಥ ಮಂದಿರದಿಂದ ಬ್ರಹ್ಮರಥವನ್ನು ರಥ ಬೀದಿಗೆ ತರುವ ಮುಹೂರ್ತ ನಡೆಯುವುದರೊಂದಿಗೆ ಪುತ್ತೂರು ಜಾತ್ರೆಗೆ ಕ್ಷಣಗಣನೆ ಆರಂಭಗೊಂಡಿತು.

ರಥ ಕಟ್ಟುವ ಸ್ಥಳದಲ್ಲಿ ಈ ಬಾರಿ ಮಲ್ಲಿಗೆ ಮತ್ತು ಬಿಲ್ವಪತ್ರೆ ಭೂ ಸ್ಪರ್ಶ ಮಾಡಿ ಜಾತ್ರೆಗೆ ಪೂರ್ಣಾನುಗ್ರಹ ಸೂಚಿಸಿದೆ.

ಬೆಳಗ್ಗೆ ಶುಭ ಮುಹೂರ್ತದಲ್ಲಿ ದೇವಳದ ಪ್ರಧಾನ ಅರ್ಚಕ ವೇ. ಮೂ. ವಸಂತ ಕೆದಿಲಾಯ ಅವರು ಬ್ರಹ್ಮರಥಕ್ಕೆ ಮಲ್ಲಿಗೆ ಪುಷ್ಪ, ಗಂಧ, ಬಿಲ್ವಪತ್ರೆ ಸಮರ್ಪಣೆ ಮಾಡಿ ವಿಜೃಂಭಣೆಯಿಂದ, ಯಶಸ್ವಿಯಾಗಿ ಜಾತ್ರೆ ನಡೆಯುವಂತೆ ಪ್ರಾರ್ಥಿಸಿದರು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಮತ್ತು ಅರ್ಚಕರು ತೆಂಗಿನ ಕಾಯಿ ಒಡೆಯುವ ಮೂಲಕ ಚಾಲನೆ ನೀಡಿದರು.

ಇಂಜಿನಿಯರ್ ಪಿ.ಜಿ. ಜಗನ್ನಿವಾಸ್ ರಾವ್ ಮಾರ್ಗದರ್ಶನದಲ್ಲಿ ದೇವಳದ ನೌಕರರು ರಥದ ಹಿಂಬದಿಯ ಚಕ್ರಕ್ಕೆ ದಂಡೆ ಇಟ್ಟು ಚಕ್ರಕ್ಕೆ ಚಾಲನೆ ನೀಡಿದರು. ಬ್ರಹ್ಮರಥವನ್ನು ಕ್ರೈನ್ ಸಹಾಯದಿಂದ ಹೊರಗೆಳೆಯುವ ಕೆಲಸ ನಿರ್ವಹಿಸಲಾಯಿತು.

ದೇವಾಲಯದ ಕೆಲಸಗಾರರು ಸೇರಿ ಬ್ರಹ್ಮರಥವನ್ನು ರಥಬೀದಿಗೆ ತಂದು ನಿಲ್ಲಿಸಿದರು. ರಥಬೀದಿಗೆ ರಥವನ್ನು ತಂದಾಗ ರಥದ ದಂಡೆಯಲ್ಲಿದ್ದ ಬಿಲ್ವಪತ್ರೆ, ತುಳಸಿ, ಬಿಳಿ ಪುಷ್ಪಗಳ ಪೈಕಿ ಬಿಲ್ವಪತ್ರೆ ಮತ್ತು ಮಲ್ಲಿಗೆಯ ಹಾರವೊಂದು ಭೂಸ್ಪರ್ಶ ಮಾಡಿದೆ. ಬಳಿಕ ಬ್ರಹ್ಮರಥವನ್ನು ಅದೇ ಸ್ಥಳದಲ್ಲಿ ನೇರವಾಗಿ ನಿಲ್ಲಿಸಲಾಯಿತು.

ಸೀಮೆಯ ಒಡೆಯ ಮಹಾಲಿಂಗೇಶ್ವರ ದೇವರ ಜಾತ್ರೆಯು ವರ್ಷಂಪ್ರತಿಯಂತೆ ಸಡಗರ ಸಂಭ್ರಮದಿಂದ ನಡೆಯಲಿದ್ದು, ಏ.1 ರಂದು ಗೊನೆ ಮುಹೂರ್ತ ನಡೆಯಲಿದೆ. ಏ.10ರಿಂದ ಏ.20ರ ತನಕ ಜಾತ್ರೋತ್ಸವ ನಡೆಯಲಿದೆ. ಜಾತ್ರೆಯ ಪೂರ್ವ ಸಿದ್ಧತೆಯಾಗಿ ಎಲ್ಲಾ ಭಕ್ತರ ಸಹಕಾರದಿಂದ ಬ್ರಹ್ಮರಥವನ್ನು ರಥಬೀದಿಗೆ ತಂದು ಇರಿಸಲಾಗಿದ್ದು, ಇನ್ನು ರಥ ಕಟ್ಟುವ ಕೆಲಸ ಆರಂಭಗೊಳ್ಳಲಿದೆ.

ಇದೇ ಸಂದರ್ಭದಲ್ಲಿ ದೇವಳದ ರಾಜಾಂಗಣದಲ್ಲಿ ಪುನರ್‌ನಿರ್ಮಾಣಗೊಳ್ಳಲಿರುವ 5 ಕಟ್ಟೆಗಳ ಕೆಲಸವೂ ಆರಂಭಗೊಂಡಿದ್ದು, ಏ.1ರೊಳಗೆ ಪೂರ್ಣಗೊಳ್ಳಲಿದೆ. ಈ ಹಿಂದಿಗಿಂತಲೂ ದೇವಳದ ಎದುರು ಮೈದಾನ ಇನ್ನಷ್ಟು ವಿಶಾಲವಾಗಿದೆ. 40 ಸೆಂಟ್ಸ್ ಜಾಗ ಖರೀದಿ ಮಾಡಿದ್ದೇವೆ. ಕಂಬಳದ ಕರೆ, ಕಂಬಳದ ಸ್ಟೇಜ್ ತೆರವು ಮಾಡಲಾಗುತ್ತಿದೆ. ಹಳೆಯ ಗೋಶಾಲೆ ಹೋಗಿ ವಿಸ್ತಾರವಾಗಿ ಮೈದಾನ ನಿರ್ಮಾಣ ಆಗಿದೆ ಎಂದು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಹೇಳಿದರು.

ಈ ಸಂದರ್ಭದಲ್ಲಿ ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಮಹಾಬಲ ರೈ ವಳತ್ತಡ್ಕ, ಈಶ್ವರ ಬೆಡೇಕರ್, ಸುಭಾಷ್ ರೈ ಬೆಳ್ಳಿಪ್ಪಾಡಿ, ಕಾರ್ಯನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್, ಕಚೇರಿ ವ್ಯವಸ್ಥಾಪಕ ಹರೀಶ್ ಶೆಟ್ಟಿ, ಕಚೇರಿ ಸಹಾಯಕ ಪದ್ಮನಾಭ, ಪಿ.ಜಿ.ಚಂದ್ರಶೇಖರ್, ಕೆ.ಎಸ್.ಆರ್.ಟಿ.ಸಿ. ಘಟಕ ವ್ಯವಸ್ಥಾಪಕ ಸುಬ್ರಹ್ಮಣ್ಯ, ಪ್ರಕಾಶ್ ಎಂ., ಕೊಯಿಲ ಪಶುಸಂಗೋಪನಾ ನಿರ್ದೇಶಕ ಡಾ. ಪ್ರಸನ್ನ ಹೆಬ್ಬಾರ್, ಜಯರಾಜ್, ಸುಧೀರ್ ಕಲ್ಲಾರೆ, ಬಾಲಚಂದ್ರ ಸೊರಕೆ, ಗೋಪಾಲ್, ಗಣೇಶ್ ಸಹಿತ ದೇವಳದ ನೌಕರರು, ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಕಳ ಭಗವಾನ್ ಬಾಹುಬಲಿಯ ಮಹಾಮಸ್ತಕಾಭಿಷೇಕ

ಸಮಿತಿಗಳು ಕಾರ್ಯಪ್ರವೃತ್ತರಾಗಲಿ

ಕಾರ್ಕಳ : ಕಾರ್ಕಳದ ಭಗವಾನ್ ಬಾಹುಬಲಿ ಸ್ವಾಮಿಯ ಮಹಾ ಮಸ್ತಕಾಭಿಷೇಕ 2027 ರಲ್ಲಿ ವೈಭವದಿಂದ ನಡೆಯಲಿದೆ. ಲಕ್ಷಾಂತರ ಭಕ್ತರು, ಸಾರ್ವಜನಿಕರು ಭಾಗವಹಿಸುವ ಈ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲು ವಿವಿಧ ಸಮಿತಿಗಳು ಇಂದಿನಿಂದಲೇ ಕಾರ್ಯಪ್ರವೃತ್ತರಾಗಬೇಕು ಎಂದು ಸಮಿತಿಯ ಕಾರ್ಯಾಧ್ಯಕ್ಷ ಡಾ. ಎಂ. ಎನ್. ರಾಜೇಂದ್ರಕುಮಾರ್ ಸಲಹೆ ನೀಡಿದರು.



ಕಾರ್ಯಕ್ರಮ ನಡೆಯುವ ಸಂದರ್ಭದಲ್ಲಿ ಕಾರ್ಕಳ ಪೇಟೆ ಹಾಗೂ ಬಾಹುಬಲಿ ಬೆಟ್ಟದ ಪರಿಸರದಲ್ಲಿ ಆಗಬೇಕಾದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಸರಕಾರಕ್ಕೆ ಸಂಪೂರ್ಣ ವಿವರಗಳನ್ನು ಈಗಾಗಲೇ ನೀಡಲಾಗಿದೆ, ಸಿಎಂ, ಡಿಸಿಎಂ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ಸ್ಥಳೀಯ ಶಾಸಕ ಸುನಿಲ್ ಕುಮಾರ್ ಅವರು ಈ ವಿಚಾರವನ್ನು ಸರಕಾರದ ಗಮನಕ್ಕೆ ಈಗಾಗಲೇ ತಂದಿದ್ದಾರೆ. ಅಲ್ಲದೆ ಮಹಾಮಸ್ತಕಾಭಿಷೇಕ ಕಾರ್ಯಕ್ರಮದ ದಿನಾಂಕವನ್ನು ಮುಂದಿನ ತಿಂಗಳ 19ರಂದು ಘೋಷಿಸಲಾಗುವುದು ಎಂದು ಡಾ. ಎಂ ಎನ್.ಆರ್. ತಿಳಿಸಿದ್ದಾರೆ.

ಕಾರ್ಕಳದ ಬಾಹುಬಲಿ ಪ್ರವಚನ ಮಂದಿರದಲ್ಲಿ ಭಾನುವಾರ ನಡೆದ ಈ ಸಭೆಯಲ್ಲಿ ಮುಂದಿನ ವರ್ಷ ಫೆಬ್ರವರಿ ತಿಂಗಳಲ್ಲಿ ನಡೆಯುವ ಮಹಾಮಸ್ತಕಾಭಿಷೇಕದ ವಿವಿಧ ಸಮಿತಿಗಳನ್ನು ಹಾಗೂ ಸಮಿತಿಯ ಪದಾಧಿಕಾರಿಗಳನ್ನು ಘೋಷಿಸಲಾಯಿತು. ಮಾತ್ರವಲ್ಲ ಧಾರ್ಮಿಕ ಕಾರ್ಯಕ್ರಮ, ಸಾರ್ವಜನಿಕರಿಗೆ ಊಟೋಪಚಾರ, ಸಾಂಸ್ಕೃತಿಕ ಕಾರ್ಯಕ್ರಮಗಳು ಪಾರ್ಕಿಂಗ್ ವ್ಯವಸ್ಥೆ ಹೀಗೆ ಹಲವು ವಿಚಾರಗಳ ಬಗ್ಗೆಯೂ ಚರ್ಚೆ ನಡೆದವು.

ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಪುಷ್ಪರಾಜ್ ಜೈನ್ ಮಂಗಳೂರು , ಕೋಶಾಧಿಕಾರಿ ಮೋಹನ್ ಪಡಿವಾಳ್, ಸಮಿತಿಯ ಉಪಾಧ್ಯಕ್ಷರುಗಳಾದ ಡಾ. ಕೆ. ಜೀವಂಧರ ಬಲ್ಲಾಳ್, ರತ್ನಾಕರ ರಾಜ ಅರಸ್, ಸೂರಜ್ ಕುಮಾರ್, ಅನಂತಾರಾಜ್ ಪೂವಣಿ, ಸಂಪತ್ ಸಾಮ್ರಾಜ್ಯ, ಮಹಾವೀರ್ ಹೆಗ್ಡೆ, ಸುಧೀರ್ ಪಡಿವಾಳ್ ಹಾಗೂ ಸಮಿತಿಯ ಸಂಚಾಲಕರು, ಸದಸ್ಯರು ಹಾಜರಿದ್ದರು.

ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಯುಗಾದಿ ಮಹೋತ್ಸವ

ಮಂಗಳೂರು: ರಥಬೀದಿ ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಮಾ. 19 ರಿಂದ 28 ರವರೆಗೆ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳ ಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಪ್ರತೀ ದಿನ ಯುಗಾದಿ ಉತ್ಸವ ವಿಜೃಂಭಣೆಯಿಂದ ಜರಗಲಿದೆ. ಮಾ. 19ರಂದು ಬೆಳಿಗ್ಗೆ 10.10 ರಿಂದ ಧ್ವಜಾರೋಹಣ, ರಾತ್ರಿ ಉತ್ಸವ ಆರಂಭ. ಮಾ. 23 ಬೆಳಿಗ್ಗೆ 7.30 ಕ್ಕೆ ಗುರುಮಠದ ಶ್ರೀ ಗುರು ವೀರಭದ್ರ ದೇವರ ಪಂಚಮಿ ಉತ್ಸವ ಬೀದಿ ಸವಾರಿ. ಮಾ. 25ರಂದು ತುಲಾಭಾರ, ಶ್ರೀಗುರು ಪಾದಪೂಜೆ, ರಾತ್ರಿ 7ನೇ ಉತ್ಸವ, ಜಗದ್ಗುರು ಅನಂತಶ್ರೀ ವಿಭೂಷಿತ ಕಾಳ ಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿಯವರಿಂದ ಆಶೀರ್ವಚನ, ವಿಶೇಷ ಬಲಿ ಹೊರಟು ಲಾಲಾಕಿ ಪಲ್ಲಕಿ, ಚಂದ್ರ ಮಂಡಲೋತ್ಸವ ಬೀದಿ ಸವಾರಿ. ಮಾ. 26 ಸಂಜೆ ಗುರುಮಠದ ಗುರು ಶ್ರೀ ವೀರಭದ್ರ ದೇವರ ಉತ್ಸವ ಬೀದಿ ಸವಾರಿ ಅಚ್ಚಡ ಸೇವೆ ಬೀದಿ ಸವಾರಿ ರಾತ್ರಿ ಉತ್ಸವ ಶಯನೋತ್ಸವ. ಮಾ. 27 ಬೆಳಿಗ್ಗೆ 6.30ಕ್ಕೆ ಕವಾಟೋದ್ಘಾಟನೆ ಶ್ರೀ ದೇವಿ ದರ್ಶನ, ಬಟ್ಲು ಕಾಣಿಕೆ, ಧಾರ್ಮಿಕ ಸಭೆ- ಬೆಳಿಗ್ಗೆ 10ಕ್ಕೆ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳ ಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿಯವರಿಂದ ಆಶೀರ್ವಚನ, ಅಲಂಕಾರ ಮಹಾ ಪೂಜೆ ಸಂತರ್ಪಣೆ, ಸಂಜೆ ಅವಭೃತ, ರಾತ್ರಿ ಧ್ವಜಾವರೋಹಣ. ಮಾ. 28 ಮಧ್ಯಾಹ್ನ ಚೂರ್ಣೋತ್ಸವ ವಸಂತ ಮಂಟಪದಲ್ಲಿ ಕಾಣಿಕೆ ಫಲ ಮಂತ್ರಾಕ್ಷತೆ,ಶ್ರೀ ಸುಬ್ರಹ್ಮಣ್ಯ ದೇವರ ಪ್ರೀತ್ಯರ್ಥ ಬಟ್ಲು ಕಾಣಿಕೆ, ರಾತ್ರಿ ಮಹಾ ಪೂಜೆ ನಡೆಯಲಿದೆ. ಪ್ರತೀ ದಿನ ಸಂಜೆ ವೈವಿಧ್ಯಮಯ ಸಾಂಸ್ಕ ತಿಕ ಕಾರ್ಯಕ್ರಮ ನಡೆಯಲಿದೆ ಎಂದು ಕ್ಷೇತ್ರದ ಆಡಳಿತಾಧಿಕಾರಿ ಕೆ.ಉಮೇಶ್ ಆಚಾರ್ಯ ಪಾಂಡೇಶ್ವರ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ, ಉಪನ್ಯಾಸಕರ ವಿವಿಧ ಸಂಘಗಳ ಸ್ಪಷ್ಟ ತೀರ್ಮಾನ

ಮೇಲ್ವಿಚಾರಣೆ ಹಿಂತೆಗೆಯದಿದ್ದರೆ ಮೌಲ್ಯಮಾಪನ ಬಹಿಷ್ಕಾರ

ಮಂಗಳೂರು: ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನಿರ್ದೇಶಕರ ಕಚೇರಿಯ ಮೇಲ್ವಿಚಾರಣೆಯನ್ನು ಜಿಲ್ಲಾ ಪಂಚಾಯತ್ ಸಿಇಒ ಅವರಿಗೆ ವಹಿಸುವ ಸರಕಾರದ ಪ್ರಸ್ತಾವಿತ ಯೋಜನೆಯನ್ನು ತಕ್ಷಣವೇ ಹಿಂಪಡೆಯಬೇಕು. ಇಲ್ಲವಾದರೆ ಮಾ.20ರಿಂದ ನಡೆಯಲಿರುವ ದ್ವಿತೀಯ ಪಿಯು ಮೌಲ್ಯಮಾಪನವನ್ನು ಬಹಿಷ್ಕರಿಸಿ, ಮಂಗಳೂರು ಮಿನಿ ವಿಧಾನಸೌಧದ ಮುಂಭಾಗ ಪ್ರತಿಭಟನೆ ನಡೆಸುವ ಬಗ್ಗೆ ದ.ಕ. ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ವಿವಿಧ ಸಂಘಗಳು ಸೋಮವಾರ ತೀರ್ಮಾನ ಕೈಗೊಂಡಿವೆ.

ದಕ್ಷಿಣ ಕನ್ನಡ ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಡಾ. ನವೀನ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ರೆಡ್ ಕ್ರಾಸ್ ಸಭಾಭವನದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.



ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಪಿಯು ವಿಭಾಗದ ಮೇಲೆ ಜಿಲ್ಲಾ ಪಂಚಾಯತ್ ಸಿಇಒ ಅವರು ಮೇಲ್ವಿಚಾರಣೆ ನಡೆಸುವ ಪ್ರಮೇಯ ಎದುರಾಗಿದೆ. ಇದು ಎಲ್ಲಾ ಜಿಲ್ಲೆಗಳಿಗೂ ಬಂದರೆ ಪದವಿಪೂರ್ವ ಶಿಕ್ಷಣದ ಅಸ್ತಿತ್ವವೇ ಕಳೆದುಹೋಗಲಿದೆ. ಇದರ ವಿರುದ್ಧ ಸರಕಾರಿ ಅನುದಾನಿತ ಉಪನ್ಯಾಸಕರ ಜತೆಗೆ ಅನುದಾನರಹಿತ ವಿಭಾಗದ ಎಲ್ಲಾ ಶಿಕ್ಷಕರು ಕೂಡ ಒಗ್ಗಟ್ಟಾಗಿ ಹೋರಾಟ ನಡೆಸಬೇಕಿದೆ. ಹೀಗಾಗಿ ಮೌಲ್ಯಮಾಪನ ಬಹಿಷ್ಕರಿಸಲು ಎಲ್ಲರೂ ಜತೆಯಾಗೋಣ ಎಂದು ಅವರು ಹೇಳಿದರು.

ದ.ಕ. ಉಪನ್ಯಾಸಕರ ಸಂಘದ ಕಾರ್ಯಾಧ್ಯಕ್ಷ ಚಂದ್ರನಾಥ ಎಂ. ನಿರ್ಣಯವನ್ನು ಮಂಡಿಸಿದರು. ಮಾ.17ರಿಂದ ವೀಕ್ಷಕರು ಮೌಲ್ಯಮಾಪನಕ್ಕೆ ಹೋದರೂ ಕಾರ್ಯ ಪ್ರಾರಂಭ ಮಾಡಬಾರದು. ಮೌಲ್ಯಮಾಪನಮುಖ್ಯಸ್ಥರೂ ಕಾರ್ಯನಿರ್ವಹಣೆ ಆರಂಭಿಸಬಾರದು. ಹಾಗೂ ಮಾ.20ರಿಂದ ಮೌಲ್ಯಮಾಪನಕೇಂದ್ರಗಳಿಗೆಹೋಗಬೇಕಾಗಿರುವ ದ.ಕ ಜಿಲ್ಲೆಯ ಎಲ್ಲಾ ಉಪನ್ಯಾಸಕರು ನೇರವಾಗಿ ಮಂಗಳೂರಿನ ಮಿನಿವಿಧಾನಸೌಧ ಮುಂಭಾಗಕ್ಕೆ ಆಗಮಿಸಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕು. ಹಾಗೂ ಇದರ ಬಗ್ಗೆ ವಿಶೇಷ ಗಮನಹರಿಸಲು ಮೌಲ್ಯಮಾಪನ ಕೇಂದ್ರಕ್ಕೆ ಅನುಗುಣವಾಗಿ ಸಮನ್ವಯ ಸಮಿತಿ ರಚಿಸಲಾಗುವುದು ಎಂದರು.

> ಸರಕಾರದ ಪ್ರಸ್ತಾವಿತ ಯೋಜನೆಯನ್ನು ಕೈಬಿಡದಿದ್ದರೆ ಬೆಂಗಳೂರು ಚಲೋ ನಡೆಸಲಾಗುವುದು. ಮೌಲ್ಯಮಾಪನ ಬಹಿಷ್ಕರಿಸಿ ಹೋರಾಟಕ್ಕೆ ನಮ್ಮ ಪೂರ್ಣ ಬೆಂಬಲ ಇದೆ.
>
> ■ ಮಂಜುನಾಥ ರೇವಣ್ಕರ್, ಕುಪ್ಮಾ ಹಾಗೂ ರುಪ್ಸಾ ಪ್ರಮುಖರು

ಜಿಲ್ಲಾ ಪ್ರಾಂಶುಪಾಲರ ಸಂಘದ ಮಾಜಿ ಅಧ್ಯಕ್ಷ ಗಂಗಾಧರ ಆಳ್ವ, ರಾಜ್ಯ ಪ್ರಾಂಶುಪಾಲರ ಸಂಘದ ಕಾರ್ಯದರ್ಶಿ ಜಯಾನಂದ ಸುವರ್ಣ, ಉಪನ್ಯಾಸಕರ ಸಂಘದ ಅಧ್ಯಕ್ಷ ಹರಿಪ್ರಕಾಶ್ ಬೈಲಾಡಿ, ಅನುದಾನಿತ ಪ.ಪೂರ್ವ ಕಾಲೇಜುಗಳ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಸೋಮಶೇಖರ ನಾಯಕ್, ಅನುದಾನಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಗೌರವಾಧ್ಯಕ್ಷ ವಿಠಲ ಎ. ಅವರು ಮಾತನಾಡಿ ಸರಕಾರ ನಮ್ಮ ಬೇಡಿಕೆಯನ್ನು ಈಡೇರಿಸಬೇಕು. ಒಂದು ವೇಳೆ ಈಡೇರಿಸದಿದ್ದರೆ ಪದವಿಪೂರ್ವ ಶಿಕ್ಷಣ ವ್ಯವಸ್ಥೆಯ ಉಳಿವಿಗಾಗಿ ಮೌಲ್ಯಮಾಪನ ಬಹಿಷ್ಕಾರ ಮಾಡುವುದು ನಿಶ್ಚಿತ ಎಂದರು.

ಶಾಲಾ ಶಿಕ್ಷಣ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಪ್ರೇಮನಾಥ್ ಶೆಟ್ಟಿ, ಹಿರಿಯ ಪ್ರಾಂಶುಪಾಲರಾದ ಜಯಶ್ರೀ ಪಿ, ದ.ಕ. ಪ.ಪೂರ್ವ ಪ್ರಾಂಶುಪಾಲರ ಸಂಘದ ಕೋಶಾಧಿಕಾರಿ ಎ.ಎಸ್.ಆದರ್ಶ್ , ಅತಿಥಿ ಉಪನ್ಯಾಸಕರ ರಾಜ್ಯ ಸಂಘದ ಅಧ್ಯಕ್ಷರಾದ ಪದ್ಮಪ್ರಭ ಇಂದ್ರ ಉಪಸ್ಥಿತರಿದ್ದರು.

ದ.ಕ. ಪ.ಪೂರ್ವ ಪ್ರಾಂಶುಪಾಲರ ಸಂಘದ ಕಾರ್ಯದರ್ಶಿ ಮಮತಾ ವಂದಿಸಿದರು. ಪ್ರಾಚಾರ್ಯರಾದ ಶರ್ಮಿಳಾ ಮುಖೇಶ್ ರಾವ್ ನಿರೂಪಿಸಿದರು.

ಕಿರುಸುದ್ದಿ

ಪಾಕ್ ಆಟಗಾರನಿಗೆ ನೀಡುವ ವೇತನವು ಭಾರತಕ್ಕೆ ಮಾರಕ

ಹೊಸದಿಲ್ಲಿ: ಸನ್ ಟಿವಿ ನೆಟ್‌ವರ್ಕ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ಮುಖ್ಯಸ್ಥೆ ಕಾವ್ಯಾ ಮಾರನ್ ಒಡೆತನದ ದಿ ಹಂಡ್ರೆಡ್‌ನ ಸನ್‌ರೈಸರ್ಸ್ ಲೀಡ್ಸ್ ಪಾಕಿಸ್ತಾನಿ ಸ್ಪಿನ್ನರ್ ಅಬ್ರಾರ್ ಅಹ್ಮದ್‌ರನ್ನು ಖರೀದಿಸಿರುವುದನ್ನು ಮಾಜಿ ಕ್ರಿಕೆಟಿಗರ ಲಿಟಲ್ ಮಾಸ್ಟರ್ ಸುನಿಲ್ ಗವಾಸ್ಕರ್ ಕಟುವಾಗಿ ವಿರೋಧಿಸಿದ್ದಾರೆ. ಪಾಕಿಸ್ತಾನಿ ಆಟಗಾರರಿಗೆ ವೇತನ ನೀಡುವುದು ಭಾರತದ ವಿರುದ್ಧ ಹಾನಿ ಮಾಡಲು ಕೊಡುಗೆ ನೀಡಿದಂತೆ ಎಂದು ನೇರ ಮಾತಿನಲ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ. ದಿ ಹಂಡ್ರೆಡ್ ಪಂದ್ಯಾವಳಿಯಲ್ಲಿ ಭಾರತೀಯ ಫ್ರಾಂಚೈಸಿ ಮಾಲೀಕರು ಪಾಕ್ ಆಟಗಾರನನ್ನು ಖರೀದಿಸಿರುವುದು ನಿಜಕ್ಕೂ ನನಗೆ ಆಶ್ಚರ್ಯ ಮೂಡಿಸಿದೆ.

ಸಚಿನ್ 100ನೇ ಶತಕಕ್ಕೆ 14 ವರ್ಷ

ಮುಂಬೈ: ಕ್ರಿಕೆಟ್ ದೇವರೆಂದೇ ಕರೆಯಲ್ಪಡುವ ಸಚಿನ್ ತೆಂಡುಲ್ಕರ್ ಅವರ 100ನೇ ಅಂತಾರಾಷ್ಟ್ರೀಯ ಶತಕದ ಮೈಲಿಗಲ್ಲಿಗೆ 14 ವರ್ಷಗಳಾಗಿವೆ. 2012ರ ಮಾ.16ರಂದು ಢಾಕಾದಲ್ಲಿ ನಡೆದಿದ್ದ ಬಾಂಗ್ಲಾದೇಶ ತಂಡದ ವಿರುದ್ಧದ ಏಷ್ಯಾ ಕಪ್ ಏಕದಿನ ಪಂದ್ಯದಲ್ಲಿ ಸಚಿನ್ ತಮ್ಮ 100ನೇ ಅಂತಾರಾಷ್ಟ್ರೀಯ ಶತಕವನ್ನು ದಾಖಲಿಸಿದ್ದರು. ಪಂದ್ಯದಲ್ಲಿ 147 ಎಸೆತಗಳನ್ನು ಎದುರಿಸಿದ್ದ ತೆಂಡುಲ್ಕರ್ ಅವರು 12 ಬೌಂಡರಿಗಳನ್ನು ಮತ್ತು ಏಕೈಕ ಸಿಕ್ಸರ್ ಒಳಗೊಂಡಿದ್ದ 114 ರನ್‌ಗಳನ್ನು ಕಲೆಹಾಕಿದ್ದರು. ಸ್ಕ್ವೇರ್ ಲೆಗ್ ಕ್ಷೇತ್ರದಲ್ಲಿ ಒಂದು ರನ್ ಕಸಿಯುವ ಮೂಲಕ ತೆಂಡುಲ್ಕರ್ ಮೈಲಿಗಲ್ಲು ಪೂರೈಸಿದ್ದರು. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಚಿನ್ 51 ಟೆಸ್ಟ್ ಮತ್ತು 49 ಏಕದಿನ ಶತಕಗಳನ್ನು ದಾಖಲಿಸಿದ್ದರು.

ಜೇಮ್ಸ್ ಫೋಸ್ಟರ್ ಸಿಎಸ್‌ಕೆ ನೂತನ ಫೀಲ್ಡಿಂಗ್ ಕೋಚ್

ಚೆನ್ನೈ: ಇಂಗ್ಲೆಂಡ್‌ನ ಮಾಜಿ ಕ್ರಿಕೆಟಿಗ ಜೇಮ್ಸ್ ಫೋಸ್ಟರ್ ಅವರನ್ನು ನೂತನ ಫೀಲ್ಡಿಂಗ್ ಕೋಚ್ ಆಗಿ ನೇಮಿಸಿರುವುದಾಗಿ ಐಪಿಎಲ್ ಫ್ರಾಂಚೈಸಿ ಚೆನ್ನೈ ಸೂಪರ್ ಕಿಂಗ್ಸ್ ಸೋಮವಾರ ದೃಢೀಕರಿಸಿದೆ. ಫೋಸ್ಟರ್ ಅವರು ಇಂಗ್ಲೆಂಡ್ ಪರ 7 ಟೆಸ್ಟ್, 12 ಏಕದಿನ ಮತ್ತು 5 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ ಅನುಭವ ಹೊಂದಿದ್ದಾರೆ. ಫ್ರಾಂಚೈಸಿ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕೋಚಿಂಗ್ ಅನುಭವವನ್ನು ಫೋಸ್ಟರ್ ಹೊಂದಿದ್ದಾರೆ. ದಿ ಹಂಡ್ರೆಡ್ ಟೂರ್ನಿಯಲ್ಲಿ ಅವರು ಬರ್ಮಿಂಗಮ್ ಫೀನಿಕ್ಸ್‌ನ ಸಹಾಯಕ ಕೋಚ್ ಆಗಿದ್ದರು.

ಕೆಎಸ್‌ಸಿಎ, ಆರ್‌ಸಿಬಿಗೆ ರಾಜ್ಯ ಸರ್ಕಾರದ ಅಧಿಕೃತ ಅನುಮತಿ

ಸರ್ಕಾರದ ಗ್ರೀನ್ ಸಿಗ್ನಲ್ ಚಿನ್ನಸ್ವಾಮಿನಲ್ಲಿ ಐಪಿಎಲ್

ಹೊಸದಿಲ್ಲಿ: ಐಪಿಎಲ್ 2026ರ ಪಂದ್ಯಗಳನ್ನು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಫ್ರಾಂಚೈಸಿಗೆ ಕರ್ನಾಟಕ ಸರ್ಕಾರದಿಂದ ಸೋಮವಾರ ಅಧಿಕೃತ ಅನುಮತಿ ಲಭಿಸಿದೆ. ಈ ನಿರ್ಧಾರದಿಂದ, ಆರ್‌ಸಿಬಿ ತನ್ನ ಚೊಚ್ಚಲ ಐಪಿಎಲ್ ಪ್ರಶಸ್ತಿಯನ್ನು ಗೆದ್ದ ನಂತರದ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತ ದುರಂತ ಸಂಭವಿಸಿತ್ತು. ಕಾಲ್ತುಳಿತ ದುರಂತದ ನಂತರ ಮೈದಾನದಲ್ಲಿ ಯಾವುದೇ ಐಪಿಎಲ್ ಅಥವಾ ಅಂತಾರಾಷ್ಟ್ರೀಯ ಪಂದ್ಯಗಳು ನಡೆಯುವ ಬಗ್ಗೆ ಇದ್ದ ಅನಿಶ್ಚಿತತೆ ಅಂತ್ಯಗೊಂಡಿದೆ.

ಕೆಎಸ್‌ಸಿಎ ಕೃತಜ್ಞತೆ

ಈ ಅನುಮತಿ ಪ್ರಕ್ರಿಯೆಗೆ ನೆರವಾದ ರಾಜ್ಯ ಸರ್ಕಾರ ಮತ್ತು ತಜ್ಞ ಸಮಿತಿಗೆ ಕೆಎಸ್‌ಸಿಎ ಧನ್ಯವಾದ ತಿಳಿಸಿದೆ. ತಜ್ಞ ಸಮಿತಿ ಕಾರ್ಯದರ್ಶಿ ಹಾಗೂ ಬೆಂಗಳೂರು ಪೊಲೀಸ್ ಆಯುಕ್ತ ಶ್ರೀಮಂತ್ ಕುಮಾರ್ ಸಿಂಗ್ ಅವರಿಗೆ ನಮ್ಮ ವಿಶೇಷ ಧನ್ಯವಾದಗಳು. ಅವರು ಸಕ್ರಿಯ ಸಂಯೋಜನೆ ನಡೆಸಿ, ಎಲ್ಲಾ ಭದ್ರತಾ ಹಾಗೂ ಕಾರ್ಯಾಚರಣಾ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಲು ನೆರವಾದರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ತಜ್ಞ ಸಮಿತಿಯ ಗೌರವಾನ್ವಿತ ಸದಸ್ಯರು ಹಾಗೂ ಅದರ ಉಪಸಮಿತಿಗಳ ಅಧಿಕಾರಿಗಳು ನೀಡಿದ ಸೂಕ್ಷ್ಮ ಪರಿಶೀಲನೆ ಮತ್ತು ರಚನಾತ್ಮಕ ಶಿಫಾರಸುಗಳು ಈ ಮಹತ್ವದ ನಿರ್ಧಾರಕ್ಕೆ ನೆರವಾದವು ಎಂದು ತಿಳಿಸಿದೆ.

ತಜ್ಞರ ಸಮಿತಿಯ ಪರಿಶೀಲನೆ ಬಳಿಕ ಅನುಮತಿ

ಅನುಮತಿ ನೀಡುವ ಮೊದಲು, ಕರ್ನಾಟಕ ಗೃಹ ಸಚಿವ ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ರಾಜ್ಯ ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ಈ ಸಭೆಯಲ್ಲಿ ಭಾಗವಹಿಸಿತು. ಸಭೆಯಲ್ಲಿ ಕೆಎಸ್‌ಸಿಎ, ಆರ್‌ಸಿಬಿ ಮತ್ತು ಕಾರ್ಯಕ್ರಮ ನಿರ್ವಹಣಾ ಸಂಸ್ಥೆ ಡಿಎನ್‌ಎ ಪ್ರತಿನಿಧಿಗಳೂ ಹಾಜರಿದ್ದರು. ಚರ್ಚೆಯ ವೇಳೆ ಮುಂಬರುವ ಐಪಿಎಲ್ ಪಂದ್ಯಗಳ ಆಯೋಜನೆಗೂ ಮುನ್ನ ಮೈದಾನದಲ್ಲಿ ಕೈಗೊಳ್ಳಲಾದ ಸಿದ್ಧತೆಗಳು ಹಾಗೂ ಭದ್ರತಾ ಕ್ರಮಗಳ ಕುರಿತು ತಜ್ಞ ಸಮಿತಿ ವಿವರವಾದ ವರದಿ ಮಂಡಿಸಿತು. ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಅವರ ಪ್ರಕಾರ, ಸಮಿತಿಯ ಶಿಫಾರಸುಗಳು ಹಾಗೂ ಸರ್ಕಾರದ ಪರಿಶೀಲನೆಯ ಬಳಿಕ ಅಧಿಕೃತ ಅನುಮತಿ ನೀಡಲಾಗಿದೆ. ತಜ್ಞರ ಸಮಿತಿಯು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೈಗೊಂಡಿರುವ ಸಿದ್ಧತೆಗಳು ಹಾಗೂ ನಿಯಮಾನುಸರಣೆ ಕ್ರಮಗಳ ಬಗ್ಗೆ ವರದಿ ಮಂಡಿಸಿತು. ವ್ಯವಸ್ಥೆಗಳನ್ನೆಲ್ಲಾ ಸಮಗ್ರ ಪರಿಶೀಲಿಸಿದ ನಂತರ ಗೌರವಾನ್ವಿತ ಗೃಹ ಸಚಿವರು ಐಪಿಎಲ್ ಪಂದ್ಯಗಳನ್ನು ಇಲ್ಲಿ ನಡೆಸಲು ಅಧಿಕೃತ ಅನುಮತಿ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚಿನ್ನಸ್ವಾಮಿ ಮೈದಾನದಲ್ಲೇ ಟೂರ್ನಿಯ ಆರಂಭ

ಐಪಿಎಲ್ 19ನೇ ಆವೃತ್ತಿ ಮಾ.28ರಂದು ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ವಿರುದ್ಧ ತವರಿನ ಎಂ.ಚಿನ್ನಸ್ವಾಮಿ ಮೈದಾನದಲ್ಲಿ ಕಣಕ್ಕಿಳಿಯಲಿದೆ. ಉದ್ಘಾಟನಾ ಪಂದ್ಯ ಮಾತ್ರವಲ್ಲದೆ, ಟೂರ್ನಿಯ ಉದ್ಘಾಟನಾ ಸಮಾರಂಭ ಹಾಗೂ ಆರ್‌ಸಿಬಿ ತಂಡದ ಪ್ರಸಿದ್ಧ ಅನ್‌ಬಾಕ್ಸಿಂಗ್ ಕಾರ್ಯಕ್ರಮವೂ ಇದೇ ಮೈದಾನದಲ್ಲಿ ನಡೆಯಲಿದೆ. ಇದು ಸಾಮಾನ್ಯವಾಗಿ ಹೊಸ ಆವೃತ್ತಿಯ ಆರಂಭವನ್ನು ಸೂಚಿಸುವ ಕಾರ್ಯಕ್ರಮವಾಗಿದೆ.

ಆರ್‌ಸಿಬಿ ತವರಿನ ಪಂದ್ಯಗಳ ವೇಳಾಪಟ್ಟಿ

ಐಪಿಎಲ್ 2026 ಆವೃತ್ತಿಯಲ್ಲಿ ಆರ್‌ಸಿಬಿ ತನ್ನ 7 ತವರಿನ ಪಂದ್ಯಗಳಲ್ಲಿ, ಐದು ಪಂದ್ಯಗಳನ್ನು ಅಭಿಮಾನಿಗಳ ನೆಚ್ಚಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಉಳಿದ ಎರಡು ತವರಿನ ಪಂದ್ಯಗಳನ್ನು ರಾಯ್ಪುರ್‌ನ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಆಯೋಜಿಸಲು ಫ್ರಾಂಚೈಸಿ ನಿರ್ಧರಿಸಿದೆ. ಈ ವ್ಯವಸ್ಥೆಯಿಂದ ಬೆಂಗಳೂರು ತಂಡದ ಮುಖ್ಯ ತವರಿನ ಮೈದಾನವಾಗಿಯೇ ಉಳಿದಿದೆ, ಜೊತೆಗೆ ಕೆಲವು ಪಂದ್ಯಗಳನ್ನು ಪರ್ಯಾಯ ಮೈದಾನದಲ್ಲಿ ನಡೆಸಲು ಅವಕಾಶ ಸಿಗುತ್ತದೆ.



2027ರ ಒಡಿಐ ವಿಶ್ವಕಪ್ ಗೆಲ್ಲುವುದೇ ಗುರಿ: ಗಿಲ್

ಹೊಸದಿಲ್ಲಿ: ಮುಂದಿನ ವರ್ಷ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್ ಗೆಲ್ಲುವುದೇ ತಮ್ಮ ತಂಡದ ಪ್ರಮುಖ ಗುರಿ ಎಂದು ಭಾರತದ ಏಕದಿನ ಕ್ರಿಕೆಟ್ ತಂಡದ ನಾಯಕ ಶುಬ್ಮನ್ ಗಿಲ್ ಸೋಮವಾರ ಹೇಳಿದ್ದಾರೆ.

2023ರ ಆವೃತ್ತಿಯ ತವರಿನ ವಿಶ್ವಕಪ್‌ನಲ್ಲಿ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿದ್ದ ರೋಹಿತ್ ಶರ್ಮಾ ನೇತೃತ್ವದ ತಂಡ, ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೋಲುಂಡಿತ್ತು. ವಿಶ್ವಕಪ್ ಫೈನಲ್ ಸೋಲು ಭಾರತೀಯ ಕ್ರಿಕೆಟ್ ತಂಡ ಮತ್ತು ಕ್ರಿಕೆಟ್ ಅಭಿಮಾನಿಗಳಿಗೆ ಆಘಾತವನ್ನು ನೀಡಿತ್ತು.

ಟಿ20 ಗೆದ್ದಾಯ್ತು, ಇನ್ನು ಏಕದಿನ: ಭಾರತ ತಂಡ ಸತತ ಎರಡು ಟಿ20 ವಿಶ್ವಕಪ್ ಗೆದ್ದ ಬಳಿಕ ಇದೀಗ ಶುಬ್ಮನ್ ಗಿಲ್ ನೇತೃತ್ವದ ತಂಡವು ಏಕದಿನ ವಿಶ್ವಕಪ್ ಟ್ರೋಫಿಯ ಮೇಲೆ ಕಣ್ಣಿಟ್ಟಿದೆ. ಮುಂದಿನ ವರ್ಷ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ರಾಷ್ಟ್ರಗಳ ಜಂಟಿ ಆತಿಥ್ಯದಲ್ಲಿ ಏಕದಿನ ವಿಶ್ವಕಪ್ ನಡೆಯಲಿದೆ.



> ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ.
>
> ■ ಶುಬ್ಮನ್ ಗಿಲ್, ಭಾರತ ಏಕದಿನ ತಂಡದ ನಾಯಕ

ದಕ್ಷಿಣ ಆಫ್ರಿಕಾದಲ್ಲಿ ಇನ್ನೊಂದು ಅವಕಾಶ?

ಭಾನುವಾರ ರಾತ್ರಿ ಬಿಸಿಸಿಐ ಆಯೋಜಿಸಿದ್ದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ನಾಯಕ ಶುಬ್ಮನ್, ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ ಎಂದು ಅಭಿಪ್ರಾಯಿಸಿದ್ದಾರೆ.

ಯಶಸ್ಸಿನ ಪಥದಲ್ಲಿ ಭಾರತೀಯರು: ಸೂರ್ಯ



ಈ ಮಧ್ಯೆ ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತದ ಟಿ20 ತಂಡದ ನಾಯಕ ಸೂರ್ಯ ಕುಮಾರ್ ಯಾದವ್, 2024ರ ಟಿ20 ವಿಶ್ವಕಪ್ ಜಯವು ಭಾರತೀಯ ಕ್ರಿಕೆಟಿಗರು ಯಶಸ್ಸಿನ ಪಥದಲ್ಲಿ ಓಡಲು ನೆರವಾಗಿದೆ. ಪುರುಷರ ತಂಡ ಚಾಂಪಿಯನ್ಸ್ ಟ್ರೋಫಿ ಮತ್ತು ವನಿತೆಯರು ಚೊಚ್ಚಲ ಏಕದಿನ ವಿಶ್ವಕಪ್ ಗೆದ್ದಿದ್ದರು ಎಂದು ಹೇಳಿದರು.


ಆ ಒಂದು ಹೆಜ್ಜೆ ಬಹಳ ಮುಖ್ಯವಾಗಿತ್ತು. ಐಸಿಸಿ ಟ್ರೋಫಿ ಗೆಲ್ಲಲು ಏನು ಬೇಕು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಲು ಆ ಅನುಭವ ಬಹಳ ಮುಖ್ಯ ಎಂದು ನಾಯಕ ಸೂರ್ಯ ಕುಮಾರ್ ಹೇಳಿದರು. ಇನ್ನು ಹಿಂದೆ ತಿರುಗಿ ನೋಡುವ ಪ್ರಶ್ನೆಯೇ ಇಲ್ಲ. ಈ ಯಶಸ್ಸು ಆರಂಭವಾಗಿರುವುದರಿಂದ ಸಾಧ್ಯವಾದಷ್ಟು ಹೆಚ್ಚು ಟ್ರೋಫಿಗಳನ್ನು ಗೆಲ್ಲಲು ಪ್ರಯತ್ನಿಸೋಣ ಎಂದು ಸೂರ್ಯ ಹೇಳಿದರು.

- ಅಕ್ಟೋಬರ್-ನವೆಂಬರ್‌ನಲ್ಲಿ ಐಸಿಸಿ ಏಕದಿನ ವಿಶ್ವಕಪ್
- ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ಜಂಟಿ ಆತಿಥ್ಯ

ಸಿನ್ನರ್, ಸೆಬಲೆಂಕಾ ಚಾಂಪಿಯನ್ಸ್

» ಇಂಡಿಯನ್ ವೆಲ್ಸ್ 2026 ಎಟಿಪಿ ಮಾಸ್ಟರ್ಸ್ ಟೂರ್ನಿ ಎಲ್ಲಾ 6 ಎಟಿಪಿ ಮಾಸ್ಟರ್ಸ್ 1000 ಹಾರ್ಡ್‌ಕೋರ್ಟ್ ಪ್ರಶಸ್ತಿ ಗೆದ್ದ 3ನೇ ಟೆನಿಸಿಗ ಯಾನಿಕ್ ಸಿನ್ನರ್





ಕ್ಯಾಲಿಫೋರ್ನಿಯಾ: ಇಂಡಿಯನ್ ವೆಲ್ಸ್ ಎಟಿಪಿ ಮಾಸ್ಟರ್ಸ್ ಟೆನಿಸ್ ಪಂದ್ಯಾವಳಿಯಲ್ಲಿ ಇಟಲಿಯ ಯಾನಿಕ್ ಸಿನ್ನರ್ ಪುರುಷರ ಸಿಂಗಲ್ಸ್ ವಿಭಾಗದ ಹಾಗೂ ಬೆಲಾರೂಸ್‌ನ ಆರೀನಾ ಸೆಬಲೆಂಕಾ ಅವರು ಮಹಿಳೆಯರ ವಿಭಾಗದ ಚಾಂಪಿಯನ್ನರಾಗಿ ಹೊರಹೊಮ್ಮಿದ್ದಾರೆ.


ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಸಿನ್ನರ್ ತನ್ನ ಚೊಚ್ಚಲ ಇಂಡಿಯನ್ ವೆಲ್ಸ್ ಪ್ರಶಸ್ತಿಯನ್ನು ಗೆದ್ದರು. ಅವರು ಫೈನಲ್‌ನಲ್ಲಿ ಡೇನಿಲ್ ಮೆಡ್ವೆಡೆವ್ ಅವರನ್ನು 7–6(6), 7–6(4) ನೇರ ಸೆಟ್‌ಗಳ ಅಂತರದಿಂದ ಸೋಲಿಸಿ, ಕ್ಯಾಲಿಫೋರ್ನಿಯಾ ಮರುಭೂಮಿಯ ಸೂರ್ಯನಡಿ ಅದ್ಭುತ ಹಾರ್ಡ್‌ಕೋರ್ಟ್ ಪ್ರದರ್ಶನ ನೀಡಿದರು. ಇಟಲಿ ಆಟಗಾರ ಸಂಪೂರ್ಣ ಪಂದ್ಯದಲ್ಲಿ ಪ್ರಾಬಲ್ಯ ತೋರಿದರು. 28 ವಿನ್ನರ್‌ಗಳು

ಒಂದೂ ಸೆಟ್ ಸೋಲದೆ ಎಟಿಪಿ ಪ್ರಶಸ್ತಿ: 1990ರಿಂದ ಒಂದೂ ಸೆಟ್ ಕೂಡ ಕಳೆದುಕೊಳ್ಳದೇ ಸತತ ಎಟಿಪಿ ಮಾಸ್ಟರ್ಸ್ 1000 ಪ್ರಶಸ್ತಿಗಳನ್ನು ಗೆದ್ದ ಮೊದಲ ಆಟಗಾರ ಎಂಬ ದಾಖಲೆಯನ್ನೂ ನಿರ್ಮಿಸಿದರು. ಕಳೆದ ನವೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ಪಡೆದ ಪ್ರಶಸ್ತಿಯಿಂದ ಆರಂಭವಾದ ಅವರ ಗೆಲುವಿನ ಸರಣಿ ಈಗ 11 ಪಂದ್ಯಗಳಿಗೆ ಏರಿದೆ.

ಸೆಬಲೆಂಕಾಗೆ ವೃತ್ತಿಜೀವನದ 23ನೇ ಪ್ರಶಸ್ತಿ!: ಬೆಲಾರೂಸ್ ತಾರೆ ಆರೀನಾ ಸೆಬಲೆಂಕಾ ಭಾನುವಾರ ತಮ್ಮ ದೀರ್ಘಕಾಲದ ಸೋಲಿನ ಸರವಣಿಯನ್ನು ಮುರಿದು, ಇದೇ ಮೊದಲ ಬಾರಿಗೆ ಇಂಡಿಯನ್ ವೆಲ್ಸ್‌ನಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಲ್ಲದೆ ತಮ್ಮ ವೃತ್ತಿಜೀವನದ 23ನೇ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ರೋಚಕ ಫೈನಲ್ ಪಂದ್ಯದಲ್ಲಿ ಕಜಕಿಸ್ತಾನದ ತಾರೆ ಎಲೆನಾ ರೀಬಕಿನ ಅವರನ್ನು 3–6, 6–3, 7–6(6) ಅಂತರದಿಂದ ಸೋಲಿಸಿ ಮೊದಲ ಬಾರಿಗೆ ಕ್ಯಾಲಿಫೋರ್ನಿಯಾದಲ್ಲಿ ಪ್ರಶಸ್ತಿಗೆ ಮುತ್ತಿಟ್ಟರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5926

ಎಡದಿಂದ ಬಲಕ್ಕೆ
2.ಗಡಿಯ ನಡುವೆ ಕಟ್ಟಿದ ವ್ಯಾಯಾಮ ಶಾಲೆ (3)
5.ಮಕ್ಕಳು ಮರಳಿನಿಂದ ಕಟ್ಟಿದ ಮನೆ (4)
6. ಗೋಡಂಬಿಯನ್ನು ಹೀಗೂ ಕರೆಯುತ್ತೇವೆ (4)
7. ಮಣ್ಣಿನ ಪಾತ್ರೆ ಮಾಡುವ ಕಾಯಕದವ (3)
8.ದೃಷ್ಟಿಯೂ ಹೌದು–ಕಾಣಿಕೆಯೂ ಹೌದು (3)
10.ಭೂಮಿ–ಆಕಾಶಕ್ಕೂ ನಡುವಿನ ಪ್ರದೇಶ (4)
11.ಸಂತನ ನಡುವೆ ಕುಗ್ಗಿದ್ದು ಇದೆ (4)
13. ಈತ ಹರಿಕಥೆ ಮಾಡುವವನು (5)
15. ಜೀರ್ಣಕ್ರಿಯೆಯ ಮುಖ್ಯ ಅಂಗ (3)
16. ತಾಳ್ಮೆಯಿಂದ ಸೈರಿಸಿಕೋ (3)

ಮೇಲಿನಿಂದ ಕೆಳಕ್ಕೆ
1.ಕೊಂಬೆಗಳಿಲ್ಲದ ಎತ್ತರವಾದ ಮರ (2)
2. ಗರದ ನಡುವೆ ಅಡಗಿದ ಕಠಿಣವಾದದ್ದು (4)
3.ಅಪಹಾಸ್ಯಕ್ಕೆ ಒಳಗಾದವನು ತಲೆಕೆಳಗಾಗಿದ್ದಾನೆ (4)
4. ಒಂದು ದೇಶದ ಆಡಳಿತಗಾರ (2)
7.ಬಲ ಕಡಿಮೆಯಾದದ್ದು–ಕುಗ್ಗಿದುದು (3)
9. ತಳಿರು ಇಲ್ಲಿ ತಲೆಕೆಳಗಾಗಿದೆ (3)
10. ಅಂಕದ ನಡುವೆ ಕುಜಗ್ರಹವಿದೆ (4)
12.ಅಕಸ್ಮಾತ್ ಪರಿಸ್ಥಿತಿಯಿಂದ ಮನ ಅಸ್ತವ್ಯಸ್ತವಾಗು (4)
13.ಹೀನವೂ ಹೌದು–ಎಳೆದುಹಾಕುವಿಕೆಯೂ ಹೌದು (2)
14.ಇದು ಹಣ್ಣಿನ ಸಾರ (2)

5925 ಉತ್ತರ

ಎಡದಿಂದ ಬಲಕ್ಕೆ:
2.ಅನುಕೂಲಿಗ
5.ಉಗ್ರ 6.ಧೇನು
7.ಕಲಹ 9.ಅವನಿ
11.ಕಾಯಿಸು 13.ಜನನಿ
15.ಲವ 16.ಮಾರಿ
17.ಕ್ರಮಪಡಿಸು

ಮೇಲಿನಿಂದ ಕೆಳಕ್ಕೆ :
1 .ಆಕರ್ಷಕ 2.ಅನುಗ್ರಹ
3.ಅನುರಾಗ
4.ಬಿರಿಯಾನಿ 8.ಲಡಾಯಿ
10.ವದನ 11.ಸುಚರಿತ
12.ಕಾಲಚಕ್ರ
13.ಜಮಾಯಿಸು
14.ನಿವೇದನೆ

ಇಶಾನ್ ಕಿಶನ್ ಸನ್‌ರೈಸರ್ಸ್ ನಾಯಕ?



ಟಿ20 ವಿಶ್ವಕಪ್ ಗೆಲುವಿನ ರೂವಾರಿ

ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರಲ್ಲಿ ಇಶಾನ್ ಕಿಶನ್ ಭಾರತ ತಂಡಕ್ಕೆ ಮಹತ್ವದ ಪಾತ್ರ ವಹಿಸಿದರು. 9 ಇನ್ನಿಂಗ್ಸ್‌ಗಳಲ್ಲಿ 317 ರನ್ ಗಳಿಸಿದ ಕಿಶನ್, ಭಾರತದ ಎರಡನೇ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದರು. ಅವರ ಸರಾಸರಿ 35.22 ಆಗಿದ್ದು, ಸ್ಟ್ರೈಕ್ ರೇಟ್ 193 ದಾಟಿತ್ತು. ಈ ಅಭಿಯಾನದಲ್ಲಿ 3 ಅರ್ಧಶತಕಗಳು ಸೇರಿದ್ದು, ಫೈನಲ್‌ನಲ್ಲೂ ಒಂದು ಅರ್ಧಶತಕ ಬಾರಿಸಿ ಭಾರತ ತಂಡಕ್ಕೆ ಪ್ರಶಸ್ತಿ ಗೆಲ್ಲಲು ನೆರವಾದರು.

ಹೈದರಾಬಾದ್: ಭಾರತ ತಂಡದ ಎಡಗೈ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಮುಂಬರುವ ಐಪಿಎಲ್ 2026 ಹಂಗಾಮಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮುನ್ನಡೆಸುವ ಸಾಧ್ಯತೆಯಿದೆ. ಆಸ್ಟ್ರೇಲಿಯಾದ ವೇಗದ ಬೌಲರ್ ಪ್ಯಾಟ್ ಕಮ್ಮಿನ್ಸ್ ಯಾವಾಗ ತಂಡದೊಂದಿಗೆ ಸೇರಿಕೊಳ್ಳುತ್ತಾರೆ ಎಂಬುದರ ಕುರಿತು ಇನ್ನೂ ಸ್ಪಷ್ಟತೆ ಇಲ್ಲದಿರುವ ಕಾರಣ, ಕಿಶನ್ ನಾಯಕರಾಗಲು ಪ್ರಮುಖ ಅಭ್ಯರ್ಥಿ ಎಂಬ ನಿರೀಕ್ಷೆಯಿದೆ. ಮೂಲಗಳ ಪ್ರಕಾರ, ಈ ವಿಷಯದ ಬಗ್ಗೆ ಸನ್‌ರೈಸರ್ಸ್ ಕ್ರಿಕೆಟ್ ನಿರ್ವಹಣಾ ಮಂಡಳಿ ಚರ್ಚೆ ನಡೆಸಿದ್ದು, ಕಮ್ಮಿನ್ಸ್ ಗೈರುಹಾಜರಿಯಲ್ಲಿ ನಾಯಕತ್ವ ವಹಿಸಲು ಕಿಶನ್ ಅವರನ್ನು ಅತ್ಯಂತ ಸೂಕ್ತ ಅಭ್ಯರ್ಥಿಯನ್ನಾಗಿ ಗುರುತಿಸಿದೆ.

ಈ ವೇಳೆ ಕಿಶನ್ ಅವರ ಪ್ರದರ್ಶನವೂ ಅತ್ಯುತ್ತಮ ಮಟ್ಟದಲ್ಲಿದೆ. 27 ವರ್ಷದ ಈ ಆಟಗಾರ ಇತ್ತೀಚಿನ ಟಿ20 ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ದೇಶದ ಗಮನ ಸೆಳೆದಿದ್ದರು. ಆರಂಭದಲ್ಲಿ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿ ಹಾಗೂ ನಂತರ ಸಂಜು ಸ್ಯಾಮ್ಸನ್ ಪ್ಲೇಯಿಂಗ್ ಇಲೆವೆನ್‌ಗೆ ಮರಳಿದ ನಂತರ ಮೂರನೇ ಕ್ರಮಾಂಕದಲ್ಲಿ ಉತ್ತಮ ಆಟ ಪ್ರದರ್ಶಿಸಿದರು.

ಐಪಿಎಲ್‌ನಲ್ಲಿ ಕಿಶನ್ ಸ್ಫೋಟಕ ಪ್ರದರ್ಶನ: ಐಪಿಎಲ್‌ನಲ್ಲಿ ಕಿಶನ್ ಅತ್ಯಂತ ಸ್ಫೋಟಕ ವಿಕೆಟ್ ಕೀಪರ್–ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿ ತಮ್ಮ ಛಾಪು ಮೂಡಿಸಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ಸೇರಿ ಮೂರು ಫ್ರಾಂಚೈಸಿಗಳ ಪರ ಆಡಿರುವ ಅವರು ಟೂರ್ನಿಯ ಒಟ್ಟು 119 ಪಂದ್ಯಗಳ 112 ಇನ್ನಿಂಗ್ಸ್‌ಗಳಲ್ಲಿ 2,998 ರನ್ ಕಲೆಹಾಕಿದ್ದಾರೆ. ಅವರ ಸರಾಸರಿ 29.10 ಆಗಿದ್ದು, 137.64 ಸ್ಟ್ರೈಕ್ ರೇಟ್ ಅನ್ನು ಹೊಂದಿದ್ದಾರೆ.

ಅವರ ಖಾತೆಯಲ್ಲಿ 1 ಶತಕ, 17 ಅರ್ಧಶತಕಗಳು, 288 ಬೌಂಡರಿಗಳು ಹಾಗೂ 134 ಸಿಕ್ಸರ್‌ಗಳು ಸೇರಿವೆ. ಇದು ಅವರ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯನ್ನು ಸ್ಪಷ್ಟಪಡಿಸುತ್ತದೆ. ವಿಕೆಟ್ ಹಿಂದೆ ಕೂಡ ಅವರು 59 ಕ್ಯಾಚ್‌ಗಳು ಮತ್ತು 5 ಸ್ಟಂಪಿಂಗ್‌ಗಳ ಮೂಲಕ ತಂಡಕ್ಕೆ ಕೊಡುಗೆ ನೀಡಿದ್ದಾರೆ.

2025ರ ಹರಾಜಿನಲ್ಲಿ 11.25 ಕೋಟಿಗೆ ಖರೀದಿ!: 2025ರ ಹಂಗಾಮಿನಲ್ಲಿ ಹರಾಜಿನಲ್ಲಿ ರೂ. 11.25 ಕೋಟಿಗೆ ಖರೀದಿಸಲ್ಪಟ್ಟ ನಂತರದ ಮೊದಲ ಸೀಸನ್‌ನಲ್ಲಿ ಅವರು 14 ಪಂದ್ಯಗಳಲ್ಲಿ 354 ರನ್ ಗಳಿಸಿದ್ದರು. ಆ ಸಂದರ್ಭದಲ್ಲಿ ಅವರ ಸ್ಟ್ರೈಕ್ ರೇಟ್ 152.58 ಆಗಿದ್ದು, ತಲಾ ಒಂದು ಶತಕ ಮತ್ತು ಅರ್ಧಶತಕವನ್ನು ಕೂಡ ದಾಖಲಿಸಿದ್ದರು.

ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗ | ವಿಕಸಿತ ಭಾರತ–2047 ಗುರಿಯತ್ತ ದಿಟ್ಟ ಹೆಜ್ಜೆ

ವಿಬಿ ಜಿ ರಾಮ್ ಜಿ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ದಾರಿದೀಪ

ವಿಕಸಿತ ಭಾರತ–ರೋಜಗಾರ್ ಮತ್ತು ಜೀವನೋಪಾಯ ಖಾತರಿ ಮಿಷನ್ (ಗ್ರಾಮೀಣ) ಇದು ಒಂದು ಪರಿಷ್ಕೃತ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ನೂತನ ಯೋಜನೆ. ಇದು ಇಂಗ್ಲೀಷ್‌ನಲ್ಲಿ ವಿಬಿ–ಜಿ ರಾಮ್–ಜಿ (VB-G RAM-G) ಎಂದು ಸಂಕ್ಷಿಪ್ತವಾಗಿ ಕರೆಯಲಾಗುತ್ತದೆ. ಇದು ಯಾರ ಒಬ್ಬ ವ್ಯಕ್ತಿಯ, ಊರಿನ ಅಥವಾ ಧರ್ಮ ಗ್ರಂಥದ ಹೆಸರೂ ಅಲ್ಲ, ಬಲ ಅಥವಾ ಎಡಪಂಕ್ತಿಯ ಸೈದ್ಧಾಂತಿಕ ಕೃತಿಯ ಹೆಸರೂ ಅಲ್ಲ. ಇದು ಒಬ್ಬ ವ್ಯಕ್ತಿಯ ಕೇವಲ ಉದ್ಯೋಗ ಸೃಷ್ಟಿಯ ಯೋಜನೆ ಅಲ್ಲ; ಇದು ಸಮಗ್ರ ಗ್ರಾಮೀಣ ಅಭಿವೃದ್ಧಿ ಜೊತೆಗೆ ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗವಾಗಿದ್ದು, ವಿಕಸಿತ ಭಾರತ–2047 ಗುರಿಯನ್ನು ಸಾಧಿಸಲು ಗ್ರಾಮೀಣ ಭಾರತವನ್ನು ಬಲಪಡಿಸುವ ಒಂದು ದಿಟ್ಟ ಹೆಜ್ಜೆಯಾಗಿದೆ.ಇದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005 (MGN-REGA)ರ ಬದಲಾಗಿ ದೇಶಾದ್ಯಂತ ಏ.1, 2026ರಿಂದ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.



ವಿಬಿ–ಜಿ ರಾಮ್–ಜಿ ಯೋಜನೆಯ ವಿಶೇಷತೆಗಳು: ಇದು ಹಕ್ಕು–ಆಧಾರಿತ, ಬೇಡಿಕೆ–ಪ್ರಚೋದಿತ ಗ್ರಾಮೀಣ ಉದ್ಯೋಗ ಯೋಜನೆಯಿಂದ, ವಿಕಸಿತ ಭಾರತ ಗುರಿ ಸಾಧನೆಗೆ ಹೊಂದಿಕೊಳ್ಳುವ ಬಜೆಟ್ ಮಿತಿಯ ಪೂರೈಕೆ–ಆಧಾರಿತ ಯೋಜನೆಯಾಗಿದೆ. ಅಂದರೆ ಈಯೋಜನೆಯು ಗ್ರಾಮೀಣ ಉದ್ಯೋಗವನ್ನು ಕೇವಲ ಕೂಲಿ ಆಧಾರಿತ ಯೋಜನೆಯಾಗಿ ಅನುಷ್ಠಾನಗೊಳಿಸದೆ, ಉತ್ಪಾದಕ ಆಸ್ತಿ ನಿರ್ಮಾಣ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿ ಮತ್ತು ಪಾರದರ್ಶಕ ಆಡಳಿತ ಹೊಂದಿದ ಸಮಗ್ರ ಗ್ರಾಮೀಣ ಅಭಿವೃದ್ಧಿ ಚೌಕಟ್ಟಾಗಿ ರೂಪಿಸಲಾಗಿದೆ.

ಜೀವನೋಪಾಯ ಕಾಮಗಾರಿಗಳು: ಕೇವಲ ತಾತ್ಕಾಲಿಕ ಕೂಲಿ ಕೆಲಸ ಒದಗಿಸುವುದರ ಜೊತೆಗೆ ಉತ್ಪಾದಕ ಮತ್ತು ದೀರ್ಘಕಾಲಿಕ ಆದಾಯ ಸೃಷ್ಟಿಸುವ ಆಸ್ತಿಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡುವುದು. ನಾಲ್ಕು ಕ್ಷೇತ್ರಗಳಲ್ಲಿ ಶಾಶ್ವತ ಆಸ್ತಿಗಳ ನಿರ್ಮಾಣ ಮಾಡಲಾಗುತ್ತದೆ. ಅಂದರೆ ನೀರಿನ ಭದ್ರತೆ, ಗ್ರಾಮೀಣ ಮೂಲಸೌಕರ್ಯ, ಜೀವನೋಪಾಯ ಸಂಬಂಧಿತ ಮೂಲಸೌಕರ್ಯ ಮತ್ತು ತೀವ್ರ ಹವಾಮಾನ ಶಮನಗೊಳಿಸುವ ಕಾಮಗಾರಿಗಳು ಈ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು. ಇದರಿಂದ ದೀರ್ಘಕಾಲಿಕ ಮತ್ತು ಉತ್ಪಾದಕ ಗ್ರಾಮೀಣ ಆಸ್ತಿಗಳು ಸೃಷ್ಟಿಯಾಗುತ್ತವೆ.

ನೀರಿನ ಭದ್ರತೆ: ನೀರಿನ ಕೊರತೆ ಗ್ರಾಮೀಣ ಭಾರತದ ಮುಖ್ಯ ಸಮಸ್ಯೆಯಾಗಿದೆ. ಹೀಗಾಗಿ ವಿಕಸಿತ ಭಾರತ ಗುರಿ ಸಾಧನೆಯ ಹಿನ್ನಲೆಯಲ್ಲಿ ನೀರಿನ ಭದ್ರತೆ ಒದಗಿಸುವ ಸಲುವಾಗಿ ಕೆರೆಗಳ ಮರುನಿರ್ಮಾಣ, ಚೆಕ್‌ಡ್ಯಾಂ, ಬಂಡೆಗಳು, ಮಳೆ ನೀರು ಸಂಗ್ರಹಣೆ, ಭೂಗರ್ಭ ಜಲ ಸಂರಕ್ಷಣೆ ಮುಂತಾದ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲು ಪ್ರಸ್ತಾವಿಸಲಾಗಿದೆ.

ಗ್ರಾಮೀಣ ಮೂಲಸೌಕರ್ಯ: ಗ್ರಾಮೀಣ ಭಾರತದ ಸಮಗ್ರ ಸುಸ್ಥಿರ ಅಭಿವೃದ್ಧಿಯಲ್ಲಿ ಮೂಲಸೌಕರ್ಯಗಳ ಪಾತ್ರ ಮಹತ್ವದ್ದು. ಇವುಗಳ ಗುಣಮಟ್ಟದ ಕೊರತೆಗಳಿಂದ ಅಭಿವೃದ್ಧಿ ಕುಂಠಿತಗೊಂಡಿದ್ದರಿಂದ, ಗ್ರಾಮೀಣ ರಸ್ತೆ, ಕಾಲುವೆಗಳು, ಸ್ಮಶಾನ ಭೂಮಿ ಅಭಿವೃದ್ಧಿ, ಸಾರ್ವಜನಿಕ ಕಟ್ಟಡ ಮುಂತಾದವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ಮಹಿಳಾ ಮತ್ತು ದುರ್ಬಲ ವರ್ಗಗಳ ಸಬಲೀಕರಣ: ಈ ಯೋಜನೆಯ ಪ್ರತಿ ಕಾಮಗಾರಿಗಳಲ್ಲಿ ಕನಿಷ್ಠ ಶೇ.33ರಷ್ಟು ಮಹಿಳಾ ಕಾರ್ಮಿಕರು ಪಾಲ್ಗೊಳ್ಳುವಿಕೆಗೆ ಕಡ್ಡಾಯಗೊಳಿಸಲಾಗಿದೆ. ಕೂಲಿ ಆಧಾರಿತ ಉದ್ಯೋಗ ಒದಗಿಸುವಲ್ಲಿ ಏಕಾಂಗ ಮಹಿಳೆಯರಿಗೆ ಹಾಗೂ ಮಹಿಳಾ ಮುಖ್ಯಸ್ಥ ಕುಟುಂಬಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಐದು ಅಥವಾ ಹೆಚ್ಚು ಮಕ್ಕಳು ಕೆಲಸಕ್ಕೆ ಬರುವ ಮಹಿಳೆಯರೊಂದಿಗೆ ಇದ್ದಲ್ಲಿ, ಕಾರ್ಯಕ್ಷೇತ್ರದಲ್ಲಿ ಸೌಲಭ್ಯ ಒದಗಿಸುವುದು ಕಡ್ಡಾಯ.

ಪಾರದರ್ಶಕತೆ ಮತ್ತು ಜವಾಬ್ದಾರಿತ್ವ: ಬಯೋಮೆಟ್ರಿಕ್ ದೃಢೀಕರಣ ಮತ್ತು ಡಿಜಿಟಲ್ ಮೇಲ್ವಿಚಾರಣೆ ಮೂಲಕ ಅಕ್ರಮ ಕಾಮಗಾರಿಗಳ ಸೃಷ್ಟಿ, ಜಾಬ್ ಕಾರ್ಡ್‌ಗಳ ನೋಂದಣಿ, ವೇತನ ಪಾವತಿ ವಿಳಂಬ ಮುಂತಾದ ಸಮಸ್ಯೆಗಳನ್ನು ಇತ್ಯಾರ್ಥಗೊಳಿಸಲು ಸಾಧ್ಯ. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದ ಮೂಲಕ ಈ ಯೋಜನೆಯ ಕಾಮಗಾರಿಗಳ ಸಾಮಾಜಿಕ ಲೆಕ್ಕಪತ್ರ ಮತ್ತು ದೂರು ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲಾಗುತ್ತದೆ.

ಸಮಗ್ರ ಯೋಜನೆ ಮತ್ತು ಸಂಯೋಜನೆ: ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳೊಂದಿಗೆ ಇದು ಸಮನ್ವಯಗೊಳಿಲಾಗುತ್ತದೆ. ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳು (Viksit Gram Panchayat Plans) ಹಾಗೂ ಇತರ ಯೋಜನೆಗಳ ಸಂಯೋಜನೆಯ ಮೂಲಕ ಕೂಲಿ ಆಧಾರಿತ ಉದ್ಯೋಗವನ್ನು ಆಸ್ತಿ ನಿರ್ಮಾಣ, ಮೂಲಸೌಕರ್ಯ ಕೊರತೆ ನಿವಾರಣೆ ಮತ್ತು ದೀರ್ಘಕಾಲೀನ ಜೀವನೋಪಾಯ ವೃದ್ಧಿಯ ಕಾಮಗಾರಿಗಳೊಂದಿಗೆ ಸಂಪರ್ಕಿಸುತ್ತದೆ.

ಕೇಂದ್ರ–ರಾಜ್ಯಗಳ ನಡುವೆ ನಿಧಿ ಹಂಚಿಕೆ: ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ ವಸ್ತು ಮತ್ತು ಪರಿಣತ ಕಾರ್ಮಿಕರ ಮೇಲಿನ ವೆಚ್ಚ ಶೇ.60ರಷ್ಟು ಕೇಂದ್ರ ಸರ್ಕಾರ ಮತ್ತು ಶೇ. 40ರಷ್ಟು ರಾಜ್ಯ ಸರ್ಕಾರ ಭರಿಸಬೇಕಾಗುತ್ತದೆ. ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಪಾಲು ಕಡಿಮೆ ಮಾಡಿ ರಾಜ್ಯ ಸರ್ಕಾರದ ಪಾಲು ಶೇ.25ರಿಂದ ಶೇ.40ರಷ್ಟಕ್ಕೆ ಹೆಚ್ಚಿಸಲಾಗಿದೆ.

ಪ್ರಸ್ತುತ ಹಣಕಾಸಿನ ವರ್ಷದಲ್ಲಿ ಕೇಂದ್ರ ಸರ್ಕಾರವು ಮನರೇಗಾ ಯೋಜನೆಯಡಿಯಲ್ಲಿ 30,000 ಕೋಟಿರೂ. ಮತ್ತು ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ 95,692 ಕೋಟಿ ರೂ.ಗಳನ್ನ ಕಾಯ್ದಿರಿಸಲಾಗಿದೆ. ಅಂದರೆ ಒಟ್ಟು 1,25,692 ಕೋಟಿ ರೂ.ಗಳನ್ನು ವೆಚ್ಚ ಮಾಡುವ ಉದ್ದೇಶವನ್ನು ಹೊಂದಿದೆ.

ರಾಜ್ಯ ಸರ್ಕಾರಗಳ ವಿರೋಧವೇಕೆ?: ದೇಶದ ಬಹುತೇಕ ರಾಜ್ಯಗಳು ವಿಬಿ ಜಿ ರಾಮ್ ಜಿ ಯೋಜನೆಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರೆ, ಕರ್ನಾಟಕ ರಾಜ್ಯ ಸೇರಿದಂತೆ ತೆಲಂಗಾಣ, ತಮಿಳುನಾಡು ಮತ್ತು ಪಂಜಾಬ್ ರಾಜ್ಯಗಳುಇದರ ಅನುಷ್ಠಾನವನ್ನು ಏಕಾಏಕಿಯಾಗಿ ವಿರೋಧಿಸುತ್ತಿವುದು ವಿಷಾದನೀಯ. ಏಕೆಂದರೆ ಈ ಯೋಜನೆಯನ್ನು ಜಾರಿಗೆ ತಂದರೆ ರಾಜ್ಯ ಸರ್ಕಾರಗಳ ಮೇಲೆ ಆರ್ಥಿಕ ಭಾರ ಹೆಚ್ಚಾಗುವ ಸಾಧ್ಯತೆ ಇದೆ.

ಆದರೆ ಈ ಯೋಜನೆ ರೈತರ, ಬಡವರ, ಮಹಿಳೆಯರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದೂಳಿದ ಜನರ, ಯುವಕರಮೇಲೆ ಅಥವಾಗ್ರಾಮೀಣ ಸುಸ್ಥಿರ ಅಭಿವೃದ್ಧಿಯ ಮೇಲೆ ಯಾವುದೇ ರೀತಿಯ ವ್ಯತಿರಿಕ್ತವಾದ ಪರಿಣಾಮ ಬೀರುವುದಿಲ್ಲ. ಇದು ಗ್ರಾಮೀಣ ಭಾರತದ ಆರ್ಥಿಕತೆಯನ್ನು ಇನ್ನಷ್ಟು ಬಲಪಡಿಸುವುದರ ಮೂಲಕ 2047ರೊಳಗೆ ವಿಕಸಿತ ಭಾರತ ಗುರಿ ಸಾಧಿಸಲು ಅಣಿಯಾಗುವಂತೆ ಪರಿಷ್ಕೃತಗೊಂಡು ಅನುಷ್ಠಾನಗೊಳ್ಳಲ್ಪಡುವ ಒಂದು ಯೋಜನೆ.

ಪ್ರೊ. ಆರ್.ಆರ್. ಬಿರಾದಾರ
ಕುಲಸಚಿವರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,
ಕಲಬುರಗಿ, rrbiradar@kud.ac.in

ಕಿರುಸುದ್ದಿ

ಪುತ್ತಿಗೆ ರಘುರಾಮ ಹೊಳ್ಳರಿಗೆ 'ಯಕ್ಷವಿದ್ಯಾಮಾನ್ಯ' ಪ್ರಶಸ್ತಿ



ಉಡುಪಿ: ಯತಿಶ್ರೇಷ್ಠರಾದ ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಹೆಸರಿನಲ್ಲಿ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಕೊಡ ಮಾಡುವ 'ಯಕ್ಷವಿದ್ಯಾಮಾನ್ಯ ' ಪ್ರಶಸ್ತಿಗೆ, ಖ್ಯಾತ ಯಕ್ಷಗಾನ ಭಾಗವತ ಪುತ್ತಿಗೆ ರಘುರಾಮ ಹೊಳ್ಳ ಅವರನ್ನು ಆಯ್ಕೆಮಾಡಲಾಗಿದೆ. ಏ.2ರಂದು ಪೂರ್ವಾಹ್ನ 10.30ಕ್ಕೆ ಪಲಿಮಾರಿನಲ್ಲಿ ನಡೆಯಲಿರುವ ಶ್ರೀಹನುಮಜ್ಜಯಂತೀ ಮಹೋತ್ಸವದ ಸಂದರ್ಭ ಪ್ರಶಸ್ತಿ ಪ್ರದಾನ ನಡೆಯಲಿದೆ. 'ಯಕ್ಷವಿದ್ಯಾಮಾನ್ಯ' ಪುರಸ್ಕಾರವು 50 ಸಾವಿರ ನಗದು, ಪ್ರಶಸ್ತಿ ಫಲಕವನ್ನು ಹೊಂದಿದೆ ಎಂದು ಪಲಿಮಾರು ಮಠದ ದಿವಾನರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರಘುರಾಮ ಹೊಳ್ಳ ಅವರು ಧರ್ಮಸ್ಥಳ ಮೇಳದಲ್ಲಿ 34 ವರ್ಷ ಮತ್ತು 6 ವರ್ಷ ಕದ್ರಿ ಮೇಳದಲ್ಲಿ ಭಾಗವತರಾಗಿ ಸೇವೆಸಲ್ಲಿಸಿದ್ದರು. ಇವರ ತಂದೆ ಪ್ರಸಿದ್ಧ ಭಾಗವತರಾದ ಪುತ್ತಿಗೆ ರಾಮಕೃಷ್ಣ ಜೋಯಿಸರೇ ಹೊಳ್ಳರ ಆರಂಭಿಕ ಗುರುಗಳು. ಕಡತೋಕ ಮಂಜುನಾಥ ಭಾಗವತರಿಂದ ಪ್ರೇರಣೆ ಹೊಂದಿ, ತಮ್ಮ ವಿಶೇಷ ಕಂಠಸಿರಿಯಿಂದ ಕಲಾರಸಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಚೆಂಡೆ–ಮದ್ದಲೆ ವಾದನಗಳಲ್ಲೂ ಪರಿಣತಿ ಹೊಂದಿದ್ದಾರೆ.

ಪಿಕ್‌ಅಪ್ ಡಿಕ್ಕಿಯಾಗಿ ವೃದ್ಧ ಸಾವು

ಉಡುಪಿ: ಮಲ್ಪೆಯ ಬಾಪುತೋಟದಿಂದ ಕೊಡವೂರು ಕಡೆಗೆ ಹೋಗುವ ಒಳರಸ್ತೆಯಲ್ಲಿ ಚಲಿಸುತ್ತಿದ್ದ ಪಿಕ್‌ಅಪ್ ವಾಹನವೊಂದು ದಾರಿಹೋಕ ವೃದ್ಧರೊಬ್ಬರಿಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟ ಘಟನೆ ಸೋಮವಾರ ನಡೆದಿದೆ. ಬೆಳಿಗ್ಗೆ 11.30ರ ಸುಮಾರಿಗೆ ಕೊಪ್ಪಲತೋಟ ಬಬ್ಬು ಸ್ವಾಮಿ ದೇವಸ್ಥಾನದ ಎದುರು ಈ ಅಪಘಾತ ಸಂಭವಿಸಿದೆ. ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಬರುತ್ತಿದ್ದ ವಿಠ್ಠಲ್ ಕೋಟ್ಯಾನ್ (77) ಅವರಿಗೆ ವೇಗವಾಗಿ ಬಂದ ಜೀತೋ ಪಿಕ್ ಅಪ್ ವಾಹನ ಡಿಕ್ಕಿ ಹೊಡೆದಿದೆ. ತಲೆ ಹಾಗೂ ಬಲ ಕಾಲಿಗೆ ಗಂಭೀರ ಗಾಯಗೊಂಡಿದ್ದ ಅವರನ್ನು ತಕ್ಷಣವೇ ಉಡುಪಿ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಅಷ್ಟರಲ್ಲೇ ಅವರು ಮೃತಪಟ್ಟಿದ್ದರು. ಮಲ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಸತಿ ಗೃಹದಲ್ಲಿ ಯುವಕ, ಯುವತಿಗೆ ಬೆದರಿಕೆ: ಬಂಧಿತ ಆರೋಪಿಗೆ ರಿಮಾಂಡ್

ಮಂಜೇಶ್ವರ: ಹೊಸಂಗಡಿಯ ವಸತಿಗೃಹ ಕೊಠಡಿಗೆ ನುಗ್ಗಿ ಯುವಕ ಹಾಗೂ ಯುವತಿಯ ಅರೆನಗ್ನ ಫೋಟೋ, ವಿಡಿಯೋ ಚಿತ್ರೀಕರಿಸಿ ಬೆದರಿಕೆಯೊಡ್ಡಿದ ಪ್ರಕರಣದಲ್ಲಿ ಸೆರೆಗೀಡಾದ ಇನ್ನೋರ್ವ ಆರೋಪಿಗೆ ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿದೆ. ಮಚ್ಚಂಪಾಡಿ ನಿವಾಸಿ ಹೈದರಾಲಿ ಎಂಬಾತನೇ ಈ ಆರೋಪಿ. ಕಳೆದ ಜನವರಿ 14ರಂದು ಉಳ್ಳಾಲ ತಾಲೂಕಿನ ಕೈರಂಗಳ ನಿವಾಸಿ ಮೊಹಮ್ಮದ್ ಹನೀಫ್ (41) ಹಾಗೂ ಆತನ ಸ್ನೇಹಿತೆ 31ರ ಹರೆಯದ ಯುವತಿ ಹೊಸಂಗಡಿಯ ವಸತಿಗೃಹದ ಕೊಠಡಿಯಲ್ಲಿದ್ದ ವೇಳೆ ಅಲ್ಲಿಗೆ ನುಗ್ಗಿ ಅವರ ಅರೆನಗ್ನ ಫೋಟೋ ಹಾಗೂ ವಿಡಿಯೋ ಚಿತ್ರೀಕರಿಸಿ ಬೆದರಿಕೆಯೊಡ್ಡಿದ ಪ್ರಕರಣಕ್ಕೆ ಸಂಬಂಧಿಸಿ ಹೈದರಾಲಿಯನ್ನು ಮಾ.13ರಂದು ರಾತ್ರಿ ಮಂಜೇಶ್ವರ ಪೊಲೀಸರು ವಶಕ್ಕೆ ತೆಗೆದುಕೊಂಡರು. ಬಳಿಕ ಬಂಧನ ದಾಖಲಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ.

ರೈಲಿನಿಂದ ಆಕಸ್ಮಿಕವಾಗಿ ಬಿದ್ದು ಜಾರ್ಖಂಡ್ ಬಾಲಕ ಸಾವು

ಉಡುಪಿ: ಜಾರ್ಖಂಡ್‌ನಿಂದ ಮಂಗಳೂರಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಬಾಲಕನೊಬ್ಬ ಕುಂದಬಾರಂದಾಡಿ ಗ್ರಾಮದ ತೊರೊಳ್ಳಿ ರೈಲ್ವೆ ಸೇತುವೆ ಬಳಿ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾನೆ. ಮೃತ ಬಾಲಕನನ್ನು ರಂಗಬಾಜ್ ಅನ್ಸಾರಿ (16) ಎಂದು ಗುರುತಿಸಲಾಗಿದೆ. ಗಂಗೊಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸ್ಕೂಟರ್‌ಗೆ ಕಾರು ಡಿಕ್ಕಿ: ಬಾಲಕಿ ಸಾವು

ಉಪ್ಪಿನಂಗಡಿ: ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ತಂಗಡಿ ತಾಲೂಕಿನ ಕಲ್ಲೇರಿ ಎಂಬಲ್ಲಿ ದ್ವಿಚಕ್ರ ವಾಹನಕ್ಕೆ ಕಾರೊಂದು ಡಿಕ್ಕಿ ಹೊಡೆದು ಐದುವರೆ ವರ್ಷ ಪ್ರಾಯದ ಸುಹೈರಾ ಸಾವನ್ನಪ್ಪಿ ಇತರ ಇಬ್ಬರು ಗಾಯಗೊಂಡ ಘಟನೆ ಸೋಮವಾರ ಸಂಭವಿಸಿದೆ. ಕೊಡಂಗೆ ಮನೆ ನಿವಾಸಿ ಇಸ್ಮಾಯಿಲ್ ಎಂಬವರು ತನ್ನ ಪುತ್ರಿ ಸಾಜಿರಾ ಮತ್ತು ಮೊಮ್ಮಗಳು ಸುಹೈರಾಳನ್ನು ಕುಳ್ಳಿರಿಸಿಕೊಂಡು ಕುಪ್ಪೆಟ್ಟಿಗೆ ಪ್ರಯಾಣಿಸುತ್ತಿದ್ದಾಗ ಎದುರುಗಡೆಯಿಂದ ಬಂದ ವೇಣೂರು ಮೂಲದ ಶಿವಪ್ರಸಾದ್ ಎಂಬವರ ಕಾರು ಡಿಕ್ಕಿ ಹೊಡೆಯಿತು. ಇದರಿಂದ ಗಂಭೀರವಾಗಿ ಗಾಯಗೊಂಡ ಸುಹೈರಾ ಮತ್ತಾಕೆಯ ತಾಯಿ ಸಾಜಿರಾ (33), ದ್ವಿಚಕ್ರ ವಾಹನ ಸವಾರ ಬಾಲಕಿಯ ಅಜ್ಜ ಇಸ್ಮಾಯಿಲ್ (60) ಎಂಬವರು ಗಾಯಗೊಂಡು ಆಸ್ಪತ್ರೆಗೆ ದಾಖಲಿಸಲ್ಪಟ್ಟಿದ್ದರು. ಈ ಪೈಕಿ ಗಂಭೀರವಾಗಿ ಗಾಯಗೊಂಡ ಸುಹೈರಾ ಚಿಕಿತ್ಸೆಗೆ ಸ್ಪಂದಿಸದೆ ಸೋಮವಾರ ರಾತ್ರಿ ವೇಳೆ ಸಾವನ್ನಪ್ಪಿದ್ದಾಳೆಂದು ಪೊಲೀಸ್ ಮೂಲಗಳು ತಿಳಿಸಿದೆ. ಪುತ್ತೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ.

ರಾಷ್ಟ್ರೀಯ ಹೆದ್ದಾರಿ 66ರ ಕಟಪಾಡಿ ಜಂಕ್ಷನ್ ಬಳಿ ಎಲ್‌ಪಿಜಿ ಸಾಗಾಟದ ಬುಲೆಟ್ ಟ್ಯಾಂಕರ್ ಪಲ್ಟಿ

ತಾಸುಗಳ ಕಾಲ ಅನಿಲ ಸೋರಿಕೆ ಭೀತಿ

ಉಡುಪಿ: ಮಂಗಳೂರಿನಿಂದ ಉಡುಪಿ ಕಡೆಗೆ ಎಲ್‌ಪಿಜಿ ಅನಿಲ ಸಾಗಿಸುತ್ತಿದ್ದ ಬುಲೆಟ್ ಟ್ಯಾಂಕರ್ ಸೋಮವಾರ ಬೆಳಿಗ್ಗೆ ಕಟಪಾಡಿ ಜಂಕ್ಷನ್ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಪಲ್ಟಿಯಾಗಿದೆ. ಈ ಘಟನೆಯಿಂದಾಗಿ ಟ್ಯಾಂಕರ್‌ನಿಂದ ಅನಿಲ ಸೋರಿಕೆಯಾಗುತ್ತಿದ್ದು, ಸ್ಥಳೀಯರಲ್ಲಿ ಭಾರೀ ಆತಂಕ ಮೂಡಿಸಿತ್ತು.

ಅಪಘಾತಕ್ಕೆ ಕಾರಣ

ಕಟಪಾಡಿ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ಕಾಮಗಾರಿ ನಡೆಯುತ್ತಿರುವುದರಿಂದ ರಸ್ತೆಯನ್ನು ಡೈವರ್ಶನ್ ಮಾಡಲಾಗಿತ್ತು. ವೇಗವಾಗಿ ಬಂದ ಟ್ಯಾಂಕರ್ ಈ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ ಎನ್ನಲಾಗಿದೆ. ಅದೃಷ್ಟವಶಾತ್ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ರಕ್ಷಣಾ ಕಾರ್ಯಾಚರಣೆ

ಘಟನಾ ಸ್ಥಳಕ್ಕೆ ಕೂಡಲೇ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ, ಟ್ಯಾಂಕರ್‌ನಿಂದ ಅನಿಲ ಸೋರಿಕೆ ತಡೆಯಲು ಮತ್ತು ಉಷ್ಣಾಂಶ ಕಡಿಮೆ ಮಾಡಲು ನಿರಂತರವಾಗಿ ನೀರು ಹಾಯಿಸುತ್ತಿದ್ದಾರೆ. ಮಂಗಳೂರಿನಿಂದ ತಜ್ಞರು ಮತ್ತು ಪರ್ಯಾಯ ಟ್ಯಾಂಕರ್ ಬಂದ ಬಳಿಕ ಅನಿಲ ತುಂಬಿಸಲಾಯಿತು.

ಬದಲಿ ಮಾರ್ಗ ಸೂಚಿಸಿದ ಜಿಲ್ಲಾಧಿಕಾರಿ

ಅಪಘಾತದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಅವರು ಸಾರ್ವಜನಿಕ ಸುರಕ್ಷತೆಗಾಗಿ ಸೋಮವಾರ ರಾತ್ರಿ 8 ಗಂಟೆಯವರೆಗೆ ಜಾರಿಯಲ್ಲಿರುವಂತೆ ಸಂಚಾರ ಮಾರ್ಗ ಬದಲಾವಣೆ ಆದೇಶ ಹೊರಡಿಸಿದರು. ಆದರಂತೆ ಮಂಗಳೂರಿನಿಂದ ಉಡುಪಿ ಕಡೆಗೆ ಸಂಚರಿಸುವ ವಾಹನಗಳು ಕಾಪುವಿನಿಂದ ಶಿರ್ವಾ – ಮೂಡುಬೆಳ್ಳೆ – ಮಣಿಪುರ ಮಾರ್ಗವಾಗಿ ಮಣಿಪಾಲಕ್ಕೆ ತೆರಳಿ ಅಲ್ಲಿಂದ ಉಡುಪಿ ಹಾಗೂ ಪಡುಬಿದ್ರೆ – ಬೆಳ್ಮಣ್ – ಶಿರ್ವಾ ಮಾರ್ಗವಾಗಿ ಮಣಿಪಾಲಕ್ಕೆ ಸಂಚರಿಸಿದವು.

ಉಡುಪಿಯಿಂದ ಮಂಗಳೂರು ಕಡೆಗೆ: ವಾಹನಗಳು ಮಣಿಪಾಲದಿಂದ ಮಣಿಪುರ – ಮೂಡುಬೆಳ್ಳೆ – ಶಿರ್ವಾ ಮಾರ್ಗವಾಗಿ ಕಾಪು ತಲುಪಿ ಮಂಗಳೂರಿಗೆ ಸಾಗುವುದು. ಅಥವಾ ಮಣಿಪಾಲ – ಶಿರ್ವಾ – ಬೆಳ್ಮಣ್ ಮಾರ್ಗವಾಗಿ ಪಡುಬಿದ್ರೆ ತಲುಪಬೇಕು ಎಂದು ಸೂಚಿಸಲಾಗಿತ್ತು.





ಅಪಘಾತಕ್ಕೆ ಅವೈಜ್ಞಾನಿಕ ಬ್ಯಾರಿಕೇಡ್‌ಗಳೇ ಕಾರಣ?

ಕಟಪಾಡಿ ಜಂಕ್ಷನ್‌ನಲ್ಲಿ ಪ್ರಸ್ತುತ ಅಂಡರ್ ಪಾಸ್ ಕಾಮಗಾರಿ ನಡೆಯುತ್ತಿದ್ದು, ರಸ್ತೆ ಸಂಚಾರಕ್ಕಾಗಿ ತಾತ್ಕಾಲಿಕ ಡೈವರ್ಶನ್ ಮಾಡಲಾಗಿದೆ. ಆದರೆ, ಈ ಸ್ಥಳದಲ್ಲಿ ಅಳವಡಿಸಲಾಗಿರುವ ಬ್ಯಾರಿಕೇಡ್‌ಗಳು ಮತ್ತು ರಸ್ತೆ ತಿರುವುಗಳು ಅತ್ಯಂತ ಅವೈಜ್ಞಾನಿಕವಾಗಿವೆ ಎಂಬ ಆರೋಪ ಕೇಳಿಬರುತ್ತಿದೆ. ವೇಗವಾಗಿ ಬರುವ ಭಾರೀ ವಾಹನಗಳಿಗೆ ಈ ಕಿರಿದಾದ ತಿರುವಿನಲ್ಲಿ ಚಲಿಸುವುದು ಸವಾಲಾಗಿದ್ದು, ಇಂದು ಪಲ್ಟಿಯಾದ ಟ್ಯಾಂಕರ್ ಕೂಡ ಇದೇ ಕಾರಣಕ್ಕೆ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ ಎಂದು ಸ್ಥಳೀಯರು ದೂರಿದ್ದಾರೆ. ಸೂಕ್ತ ಮುನ್ನೆಚ್ಚರಿಕೆ ಫಲಕಗಳಿಲ್ಲದೆ ಅಡ್ಡಾದಿಡ್ಡಿ ಬ್ಯಾರಿಕೇಡ್‌ಗಳನ್ನು ಇಟ್ಟಿರುವುದು ಅಪಘಾತಕ್ಕೆ ಆಹ್ವಾನ ನೀಡಿದಂತಾಗಿದೆ.

ಟ್ರಾಫಿಕ್ ಜಾಮ್‌ಗೆ ಚಾಲಕರು ಹೈರಾಣ

ಅಪಘಾತ ಸಂಭವಿಸಿದ ತಕ್ಷಣ ಸುರಕ್ಷತಾ ದೃಷ್ಟಿಯಿಂದ ಜಿಲ್ಲಾಡಳಿತವು ರಾಷ್ಟ್ರೀಯ ಹೆದ್ದಾರಿಯನ್ನು ಎರಡೂ ಬದಿಗಳಿಂದ ಸಂಪೂರ್ಣವಾಗಿ ಮುಚ್ಚಿತು. ಯಾವುದೇ ಪರ್ಯಾಯ ಮುನ್ಸೂಚನೆ ಇಲ್ಲದೆ ಇದ್ದಕ್ಕಿದ್ದಂತೆ ರಸ್ತೆ ಬಂದ್ ಮಾಡಿದ್ದರಿಂದ ಸಾವಿರಾರು ವಾಹನಗಳು ರಸ್ತೆಯಲ್ಲೇ ಸಿಲುಕಿಕೊಂಡವು. ಬಿಸಿಲ ಬೇಗೆಯ ನಡುವೆ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಬಂದಿದ್ದರಿಂದ ಪ್ರಯಾಣಿಕರು ಮತ್ತು ವಾಹನ ಚಾಲಕರು ಹೈರಾಣಾದರು. ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ಕಚೇರಿಗೆ ತೆರಳುವವರು ಸಮಯಕ್ಕೆ ಸರಿಯಾಗಿ ತಲುಪಲಾಗದೆ ಪರದಾಡುವಂತಾಯಿತು.

ಯುದ್ಧೋಪಾದಿಯಲ್ಲಿ ರಕ್ಷಣಾ ಕಾರ್ಯಾಚರಣೆ

ಟ್ಯಾಂಕರ್‌ನಿಂದ ಅನಿಲ ಸೋರಿಕೆಯಾಗುತ್ತಿರುವುದು ದೃಢಪಟ್ಟ ಕೂಡಲೇ ಉಡುಪಿ ಮತ್ತು ಮಂಗಳೂರಿನಿಂದ ಅಗ್ನಿಶಾಮಕ ದಳದ ವಾಹನಗಳು ಸ್ಥಳಕ್ಕೆ ಧಾವಿಸಿದವು. ಸಂಭವನೀಯ ಅನಾಹುತ ತಡೆಯಲು ಸಿಬ್ಬಂದಿಗಳು ಟ್ಯಾಂಕರ್ ಮೇಲೆ ನಿರಂತರವಾಗಿ ನೀರು ಹಾಯಿಸಿ ಉಷ್ಣತೆಯನ್ನು ನಿಯಂತ್ರಣದಲ್ಲಿಟ್ಟರು. ಮುನ್ನೆಚ್ಚರಿಕೆ ಕ್ರಮವಾಗಿ ಘಟನಾ ಸ್ಥಳದ ಸುತ್ತಮುತ್ತಲಿನ ಮನೆಗಳ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿತ್ತು ಮತ್ತು ಯಾರಿಗೂ ಮೊಬೈಲ್ ಅಥವಾ ಬೆಂಕಿ ಬಳಸದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು. ಈ ಘಟನೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾಮಗಾರಿ ನಿರ್ವಹಣೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದೆ. ಅಂಡರ್‌ಪಾಸ್ ಕಾಮಗಾರಿ ಮುಗಿಯುವವರೆಗೆ ಇಂತಹ ಅನಾಹುತಗಳು ಸಂಭವಿಸದಂತೆ ಶಾಶ್ವತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

ಮತ್ತೆ ನೆನಪಾಯಿತು ಪೆರ್ನೆಯ ಆ ದುರಂತ

ಕರ್ನಾಟಕದ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಅನಿಲ ಟ್ಯಾಂಕರ್ ದುರಂತಗಳಲ್ಲಿ ಒಂದಾದ ದಕ್ಷಿಣ ಕನ್ನಡ ಜಿಲ್ಲೆಯ ಪೆರ್ನೆ ಎಂಬಲ್ಲಿ 2013ರ ಏಪ್ರಿಲ್ 9ರಂದು ಗ್ಯಾಸ್ ಟ್ಯಾಂಕರ್ ಪಲ್ಟಿಯಾಗಿತ್ತು. ಸ್ಫೋಟದ ತೀವ್ರತೆಗೆ ಸುಮಾರು 10 ಜನರು ಸಾವನ್ನಪ್ಪಿದ್ದರು. ಹೆದ್ದಾರಿಯ ಪಕ್ಕದಲ್ಲಿದ್ದ ಐದಾರು ಮನೆಗಳು, ಹತ್ತಾರು ಅಂಗಡಿ ಮುಂಗಟ್ಟುಗಳು ಕ್ಷಣಾರ್ಧದಲ್ಲಿ ಸುಟ್ಟು ಭಸ್ಮವಾಗಿದ್ದವು. ಕೇವಲ ಜೀವಹಾನಿ ಮಾತ್ರವಲ್ಲದೆ, ಈ ದುರಂತವು ಅಪಾರ ಪ್ರಮಾಣದ ಆಸ್ತಿಪಾಸ್ತಿ ನಾಶಕ್ಕೂ ಕಾರಣವಾಗಿತ್ತು. ಹೆದ್ದಾರಿಯ ಪಕ್ಕದಲ್ಲಿದ್ದ ಐದಾರು ಮನೆಗಳು, ಹತ್ತಾರು ಅಂಗಡಿ ಮುಂಗಟ್ಟುಗಳು ಕ್ಷಣಾರ್ಧದಲ್ಲಿ ಸುಟ್ಟು ಭಸ್ಮವಾಗಿದ್ದವು. ಅಲ್ಲದೆ, ರಸ್ತೆಯಲ್ಲಿದ್ದ ಕಾರು, ರಿಕ್ಷಾ ಸೇರಿದಂತೆ ಸುಮಾರು 15ಕ್ಕೂ ಹೆಚ್ಚು ವಾಹನಗಳು ಬೆಂಕಿಗೆ ಆಹುತಿಯಾಗಿ ಕೇವಲ ಅಸ್ಥಿಪಂಜರದಂತಾಗಿದ್ದವು. ಸ್ಫೋಟದ ಬಿಸಿಗೆ ಸುತ್ತಮುತ್ತಲ ತೆಂಗು, ಅಡಿಕೆ ತೋಟಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ಇಡೀ ಪೆರ್ನೆ ಗ್ರಾಮವೇ ಸ್ಮಶಾನ ಸದೃಶವಾಗಿ ಮಾರ್ಪಟ್ಟಿತ್ತು.



ಮಂಗಲ್ಪಾಡಿ ಸೋಂಕಾಲಿನಲ್ಲಿ ಎನ್‌ಡಿಎ ಚುನಾವಣಾ ಕಚೇರಿ ಉದ್ಘಾಟನೆ

ಮಂಜೇಶ್ವರ ಕ್ಷೇತ್ರದಲ್ಲಿ ಅಭಿವೃದ್ಧಿ ಶೂನ್ಯ: ಕೇಂದ್ರ ಸಚಿವೆ ಶೋಭಾ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರವು ವಿವಿಧ ವಲಯಗಳಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಈ ಮಂಡಲದಲ್ಲಿ ಸಾಕಷ್ಟು ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಬಹುದಾಗಿದ್ದರೂ, ಇಲ್ಲಿನ ಶಾಸಕರು ಆ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದಾರೆ. ಮಂಜೇಶ್ವರ ತಾಲೂಕು ಕಚೇರಿಗೆ ಸ್ವಂತ ಕಟ್ಟಡವಿಲ್ಲದಿರುವುದೇ ಇದಕ್ಕೊಂದು ನಿದರ್ಶನವಾಗಿದೆ ಎಂದು ಕೇಂದ್ರ ಸಚಿವೆ, ಕೇರಳ ರಾಜ್ಯ ವಿಧಾನಸಭಾ ಚುನಾವಣೆಯ ಬಿಜೆಪಿ ಸಹ ಪ್ರಭಾರಿ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಚುನಾವಣಾ ಕಚೇರಿಯನ್ನು ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸೋಂಕಾಲಿನಲ್ಲಿ ಸೋಮವಾರ ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಮಂಜೇಶ್ವರ ಮಂಡಲ ಸಹಿತ ಕಾಸರಗೋಡು ಜಿಲ್ಲೆಯ ಜನರು ಆರೋಗ್ಯ, ಉನ್ನತ ಶಿಕ್ಷಣ, ಉದ್ಯೋಗ, ವ್ಯಾಪಾರ ವಹಿವಾಟು ಮೊದಲಾದ ವಿಷಯಗಳಿಗೆ ಇಂದಿಗೂ ಮಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ತೆರಳುತ್ತಿದ್ದಾರೆ. ಅಂದರೆ ಕಾಸರಗೋಡು ಜಿಲ್ಲೆಯಲ್ಲಿ ಈಗಲೂ ಯಾವುದೇ ವಲಯಗಳು ಅಭಿವೃದ್ಧಿ ಹೊಂದಿಲ್ಲ ಎಂಬುದು ಈ ಮೂಲಕ ಸಾಬೀತಾಗುತ್ತದೆ. ಎಡರಂಗ ಸರಕಾರಕ್ಕೆ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರದ ಅಭಿವೃದ್ಧಿಪರ ಹಾಗೂ ಜನಪರ ಯೋಜನೆಗಳನ್ನು ಜಾರಿಗೊಳಿಸುವ ಇಚ್ಛಾಶಕ್ತಿಯಿಲ್ಲ. ಕೇಂದ್ರ ಸರಕಾರದ ಅಭಿವೃದ್ಧಿ ಯೋಜನೆಗಳು ಬೇರೆ ರಾಜ್ಯಗಳಲ್ಲಿ ಸಮರ್ಪಕವಾಗಿ ಅನುಷ್ಠಾನಕ್ಕೆ ಬರುತ್ತಿದ್ದು, ಕೇರಳದಲ್ಲಿ ಯಾಕಿಲ್ಲ ಎಂದು ಅವರು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದರು.

ಕೇಂದ್ರ ಸರಕಾರದ ಜನಪರ ಯೋಜನೆಗಳನ್ನು ನೇರವಾಗಿ ಜನರಿಗೆ ಲಭಿಸುವ ನಿಟ್ಟಿನಲ್ಲೂ ರಾಜ್ಯ ಸರಕಾರವು ಅಡೆತಡೆಗಳನ್ನು ಉಂಟುಮಾಡುತ್ತಿದೆ. ಆರೋಗ್ಯ ವಲಯದಲ್ಲಿ ಕೇಂದ್ರವು ಅನುಷ್ಠಾನಕ್ಕೆ ತಂದಿರುವ ಆಯುಷ್ಮಾನ್ ಯೋಜನೆ ಸಹಿತ ಇನ್ನಿತರ ಉತ್ತಮ ಯೋಜನೆಗಳನ್ನು ಆಡಳಿತ ಎಡರಂಗ ಹಾಗೂ ಪ್ರತಿಪಕ್ಷ ಐಕ್ಯರಂಗ ಒಕ್ಕೂಟಗಳು ಮೂಲೆಗುಂಪಾಗಿಸಲು ಷಡ್ಯಂತ್ರ ಹೆಣೆಯುತ್ತಿವೆ ಎಂದು ಶೋಭಾ ಕರಂದ್ಲಾಜೆ ಆರೋಪಿಸಿದರು. ಮಂಜೇಶ್ವರ ಮಂಡಲದ ಮತದಾರರು ಖಂಡಿತವಾಗಿಯೂ ಈ ಬಾರಿ ಎನ್‌ಡಿಎ ಅಭ್ಯರ್ಥಿಗೆ ಆಶೀರ್ವದಿಸಿ ವಿಧಾನಸಭೆಗೆ ಕಳುಹಿಸಲು ಸಂಕಲ್ಪ ತೊಟ್ಟಿದ್ದಾರೆ ಎಂದು ಅವರು ವಿಶ್ವಾಸದಿಂದ ನುಡಿದರು.

ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಅಶ್ವಿನಿ ಎಂ.ಎಲ್. ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ.ಸುರೇಂದ್ರನ್ ಮಾತನಾಡಿದರು.

ಮಂಗಳೂರು ಉತ್ತರ ಶಾಸಕ ಡಾ.ವೈ.ಭರತ್ ಶೆಟ್ಟಿ, ಸುಫಲಚಂದ್ರ ನಾಯಕ್, ಕಲ್ಲಿಕೋಟೆ ವಲಯ ಅಧ್ಯಕ್ಷ , ವಕೀಲ ಕೆ.ಶ್ರೀಕಾಂತ್, ವಲಯ ಪ್ರಧಾನ ಕಾರ್ಯದರ್ಶಿ ಎಂ.ಸುಧಾಮ ಗೋಸಾಡ, ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಪ್ರಮುಖರಾದ ವಿ.ರವೀಂದ್ರನ್ ಕುಂಬಳೆ, ಕೋಳಾರು ಸತೀಶ್ಚಂದ್ರ ಭಂಡಾರಿ, ಸುರೇಶ್‌ಕುಮಾರ್ ಶೆಟ್ಟಿ ಪೂಕಟ್ಟೆ, ಎ.ಕೆ. ಕಯ್ಯಾರು, ಮಣಿಕಂಠ ರೈ ಪಟ್ಲ, ಎನ್. ಮಧು, ಪಿ.ರಮೇಶ್ ಕಾಸರಗೋಡು, ಮುರಳೀಧರ ಯಾದವ್ ನಾಯ್ಕಾಪು, ಲೋಕೇಶ್ ನೋಂಡ ಜೋಡುಕಲ್ಲು, ಕೆ.ಪಿ.ವಲ್ಸರಾಜ್, ನಾರಾಯಣ ನಾಯ್ಕ, ವಸಂತಕುಮಾರ್ ಮಯ್ಯ, ಯತಿರಾಜ್ ಶೆಟ್ಟಿ, ಕೆ.ವಿ.ಭಟ್, ಕೆ.ಪಿ.ಅನಿಲ್‌ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

ಕಲ್ಲಿಕೋಟೆ ವಲಯ ಉಪಾಧ್ಯಕ್ಷ ಎಂ.ವಿಜಯಕುಮಾರ್ ರೈ ಸ್ವಾಗತಿಸಿ, ಕುಂಬಳೆ ಮಂಡಲಾಧ್ಯಕ್ಷ ಸುನೀಲ್ ಅನಂತಪುರ ವಂದಿಸಿದರು.



> ಕೇರಳವನ್ನು ಆದಲು ಬದಲಾಗಿ ಆಡಳಿತ ನಡೆಸಿದ ಎಡರಂಗ ಮತ್ತು ಐಕ್ಯರಂಗ ಒಕ್ಕೂಟಗಳು ರಾಜ್ಯದ ವಿವಿಧ ವಲಯಗಳನ್ನು ಅವನತಿಯತ್ತ ಕೊಂಡೊಯ್ದಿವೆ. ಶಬರಿಮಲೆ ಕ್ಷೇತ್ರದ ಚಿನ್ನಾಭರಣವನ್ನೇ ಲಪಟಾಯಿಸಿದ ಎಡರಂಗ ಒಕ್ಕೂಟಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸುವ ನೈತಿಕ ಹಕ್ಕಿಲ್ಲ. ಭ್ರಷ್ಟಾಚಾರ ತಾಂಡವವಾಡುತ್ತಿರುವ ಕೇರಳದಲ್ಲಿ ಪಿಣರಾಯಿ ವಿಜಯನ್ ಸರಕಾರವು ಸ್ವಜನ ಪಕ್ಷಪಾತದಲ್ಲೇ ನಿರತವಾಗಿದೆ. ರಾಜ್ಯದ ಜನರು ಇದೀಗ ಭಾರೀ ಬದಲಾವಣೆಗೆ ಬಯಸಿದ್ದು, ಉಭಯ ರಂಗಗಳ ಜನದ್ರೋಹಿ ನೀತಿಗಳು ಮತದಾರರಿಂದ ತಿರಸ್ಕರಿಸಲ್ಪಟ್ಟಿವೆ.
>
> ■ **ಕೆ.ಸುರೇಂದ್ರನ್,** ಎನ್‌ಡಿಎ ಅಭ್ಯರ್ಥಿ, ಮಂಜೇಶ್ವರ ವಿಧಾನಸಭಾ ಕ್ಷೇತ್ರ

ಗ್ಯಾಸ್ ಸಂಕಷ್ಟದಿಂದ ಮಾಲಕ, ಕಾರ್ಮಿಕ, ಗ್ರಾಹಕ ಹೈರಾಣ

ಮಂಗಳೂರು, ಉಡುಪಿಯಲ್ಲಿ ಮತ್ತಷ್ಟು ಹೊಟೇಲ್‌ಗಳು ಬಂದ್

ಮಂಗಳೂರು/ಉಡುಪಿ: ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯದಿಂದಾಗಿ ಕರಾವಳಿಯಾದ್ಯಂತ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ. ಸೋಮವಾರ ಮತ್ತಷ್ಟು ಹೊಟೇಲ್‌ಗಳಿಗೆ ಬೀಗ ಜಡಿಯಲಾಗಿದ್ದು, ನಗರದಲ್ಲಿ ಹೊಟೇಲ್, ಮೊಬೈಲ್ ಕ್ಯಾಂಟೀನ್‌ಗಳನ್ನೇ ನಂಬಿಕೊಂಡಿದ್ದ ಕಾರ್ಮಿಕರು ಮತ್ತು ಸಾರ್ವಜನಿಕರು ಕಂಗಾಲಾಗುವಂತಾಗಿದೆ. ಸಣ್ಣಹೊಟೇಲ್‌ಗಳು ಮುಚ್ಚಿರುವುದರಿಂದ ದೊಡ್ಡ ಹೊಟೇಲ್‌ಗಳ ಬೆಲೆಯಲ್ಲಿ ಭಾರೀ ವ್ಯತ್ಯಯವೂ ಆಗಿರುವುದರಿಂದ ಕಾರ್ಮಿಕರ ಪಾಡು ಹೇಳತೀರದಾಗಿದೆ.

ಉಡುಪಿಯಲ್ಲಿ 900 ಹೊಟೇಲ್ ಬಂದ್!

ಉಡುಪಿ ಜಿಲ್ಲೆಯಲ್ಲಿ 900ಕ್ಕೂ ಅಧಿಕ ಹೊಟೇಲ್‌ಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ. ವಾಣಿಜ್ಯಸಿಲಿಂಡರ್‌ಗಳ ಪೂರೈಕೆ ಮತ್ತಷ್ಟು ವಿಳಂಬವಾದಲ್ಲಿ ಕರಾವಳಿಯ ಬಹುತೇಕ ಎಲ್ಲಾ ಹೊಟೇಲ್‌ಗಳು ಮುಚ್ಚುವ ಸಾಧ್ಯತೆ ದಟ್ಟವಾಗಿದೆ.

ಉಡುಪಿಯೂ ತತ್ತರ

ಉಡುಪಿ ಜಿಲ್ಲೆಯಲ್ಲೂ ಹೊಟೇಲ್ ಉದ್ಯಮಕ್ಕೆ ಭಾರೀ ಹೊಡೆತ ಬಿದ್ದಿದ್ದು, ಅನಿಲದ ಈ ತೀವ್ರ ಬಿಕ್ಕಟ್ಟಿನಿಂದಾಗಿ ಅಡುಗೆ ತಯಾರಿಸಲು ಅನಿಲ ಸಿಗದೆ ಜಿಲ್ಲೆಯ ಸುಮಾರು 3000 ಹೊಟೇಲ್‌ಗಳ ಪೈಕಿ ಈಗಾಗಲೇ 900ಕ್ಕೂ ಅಧಿಕ ಹೊಟೇಲ್‌ಗಳು ವಹಿವಾಟು ಸ್ಥಗಿತಗೊಳಿಸಿ ಬಾಗಿಲು ಮುಚ್ಚಿವೆ. ಉಳಿದ ಹೊಟೇಲ್‌ಗಳು ಅನಿವಾರ್ಯವಾಗಿ ಗ್ಯಾಸ್ ಬಿಟ್ಟು ಮತ್ತೆ ಸೌದೆ ಒಲೆ ಹಾಗೂ ಇಲೆಕ್ಟ್ರಿಕ್ ಸ್ಟವ್‌ಗಳನ್ನೇ ಅವಲಂಬಿಸುವಂತಾಗಿದೆ.

ಕಟ್ಟಿಗೆ ದರ ಏರಿಕೆ

ವಾಣಿಜ್ಯ ಬಳಕೆಯ ಸಿಲಿಂಡರ್ ಕೊರತೆಯ ನಡುವೆಯೇ ಕಟ್ಟಿಗೆಯ ದರವೂ ಹೆಚ್ಚಳ ಕಂಡಿದೆ. ಕಟ್ಟಿಗೆ ಕ್ವಿಂಟಾಲ್‌ಗೆ ಬರೋಬ್ಬರಿ 1000 ರೂ. ತಲುಪಿದೆ. ಒಂದೆಡೆ ಕಟ್ಟಿಗೆಯ ದುಬಾರಿ ವೆಚ್ಚ, ಮತ್ತೊಂದೆಡೆ ಏರುತ್ತಿರುವ ವಿದ್ಯುತ್ ದರದಿಂದಾಗಿ ಹೊಟೇಲ್ ಮಾಲೀಕರು ಹೈರಾಣಾಗಿದ್ದಾರೆ. ಅಡುಗೆ ತಯಾರಿಕಾ ವೆಚ್ಚವನ್ನು ಸರಿದೂಗಿಸಲು ಹೊಟೇಲ್‌ಗಳಲ್ಲಿ ತಿಂಡಿ ಮತ್ತು ಊಟದ ದರವನ್ನು ಕೊಂಚ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದೆ.

ಜಿಲ್ಲೆಯಲ್ಲಿ ಗ್ಯಾಸ್ ಪೂರೈಕೆಯಥಾಸ್ಥಿತಿಗೆ ಬರದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಮತ್ತಷ್ಟು ಹೊಟೇಲ್‌ಗಳು ಮುಚ್ಚುವ ಭೀತಿ ಎದುರಾಗಿದೆ. ಮಧ್ಯಪ್ರಾಚ್ಯದ ಯುದ್ಧದ ಬಿಸಿ ಕರಾವಳಿಯ ಗ್ರಾಹಕರ ಜೇಬಿಗೆ ನೇರವಾಗಿ ತಟ್ಟುತ್ತಿದ್ದು, ಹೊಟೇಲ್ ಉದ್ಯಮ ತೀವ್ರ ಸಂಕಷ್ಟಕ್ಕೆ ಸಿಲುಕಿದೆ.



ಕಟ್ಟಿಗೆಯತ್ತ ಚಿತ್ತ

ವಾಣಿಜ್ಯ ಬಳಕೆಯ ಅನಿಲ ಸಿಂಡರ್‌ಕೊರತೆಯ ಕಾರಣದಿಂದ ಕೆಲವು ಹೊಟೇಲ್‌ಗಳು ಕಟ್ಟಿಗೆಯತ್ತ ಚಿತ್ತಹರಿಸಿವೆ. ಮಂಗಳೂರು ಮತ್ತು ಉಡುಪಿಯಲ್ಲಿ ಕೆಲವು ಹೊಟೇಲ್‌ಗಳು ಕಟ್ಟಿಗೆಯನ್ನು ಬಳಸಿ ತಿಂಡಿ ತಿನಿಸುಗಳನ್ನು ತಯಾರಿಸುತ್ತಿವೆ. ಆದರೆ ದರ ಮಾತ್ರ ದುಪ್ಪಟ್ಟಾಗಿದೆ. ಹೆಚ್ಚಿನ ಹೊಟೇಲ್‌ಗಳ ಮುಂಭಾಗ ತಿಂಡಿಗಳ ದರ ಏರಿಕೆಯ ಪಟ್ಟಿಯನ್ನೂ ಅಂಟಿಸಲಾಗಿದೆ.

ಶಿರಾಡಿ ಘಾಟಿಯಲ್ಲಿ ಮೀನು ಸಾಗಾಟದ ಲಾರಿಗೆ ಬೆಂಕಿ

ಉಪ್ಪಿನಂಗಡಿ: ಇಲ್ಲಿಗೆ ಸಮೀಪದ ಶಿರಾಡಿ ಘಾಟಿ ಪ್ರದೇಶದ ಕೆಂಪಹೊಳೆ ಎಂಬಲ್ಲಿ ಮೀನು ಸಾಗಾಟದ ಲಾರಿಗೆ ಬೆಂಕಿ ತಗುಲಿ ಲಾರಿ ಸುಟ್ಟು ಹೋದ ಘಟನೆ ಸೋಮವಾರ ಸಂಭವಿಸಿದೆ.

ಮೀನು ಸರಬರಾಜು ಮಾಡಿ ಮಂಗಳೂರಿಗೆ ಹಿಂತಿರುಗುವ ವೇಳೆ ಈ ದುರ್ಘಟನೆ ಸಂಭವಿಸಿದ್ದು, ಲಾರಿಯಲ್ಲಿದ್ದವರು ಬೆಂಕಿ ಕಾಣಿಸಿಕೊಂಡ ಕೂಡಲೇ ಲಾರಿಯಲ್ಲಿದ್ದ ಖಾಲಿ ಬಾಕ್ಸ್‌ಗಳ ಪೈಕಿ ಒಂದಷ್ಟನ್ನು ತ್ವರಿತಗತಿಯಲ್ಲಿ ತೆರವು ಮಾಡಿ ಪ್ರಯತ್ನಿಸಿದ್ದು, ಆ ವೇಳೆಗಾಗಲೇ ಬೆಂಕಿ ಲಾರಿಯನ್ನು ಸಂಪೂರ್ಣ ಆವರಿಸಿತ್ತು.

ಅಗ್ನಿ ಶಾಮಕ ದಳ ಸ್ಥಳಕ್ಕಾಗಮಿಸುವ ವೇಳೆ ಲಾರಿ ಸುಟ್ಟು ಹೋಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದ ಬಗ್ಗೆ ಅಂದಾಜಿಸಲಾಗಿದೆ.



ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದಿಂದ ಕರ್ನಾಟಕದ ರೈಲ್ವೆ ಯೋಜನೆಗಳಿಗೆ 7,748 ಕೋಟಿ ರೂ. ಅನುದಾನಕ್ಕೆ ಸಂಸದ ಬಿ.ವೈ. ರಾಘವೇಂದ್ರ ಕೃತಜ್ಞತೆ

ಬೈಂದೂರು ರೈಲು ನಿಲ್ದಾಣದಲ್ಲಿ ನಾಲ್ಕು ಎಕ್ಸ್‌ಪ್ರೆಸ್ ರೈಲುಗಳಿಗೆ ನಿಲುಗಡೆಗೆ ಒತ್ತಾಯ

ಬೈಂದೂರು: ಕೇಂದ್ರ ಬಜೆಟ್ 2026–27ರ ರೈಲ್ವೆ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಶಿವಮೊಗ್ಗದ ಸಂಸದ ಬಿ. ವೈ. ರಾಘವೇಂದ್ರ, ಶಿವಮೊಗ್ಗ ಹಾಗೂ ಮಲೆನಾಡು ಭಾಗದ ದಶಕಗಳ ರೈಲ್ವೆ ಕನಸುಗಳನ್ನು ನನಸಾಗಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಮೂಲಕ ಮತ್ತೊಮ್ಮೆ ಕ್ಷೇತ್ರದ ಅಭಿವೃದ್ಧಿಗಾಗಿ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತವು ವಿಳಂಬ ಗತಿಯಿಂದ, ಅತಿ ವೇಗದ ವಿತರಣೆಯ ಯುಗಕ್ಕೆ ಕಾಲಿಟ್ಟಿದೆ ಎಂದು ಶ್ಲಾಘಿಸಿದ ಸಂಸದರು, ಕರ್ನಾಟಕದ ರೈಲ್ವೆ ಯೋಜನೆಗಳಿಗೆ ಈ ಬಾರಿ ದಾಖಲೆಯ 7,748 ಕೋಟಿ ರೂ. ಅನುದಾನ ನೀಡಿದ್ದಕ್ಕಾಗಿ ಮೋದಿ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದರು. ಹಿಂದಿನ ಯುಪಿಎ ಸರ್ಕಾರಕ್ಕೆ ಹೋಲಿಸಿದರೆ ಕರ್ನಾಟಕಕ್ಕೆ ಸಿಗುತ್ತಿರುವ ರೈಲ್ವೆ ಅನುದಾನದಲ್ಲಿ ಒಂಬತ್ತು ಪಟ್ಟು ಹೆಚ್ಚಳವಾಗಿದೆ ಎಂದು ಅವರು ಅಂಕಿ–ಅಂಶಗಳ ಸಮೇತ ವಿವರಿಸಿದರು.

ಪ್ರಮುಖವಾಗಿ, ಶಿವಮೊಗ್ಗ–ತೀರ್ಥಹಳ್ಳಿ–ಶೃಂಗೇರಿ–ಮಂಗಳೂರು ಮಾರ್ಗದ ಶೀಘ್ರ ಅನುಷ್ಠಾನ ಹಾಗೂ ಬೈಂದೂರಿಗೆ ಸಂಬಂಧಪಟ್ಟಂತೆ ಪ್ರಯಾಣಿಕರ ಅನುಕೂಲತೆ ಹೆಚ್ಚಿಸುವ ಬದ್ಧತೆಯ ಭಾಗವಾಗಿ, ಸಂಸದರು ಮೂಕಾಂಬಿಕಾ ರೋಡ್ ಬೈಂದೂರು ರೈಲು ನಿಲ್ದಾಣದಲ್ಲಿ ಎರ್ನಾಕುಲಂ–ಪುಣೆ ಎಕ್ಸ್‌ಪ್ರೆಸ್, ತಿರುವನಂತಪುರಂ–ನಿಜಾಮುದ್ದೀನ್ ಎಕ್ಸ್‌ಪ್ರೆಸ್, ಕೊಚುವೇಲಿ–ಹೃಷಿಕೇಶ್ ಎಕ್ಸ್‌ಪ್ರೆಸ್, ಮಂಗಳ ಲಕ್ಷದ್ವೀಪ್ ಎಕ್ಸ್‌ಪ್ರೆಸ್ ಈ ನಾಲ್ಕು ಎಕ್ಸ್‌ಪ್ರೆಸ್ ರೈಲುಗಳಿಗೆ ನಿಲುಗಡೆ ಒದಗಿಸುವಂತೆ ಸಂಸದ ರಾಘವೇಂದ್ರ ಸಚಿವಾಲಯವನ್ನು ವಿನಂತಿಸಿದರು. ಬೈಂದೂರು ಒಳಗೊಂಡಂತೆ ಶಿವಮೊಗ್ಗ ಲೋಕಸಭಾ ಕ್ಷೇತ್ರವನ್ನು ಪ್ರಮುಖ ರೈಲ್ವೆ ಸಂಪರ್ಕ ಕೇಂದ್ರವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸಂಸದರು ಹಲವು ಪ್ರಮುಖ ಯೋಜನೆಗಳ ಶೀಘ್ರ ಅನುಷ್ಠಾನಕ್ಕೆ ಸದನದಲ್ಲೇ ಹಾಜರಿದ್ದ ರೈಲ್ವೆ ಸಚಿವರನ್ನು ಒತ್ತಾಯಿಸಿದರು.



ತೀರ್ಥಹಳ್ಳಿ, ಸೊರಬಕ್ಕೆ ರೈಲ್ವೆ ಸಂಪರ್ಕ ಯೋಜನೆಗಳ ಶೀಘ್ರ ಅನುಷ್ಠಾನಕ್ಕೆ ಒತ್ತಾಯ: ಮಲೆನಾಡಿನ ಸಾಂಸ್ಕೃತಿಕ ಕೇಂದ್ರ, ಕುವೆಂಪು ಜನ್ಮಭೂಮಿ ತೀರ್ಥಹಳ್ಳಿಗೆ ರೈಲು ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಶಿವಮೊಗ್ಗ–ತೀರ್ಥಹಳಿ–ಶೃಂಗೇರಿ–ಮಂಗಳೂರು ಹಾಗೂ ಶಿವಮೊಗ್ಗ–ತೀರ್ಥಹಳ್ಳಿ–ಶೃಂಗೇರಿ–ಚಿಕ್ಕಮಗಳೂರು ರೈಲು ಮಾರ್ಗದ ಸಮೀಕ್ಷೆಯನ್ನು ವೇಗಗೊಳಿಸಲು ಸಂಸದರು ವಿನಂತಿಸಿದರು. ತಾಳಗುಪ್ಪ–ಸಿದ್ದಾಪುರ–ಶಿರಸಿ–ಹುಬ್ಬಳ್ಳಿ ಮಾರ್ಗವನ್ನು ಸೊರಬದ ಮೂಲಕವೇ ಹಾದುಹೋಗುವಂತೆ ಮಾಡುವ ಮೂಲಕ ಅರಣ್ಯ ನಾಶವನ್ನು ತಡೆಗಟ್ಟುವ ಮತ್ತು ಸೊರಬಕ್ಕೆ ರೈಲ್ವೆ ಸಂಪರ್ಕ ಕಲ್ಪಿಸುವ ಸಾರ್ವಜನಿಕರ ಬೇಡಿಕೆಯನ್ನು ಈಡೇರಿಸುವ ಮಹತ್ವಪೂರ್ಣ ಪ್ರಸ್ತಾಪವನ್ನು ಮುಂದಿಟ್ಟರು. ಮಲೆನಾಡು ಹಾಗೂ ಉತ್ತರ ಕರ್ನಾಟಕವನ್ನು ಸಂಪರ್ಕಿಸುವ ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ರೈಲ್ವೆ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಮತ್ತು ಶಿಕಾರಿಪುರದಿಂದ ರಾಣೆಬೆನ್ನೂರು ವರೆಗಿನ ಎರಡನೇ ಹಂತದ ಕಾಮಗಾರಿಗೆ ಕೂಡಲೇ ಟೆಂಡರ್ ಕರೆಯುವಂತೆ ಮನವಿ ಮಾಡಿದರು. ಈ ಯೋಜನೆಯ ಸಾಕಾರಕ್ಕಾಗಿ ರಾಜ್ಯ ಸರ್ಕಾರದ ವತಿಯಿಂದ 50:50 ವೆಚ್ಚ ಹಂಚಿಕೆ ಹಾಗೂ ಭೂಸ್ವಾಧೀನ ಪ್ರಕ್ರಿಯೆಗೆ ಶ್ರಮಿಸಿದ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರ ಕೊಡುಗೆಯನ್ನು ಸಂಸದರು ಇದೇ ವೇಳೆ ಸ್ಮರಿಸಿದರು.

ಶಿವಮೊಗ್ಗದ ಕೋಟೆಗಂಗೂರು ಕೋಚಿಂಗ್ ಟರ್ಮಿನಲ್‌ನ ಎರಡನೇ ಹಂತದ ಕಾಮಗಾರಿಗೆ ತಕ್ಷಣದ ಅನುಮೋದನೆ ನೀಡಬೇಕು ಮತ್ತು ಎರಡನೇ ಪೂರ್ಣ ಪ್ರಮಾಣದ ಪಿಟ್‌ಲೈನ್ ಹಾಗೂ ಸ್ವಯಂಚಾಲಿತ ಕೋಚ್ ವಾಷಿಂಗ್ ಪ್ಲಾಂಟ್ ಸ್ಥಾಪಿಸಬೇಕು ಎಂದು ಸಂಸದ ರಾಘವೇಂದ್ರ ಬಲವಾಗಿ ಪ್ರತಿಪಾದಿಸಿದರು. ಇವುಗಳ ಜೊತೆಗೆ ಶಿವಮೊಗ್ಗದಿಂದ ವಂದೇ ಭಾರತ್ ರೈಲುಗಳ ಕಾರ್ಯಾಚರಣೆ ಪ್ರಾರಂಭಿಸಲು ಈ ಟರ್ಮಿನಲ್ ಅಗತ್ಯವನ್ನು ಒತ್ತಿ ಹೇಳಿದ ಸಂಸದರು, ಇದರೊಂದಿಗೆ ಬೀರೂರು–ಶಿವಮೊಗ್ಗ ರೈಲ್ವೆ ಹಳಿ ಜೋಡಿ ಮಾರ್ಗ ಯೋಜನೆಗೆ ಕೂಡಲೇ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಆಗ್ರಹಿಸಿದರು.

ಪ್ರಧಾನಿ ಮೋದಿಯವರ ವಿಕಸಿತ ಭಾರತ ಸಂಕಲ್ಪಕ್ಕೆ ಪೂರಕವಾಗಿ ಶಿವಮೊಗ್ಗ ಕೂಡ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದು, ಮುಂದಿನ ದಿನಗಳಲ್ಲೂ ಕೇಂದ್ರ ಸರ್ಕಾರದ ಸಹಕಾರ ಇದೇ ರೀತಿ ಮುಂದುವರಿಯಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರ ಮೋದಿ ಸರ್ಕಾರದಿಂದ ಕರ್ನಾಟಕದ ರೈಲ್ವೆ ಯೋಜನೆಗಳಿಗೆ ನೀಡಿದ 7,748 ಕೋಟಿ ರೂ. ಅನುದಾನಕ್ಕೆ ಕೃತಜ್ಞತೆ ಸಲ್ಲಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸದಿಗಂತ ಸಂಗಮ
ರಾಷ್ಟ್ರ ಜಾಗೃತಿಯ ದೈನಿಕ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಜಾತ್ರೆ, ಗೌಜಿ!

ಶ್ರೀ ಕ್ಷೇತ್ರ ಪೊಳಲಿಯ ಜಾತ್ರೆ ಸಂದರ್ಭ ಸಂಪ್ರದಾಯದಂತೆ ಶ್ರೀ ಭದ್ರಕಾಳಿ ಬಿಂಬ, ಅರಸು ದೈವಗಳ ಆಯುಧ, ಕದಿರ್ ಮುಡಿಯೊಂದಿಗೆ ಶ್ರೀ ಕ್ಷೇತ್ರ ನಂದ್ಯಾಕ್ಕೆ ಫಲ್ಗುಣಿಯಲ್ಲಿ ದೋಣಿಯಲ್ಲಿ ಸಾಗುವ ದೃಶ್ಯ...

ಇಂದಿನ ಹವಾಮಾನ



ದಕ್ಷಿಣ ಕನ್ನಡ	ಉಡುಪಿ
34° 23°	31° 24°

ಕೊಳವೆ ಗ್ಯಾಸ್ ಕನೆಕ್ಷನ್‌ಗೆ ಹೆಚ್ಚಿದ ಬೇಡಿಕೆ

ಈಗ ಸಿಟಿ ಹವಾ!

ಲೈಫ್ ಸ್ಟೈಲ್ ಬದಲಿಸಿದ ಕೊಲ್ಲಿ ಯುದ್ಧ

ಕಾಸರಗೋಡು: ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆ ಹಲವು ಹೊಸ ಹೊಸ ಬೆಳವಣಿಗೆಗೆ ಕಾರಣವಾಗುತ್ತಿದೆ.

ಎಲ್‌ಪಿಜಿ ಅಲಭ್ಯತೆ ಜನರಲ್ಲಿ ಆತಂಕ ಹೆಚ್ಚಿದೆ. ಆದ್ದರಿಂದ ಮನೆಗಳಿಗೆ ನೇರವಾಗಿ ಕೊಳವೆ ಮೂಲಕ ಬರುವ ಸಿಟಿ ಗ್ಯಾಸ್ ಕನೆಕ್ಷನ್‌ಗೆ ಬೇಡಿಕೆದಾರರ ಸಂಖ್ಯೆಯಲ್ಲಿ ಸತತವಾಗಿ ಏರಿಕೆಯಾಗಿದೆ.

ಹೆಚ್ಚುತ್ತಲೇ ಇದೆ ಬೇಡಿಕೆ ಕರೆ

ಯೋಜನೆಯ ಅಂಗವಾಗಿ ಸಂಪರ್ಕ ಕಲ್ಪಿಸುವುದಕ್ಕಾಗಿ ಬರುವ ದೂರವಾಣಿ ಕರೆಗಳ ಸಂಖ್ಯೆಯು ಹೆಚ್ಚಾಗಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಅಜಾನೂರು ಗ್ರಾಮ ಪಂಚಾಯತ್‌ನ ವೆಳ್ಳಿಕ್ಕೋತ್‌ನಲ್ಲಿ ಪ್ರಸ್ತುತ 'ಸಿಟಿ ಗ್ಯಾಸ್' ಸಂಪರ್ಕ ನೀಡಲಾಗುತ್ತಿದೆ. ಸುಮಾರು 400ರಷ್ಟು ಗೃಹಬಳಕೆಯ ಗ್ಯಾಸ್ ಸಂಪರ್ಕವನ್ನು ಈಗಾಗಲೇ ಒದಗಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಎಲ್ಲಿಯವರೆಗೆ ಸಾಗಿದೆ ಕೆಲಸ?

ಸದ್ಯ ಕೋಟ್ಟಪ್ಪಾರೆ ಗ್ಯಾಸ್ ಸ್ಟೇಷನ್‌ನಿಂದ ವೆಳ್ಳಿಕ್ಕೋತ್‌ನ ಮೂಲಕ ಮಡಿಯನ್‌ಗೆ ಸಾಗುವ ಪ್ರಧಾನ ಪೈಪ್‌ಲೈನ್‌ನ್ನು ಇಲ್ಲಿಂದ ಕವಲುಗಳಾಗಿ ಚಂದ್ರಗಿರಿ ಹೆದ್ದಾರಿಯ ಮುಖೇನ ಕಾಸರಗೋಡು ಸಿಟಿ, ಕಾಞಂಗಾಡು ಪೇಟೆಯನ್ನು ದಾಟಿ ರಾಷ್ಟ್ರೀಯ ಹೆದ್ದಾರಿ ಸಮೀಪದವರೆಗೆ ಅಳವಡಿಸಲಾಗಿದೆ.



ಬೇಡಿಕೆಯನ್ನು ಸದ್ಯಕ್ಕೆ ಈಡೇರಿಸಲು ಸಾಧ್ಯವಿಲ್ಲ

ಗ್ಯಾಸ್ ಸಂಪರ್ಕ ನೀಡಬೇಕಾದರೆ ಪೈಪ್‌ಲೈನ್ ಅಳವಡಿಸಲು ರಸ್ತೆ ಅಗೆದು ಮತ್ತೆ ಮುಚ್ಚುವ ಅಗತ್ಯವಿದೆ. ಕೇರಳ ವಿಧಾನಸಭಾ ಚುನಾವಣೆಗೆ ದಿನಾಂಕ ನಿಗದಿಯಾದ ಹಿನ್ನೆಲೆಯಲ್ಲಿ ರಸ್ತೆ ಹೊಂಡ ಅಗೆಯಲು ಅನುಮತಿ ಲಭಿಸದು ಎನ್ನಲಾಗುತ್ತಿದ್ದು, ಆದ ಕಾರಣ ಸಿಟಿ ಗ್ಯಾಸ್ ಕನೆಕ್ಷನ್‌ಗಾಗಿರುವ ಬೇಡಿಕೆಯನ್ನು ಸದ್ಯಕ್ಕೆ ಈಡೇರಿಸಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಂದು ಪ್ರಯತ್ನಕ್ಕೆ ಬೆಂಬಲವೇ ಸಿಕ್ಕಿಲ್ಲ!

ಕಾಸರಗೋಡು ನಗರದ ಹೊಟೇಲ್‌ಗಳು, ಲಾಡ್ಜ್‌ಗಳು ಮತ್ತಿತರ ಸಂಸ್ಥೆಗಳನ್ನು ಮಾರ್ಕೆಟಿಂಗ್ ವಿಭಾಗದ ನೇತೃತ್ವದಲ್ಲಿ ಸಿಟಿ ಗ್ಯಾಸ್ ಸಂಪರ್ಕ ನೀಡುವುದಕ್ಕಾಗಿ ಇತ್ತೀಚೆಗಿನ ತನಕವೂ ಪ್ರಯತ್ನ ನಡೆಸಲಾಗಿತ್ತಾದರೂ ಆಗ ಮಾತ್ರ ಯಾರೂ ಮನಸ್ಸು ಮಾಡಿರಲಿಲ್ಲ. ಇದೀಗ ಹೊಟೇಲ್ ಮಾಲಕರು ಮತ್ತಿತರ ಸಂಸ್ಥೆಯವರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಆಗಿ ಸಿಟಿ ಗ್ಯಾಸ್ ಸಂಪರ್ಕಕ್ಕಾಗಿ ಕಂಪೆನಿಗೆ ಫೋನಾಯಿಸುತ್ತಿದ್ದಾರೆ.

ಒಂದೇ ತಿಂಡಿ | ಒಂದೇ ಊಟ

ಸೌದೆ ಒಲೆಯತ್ತ 'ಇಂದಿರಾ' ಚಿತ್ತ

ಮುಲ್ಕಿಯಲ್ಲೂ ಗ್ಯಾಸ್ ಸಮಸ್ಯೆ





ಮುಲ್ಕಿ: ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಮುಲ್ಕಿ ತಾಲೂಕು ವ್ಯಾಪ್ತಿಯಲ್ಲಿ ವಾಣಿಜ್ಯ ಅಡುಗೆ ಅನಿಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದ್ದು ಇಂದಿರಾ ಕ್ಯಾಂಟೀನ್ ಹಾಗೂ ಹೋಟೆಲ್ ಉದ್ಯಮಕ್ಕೆ ಹೊಡೆತ ಬಿದ್ದಿದೆ.

ನಗರ ಪಂಚಾಯತ್ ಬಳಿಯ ಇಂದಿರಾ ಕ್ಯಾಂಟೀನ್ ಸೌದೆ ಒಲೆಯಲ್ಲಿ ಮಿತ ತಿಂಡಿ ಮೂಲಕ ಕಳೆದ ನಾಲ್ಕು ದಿನಗಳಿಂದ ವ್ಯವಹಾರ ಮಾಡುತ್ತಿದೆ. ಬೆಳಿಗ್ಗೆ ಕೇವಲ ಒಂದೇ ತಿಂಡಿ ತಯಾರು ಮಾಡಲಾಗುತ್ತದೆ. »ಪುಟ 6

ಎಲ್‌ಪಿಜಿ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಳ

ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಕೊರತೆ ದಿನದಿಂದ ದಿನಕ್ಕೆ ತೀವ್ರವಾಗುತ್ತಿದ್ದು ಮುಲ್ಕಿ ನಗರ ವ್ಯಾಪ್ತಿಯಲ್ಲಿ ಕೆಲವು ಹೊಟೇಲ್‌ಗಳು ಈಗಾಗಲೇ ಮುಚ್ಚಿದ್ದರೆ, ಇನ್ನೂ ಕೆಲ ಹೋಟೆಲ್‌ಗಳು ಮುಚ್ಚುವ ಸ್ಥಿತಿಯಲ್ಲಿದೆ.

ಸುತ್ತಮುತ್ತ

ಇಳಿಕೆ ಹಾದಿಯಲ್ಲಿದ್ದ ಅಡಿಕೆ ಧಾರಣೆ ಮತ್ತೆ ತೇಜಿ ಸಾಧ್ಯತೆ: ಕೃಷಿಕರಲ್ಲಿ ಖುಷಿ

ಮಂಗಳೂರು: ಇಳಿಕೆ ಹಾದಿಯಲ್ಲಿದ್ದ ಅಡಿಕೆ ಧಾರಣೆ ಮತ್ತೆ ತೇಜಿಯಾಗುವ ಲಕ್ಷಣಗಳು ಮಾರುಕಟ್ಟೆಯಲ್ಲಿ ಗೋಚರಿಸುತ್ತಿದ್ದು, ಕ್ಯಾಂಪ್ಕೋ ದರ ಸ್ಥಿರವಾಗಿದ್ದು, ಹಳೆ ಅಡಿಕೆ ಹಾಗೂ ಡಬಲ್ ಚೋಲ್ 530 ರೂ.ಏನಲ್ಲಿ ಸ್ಥಿರವಾಗಿದೆ. ಆದರೆ ಖಾಸಗಿ ಮಾರುಕಟ್ಟೆಯಲ್ಲಿ ದರ ಏರಿಕೆಯಾಗುತ್ತಿದ್ದು, ಹಳೆ ಅಡಿಕೆ 537 ರೂ.ವರೆಗೆ ಅಲ್ಲಲ್ಲಿ ಖರೀದಿಯಾಗಿದೆ. ಕಳೆದ 20 ದಿನಗಳಿಂದ ಹಣಕಾಸು ವಹಿವಾಟಿನ ಕೊರತೆಯಿಂದ ಧಾರಣೆ ಇಳಿಕೆ ಹಾದಿ ಹಿಡಿದಿತ್ತು. ಇದೀಗ ಧಾರಣೆ ಏರಿಕೆಯಾಗುವ ಸಾಧ್ಯತೆ ವಿಶ್ವಾಸ ಕೃಷಿಕರಲ್ಲಿ ಮೂಡಿದೆ.

ಮೂಡುಬಿದಿರೆ ಸುತ್ತಮುತ್ತ ಇಳೆಗೆ ತಂಪೆರೆದ ಗುಡುಗು ಸಹಿತ ಮೊದಮೊದಲ ಮಳೆ

ಮೂಡುಬಿದಿರೆ: ಸೋಮವಾರ ರಾತ್ರಿ ಇಲ್ಲಿನ ಪರಿಸರದಲ್ಲಿ ಗುಡುಗು ಸಹಿತ ಮಳೆಯಾಗಿದೆ. ಸುಮಾರು 9.30ರ ವೇಳೆಗೆ ಪೇಪರ್ ಮಿಲ್, ಕೀರ್ತಿನಗರ, ಶೇನವ ನಗರ, ಮಹಾವೀರ ಕಾಲೇಜು, ಕೋಡಂಗಲ್ಲು ಮೊದಲಾದ ಪ್ರದೇಶದಲ್ಲಿ ಮಳೆ ಸುರಿದಿದೆ. ಭಾನುವಾರವೇ ಮೋಡ ಕವಿದ ವಾತಾವರಣವಿತ್ತು. ತೀವ್ರ ಪ್ರಮಾಣದಲ್ಲಿ ವಾತಾವರಣದಲ್ಲಿ ಬಿಸಿ ಏರಿಕೆಯಾಗಿತ್ತು. ಮಳೆಯ ಆಗಮನಕ್ಕೆ ಜನತೆ ಕಾತರದಿಂದ ಕಾಯುತ್ತಿದ್ದರು. ಮೊದಲ ಮಳೆ ಜನತೆಯಲ್ಲಿ ಸಂತಸ ತಂದುಕೊಟ್ಟಿತು.

ಮಂಜಿನ ನಗರಿ ಖ್ಯಾತಿಯ ಮಡಿಕೇರಿಗೆ ತಂಪೆರೆಯಿತು ಬೇಸಿಗೆಯ ಮಳೆ

ಮಡಿಕೇರಿ: ಮಂಜಿನ ನಗರಿ ಮಡಿಕೇರಿಯಲ್ಲಿ ಸೋಮವಾರ ರಾತ್ರಿ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ಸೋಮವಾರಪೇಟೆ ಸಮೀಪದ ಕುಂದಳ್ಳಿ ಗ್ರಾಮದಲ್ಲಿ ರಾತ್ರಿ 7 ಗಂಟೆ ಸುಮಾರಿಗೆ ಸಾಧಾರಣ ಮಳೆ ಸುರಿಯಲಾರಂಭಿಸಿದ್ದು ಭಾರೀ ಗುಡುಗು, ಮಿಂಚಿನೊಂದಿಗೆ ವರುಣಾರ್ಭಟ ಆರಂಭವಾಗಿ ಕೆಲಕಾಲ ಮುಂದುವರಿದಿತ್ತು.

ಕೊಡಗಿನ ಶಿರಂಗಾಲದಲ್ಲಿ ಅವಾಂತರ ಸೃಷ್ಟಿಸಿದ ಗಾಳಿ, ಮಳೆ ಆರ್ಭಟ

ಬೆಚ್ಚಿಬೀಳಿಸಿದ ಗುಡುಗು, ಸಿಡಿಲು, ಆಲಿಕಲ್ಲು!

- ಕುಶಾಲನಗರ ವ್ಯಾಪ್ತಿಯಲ್ಲಿ ನಡುಗಿಸಿದ ಭರ್ಜರಿ ಮಳೆ
- ಗಾಳಿಯ ರಭಸಕ್ಕೆ ಕೆಲವೆಡೆ ಹಾರಿಹೋದ ಮನೆ ಹೆಂಚು
- ಗುಡುಗು, ಸಿಡಿಲಿನ ಸದ್ದಿಗೆ ಅಕ್ಷರಶಃ ನಡುಗಿದ ಜನತೆ
- ಗುಡ್ಡೆಹೊಸೂರು ಭಾಗದಲ್ಲಿ ಆಲಿಕಲ್ಲು ಸಹಿತ ಮಳೆ

ಮಡಿಕೇರಿ/ಕುಶಾಲನಗರ: ಕೊಡಗು ಜಿಲ್ಲೆಯ ಸೋಮವಾರ ಸಂಜೆ ಗುಡುಗು, ಸಿಡಿಲು ಗಾಳಿ ಮಳೆಯಾಗಿದ್ದು, ಹಲವೆಡೆ ಆಲಿಕಲ್ಲು ಮಳೆ ಬಿದ್ದಿದೆ.

ಕುಶಾಲನಗರ ತಾಲೂಕು ವ್ಯಾಪ್ತಿಯಲ್ಲಿ ಸೋಮವಾರ ಸಂಜೆ ಸುರಿದ ಮಳೆ, ಶಿರಂಗಾಲ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅವಾಂತರ ಸೃಷ್ಟಿಸಿದೆ.

ಮನೆ, ಸೊತ್ತುಗಳಿಗೆ ಅಪಾರ ಹಾನಿ

ಅಲ್ಲಿನ ಚಿಕ್ಕನಾಯಕನಹೊಸಳ್ಳಿ ಗ್ರಾಮದ ಹರೀಶ್ ಮತ್ತು ಫಾಲ್ಗುಣ ಸಹೋದರರ ಹಂಚಿನ ಮನೆಯ ಮೇಲೆ ತೆಂಗಿನ ಮರ ತುಂಡರಿಸಿ ಬಿದ್ದಿದ್ದು, ಗಾಳಿಗೆ ಹಂಚು ಗಳು ಹಾರಿಹೋಗಿವೆ. ಅಲ್ಲೇ ಇದ್ದ ಟ್ರಾಕ್ಟರ್‌ಗೆ ಹಾನಿಯಾಗಿದೆ. ಹಂಚು ಹಾರಿಹೋದ ಪರಿಣಾಮ ಮನೆಯೊಳಗೆ ದಾಸ್ತಾನಿದ್ದ ಹೊಗೆಸೊಪ್ಪು, ಧವಸಧಾನ್ಯ ಮಳೆಯಿಂದ ಹಾನಿಯಾಗಿದೆ. ಸಮೀಪದ ಎಸ್.ಹೆಚ್. ಸುಂದರ ಎಂಬವರ ಮನೆ ಹಾಗೂ ಕೊಟ್ಟಿಗೆ ಶೀಟ್‌ಗಳು ಹಾರಿಹೋಗಿ ಮೂಟೆಗಳಲ್ಲಿ ಶೇಖರಿಸಿಟ್ಟಿದ್ದ ಭತ್ತ, ರಾಗಿ ತೊಯ್ದು ಹೋಗಿವೆ. ಘಟನೆಯಿಂದ ಲಕ್ಷಾಂತರ ಮೌಲ್ಯದ ವಸ್ತುಗಳು ಹಾನಿಯಾಗಿದೆ. ಸ್ಥಳಕ್ಕೆ ಕಂದಾಯ ಇಲಾಖೆ ಪ್ರತಿನಿಧಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.



ಸುಂಟಿಕೊಪ್ಪ, ಏಳನೇ ಹೊಸಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಿದ್ದರೆ, ಗುಡ್ಡೆಹೊಸೂರು ಭಾಗದಲ್ಲಿ ಆಲಿಕಲ್ಲು ಸಹಿತ ಮಳೆ ಬಿದ್ದಿದೆ.

ಹಗ್ಗ ತುಂಡಾಗಿ ಬಾವಿಗೆ ಬಿದ್ದ ವ್ಯಕ್ತಿಗೆ ಅಗ್ನಿಶಾಮಕ ದಳದಿಂದ ಜೀವದಾನ





ಮಂಗಳೂರು: ಹಗ್ಗತುಂಡಾಗಿ ಬಾವಿಗೆ ಬಿದ್ದ ವ್ಯಕ್ತಿಯನ್ನು ಪಾಂಡೇಶ್ವರ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸಕಾಲಿಕ ಕಾರ್ಯಾಚರಣೆಯ ಮೂಲಕ ಸುರಕ್ಷಿತವಾಗಿ ರಕ್ಷಿಸಿದ್ದಾರೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಪಂಚಪ್ಪ (44) ರಕ್ಷಣೆಗೊಳಗಾದವರು.

ಇವರು ನಗರದ ಬೋಳಾರದ ಮುಳಿಹಿತ್ತಲು ಬಳಿಯ ಹತ್ತಿರ ಬಾವಿಯ ಸುತ್ತಮುತ್ತಲಿನ ಕಸವನ್ನು ಸ್ವಚ್ಛಗೊಳಿಸುವ ವೇಳೆ ಹಗ್ಗ ತುಂಡಾಗಿ ಬಾವಿಗೆ ಬಿದ್ದಿದ್ದರು.

ಈ ಕುರಿತು ಮಾಹಿತಿ ಪಡೆದ ಪಾಂಡೇಶ್ವರ ಅಗ್ನಿಶಾಮಕ ಠಾಣೆಯ ಅಧಿಕಾರಿ ಹಾಗು ಸಿಬ್ಬಂದಿ ಬಾವಿಗೆ ಇಳಿದು ಪಂಚಪ್ಪ ಅವರನ್ನು ಸುರಕ್ಷಿತವಾಗಿ ಮೇಲೆ ಕರೆತಂದಿದ್ದಾರೆ.

ವಾಣಿಜ್ಯ ಬಳಕೆ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯ | ಎಲ್ಲೆಡೆ ತಿಂಡಿ, ಊಟಗಳ ದರದಲ್ಲಿ ದಿಢೀರ್ ಏರಿಕೆ

ಹೊಟೇಲ್ ಗ್ರಾಹಕರ ಜೇಬು ಸುಡುತ್ತಿದೆ ಕೊಲ್ಲಿ ಯುದ್ಧದ ಕಿಡಿ!

■ ಸುದೀಪ್ ರಾಜ್ ಸುಳ್ಯ

ಉಡುಪಿ: ಮಧ್ಯಪ್ರಾಚ್ಯದಲ್ಲಿ ಮುಂದುವರಿದಿರುವ ಸಂಘರ್ಷದಿಂದ ವಿಶ್ವದೆಲ್ಲೆಡೆ ಸಮಸ್ಯೆ ಎದುರಾಗಿದ್ದು, ವಾಣಿಜ್ಯ ಬಳಕೆ ಅನಿಲ ಪೂರೈಕೆಯಲ್ಲಿನ ವ್ಯತ್ಯಯ ನಮ್ಮ ಕರಾವಳಿ ಭಾಗದ ಹೋಟೆಲ್ ಉದ್ಯಮ ಮೇಲೂ ಭಾರೀ ಹೊಡೆತ ನೀಡಿದೆ.

10 ರಿಂದ 30 ರೂಪಾಯಿ ಏರಿಕೆ

ಅನಿಲ ಅಭಾವ ಹೆಸರಿನಲ್ಲಿ ಕೆಲವೊಂದು ಹೋಟೆಲ್‌ಗಳಲ್ಲಿ ತಿಂಡಿಗಳು ಹಾಗೂ ಊಟದ ದರಗಳಲ್ಲಿ 10 ರಿಂದ 30 ರೂಪಾಯಿಯಷ್ಟು ದಿಢೀರ್ ಏರಿಕೆಯಾಗಿದೆ. ಈ ಮೂಲಕ ಕೊಲ್ಲಿ ಯುದ್ಧದ ಬಿಸಿ ಈಗ ಹೊಟೇಲ್ ಮಾಲಕರ ಬಳಿಕ ಹೊಟೇಲ್ ಗ್ರಾಹಕರ ಜೇಬನ್ನೂ ಸಖತ್ತಾಗಿ ಸುಡುತ್ತಿದೆ. ಈ ನಡುವೆ ಅನಿಲ ಸಿಲಿಂಡರ್ ಸರಬರಾಜು ಯಥಾಸ್ಥಿತಿಗೆ ಮರಳಿದ ಬಳಿಕ ಏರಿಕೆಯಾದ ಈ ದರಗಳು ಮತ್ತೆ ಇಳಿಕೆಯಾಗುವುದೇ? ಅಥವಾ ಶಾಶ್ವತವೇ? ಎನ್ನುವ ಯಕ್ಷಪ್ರಶ್ನೆ ಈಗ ಗ್ರಾಹಕರನ್ನು ಕಾಡತೊಡಗಿದೆ.

ಮತ್ತೆ ಇಳಿಕೆಯಾದ ಇತಿಹಾಸವೇ ಇಲ್ಲ!

ಸಾಮಾನ್ಯವಾಗಿ ಒಮ್ಮೆ ಏರಿಕೆಯಾದ ಹೋಟೆಲ್ ದರ ಅಲ್ಪಾವಧಿಯಲ್ಲಿ ಇಳಿಕೆಯಾದ ಇತಿಹಾಸವಿಲ್ಲ. ಈಗಿನ ತಾತ್ಕಾಲಿಕ ಅನಿಲ ಅಭಾವವನ್ನು ಮುಂದಿಟ್ಟುಕೊಂಡು ದರ ಹೆಚ್ಚಳ ಮಾಡಲಾಗಿದೆಯಾದರೂ, ಮುಂದೆ ಹಳೆ ದರವನ್ನೇ ಮುಂದುವರಿಸುತ್ತಾರೋ ಅಥವಾ ಇಳಿಕೆ ಮಾಡುತ್ತಾರೋ ಎಂಬುದು ಸದ್ಯದ ಕುತೂಹಲ.



ತಿಂಡಿಗಳು ಇನ್ನಷ್ಟು 'ಬಿಸಿ'

- ಕರಾವಳಿಯ ಹೊಟೇಲ್ ಉದ್ಯಮ ಮೇಲೆ ಕೊಲ್ಲಿ ಯುದ್ಧದ ಛಾಯೆ
- ವಾಣಿಜ್ಯ ಗ್ಯಾಸ್ ಸಿಲಿಂಡರ್ ಸಿಗದೆ ಸಂಕಷ್ಟದಲ್ಲಿರುವ ಹೊಟೇಲ್‌ಗಳು
- ಆಗುತ್ತಿರುವ ನಷ್ಟ ಸರಿದೂಗಿಸಲು ತಿಂಡಿ ಊಟ ದರಗಳಲ್ಲಿ ಏರಿಕೆ

ಅಡುಗೆ ಮನೆಗಳಿಗೆ ಯುದ್ಧದ ಬಿಸಿ



ಮಧ್ಯಪ್ರಾಚ್ಯದ ಸಂಘರ್ಷದ ಕಾರಣದಿಂದಾಗಿ ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಲ್ಲಿ ತೀವ್ರ ಕೊರತೆ ಕಾಣಿಸಿಕೊಂಡಿದೆ. ಗ್ಯಾಸ್ ಸಿಗದೆ ಕಂಗಾಲಾದ ಹೊಟೇಲ್ ಮಾಲೀಕರು ಅನಿವಾರ್ಯವಾಗಿ ಸೌದೆ ಒಲೆ ಮತ್ತು ಎಲೆಕ್ಟ್ರಿಕ್ ಸ್ಟವ್‌ಗಳ ಮೊರೆ ಹೋಗಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಕಟ್ಟಿಗೆಯ ದರವೂ ದುಬಾರಿಯಾಗಿದ್ದು, ಜೊತೆಗೆ ವಿದ್ಯುತ್ ವೆಚ್ಚವೂ ಹೆಚ್ಚುತ್ತಿರುವುದರಿಂದ ಅಡುಗೆ ತಯಾರಿಕಾ ವೆಚ್ಚ ಗಗನಕ್ಕೇರಿದೆ. ಈ ವೆಚ್ಚವನ್ನು ಸರಿದೂಗಿಸಲು ಹೊಟೇಲ್ ತಿಂಡಿಗಳ ಮೇಲೆ ಹೆಚ್ಚುವರಿ ಹೊರೆ ಹೇರಲಾಗಿದೆ. ಜಿಲ್ಲೆಯಲ್ಲಿ ಈಗಾಗಲೇ ಎಲ್ ಪಿಜಿ ಗ್ಯಾಸ್ ಬುಕ್ಕಿಂಗ್ ವ್ಯವಸ್ಥೆಯಲ್ಲಿನ ತಾಂತ್ರಿಕ ದೋಷ ಹಾಗೂ 45 ದಿನಗಳ ವಿಚಿತ್ರ ನಿಯಮದಿಂದಾಗಿ ಗ್ರಾಹಕರು ಹೈರಾಣಾಗಿದ್ದಾರೆ. ಇದರ ನಡುವೆ ಹೊಟೇಲ್ ದರ ಏರಿಕೆಯು ಜನರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಪರ್ಯಾಯ ಇಂಧನಗಳ ಬಳಕೆಯೂ ದುಬಾರಿಯಾಗಿರುವುದರಿಂದ ಹೊಟೇಲ್ ಉದ್ಯಮ, ಗ್ರಾಹಕರ ಮೇಲೆ ಯುದ್ಧದ ಬಿಸಿ ನೇರವಾಗಿ ತಟ್ಟುತ್ತಿದೆ.

ಸುತ್ತ ಮುತ್ತ

ಇಂದಿನಿಂದ ಆರೋಗ್ಯ ತಪಾಸಣಾ ಶಿಬಿರ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ನಡೆಯಲಿರುವ ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ಜಿಲ್ಲೆಯ ಖಾಸಗಿ ವೈದ್ಯಕೀಯ ಕಾಲೇಜ್‌ಗಳ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ. ಮಾ.17ರಂದು ಬೆಳ್ತಂಗಡಿ ತಾಲೂಕಿನ ಕಣಿಯೂರು, ಪುತ್ತೂರು ತಾಲೂಕಿನ ಕೊಯಿಲ, ಉಪ್ಪಿನಂಗಡಿ, ಸುಳ್ಯ ತಾಲೂಕಿನ ಬೆಳ್ಳಾರೆ ಹಾಗೂ ಮಾ.18ರಂದು ಬೆಳ್ತಂಗಡಿ ತಾಲೂಕಿನ ಕೊಕ್ಕಡ ಹಾಗೂ ಮಾ.21 ರಂದು ಪುತ್ತೂರು ತಾಲೂಕಿನ ಪಾಣಾಜೆ ಆರೋಗ್ಯ ಕೇಂದ್ರಗಳಲ್ಲಿ ಏರ್ಪಡಿಸಲಾಗಿದೆ. ಈ ಶಿಬಿರದ ಸದುಪಯೋಗವನ್ನು ಎಂಡೋಸಲ್ಫಾನ್ ಸಂತ್ರಸ್ತರು ಪಡೆದುಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೈಕ್ಷಣಿಕ ಸೇವಾ ಸಾಧಕ ಪ್ರಶಸ್ತಿಗೆ ಸವಣೂರು ಸೀತಾರಾಮ ರೈ ಭಾಜನ

ಪುತ್ತೂರು: ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘ ಬೆಂಗಳೂರು, ದ.ಕ. ಜಿಲ್ಲಾ ಘಟಕ ಹಾಗೂ ಪುತ್ತೂರು ಮತ್ತು ಕಡಬ ತಾಲೂಕು



ಘಟಕದಿಂದ ಪುತ್ತೂರು ಬಂಟರ ಭವನದಲ್ಲಿ ನಡೆದ ಶಾಲಾ ಶಿಕ್ಷಣ ಇಲಾಖೆಯ ನೌಕರರ ಜಿಲ್ಲಾ ಶೈಕ್ಷಣಿಕ ಸಮಾವೇಶದಲ್ಲಿ ಸವಣೂರು ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಸವಣೂರು ಕೆ. ಸೀತಾರಾಮ ರೈ ಅವರಿಗೆ ಜಿಲ್ಲಾ ಮಟ್ಟದ ಶೈಕ್ಷಣಿಕ ಸೇವಾ ಸಾಧಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸ್ಪೀಕರ್ ಯು.ಟಿ. ಖಾದರ್, ಶಾಸಕ ಅಶೋಕ್ ಕುಮಾರ್ ರೈ, ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಮತ್ತಿತರರ ಗಣ್ಯರು ಪ್ರಶಸ್ತಿ ಪ್ರದಾನ ಮಾಡಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಸಂಸ್ಥೆಯನ್ನು ಹುಟ್ಟು ಹಾಕಿ ಶೈಕ್ಷಣಿಕ ಕ್ರಾಂತಿಯನ್ನು ಉಂಟು ಮಾಡಿದ ಸಾಧನೆಯನ್ನು ಪರಿಗಣಿಸಿ ಹಾಗೂ ಶೈಕ್ಷಣಿಕ ಪ್ರಗತಿಯೊಂದಿಗೆ ಸಂಸ್ಥೆಗಳನ್ನು ಅತ್ಯಂತ ಮೇಲೆತ್ತರಕ್ಕೆ ಬೆಳೆಸಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಸಾಧನೆಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಾ.20ರಿಂದ ಶ್ರೀರಾಮ ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವ

ಬೆಳ್ತಂಗಡಿ: ಧರ್ಮಸ್ಥಳ ಸಮೀಪದ ನಿತ್ಯಾನಂದ ನಗರದಲ್ಲಿರುವ ಶ್ರೀ ರಾಮಕ್ಷೇತ್ರ ಮಹಾಸಂಸ್ಥಾನದಲ್ಲಿ ಮಾ. 20ರಿಂದ ಮಾ.20ರಿಂದ 27ರವರೆಗೆ 66ನೇ ವರ್ಷದ ಶ್ರೀ ರಾಮ ನಾಮ ತಾರಕ ಮಂತ್ರ ಸಪ್ತಾಹ ಸಮಾರಂಭ ಹಾಗೂ ಶ್ರೀ ರಾಮಕ್ಷೇತ್ರ ಮಹಾಸಂಸ್ಥಾನದ ಪ್ರತಿಷ್ಠಾ ಜಾತ್ರಾ ಮಹೋತ್ಸವ ಮತ್ತು ಮಹಾ ಬ್ರಹ್ಮರಥೋತ್ಸವವು ಶ್ರೀ ಕ್ಷೇತ್ರದಲ್ಲಿ ನಡೆಯಲಿದೆ. ಈ 7 ದಿನಗಳ ಅಹೋರಾತ್ರಿ ನಡೆಯುವ ಭಜನೆಗೆ ರಾಜ್ಯದ ನಾನಾ ಜಿಲ್ಲೆಗಳಿಂದ ನೂರಾರು ಭಜನಾ ತಂಡಗಳು ಭಜನಾ ಸಪ್ತಾಹದಲ್ಲಿ ಭಾಗವಹಿಸುತ್ತವೆ. ಮಾ.20 ರಂದು ಬೆಳಗ್ಗೆ 9.30ಕ್ಕೆ ಶ್ರೀ ರಾಮ ನಾಮ ಸಪ್ತಾಹದ ಅಖಂಡ ನಂದಾ ದೀಪವನ್ನು ಬೆಳಗಿಸುವ ಮೂಲಕ ಜಾತ್ರೋತ್ಸವದ ಉದ್ಘಾಟನೆ ನಡೆಯಲಿರುವುದು. ಸಮಾರಂಭದಲ್ಲಿ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಎಂಎಲ್‌ಸಿಗಳ ಸಹಿತ ಅನೇಕರು ಪಾಲ್ಗೊಳ್ಳಲಿರುವರು. ಜಾತ್ರೆಯಲ್ಲಿ ದಿನಂಪ್ರತಿ ಕ್ಷೇತ್ರದಲ್ಲಿ ಆರಾಧಿಸಲ್ಪಡುವ ಎಲ್ಲಾ ಪರಿವಾರ ದೇವರುಗಳ ಬಲಿ, ಉತ್ಸವಗಳು ಹಾಗೂ ಚಂದ್ರಮಂಡಲ ರಥ, ಪುಷ್ಪರಥ, ಬೆಳ್ಳಿರಥ, ಹನುಮಾನ್ ರಥೋತ್ಸವಗಳು ನಡೆಯಲಿದೆ. ಮಾ. 27ರಂದು ಸಂಜೆ 6 ಗಂಟೆಯಿಂದ ಕ್ಷೇತ್ರದಲ್ಲಿ ದೇವರ ಪಾಲಕಿ ಬಲಿ ಉತ್ಸವ, ಬ್ರಹ್ಮ ರಥೋತ್ಸವ ಹಾಗೂ ರಕ್ತೇಶ್ವರಿ,ಗುಳಿಗ ದೈವಗಳಿಗೆ ನೇಮೋತ್ಸವ ನಡೆಯಲಿರುವುದು ಎಂದು ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನದ ಜಗದ್ಗುರು ಪೀಠದ ಪೀಠಾಧೀಶ, ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ತಿಳಿಸಿದ್ದಾರೆ.

ಪಡುಬೈಲು ದೈವಸ್ಥಾನ: ಮಾ.21, 22ರಂದು ವರ್ಷಾವಧಿ ನೇಮ

ಮುಲ್ಕಿ: ಕಾರ್ನಾಡ್ ಪಡುಬೈಲು ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ವರ್ಷಾವಧಿ ನೇಮದ ಅಂಗವಾಗಿ ಶ್ರೀ ಕೋರ್ದಬ್ಬು ಮತ್ತು ತನ್ನಿಮಾನಿಗ ದೈವಗಳ ನೇಮ ಮಾ.21ಕ್ಕೆ ಹಾಗೂ ಶ್ರೀ ಧೂಮಾವತಿ ಮತ್ತು ಬಂಟ ದೈವಗಳ ನೇಮ ಮಹೋತ್ಸವ ಮಾ.22ಕ್ಕೆ ಭಾನುವಾರ ನಡೆಯಲಿದೆ. ಮಾ. 21ಕ್ಕೆ ಬೆಳಿಗ್ಗೆ 7:20ಕ್ಕೆ ಗಜ ಕಂಬ ಮುಹೂರ್ತ, ಮಧ್ಯಾಹ್ನ 12ಕ್ಕೆ ಚಪ್ಪರ ಆರೋಹಣ, 12.30ರಿಂದ ಸಾರ್ವಜನಿಕ ಅನ್ನ ಸಂತರ್ಪಣೆ, ಸಂಜೆ 8ಕ್ಕೆ ಭಂಡಾರ ಇಳಿಯುವುದು, ರಾತ್ರಿ 9:30ರಿಂದ ಶ್ರೀ ಕೋರ್ದಬ್ಬು ಮತ್ತು ತನ್ನಿಮಾನಿಗ ದೈವಗಳ ನೇಮ ಹಾಗೂ ಮಾ.22ಕ್ಕೆ ಸಂಜೆ 6ಕ್ಕೆ ಶ್ರೀ ಧೂಮಾವತಿ ಮತ್ತು ಬಂಟ ದೈವಗಳ ನೇಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ

ಸೇವಾ ಸಮಿತಿಗೆ ಆಯ್ಕೆ

ಬಂಟ್ವಾಳ: ತಾಲೂಕಿನ ನರಿಕೊಂಬು ಗ್ರಾಮದ ಶ್ರೀ ಮಹಾಮ್ಮಾಯಿ ಸೇವಾ ಸಮಿತಿ



ದಿಂಡಿಕೆರೆ ಇದರ ನೂತನ ಅಧ್ಯಕ್ಷರಾಗಿ ಚೇತನ್ ಏಲಬೆ ಆಯ್ಕೆಯಾಗಿದ್ದರೆ. ಉಳಿದಂತೆ ಉಪಾಧ್ಯಕ್ಷರಾಗಿ ತಾರನಾಥ ಏಲಬೆ,ಗೌರವಾಧ್ಯಕ್ಷರಾಗಿ ಶಿವಪ್ಪ ಪೂಜಾರಿ ಏಲಬೆ,ಕಾರ್ಯದರ್ಶಿಯಾಗಿ ದೀಪಕ್ ದಿಂಡಿಕೆರೆ,ಜೊತೆ ಕಾರ್ಯದರ್ಶಿಯಾಗಿ ಹರೀಶ್ ಕರ್ಬೆಟ್ಟು,ಕೋಶಾಧಿಕಾರಿಯಾಗಿ ಕಿಶೋರ್ ಏಲಬೆ ಆಯ್ಕೆಯಾಗಿದ್ದಾರೆ.

ದ.ಕ. ಶಿಕ್ಷಣ ಇಲಾಖೆಯ ನೌಕರರ ಜಿಲ್ಲಾ ಶೈಕ್ಷಣಿಕ ಸಮಾವೇಶ | ನೂತನ ಪದಾಧಿಕಾರಿಗಳ ಪದಗ್ರಹಣ

ಸ್ಪೀಕರ್ ಹುದ್ದೆಗೇರಲು ಸಂಸ್ಕಾರಯುತ ಶಿಕ್ಷಣ ಕಾರಣ: ಖಾದರ್



- 7 ಮಂದಿಗೆ ವಿದ್ಯಾರತ್ನ ಪ್ರಶಸ್ತಿ
- 7 ಮಂದಿಗೆ ಸೇವಾಭೂಷಣ ಪ್ರಶಸ್ತಿ
- 16 ಮಂದಿಗೆ ಶೈಕ್ಷಣಿಕ ಸೇವಾ ಸಾಧನ ಪ್ರಶಸ್ತಿ
- 10 ಮಂದಿಗೆ ಶಿಕ್ಷಣ ರತ್ನ ಪ್ರಶಸ್ತಿ
- ಸ್ಪೀಕರ್ ಯು.ಟಿ. ಖಾದರ್ ಸಹಿತ ಹಲವರಿಗೆ ಸನ್ಮಾನ

ಪುತ್ತೂರು: ಶಾಸಕರು, ಮಂತ್ರಿಗಳು ಬಲಿಷ್ಟವಾದರೆ ದೇಶ ಬಲಿಷ್ಠವಾಗಲು ಸಾಧ್ಯವಿಲ್ಲ, ಭಾರತ ದೇಶ ಬಲಿಷ್ಟವಾಗಬೇಕಾದರೆ ಶಾಲೆಗಳಲ್ಲಿ ಉತ್ತಮ ಶಿಕ್ಷಣ ಸಿಗಬೇಕು. ನಾನಿಂದು ಕರ್ನಾಟಕ ಸರಕಾರದ ಗೌರವಾನ್ವಿತ ಸ್ಪೀಕರ್ ಹುದ್ದೆಯಲ್ಲಿ ಇರಬೇಕಾದರೆ ಅದಕ್ಕೆ ನನಗೆ ಕಲಿಸಿದ ಶಿಕ್ಷಕರು ನೀಡಿದ ಸಂಸ್ಕಾರ ಯುತ ಶಿಕ್ಷಣ ಕಾರಣ ಎಂದು ಕರ್ನಾಟಕ ವಿಧಾನ ಸಭೆಯ ಸ್ಪೀಕರ್ ಯು.ಟಿ. ಖಾದರ್ ಹೇಳಿದರು.

ಪುತ್ತೂರು ಬಂಟರ ಭವನದಲ್ಲಿ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘ ದ.ಕ. ಹಾಗೂ ಪುತ್ತೂರು ಮತ್ತು ಕಡಬ ತಾಲೂಕು ಘಟಕಗಳ ಆಶ್ರಯದಲ್ಲಿ ನಡೆದ ಜಿಲ್ಲೆಯ ಶಿಕ್ಷಣ ಇಲಾಖೆಯ ನೌಕರರ ಜಿಲ್ಲಾ ಶೈಕ್ಷಣಿಕ ಸಮಾವೇಶ, ನೂತನ ಪದಾಧಿಕಾರಿಗಳ ಪದಪ್ರದಾನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ, ಭವಿಷ್ಯದ ಸತ್ಪ್ರಜೆಗಳನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ನಿರ್ಣಾಯಕವಾಗಿದೆ ಎಂದು ಅವರು ಹೇಳಿದರು.

ಪುತ್ತೂರು ಶಾಸಕ ಅಶೋಕ್ ರೈ ಮಾತನಾಡಿ, ಶಿಕ್ಷಕರು ವಿದ್ಯಾರ್ಥಿಗಳ ತಪ್ಪುಗಳನ್ನು ತಿದ್ದಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುತ್ತಾರೆ ಎಂದರು.

ಪ್ರತಿ ಗ್ರಾಮಗಳಲ್ಲಿ ಆಂಗ್ಲ ಮಾಧ್ಯಮಗಳನ್ನು ಒಳಗೊಂಡ ಕೆಪಿಎಸ್ ಶಾಲೆ ಆರಂಭಿಸಲು ಸರಕಾರ ಅನುಮೋದಿಸಿದ್ದು, ಜತೆಗೆ ಆರೋಗ್ಯ ಕ್ಷೇತ್ರಕ್ಕೂ ಒತ್ತು ನೀಡುತ್ತಿದೆ. ಶಿಕ್ಷಕರ ಕುಂದು ಕೊರತೆಗಳಿಗೆ ನಾನು ಹಾಗೂ ಸರಕಾರ ಸ್ಪಂದಿಸುತ್ತೇವೆ ಎಂದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಪುತ್ತೂರು ಮಾತನಾಡಿ, ಉನ್ನತ ಹುದ್ದೆಗೆ ಏರಿದಾಗಲೇ ಹುದ್ದೆಯ ಘನತೆ, ಗೌರವ ತಿಳಿಯುವುದು. ಯಾವುದೇ ವ್ಯಕ್ತಿ ಸಮಾಜದ ಉನ್ನತ ಹಂತಕ್ಕೆ ತಲುಪಿದಾಗ ಮೊದಲು ಸಂತೋಷಪಡುವವರು ಆ ವ್ಯಕ್ತಿಗೆ ಶಿಕ್ಷಣ ನೀಡಿದ ಶಿಕ್ಷಕರು. ಅವರ ಕೊಡುಗೆ ಎಂದಿಗೂ ಸ್ಮರಣೀಯ ಎಂದು ಅವರು ಹೇಳಿದರು.

ಶ್ರೀ ರಾಮಕೃಷ್ಣ ಪ್ರೌಢಶಾಲಾ ಸಂಚಾಲಕ ಎ. ಹೇಮನಾಥ ಶೆಟ್ಟಿ, ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಅಧ್ಯಕ್ಷ ಚೌಡಪ್ಪ ಎಸ್., ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ್ ಶುಭಹಾರೈಸಿದರು. ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ದ.ಕ. ಜಿಲ್ಲಾಧ್ಯಕ್ಷ ಪ್ರೇಮನಾಥ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಪದಪ್ರದಾನ

ಈ ಸಂದರ್ಭ ಮುಂದಿನ 5 ವರ್ಷಗಳ ಜಿಲ್ಲಾ ಸಂಘದ ನೂತನ ಪದಾಧಿಕಾರಿಗಳು ಹಾಗೂ ಪುತ್ತೂರು, ಮಂಗಳೂರು ದಕ್ಷಿಣ, ಮಂಗಳೂರು ಉತ್ತರ, ಮೂಡಬಿದ್ರೆ, ಬೆಳ್ತಂಗಡಿ, ಸುಳ್ಯ ತಾಲೂಕಿನ ನೂತನ ಪದಾಧಿಕಾರಿಗಳ ಮತ್ತು ಸರ್ವ ಸದಸ್ಯರ ಪದಪ್ರದಾನ ನೆರವೇರಿತು. ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘ ಬೆಂಗಳೂರು ಇದರ ಪ್ರಧಾನ ಕಾರ್ಯದರ್ಶಿ ರವಿಪ್ರಕಾಶ್ ಎಂ.ಎಸ್. ಪ್ರಮಾಣವಚನ ಬೋಧಿಸಿ ಪದಪ್ರದಾನ ನೆರವೇರಿಸಿದರು. ಶಾಲಾ ಶಿಕ್ಷಣ ಇಲಾಖಾ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ರಾಜಾರಾಮ್ ಶೆಟ್ಟಿ, ಸಂಘಟನಾ ಕಾರ್ಯದರ್ಶಿ ಶರ್ಲಿ ಸುಮಾಲಿನಿ, ದ.ಕ. ಜಿಲ್ಲೆ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಜಯಶ್ರೀ, ಕರ್ನಾಟಕ ರಾಜ್ಯ ಸರಕಾರಿ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕರುಣಾಕರ, ದ.ಕ. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ದಿಲೀಪ್ ಕುಮಾರ್, ದಕ್ಷಿಣ ಕನ್ನಡ ಕರ್ನಾಟಕ ರಾಜ್ಯ ಆಂಗ್ಲ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಅಂಬರೀಶ್ ಲಮಾನಿ ಮತ್ತಿತರರು ಉಪಸ್ಥಿತರಿದ್ದರು.

ಪವಿತ್ರಾ ರೂಪೇಶ್ ಮತ್ತು ಬಳಗ ನಾಡಗೀತೆ ಹಾಡಿದರು. ರಾಜ್ಯ ಕಾರ್ಯದರ್ಶಿ ತ್ಯಾಗಮ್ ಹರೇಕಳ ಪ್ರಾಸ್ತಾವಿಸಿದರು. ಶಿಕ್ಷಕರಾದ ಸುಚಿತ್ರಾ, ರೋಸ್ಸಿನ್, ದೇವಕಿ ಜೆ.ಜೆ. ಸನ್ಮಾನಿತರ ಪರಿಚಯ ಮಾಡಿದರು. ಪುತ್ತೂರು ತಾಲೂಕು ಘಟಕದ ಅಧ್ಯಕ್ಷ ಹಾಗೂ ಜಿಲ್ಲಾ ಘಟಕದ ಉಪಾಧ್ಯಕ್ಷ ಮಾಮಚ್ಚನ್ ಎಂ. ಸ್ವಾಗತಿಸಿ, ರಾಜ್ಯ ಪರಿಷತ್ ಸದಸ್ಯ ಉದಯ ಎಸ್. ವಂದಿಸಿದರು. ಜಿಲ್ಲಾ ಉಪಾಧ್ಯಕ್ಷೆ ಡಾ. ಮಂಜುಳಾ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ಪೂರ್ವರಂಗವೇ ಯಕ್ಷ ಶಿಕ್ಷಣಕ್ಕೆ ಆಧಾರ: ಡಾ. ಧನಂಜಯ ಕುಂಬ್ಳೆ ಅಭಿಪ್ರಾಯ



ಉಳ್ಳಾಲ: ಯಕ್ಷಗಾನದ ಶಿಕ್ಷಣ ಕೇವಲ ನಾಟ್ಯ ಹೆಜ್ಜೆಗಳನ್ನು ಕಲಿಸುವ ಕೇಂದ್ರಗಳಷ್ಟೇ ಆಗದೆ ಯಕ್ಷಗಾನ ಪ್ರಸಂಗ ಸಾಹಿತ್ಯ, ಪುರಾಣ ಕತೆಗಳ ಪರಿಚಯ, ಶ್ರುತಿ, ತಾಳಜ್ಞಾನ ಮತ್ತು ಭಾಷಾ ಬಳಕೆಯ ಸೌಂದರ್ಯವನ್ನೂ ಒಳಗೊಳ್ಳಬೇಕು. ಮೊದಲು ಪೂರ್ವರಂಗವೇ ಯಕ್ಷ ಶಿಕ್ಷಣಕ್ಕೆ ಆಧಾರ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಧನಂಜಯ ಕುಂಬ್ಳೆ ಅಭಿಪ್ರಾಯಪಟ್ಟರು.

ಅವರು ಭಾನುವಾರ ಸೋಮೇಶ್ವರದ ಕೊಲ್ಯ ಶ್ರೀ ಶಾರದಾ ಸೇವಾ ಟ್ರಸ್ಟ್, ಸಾರ್ವಜನಿಕ ಶ್ರೀ ಶಾರದಾ ಮಹೋತ್ಸವ ಸಮಿತಿ ಮತ್ತು ಯಕ್ಷಧ್ರುವ ಪಟ್ಲ ಫೌಂಡೇಶನ್ ಹವ್ಯಾಸಿ ಘಟಕದ ಆಶ್ರಯದಲ್ಲಿ ಕೊಲ್ಯದ ಶಾರದಾ ಮಂದಿರದಲ್ಲಿ ಯಕ್ಷಗಾನ ತರಗತಿ ಮತ್ತು ಯಕ್ಷಗಾನ ನೃತ್ಯ ಪ್ರಾತ್ಯಕ್ಷಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ಯಕ್ಷಧ್ರುವ ಪಟ್ಲ ಹವ್ಯಾಸಿ ಬಳಗದ ಪ್ರಧಾನ ಕಾರ್ಯದರ್ಶಿ ವಿನಯ ಆಚಾರ್ ಮಾತನಾಡಿದರು. ಕೊಲ್ಯ ಶ್ರೀ ಶಾರದಾ ಸೇವಾ ಟ್ರಸ್ಟ್ ಅಧ್ಯಕ್ಷ ಮೋಹನ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಸಂಯೋಜಕ ಕಲಾವಿದ ತೋನ್ಸೆ ಪುಷ್ಕಳಕುಮಾರ್, ಸಮಿತಿಯ ಗೌರವಾಧ್ಯಕ್ಷ ಸೀತಾರಾಮ ಬಂಗೇರ,ಮಾರ್ಗದರ್ಶಕ ಪ್ರಕಾಶ್ ಎಚ್, ಪಟ್ಲ ಹವ್ಯಾಸಿ ಬಳಗದ ರಾಜಾರಾಮ ಹೊಳ್ಳ,ಯಕ್ಷ ಗುರು ಜಿತೇಶ್ ಕುಲಾಲ್ ಉಪಸ್ಥಿತರಿದ್ದರು. ತೋನ್ಸೆ ಪುಷ್ಕಳ ಕುಮಾರ್ ಸ್ವಾಗತಿಸಿದರು.ಟ್ರಸ್ಟ್ ನ ಪ್ರಧಾನ ಕಾರ್ಯದರ್ಶಿ ರಾಜೇಶ್ ಕುಮಾರ್ ಕೆ.ಎಸ್ ವಂದಿಸಿದರು. ಆದಿತ್ಯ ಅಂಬಲಪಾಡಿ ಇವರಿಂದ ಯಕ್ಷಗಾನ ನೃತ್ಯ ಪ್ರಾತ್ಯಕ್ಷಿಕೆ ನಡೆಯಿತು. ಬಳಿಕ ರಾಜಾರಾಮ ಹೊಳ್ಳ, ಭಾಸ್ಕರ್ ರೈ ಕುಕ್ಕುವಳ್ಳಿ, ವಿನಯ್ ಆಚಾರ್, ಗಣೇಶ್ ಕುಂಜತ್ತೂರು,ಹರಿಶ್ಚಂದ್ರ ನಾಯ್ಗ, ವರುಣ್ ಹೆಬ್ಬಾರ್, ವರುಣ್ ಆಚಾರ್ಯ ಇವರಿಂದ 'ಶರಸೇತು ಬಂಧನ' ತಾಳಮದ್ದಳೆ ನಡೆಯಿತು.

ಉಳಿಯ ಶ್ರೀಕ್ಷೇತ್ರದ ಬ್ರಹ್ಮಕಲಶಕ್ಕೆ ಸಿದ್ಧತೆ: ಬಾಲಾಲಯದಲ್ಲಿ ದೈವ, ದೇವರ ಪ್ರತಿಷ್ಠೆ



ಉಳ್ಳಾಲ: ಮುನ್ನೂರು ಗ್ರಾಮದ ಶ್ರೀ ಕ್ಷೇತ್ರ ಸೋಮನಾಥ ಉಳಿಯದ ಶ್ರೀ ಸೋಮೇಶ್ವರಿ ದೇವಸ್ಥಾನ ಮತ್ತು ಶ್ರೀ ಅರಸು,ಧೂಮಾವತಿ ಬಂಟ ಪರಿವಾರ ದೈವಗಳ ದೈವಸ್ಥಾನದ ಬ್ರಹ್ಮಕಲಶ ಮೇ 3ರಿಂದ 12ರವರೆಗೆ ನಡೆಯಲಿರುವ ಹಿನ್ನಲೆಯಲ್ಲಿ ದೈವ,ದೇವರು ಹಾಗೂ ನಾಗದೇವರನ್ನು ಬಾಲಾಲಯದಲ್ಲಿ ಪ್ರತಿಷ್ಠಾಪನಾ ಕಾರ್ಯವು ಸೋಮವಾರ ನೆರವೇರಿಸಲಾಯಿತು.

ಕ್ಷೇತ್ರದ ತಂತ್ರಿವರ್ಯ ಕುಂಟಾರು ರವೀಶ್ ತಂತ್ರಿ ಮಾರ್ಗದರ್ಶನದಲ್ಲಿ ದೇವಸ್ಥಾನದ ಪ್ರದಾನ ಅರ್ಚಕ ದಿನಕರ್ ಭಟ್ ಪ್ರತಿಷ್ಠಾಪನಾ ಕಾರ್ಯ ನೆರವೇರಿಸಿದರು. ಕ್ಷೇತ್ರದ ಗಡಿಗುರಿಕಾರ ಬಸಪ್ಪಯಾನೆ ರವೀಂದ್ರ ನಾಯಕ್, ಕ್ಷೇತ್ರದ ಆಡಳಿತ ಸಮಿತಿ,ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಉಮಾನಾಥ ನಾಯಕ್ ಉಳ್ಳಾಲ್ ಗೌರವಾಧ್ಯಕ್ಷ ಯು. ದಯಾನಂದ ನಾಯಕ್ ಕುಲಶೇಖರ, ಪ್ರ.ಕಾರ್ಯದರ್ಶಿ ವೆಂಕಟೇಶ್ ಬಂಟ್ವಾಳ, ಗಾಳದಕೊಂಕಣಿ ಅಭ್ಯುದಯ ಸಂಘದ ಅಧ್ಯಕ್ಷ ನರಸಿಂಹ ನಾಯಕ್ ಹರೇಕಳ, ಶ್ರೀ ಸೋಮೇಶ್ವರೀ ಮಹಿಳಾ ಮಂಡಲದ ಅಧ್ಯಕ್ಷೆ ಜಯಶೀಲ ಯು.ನಾಯಕ್, ಸಮಿತಿ ಪದಾಧಿಕಾರಿ ಸುದೇಶ್ ನಾಯಕ್ ಪಂಪ್‌ವೆಲ್, ಅನುಷ್ ಮಜಲ್ ತೋಟ, ಯೋಗೀಶ್ ನಾಯಕ್ ಪಂಪ್‌ವೆಲ್, ಆಶಾ ನಾಯಕ್ ಗೋರಿಗುಡ್ಡೆ, ಮಿಥಿಲೇಶ್ ನಾಯಕ್ ಮಣ್ಣಗುಡ್ಡೆ, ಪ್ರವೀಣ್ ನಾಯಕ್ ಬಂಟ್ವಾಳ, ಹೇಮಾ ಕೇಶವ ನಾಯಕ್ ಸಂತೋಷ್ ನಗರ, ಉಷಾ ನಾಯಕ್ ಕಲ್ಲಾಪು, ತಾಂತ್ರಿಕ ಸಲಹೆಗಾರ ಶ್ರೀರಿಷ್ ನಾಯಕ್ ಕಾಪಿಕಾಡ್, ಕೋಡಿ ಜಯ ನಾಯಕ್, ಮೋಹನ್ ನಾಯಕ್ ಸೋಮೇಶ್ವರ, ಚೇತನ್ ರಾಜ್, ಶಿವಾನಂದ ಎಲ್. ನಾಯಕ್, ಆನಂದ ನಾಯಕ್ ಮಜಲ್ ತೋಟ, ಕೋಡಿ ಲಕ್ಷ್ಮಣ್ ನಾಯಕ್,ಕಿಶೋರ್ ನಾಯಕ್ ಜಲ್ಲಿಗುಡ್ಡೆ, ಗಣೇಶ್ ನಾಯಕ್ ಸೋಮನಾಥ ಉಳಿಯ, ದೈವಸ್ಥಾನದ ಪ್ರಧಾನ ಅರ್ಚಕ ಪ್ರಕಾಶ್ ನಾಯ್ಕ್,ಸಹಾಯಕ ಅರ್ಚಕ ವಿನೋದ್ ಸೋಮನಾಥ ಉಳಿಯ, ಆರು ಮಾಗಣೆ ಗುರಿಕಾರರು ಮತ್ತಿತರರು ಉಪಸ್ಥಿತರಿದ್ದರು. ಬಳಿಕ ಅನ್ನಸಂತರ್ಪಣೆಯು ನಡೆಯಿತು.

ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲದಿಂದ ಮಹಿಳಾ ದಿನಾಚರಣೆ



ಮಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲ ಮಹಿಳಾ ಮೋರ್ಚಾದ ವತಿಯಿಂದ ನಗರದ ಅಟಲ್ ಸೇವಾ ಕೇಂದ್ರದಲ್ಲಿ ವಿಶೇಷ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಪೂರ್ಣಿಮಾ, ಸಿರಿಧಾನ್ಯ ನಮ್ಮ ಜೀವನದ ಆಹಾರ ಪದ್ಧತಿಯಲ್ಲಿ ಎಷ್ಟು ಪ್ರಮುಖ ಪಾತ್ರ ವಹಿಸುತ್ತದೆ ಎಂಬುದರ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಲಕಿತಾ ಶೆಟ್ಟಿ ಮಹಿಳಾ ದಿನಾಚರಣೆಯ ಕುರಿತು, ಸಂಧ್ಯಾ ವೆಂಕಟೇಶ್ ಅವರು ಮಹಿಳೆಯರ ಸ್ವರಕ್ಷಣೆ ಮತ್ತು ಕಾನೂನು ಜಾಗೃತಿ ಬಗ್ಗೆ ಮಾಹಿತಿ ನೀಡಿದರು.

ಉತ್ತರ ಪ್ರದೇಶದ ವಾರಾಣಸಿಯಲ್ಲಿ ನಡೆದ 33ನೇ ಸಬ್ ಜೂನಿಯರ್ ರಾಷ್ಟ್ರೀಯ ತ್ರೋಬಾಲ್ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡ ಜೂನಿಯರ್ ಹುಡುಗಿಯರ ತಂಡದಲ್ಲಿದ್ದ ಮಂಗಳೂರಿನ ಕೆನರಾ ಸಿಬಿಎಸ್‌ಇ ಶಾಲೆಯ ವಿದ್ಯಾರ್ಥಿಗಳಾದ ನಿಷ್ಕಾ ರೈ, ವೈಷ್ಣವಿ ಆರ್.ಗುಜರನ್, ರಾಶಿ ಶೆಟ್ಟಿ ಹಾಗೂ ಹಿರಾಲಿ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಮಂಡಲದ ಮಹಿಳಾ ಮೋರ್ಚಾ ಅಧ್ಯಕ್ಷೆ ಪೂರ್ಣಿಮಾ ರಾವ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶಬರಿ ಶೆಟ್ಟಿ ನಿರೂಪಿಸಿದರು. ಕಮಲಾಕ್ಷಿ ವಂದಿಸಿದರು. ಮಹಿಳಾ ಮೋರ್ಚಾದ ಪದಾಧಿಕಾರಿಗಳಾದ ಲೀಲಾವತಿ ಪ್ರಕಾಶ್, ಯಶೋಧ ಗಟ್ಟಿ, ಗೀತಾ, ವಿದ್ಯಾ ಕುಡ್ವ, ಮಾಲತಿ ಅರುಣ್, ಸವಿತಾ ರೈ, ರೇಷ್ಮಾ ಶೇಟ್, ಭಾಗ್ಯ ಶೇಟ್, ಸೌಮ್ಯ ಆಚಾರ್ಯ, ಅಮಿತಾ, ಜಿಲ್ಲಾ ಮಹಿಳಾ ಮೋರ್ಚಾದ ಸದಸ್ಯೆ ಭವಾನಿ ಮೊದಲಾದವರು ಉಪಸ್ಥಿತರಿದ್ದರು.

ಹಿರಿಯರ ಸೇವಾ ಪ್ರತಿಷ್ಠಾನದ ಸಭೆ



ಬಂಟ್ವಾಳ: ಪಾರದರ್ಶಕತೆಯಿಂದ ಸಮಾಜ ಸೇವಾ ಕಾರ್ಯಗಳನ್ನು ಮಾಡುವ ಸಂಸ್ಥೆಗಳಿಗೆ ಜನರ ಬೆಂಬಲವಿದ್ದು ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸೇವಾ ಕಾರ್ಯಗಳನ್ನು ನಡೆಸಲು ಕರ್ನಾಟಕ ಸೇವಾ ಭಾರತೀ ಸಂಸ್ಥೆಯು ಮಾರ್ಗದರ್ಶನ ನೀಡಲು ಬದ್ಧವಾಗಿದೆ ಎಂದು ಸೇವಾ ಭಾರತಿ ಸಂಸ್ಥೆಯ ದಕ್ಷಿಣ ಪ್ರಾಂತ್ಯದ ಸಂಚಾಲಕ ಕೆ. ಚೆನ್ನಯ್ಯ ಸ್ವಾಮಿ, ದೇರೆಬೈಲು ತಿಳಿಸಿದರು.

ಉಪ್ಪಿನಂಗಡಿಯ ಪಾತಾಳ ನಿವಾಸದಲ್ಲಿ ಜರಗಿದ ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನ ಮೆಲ್ಕಾರು ಬಂಟ್ವಾಳ ಇದರ ಕೇಂದ್ರ ಸಮಿತಿಯ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಪ್ರತಿಷ್ಠಾನದ ಅಧ್ಯಕ್ಷ ಕಯ್ಯೂರು ನಾರಾಯಣ ಭಟ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಯಾಗಿದ್ದ ನಿವೃತ್ತ ಬಿಎಸ್‌ಎಫ್ ಕಮಾಂಡೆಂಟ್ ಮತ್ತು ಉಪ್ಪಿನಂಗಡಿ ಅಮೂಲ್ಯ ಗ್ಯಾಸಿನ ಮಾಲಕ ಚಂದಪ್ಪ ಮೂಲ್ಯ, ಭಾಗವಹಿಸಿದರು. ಗಳಿಸಿದ ಆದಾಯದಿಂದ ಸಮಾಜ ಪ್ರಸಿದ್ಧ ಕಲಾವಿದ ದಿ. ಪಾತಾಳ ವೆಂಕಟರಮಣ ಭಟ್ಟರ ಪುತ್ರ ರಾಮ ಪಾತಾಳ ಅವರ ನಿವಾಸದಲ್ಲಿ ಜರಗಿದ ಕಾರ್ಯಕ್ರಮವನ್ನು ಗೌರಿ ಪಾತಾಳ ದೀಪ ಬೆಳಗಿಸಿ ಉದ್ಘಾಟಿಸಿದರು.ಪ್ರತಿಷ್ಠಾನದ ಖಜಾಂಜಿ ಅನಾರಕೃಷ್ಣ ಶರ್ಮ ಲೆಕ್ಕಪತ್ರಮಂಡನೆ ಮಾಡಿದರು. ಕೃಷ್ಣ ಭಟ್ ಲಕ್ಷ್ಮಿ ನಗರ, ಜಿ. ಕೃಷ್ಣರಾವ್ ಅರ್ತಿಲ, ಅಂಬಾ ಪ್ರಸಾದ ಪಾತಾಳ, ಎಲ್ ಕೇಶವ, ಜಯಂತಿ ಎ ಪ್ರಸಾದ, ಅಕ್ಷತಾ ಪಾತಾಳ, ಉಮೇಶ ಶೆಣೈ ರಾಮನಗರ, ರಾಜೇಶ ಪ್ರಭು ಉಪ್ಪಿನಂಗಡಿ, ಶಿವರಾಮ ಪ್ರಸಾದ, ವೇದಾವತಿ ಮೊದಲಾದವರು ಉಪಸ್ಥಿತರಿದ್ದರು. ಉದಯಶಂಕರ ರೈ ಪುಣಚ ಪ್ರಾರ್ಥಿಸಿದರು. ಪುತ್ತೂರು ಘಟಕದ ಉಪಾಧ್ಯಕ್ಷ ಈಶ್ವರ ಭಟ್ ಗುಂಡ್ಯಡ್ಕ ಸ್ವಾಗತಿಸಿ, ಭವಾನಿ ಶಂಕರ ಶೆಟ್ಟಿ ಪುತ್ತೂರು ವಂದಿಸಿದರು. ಪ್ರತಿಷ್ಠಾದ ಕಾರ್ಯದರ್ಶಿ ದಿವಾಕರ ಆಚಾರ್ಯ ಗೇರುಕಟ್ಟೆ ಕಾರ್ಯಕ್ರಮ ನಿರೂಪಿಸಿದರು.

ಮನೆ ಮನೆಗಳಲ್ಲಿ ಶಾಸ್ತ್ರೀಯ ಸಂಗೀತದ ಸ್ವರ ಕೇಳಲಿ: ಭುಜಬಲಿ ಧರ್ಮಸ್ಥಳ ಕರೆ



ಸುರತ್ಕಲ್: ಮನೆ ಮನೆಗಳಲ್ಲಿ ಶಾಸ್ತ್ರೀಯ ಸಂಗೀತದ ಸ್ವರ ಕೇಳಿ ಬರಬೇಕಾಗಿದ್ದು, ಇದು ಕಲಾ ಗೌರವವಾಗಿದೆ ಎಂದು ಹಿರಿಯ ಸಾಂಸ್ಕೃತಿಕ ಸಂಘಟಕ ಬಿ. ಭುಜಬಲಿ ಧರ್ಮಸ್ಥಳ ನುಡಿದರು.

ಇವರು ಮಣಿ ಕೃಷ್ಣಸ್ವಾಮಿ ಆಕಾಡೆಮಿ ಮತ್ತು ನಾಗರಿಕ ಸಲಹಾ ಸಮಿತಿ, ಸುರತ್ಕಲ್ ಸಹಯೋಗದಲ್ಲಿ ಸುರತ್ಕಲ್‌ನ ಶ್ರೀ ವಿಶ್ವೇಶತೀರ್ಥ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾಶ್ರೀ' ಪುರಸ್ಕಾರಕ್ಕೆ ಆಯ್ಕೆಯಾಗಿರುವ ಹಿರಿಯ ನಾದಸ್ವರ ಕಲಾವಿದ ವಿದ್ವಾನ್ ನಾಗೇಶ್ ಎ. ಬಪ್ಪನಾಡು ಅವರ ಅಭಿನಂದನೆ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಹಿರಿಯ ಸಂಗೀತ ಕಲಾವಿದ ಅರವಿಂದ ಹೆಬ್ಬಾರ್ ಅಭಿನಂದಿಸಿ, ಮಾತನಾಡಿದರು.

ಮಣಿ ಕೃಷ್ಣಸ್ವಾಮಿ ಅಕಾಡೆಮಿಯ ಗೌರವ ಅಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಉಪಸ್ಥಿತಿ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಉಡುಪಿಯ ಸರಿಗಮ ಸಂಗೀತ ವಿದ್ಯಾಲಯದ ವಿದುಷಿ ವಾರಿಜಾಕ್ಷಿ ಆರ್. ಭಟ್ ಶುಭ ಹಾರೈಸಿದರು. ನಾಗರಿಕ ಸಲಹಾ ಸಮಿತಿಯ ಅಧ್ಯಕ್ಷ ಡಾ. ಕೆ. ರಾಜಮೋಹನ್ ರಾವ್, ಮಣಿ ಕೃಷ್ಣಸ್ವಾಮಿ ಅಕಾಡೆಮಿಯ ವಿಭು ರಾವ್ ಮತ್ತು ಕೃಷ್ಣಕುಮಾರಿ ಇದ್ದರು. ಅಕಾಡೆಮಿ ಕಾರ್ಯದರ್ಶಿ ಪಿ ನಿತ್ಯಾನಂದ ರಾವ್ ಸ್ವಾಗತಿಸಿ, ಪ್ರಜ್ಞಾ ಅಡಿಗ, ಉಡುಪಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿ ನಡೆಯಿತು. ವಯಲಿನ್ ನಲ್ಲಿ ತನ್ಮಯಿ ಉಪ್ಪಂಗಳ, ಮೃದಂಗ ದಲ್ಲಿ ಪ್ರಹ್ಲಾದ್ ವರಾಹಸ್ವಾಮಿ, ಮತ್ತು ಖಂಜಿರದಲ್ಲಿ ಕಾರ್ತಿಕ್ ಭಟ್ ಇನ್ನಂಜೆ ಸಹಕರಿಸಿದರು. ಬಳಿಕ ರಶ್ಮಿ ಉಡುಪ, ಮಂಗಳೂರು ಇವರಿಂದ ಭರತ ನಾಟ್ಯ ಪ್ರದರ್ಶನ ನಡೆಯಿತು.



ಕಿನ್ನಿಗೋಳಿ ವ್ಯಾಪ್ತಿಯ ಪೋಸ್ರಾಲ್ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಉತ್ಸವದ ಅಂಗವಾಗಿ ಒಳಾಂಗಣದಲ್ಲಿ ಚಂದ್ರಮಂಡಲ ರಥೋತ್ಸವ ಉತ್ಸವ ಬಲಿ ನಡೆಯಿತು. ಇಂದು ಮಂಗಳವಾರ ಹಗಲು ರಥೋತ್ಸವ, ರಾತ್ರಿ ರಥೋತ್ಸವ ನಡೆಯಲಿದೆ.



ಸುರತ್ಕಲ್‌ನ ಎನ್‌ಐಟಿಗೆ ಇನ್ಸಿಡೆಂಟ್-2026 ಕಾರ್ಯಕ್ರಮವನ್ನು ಸಂಸ್ಥೆಯ ಹಳೆ ವಿದ್ಯಾರ್ಥಿ ಐಪಿಎಸ್ ಅಧಿಕಾರಿ ದೀಪನ್ ಎಂ .ಎನ್. ಉದ್ಘಾಟಿಸಿ, ಶುಭಹಾರೈಸಿದರು. ಎನ್‌ಐಟಿಕೆ ಉಪನಿರ್ದೇಶಕ ಪ್ರೊ. ಸುಭಾಷ್ ಯಾರಗಲ್, ಪ್ರೊ. ಗೋವಿಂದ ರಾಜ ಮಡೆಲಾ, ವಿದ್ಯಾರ್ಥಿ ಕಲ್ಯಾಣ ಡೀನ್, ಹಾಗೂ ಇತರ ಸಂಸ್ಥೆಯ ಅಧಿಕಾರಿಗಳು, ಅಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು

ಜೀವಪಣಕ್ಕಿಟ್ಟು ರೈಲು ಹಳಿ ದಾಟಬೇಕಾದ ದುಃಸ್ಥಿತಿ ಮುಂದುವರಿಕೆ | ಏಪ್ರಿಲ್‌ನೊಳಗೆ ಯೋಜನೆ ಪೂರ್ಣದ ನಿರೀಕ್ಷೆ

ಆಮೆಗತಿಯಲ್ಲಿ ಸಾಗುತ್ತಿದೆ ಜೋಕಟ್ಟೆ ರೈಲ್ವೆ ಅಂಡರ್‌ಪಾಸ್ ಕಾಮಗಾರಿ ಯೋಜನೆ

ಸುರತ್ಕಲ್: ನಗರದ ಹೊರವಲಯ ಜೋಕಟ್ಟೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ರೈಲ್ವೆ ಅಂಡರ್‌ಪಾಸ್ ಕಾಮಗಾರಿ ದೀರ್ಘಕಾಲದಿಂದ ನನೆಗುದಿಗೆ ಬಿದ್ದಿದ್ದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮೂರು ಮನೆಗೆ ಸಿಗದ ಪರಿಹಾರ

ರೈಲು ಹಳಿಯನ್ನು ಸುರಕ್ಷಿತವಾಗಿ ದಾಟಲು ಹಾಗೂ ಜೋಕಟ್ಟೆ ಸುತ್ತಮುತ್ತಲಿನ ಪ್ರದೇಶಗಳಿಗೆ ಸುಗಮ ಸಂಪರ್ಕ ಒದಗಿಸಲು ಈ ಅಂಡರ್‌ಪಾಸ್ ಯೋಜನೆ ಘೋಷಿಸಲಾಯಿತು. ಆದರೆ, ಭರವಸೆಗಳಷ್ಟೇ ಹೆಚ್ಚಾಗಿ, ಕಾಮಗಾರಿ ನೆಲಮಟ್ಟದಲ್ಲಿ ನಿಧಾನ ಗತಿಯಲ್ಲೇ ಸಾಗುತ್ತಿದೆ. ಪ್ರಾರಂಭವಾದ ನಂತರವೂ ಸ್ಪಷ್ಟ ಗಡುವು ಇಲ್ಲದೆ ಕಾಮಗಾರಿ ಸಾಗುತ್ತಿದೆ. ಈ ಹಿಂದೆ 2025ರ ಏಪ್ರಿಲ್‌ನಲ್ಲಿ ಪೂರ್ಣಗೊಳಿಸಿ



ನೀಡುವ ಭರವಸೆ ರೈಲ್ವೆ ಅಧಿಕಾರಿಗಳಿಂದ ದೊರಕಿತ್ತು. ಕೇವಲ ಮೂರು ಮನೆಗಳ ಪರಿಹಾರ ಹಣ ನೀಡಲು ಹಾಗೂ ಕೆಲವೊಂದು ತಾಂತ್ರಿಕ ಕೆಲಸ ಮಾತ್ರ ಬಾಕಿಯಿದೆ. ಇದನ್ನು ಮಾಡಲು ವಿಳಂಬ ಯಾಕೆ ಎಂಬುದು ಸಾರ್ವಜನಿಕರ ಪ್ರಶ್ನೆ.ಪ್ರತಿದಿನ ಶಾಲಾ ಮಕ್ಕಳು, ಮಹಿಳೆಯರು, ಉದ್ಯೋಗಿಗಳು ಜೀವ ಪಣಕ್ಕಿಟ್ಟು ರೈಲು ಹಳಿಯನ್ನು ದಾಟಬೇಕಾದ ದುಸ್ಥಿತಿ ಮುಂದುವರಿದಿದೆ. ವಾಹನ ಸವಾರರು

> ರೈಲ್ವೆ ಅಂಡರ್ ಪಾಸ್ ಕುರಿತಂತೆ ಅಧಿಕಾರಿಗಳ ಗಮನ ಸೆಳೆಯಲು ಪಾಲಕ್ಕಾಡ್ ವಿಭಾಗದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ. ದ.ಕ. ಡಿಸಿ ಅವರಲ್ಲಿ ಮಾಜಿ ಶಾಸಕ ಅಭಯ ಚಂದ್ರ ಜೈನ್ ಅವರ ನೇತೃತ್ವದೊಂದಿಗೆ ಹೋಗಿ ಚರ್ಚೆ ಮಾಡಿ ಸಮಸ್ಯೆಯ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಆದರೂ ರೈಲ್ವೆ ಅಂಡರ್ ಪಾಸ್ ಮಾತ್ರ ವಿಳಂಬವಾಗುತ್ತಿದೆ.
>
> ● ಉಮ್ಮರ್ ಫಾರೂಕ್, ಮಾಜಿ ಗ್ರಾಮ ಪಂಚಾಯತ್

ಗಂಟೆಗಳ ಕಾಲ ಕಾಯಬೇಕಾಗುತ್ತಿದ್ದು, ತುರ್ತು ಸಂದರ್ಭಗಳಲ್ಲಿ ಈ ಮಾರ್ಗವೇ ಅಪಾಯದ ಬಲೆ ಆಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಅಂಡರ್‌ಪಾಸ್ ಕಾಮಗಾರಿ ವಿಳಂಬವಾಗಿರುವುದು ಅಧಿಕಾರಿಗಳ ನಿರ್ಲಕ್ಷ್ಯದ ಸ್ಪಷ್ಟ ಉದಾಹರಣೆಯಾಗಿದೆ ಎಂದು ಸಾರ್ವಜನಿಕರ ಆರೋಪವಾಗಿದೆ.

ಹೋರಾಟದತ್ತ ಈಗ ಚಿತ್ತ

ವಿಳಂಬಕ್ಕೆ ರೈಲ್ವೆ ಇಲಾಖೆಯ ಅನುಮತಿ ಪ್ರಕ್ರಿಯೆ, ತಾಂತ್ರಿಕ ಅಡಚಣೆಗಳು, ನೀರು ನಿಲ್ಲುವ ಸಮಸ್ಯೆಗಳು ವಿಳಂಬ ಕಾರಣ ಎನ್ನಲಾಗುತ್ತಿದ್ದು, ಸ್ಥಳೀಯರು ಹಾಗೂ ಸಾರ್ವಜನಿಕ ಸಂಘಟನೆಗಳು ತಕ್ಷಣವೇ ಕಾಮಗಾರಿ ವೇಗಗೊಳಿಸುವಂತೆ ಒತ್ತಾಯಿಸುತ್ತಿವೆ. ಅಲ್ಲದೇ ಕಾಮಗಾರಿ ಪೂರ್ಣಗೊಳಿಸಲು ಕಠಿಣ ಕ್ರಮ ಕೈಗೊಳ್ಳದಿದ್ದರೆ, ಸಾರ್ವಜನಿಕರು ಹೋರಾಟ ಹಾದಿ ಹಿಡಿಯುವ ಸಾಧ್ಯತೆಯೂ ಹೆಚ್ಚಿದೆ ಎಂದು ಈ ಭಾಗದ ಪ್ರಮುಖರು ತಿಳಿಸಿದ್ದಾರೆ.

ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೂಡಬಿದಿರೆ/ ಸುರತ್ಕಲ್: ಮೂಡಬಿದಿರೆ ಉಪಕೇಂದ್ರದಿಂದ ಹೊರಡುವ ಕಡಂದಲ ಫೀಡರ್ ಗಳಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಪಳಕಳ, ಗುಡ್ಡೆಯಂಗಡಿ, ಮುರ್ಕತ್ ಪಲ್ಕೆ, ಕೊಡ್ಯಡ್ಕ, ಕೇಮಾರ್, ಪಾಲಡ್ಕ, ವರ್ಣಬೆಟ್ಟು, ಮುಂಡ್ರುದೆ, ಶೆಡ್ಯ, ಶಿಮಕಳ, ಜೋಡುಕಟ್ಟೆ, ಕಡಂದಲೆ ಪಲ್ಕೆ, ಬೊಮ್ಮಳ ಗುಡ್ಡೆ, ಕಡಂದಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾ.17ರಂದು ಬೆಳಿಗ್ಗೆ 9.30ರಿಂದ ಸಂಜೆ 6ಗಂಟೆಯವರೆಗೆ 110/11 ಕೆವಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ. ಮುಕ್ಕ ಫೀಡರಿನಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸಸಿಹಿತ್ಲು, ಅಗ್ಗಿದಕಳಿಯ, ಮಿತ್ರಪಟ್ನ, ಮುಕ್ಕ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾ.17ರಂದು ಬೆಳಿಗ್ಗೆ 10.30ರಿಂದ ಸಂಜೆ 5ರ ವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮಾ.20: ತುಳು ಭವನದಲ್ಲಿ ವಿದ್ಯಾರ್ಥಿ ತುಳು ಸಮ್ಮೇಳನ

ಮಂಗಳೂರು: ತುಳು ಪರಿಷತ್ ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ವತಿಯಿಂದ ಮಾ.20ರಂದು ನಗರದ ಉರ್ವಸ್ಟೋರ್ ತುಳು ಭವನದಲ್ಲಿ 3ನೇ ವಿದ್ಯಾರ್ಥಿ ತುಳು ಸಮ್ಮೇಳನ ನಡೆಯಲಿದೆ. ಅಂದು ಬೆಳಗ್ಗೆ 10ಕ್ಕೆ ದೇರಳಕಟ್ಟೆ ನಿಟ್ಟೆ ವಿದ್ಯಾ ಸಂಸ್ಥೆಯ ಸ್ನಾತಕೋತ್ತರ ವಿದ್ಯಾರ್ಥಿ ಪ್ರೀತಮ್ ನಾಯಕ್ ಸಮ್ಮೇಳನ ಉದ್ಘಾಟಿಸುವರು. ಬ್ರಹ್ಮಾವರ ಎಸ್.ಎಂ.ಎಸ್. ಕಾಲೇಜು ಪದವಿ ವಿದ್ಯಾರ್ಥಿನಿ ಅಭಿಜ್ಞಾ ಅಧ್ಯಕ್ಷತೆಯನ್ನು ವಹಿಸಲಿರುವರು. ಮಾಜಿ ಮುಖ್ಯಮಂತ್ರಿ, ಸಾಹಿತಿ ಡಾ.ಎಂ. ವೀರಪ್ಪ ಮೊಯ್ಲಿ ಸಮ್ಮೇಳನದ ದಿಕ್ಸೂಚಿ ಭಾಷಣ ಮಾಡುವರು. ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಶುಭಾಶಂಸನೆಗೈಯ್ಯಲಿರುವರು ಎಂದು ತುಳು ಪರಿಷತ್ ಅಧ್ಯಕ್ಷ ಶುಭೋದಯ ಆಳ್ವ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.
ಬಳಿಕ ನಡೆಯುವ ಪ್ರಥಮ ಗೋಷ್ಠಿಯಲ್ಲಿ ನಿಡಗೋಸಿಯ ಜಗದ್ಗುರು ದುರುದುಂಡೇಶ್ವರ ಸಿದ್ಧಸಂಸ್ಥಾನ ಮಠದ ಮಠಾಧಿಪತಿ, ಪರಿಸರ ತಜ್ಞ ಶ್ರೀ ನಿಜಲಿಂಗೇಶ್ವರ ಸ್ವಾಮೀಜಿ ಮಾತನಾಡಲಿರುವರು. ಎರಡನೆ ಗೋಷ್ಠಿಯಲ್ಲಿ ಆರು ಮಂದಿ ವಿದ್ಯಾರ್ಥಿಗಳು ತುಳುನಾಡಿನ ಸೌಹಾರ್ದ ಪರಂಪರೆಯ ಬಗ್ಗೆ ಸಮ್ಮೇಳನಾಧ್ಯಕ್ಷರು ಹಾಗೂ ಉದ್ಘಾಟಕರ ಜತೆ ಸಂವಾದ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಮಾ. 10ರಂದು ವಿದ್ಯಾರ್ಥಿಗಳಿಗಾಗಿ ನಡೆಸಿದ ಕಲಾ ಸಿರಿ ಸ್ಪರ್ಧೆಯ ಬಹುಮನ ವಿತರಣಾ ಕಾರ್ಯಕ್ರಮ ಈ ವೇಳೆ ನಡೆಯಲಿದೆ ಎಂದು ಅವರು ಹೇಳಿದರು.
ಗೌರವಾಧ್ಯಕ್ಷ ಡಾ.ಪ್ರಭಾಕರ ನೀರುಮಾರ್ಗ, ಪ್ರಧಾನ ಕಾರ್ಯದರ್ಶಿ ಬೆನೆಟ್ ಅಮ್ಮಣ್ಣ, ಕೋಶಾಧಿಕಾರಿ ಸುಮತಿ ಹೆಗ್ಡೆ, ಕಲಾ ಸಿರಿ ಸಂಚಾಲಕರಾದ ಸುಧಾ ನಾಗೇಶ್, ದುರ್ಗಾ ಪ್ರಸಾದ್, ಸಮ್ಮೇಳನ ಕಾರ್ಯಕ್ರಮ ಸಂಚಾಲಕರಾದ ಅಮಿತಾ ಅಶ್ವಿನ್ ಮೊದಲಾದವರು ಉಪಸ್ಥಿತರಿದ್ದರು.

ಸುಂಟಿಕೊಪ್ಪದಲ್ಲಿ ಚಾಮುಂಡೇಶ್ವರಿ- ಮುತ್ತಪ್ಪ ತೆರೆ ಉತ್ಸವ

ಸುಂಟಿಕೊಪ್ಪ: ಸುಂಟಿಕೊಪ್ಪ ಶ್ರೀ ಚಾಮುಂಡೇಶ್ವರಿ, ಶ್ರೀ ಮುತ್ತಪ್ಪ ಮತ್ತು ಪರಿವಾರ ದೇವರುಗಳ 58ನೇ ವರ್ಷದ ತೆರೆ ಮಹೋತ್ಸವ ಮಾ. 21ರಿಂದ 23 ರವರೆಗೆ ವಿಶೇಷ ಪೂಜೆಗಳೊಂದಿಗೆ ನಡೆಯಲಿದೆ ಎಂದು ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮುತ್ತಪ್ಪ ದೇವಸ್ಥಾನ ಸಮಿತಿಯ ಅಧ್ಯಕ್ಷ ಪಟ್ಟೆಮನೆ ಉದಯಕುಮಾರ್ ತಿಳಿಸಿದ್ದಾರೆ.
ಮಾ.21ರ ಬೆಳಗ್ಗೆ ಬಾವುಟ ಏರಿಸುವುದು, ಸಂಜೆ ಶ್ರೀ ಮುತ್ತಪ್ಪ ದೇವರ ಮಲೆ ಇಳಿಸುವಿಕೆ, ರಾತ್ರಿ ಚಂಡೆಮೇಳ, ಶ್ರೀ ಮುತ್ತಪ್ಪ ವೆಳ್ಳಾಟಂ ನಡೆಯಲಿದೆ.
ಮಾ.22ರಂದು ವಾದ್ಯಮೇಳ, ಶ್ರೀ ಶಾಸ್ತಪ್ಪನ ವೆಳ್ಳಾಟಂ, ಮಧ್ಯಾಹ್ನ ಶ್ರೀ ಗುಳಿಗ ವೆಳ್ಳಾಟಂ, ಸಂಜೆ ಅಡಿಯರ ಮೆರವಣಿಗೆ, ರಾತ್ರಿ ಶ್ರೀ ಮುತ್ತಪ್ಪ ವೆಳ್ಳಾಟಂ, ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ರಕ್ತ ಚಾಮುಂಡಿ ವೆಳ್ಳಾಟಂ, ಶ್ರೀ ವಸೂರಿಮಾಲೆ ಸ್ನಾನಕ್ಕೆ ಹೊರಡುವುದು, ವಿಷ್ಣುಮೂರ್ತಿ ವೆಳ್ಳಾಟಂ, ಕಳಿಗ ಪಾಟ್ ಅಂದಿವೇಳ ಕಳಸಂ ಸ್ವೀಕರಿಸುವುದು, ವೆಳ್ಳಕಟ್ಟ್, ಗುಳಿಗನ ಕೋಲ, ಶಾಸ್ತಪ್ಪನ ಕೋಲ, ಬೆಳಗಿನ ಜಾವ ಶ್ರೀ ಮುತ್ತಪ್ಪ ಮತ್ತು ಶ್ರೀ ತಿರುವಪ್ಪನ ಕೋಲ, ಮರುದಿನ ಬೆಳಗ್ಗೆ ಶ್ರೀ ರಕ್ತ ಚಾಮುಂಡಿಕೋಲ, ಶ್ರೀ ಮುತ್ತಪ್ಪ ಮತ್ತು ಶ್ರೀ ತಿರುವಪ್ಪ ದೇವರ ಪಳ್ಳಿವೇಟ, ಶ್ರೀ ವಿಷ್ಣುಮೂರ್ತಿಕೋಲ, ಶ್ರೀ ಚಾಮುಂಡೇಶ್ವರಿ ಕೋಲ, ಶ್ರೀ ವಸೂರಿ ಮಾಲೆ ಕೋಲ, ಮಧ್ಯಾಹ್ನ ಗುರುಶ್ರೀ ದರ್ಪಣ, ಅಪರಾಹ್ನ ಬಾವುಟ ಇಳಿಸಲಾಗುವುದೆಂದು ಶ್ರೀ ಚಾಮುಂಡೇಶ್ವರಿ ಹಾಗೂ ಮುತ್ತಪ್ಪ ದೇವಾಲಯ ಸಮಿತಿ ಆಡಳಿತ ಮಂಡಳಿಯವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮರವಂತೆ ಶ್ರೀ ಗಂಗಾಧರೇಶ್ವರ ದೇವಸ್ಥಾನದಲ್ಲಿ ಲಕ್ಷ ಬಿಲ್ವಾರ್ಚನೆ | ಶ್ರೀರಾಘವೇಶ್ವರ ಸ್ವಾಮೀಜಿ ಆಶೀರ್ವಚನ

ವರಾಹ ಸ್ವಾಮಿ ಛತ್ರಛಾಯೆಯಡಿ ಎಲ್ಲರೂ ಅದೃಷ್ಟವಂತರು

ಕುಂದಾಪುರ: ನಮಗೆ ದೇವರಿಗೆ ಸೇವೆ ಮಾಡಬೇಕು ಎಂದು ಅನಿಸಿದರೆ ಸಾಲದು, ದೇವರಿಗೆ ನಿಮ್ಮ ಸೇವೆಯನ್ನು ತೆಗೆದುಕೊಳ್ಳಬೇಕು ಅಂತ ಅನಿಸಬೇಕು. ಆಗ ಮಾತ್ರ ನಿಮ್ಮ ಸೇವೆ ದೇವರಿಗೆ ಸಲ್ಲುವಂತೆ ಆಗುತ್ತದೆ. ಒಂದು ಕಾಲದಲ್ಲಿ ದೇವಸ್ಥಾನ ನಿರ್ಮಾಣವಾಗಬೇಕೆಂದರೆ ರಾಜರು ಧೈರ್ಯ ನೀಡಬೇಕಿತ್ತು. ಆದರೆ ಈ ದೇವಸ್ಥಾನದ ಜೀರ್ಣೋದ್ಧಾರದ ವಿಚಾರದಲ್ಲಿ ಭಕ್ತರು ಸರ್ಕಾರಕ್ಕೆ ಧೈರ್ಯ ನೀಡಬೇಕಾದರೆ ಇದೊಂದು ವಿಸ್ಮಯ ಎಂದು ಶಂಕರಾಚಾರ್ಯ ಮಹಾಸಂಸ್ಥಾನ ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಾಪುರ ಮಠದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಮಹಾಸ್ವಾಮೀಜಿ ಹೇಳಿದರು.
ಕರ್ನಾಟಕ ಸರಕಾರ ಹಿಂದು ಧಾರ್ಮಿಕ ದತ್ತಿ ಇಲಾಖೆ, ಮಹಾರಾಜ ಸ್ವಾಮಿ ಶ್ರೀ ವರಾಹ ದೇವಸ್ಥಾನ ಅಭಿವೃದ್ಧಿ ಸಮಿತಿ ಮತ್ತು ವ್ಯವಸ್ಥಾಪನಾ ಸಮಿತಿ ಮರವಂತೆ ವತಿಯಿಂದ ಮರವಂತೆಯ ಶ್ರೀ ಗಂಗಾಧರೇಶ್ವರ ದೇವಸ್ಥಾನದ ವಠಾರದಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿಗೆ ಲಕ್ಷ ಬಿಲ್ವಾರ್ಚನೆ ಮತ್ತು ನೂತನ ದೇವಾಲಯದ ನಿರ್ಮಾಣದ ಸೇವಾ ಸಮರ್ಪಣಾ ಕಾರ್ಯಕ್ರಮದಲ್ಲಿ ಸೋಮವಾರ ಆಶೀರ್ವಚನ ನೀಡಿದರು.



ಮಹಾರಾಜ ವರಾಹ ಸ್ವಾಮಿಯ ಛತ್ರಛಾಯೆಯಡಿ ಇರುವ ಎಲ್ಲರೂ ಅದೃಷ್ಟವಂತರು. ವರಾಹ ಸ್ವಾಮೀಯೇ ಮಹಾರಾಜರು ಎಂದರು.
ಮಾಜಿ ಶಾಸಕ ಕೆ.ಗೋಪಾಲ ಪೂಜಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರಾಜೇಶ ಹೆಬ್ಬಾರ್, ಅಭಿವೃದ್ಧಿ ಸಮಿತಿ ಪದಾಧಿಕಾರಿಗಳು, ಸದಸ್ಯರು, ವ್ಯವಸ್ಥಾಪನಾ ಸಮಿತಿ ಸದಸ್ಯರು, ಅರ್ಚಕರು ಮೊದಲಾದವರು ಉಪಸ್ಥಿತರಿದ್ದರು. ಅಭಿವೃದ್ಧಿ ಸಮಿತಿ ಅಧ್ಯಕ್ಷ ಮರವಂತೆ ರಾಜಶೇಖರ ಹೆಬ್ಬಾರ್ ಕಾರ್ಯಕ್ರಮ ನಿರ್ವಹಿಸಿದರು. ರಾಜೇಶ ಆಚಾರ್ಯ ನಿರೂಪಿಸಿದರು. ಕರುಣಾಕರ ಆಚಾರ್ಯ ದಾನಿಗಳ ಪಟ್ಟಿ ವಾಚಿಸಿದರು. ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ರವಿ ಮಡಿವಾಳ ವಂದಿಸಿದರು.

ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಂಪನ್ನ

ಕುಂದಾಪುರ: ಮಹಾರಾಜ ಸ್ವಾಮಿ ಶ್ರೀ ವರಾಹ ದೇವಸ್ಥಾನ ಅಭಿವೃದ್ಧಿ ಸಮಿತಿ ಮತ್ತು ವ್ಯವಸ್ಥಾಪನಾ ಸಮಿತಿ ಮರವಂತೆ ಇದರ ವತಿಯಿಂದ ಮರವಂತೆಯ ಶ್ರೀ ಗಂಗಾಧರೇಶ್ವರ ದೇವಸ್ಥಾನದಲ್ಲಿ ದೇವಸ್ಥಾನದ ಪುನರ್ ನಿರ್ಮಾಣದ ಅಂಗವಾಗಿ ಶ್ರೀ ಗಂಗಾಧರೇಶ್ವರ ಸ್ವಾಮಿಗೆ ಲಕ್ಷ ಬಿಲ್ವಾರ್ಚನೆ ಕಾರ್ಯಕ್ರಮ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸೋಮವಾರ ಸಂಪನ್ನಗೊಂಡಿತು.



ಬೆಳಿಗ್ಗೆ ಶ್ರೀ ವರಾಹ, ಶ್ರೀ ವಿಷ್ಣು ಶ್ರೀ ನರಸಿಂಹ ಹಾಗೂ ಶ್ರೀ ಗಂಗಾಧರೇಶ್ವರ ದೇವರ ಸನ್ನಿಧಿಯಲ್ಲಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ಧಾರ್ಮಿಕ ವಿಧಿವಿಧಾನಗಳು ಪ್ರಾರಂಭಗೊಂಡಿತು. ಶ್ರೀ ವರಾಹ, ಶ್ರೀ ವಿಷ್ಣು ಶ್ರೀ ನರಸಿಂಹ ದೇವರಿಗೆ ಕಲಾಶಾಭಿಷೇಕ ಮತ್ತು ಶ್ರೀ ಗಂಗಾಧರೇಶ್ವರ ದೇವರಿಗೆ ದ್ವಿಸಹಸ್ರ ರುದ್ರಾಕ್ಷಿ ಸಹಿತ ಏಕಾದಶ ರುದ್ರಾಭಿಷೇಕ ನಡೆಯಿತು. ಬಳಿಕ ಶ್ರೀ ಗಂಗಾಧರ ದೇವರಿಗೆ ಲಕ್ಷ ಬಿಲ್ವಾರ್ಚನೆ ಸೇವೆ, ಮಧ್ಯಾಹ್ನ ಅನ್ನಸಂತರ್ಪಣೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನಗೊಂಡಿತು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರಾಜೇಶ ಹೆಬ್ಬಾರ್, ಅಭಿವೃದ್ಧಿ ಸಮಿತಿ ಅಧ್ಯಕ್ಷ ಮರವಂತೆ ರಾಜಶೇಖರ ಹೆಬ್ಬಾರ್, ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರಾಜೇಶ ಹೆಬ್ಬಾರ್ ಇದ್ದರು.

ಸಂತ ಫಿಲೋಮಿನಾ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಪುತ್ತೂರು: ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ವಿಮೆನ್ ಎಂಪವರ್‌ಮೆಂಟ್ ಸೆಲ್ ಮತ್ತು ಆಂಟಿ ವಿಮೆನ್ ಹರಾಸ್‌ಮೆಂಟ್ ಸೆಲ್ ಜಂಟಿ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ರಜತ ಮಹೋತ್ಸವ ಸಭಾಂಗಣದಲ್ಲಿ ಆಚರಿಸಲಾಯಿತು.
ಗೌರವ ಅತಿಥಿಯಾಗಿದ್ದ ಪುತ್ತೂರು ಉಪ ವಿಭಾಗದ ಅಬಕಾರಿ ನಿರೀಕ್ಷಕಿ ಜೋಸಲಿನ್ ಫೆರ್ನಾಂಡಿಸ್, ಯಾವಾಗಲೂ ಪರಸ್ಪರ ಮಹಿಳೆಯರಿಗೆ ಬೆಂಬಲ ನೀಡಿ. ಎಂದಿಗೂ ಅಸೂಯೆ ಪಡಬೇಡಿ, ಇತರರಿಗೆ ಮಾರ್ಗದರ್ಶನ ನೀಡಿ. ಯಾವಾಗಲೂ ಆರ್ಥಿಕವಾಗಿ ಸ್ವತಂತ್ರರಾಗಿರಿ, ನಿಮ್ಮ ಗುರಿಯನ್ನು ಎಂದಿಗೂ ಬಿಡಬೇಡಿ. ಯಾರ ಮೇಲೂ ಅವಲಂಬಿತರಾಗಬೇಡಿ ಮತ್ತು ನಿಮ್ಮ ನೈತಿಕತೆಯನ್ನು ಸದಾ ಕಾಪಾಡಿಕೊಳ್ಳಿ. ನಿಮ್ಮ ನೈತಿಕ ಮೌಲ್ಯಗಳು ಯಾವಾಗಲೂ ಉನ್ನತ ಮಟ್ಟದಲ್ಲಿರಲಿ ಎಂದು ಹೇಳಿದರು.
ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಧರ್ಮಗುರು ಡಾ. ಆಂಟನಿ ಪ್ರಕಾಶ್ ಮೊಂತೆರೊ ಮಾತನಾಡಿ, ಮಹಿಳೆಯಿಲ್ಲದೆ ಪುರುಷನಿಲ್ಲ, ಪುರುಷನಿಲ್ಲದೆ ಮಹಿಳೆಯಿಲ್ಲ, ನಾವು ಪುರುಷರನ್ನು ಮತ್ತು ಮಹಿಳೆಯರನ್ನು ಗೌರವಿಸಬೇಕು ಎಂದರು. ವಿಮೆನ್ ಎಂಪವರ್‌ಮೆಂಟ್ ಸೆಲ್ ಸಂಯೋಜಕಿ ಪ್ರೇಮಲತಾ ಕೆ. ಮತ್ತು ಆಂಟಿ ವಿಮೆನ್ ಹರಾಸ್‌ಮೆಂಟ್ ಸೆಲ್ ಸಂಯೋಜಕಿ ನೋಫ್ಲಿನ್ ಎನ್. ಡಿಸೋಜಾ ಇದ್ದರು.
ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಪ್ರಥಮ ಬಿಕಾಂ ವಿದ್ಯಾರ್ಥಿನಿ ಫರಾಹತ್ ಮುಶ್ರೀನ್ ಮುಖ್ಯ ಅತಿಥಿಯನ್ನು ಪರಿಚಯಿಸಿದರು. ದ್ವಿತೀಯ ಬಿಕಾಂ ವಿದ್ಯಾರ್ಥಿನಿ ಅಪೂರ್ವ ಮತ್ತು ಬಳಗ ಪ್ರಾರ್ಥಿಸಿದರು. ತೃತೀಯ ಬಿಎಸ್ಸಿ ವಿದ್ಯಾರ್ಥಿನಿ ಹಿಬಾ ಶೇಕ್ ಸ್ವಾಗತಿಸಿ, ಪ್ರಥಮ ಬಿಕಾಂ ವಿದ್ಯಾರ್ಥಿನಿ ಶಮಾನ ಬಾನು ವಂದಿಸಿದರು. ದ್ವಿತೀಯ ಬಿಬಿಎ ವಿದ್ಯಾರ್ಥಿನಿ ಪ್ರಿಯಾ ನಿರ್ವಹಿಸಿದರು.

ಬಿಪಿಎಲ್ ಕಾರ್ಡ್ ಆದಾಯ ಮಿತಿ 3 ಲಕ್ಷ ರೂ. ಏರಿಕೆಗೆ ಆಗ್ರಹ

ಬೆಳ್ತಂಗಡಿ: ಬಿಪಿಎಲ್ ಪಡಿತರ ಚೀಟಿ ವಿತರಿಸಲು ಈಗಲೂ ವಾರ್ಷಿಕ 1.20 ಲಕ್ಷ ರೂ. ಆದಾಯವನ್ನು ಮಾನದಂಡವಾಗಿ ಅನುಸರಿಸುತ್ತಿರುವುದು ಸರಿಯಲ್ಲ, ಬಿಪಿಎಲ್ ಕಾರ್ಡ್ ಪಡೆಯಲು ಈಗಲೂ 9 ವರ್ಷಗಳ ಹಳೆಯ ಮಾನದಂಡವನ್ನೇ ಬಳಸಲಾಗುತ್ತಿದೆ. ಆದ್ದರಿಂದ, ಬಿಪಿಎಲ್ ಕಾರ್ಡ್ ಪಡೆಯಲು ಇರುವ ಆದಾಯ ಮಿತಿಯನ್ನು 1.20 ಲಕ್ಷದಿಂದ ಕನಿಷ್ಠ 3 ಲಕ್ಷ ರೂ. ಗೆ ಏರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಸಭಾಪತಿ ಬಸವರಾಜ ಹೊರಟ್ಟಿ ಅವರಲ್ಲಿ ಆಗ್ರಹಿಸಿದ್ದಾರೆ.



ಅವರು ವಿಧಾನಪರಿಷತ್‌ನಲ್ಲಿ ಸೋಮವಾರ ಶೂನ್ಯವೇಳೆಯಲ್ಲಿ ವಿಚಾರ ಪ್ರಸ್ತಾವಿಸಿದರು. ಬಿಪಿಎಲ್ ಮಾನದಂಡವನ್ನು ಬದಲಿಸುವ ತುರ್ತು ಅಗತ್ಯವಿದ್ದು, ನಿಜವಾದ ಫಲಾನುಭವಿಗಳಿಗೆ ಸವಲತ್ತು ತಲುಪಬೇಕಿದೆ. ಬಿಪಿಎಲ್ ಕಾರ್ಡ್ ವಿಷಯದಲ್ಲಿ ಸಾಕಷ್ಟು ಗೊಂದಲಗಳಿದ್ದು, ಸೂಕ್ತ ನಿಯಮಗಳನ್ನು ರೂಪಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಜೀವನ ವೆಚ್ಚ ಸತತವಾಗಿ ಹೆಚ್ಚುತ್ತಲೇ ಸಾಗಿದೆ. ಈಗಿನ ಬೆಲೆ ಏರಿಕೆಯ ಕಾಲದಲ್ಲಿ ವಾರ್ಷಿಕ 1.20 ಲಕ್ಷ ರೂ. ಆದಾಯ ಎನ್ನುವುದು ತೀರಾ ಕಡಿಮೆ. ಸಾಮಾನ್ಯ ಕೂಲಿ ಕಾರ್ಮಿಕರ ದಿನದ ಕೂಲಿ 500-600 ರೂ. ಇದ್ದರೂ ಅವರ ವಾರ್ಷಿಕ ಆದಾಯ ಈ ಮಿತಿಯನ್ನು ಮೀರುತ್ತದೆ. ಇದರಿಂದ ನಿಜವಾದ ಬಡವರಿಗೂ ಬಿಪಿಎಲ್ ಕಾರ್ಡ್ ಸಿಗುತ್ತಿಲ್ಲ. ಹಾಗಾಗಿಯೇ. ಬಿಪಿಎಲ್ ಕಾರ್ಡ್ ಪಡೆಯಲು ಇರುವ ಆದಾಯ ಮಿತಿಯನ್ನು 1.20 ಲಕ್ಷದಿಂದ ಕನಿಷ್ಠ 3 ಲಕ್ಷ ರೂ. ಗೆ ಏರಿಸಬೇಕು ಎಂಬ ಆಗ್ರಹ ಸೂಕ್ತವಾಗಿದೆ.
ಅಲ್ಲದೆ ಇತ್ತೀಚೆಗೆ ಸರ್ಕಾರವು ಐಟಿ ಪಾವತಿದಾರರು, ಸರ್ಕಾರಿ ನೌಕರರು ಮತ್ತು 7.5 ಎಕರೆಗಿಂತ ಹೆಚ್ಚು ಜಮೀನು ಇರುವವರ ಕಾರ್ಡ್‌ಗಳನ್ನು ರದ್ದುಗೊಳಿಸುವ ಪ್ರಕ್ರಿಯೆ ಆರಂಭಿಸಿದೆ. ಆದರೆ ಈ ಪ್ರಕ್ರಿಯೆಯಲ್ಲಿ ತಾಂತ್ರಿಕ ದೋಷಗಳಿಂದಾಗಿ ಬಡವರ ಕಾರ್ಡ್‌ಗಳು ಸಹ ಅಕಾರಣವಾಗಿ ರದ್ದಾಗುತ್ತಿವೆ ಎಂಬ ಆರೋಪವಿದ್ದು, ಬಡವರಿಗೆ ಅನ್ಯಾಯವಾಗದಂತೆ ಪಾರದರ್ಶಕ ಪ್ರಕ್ರಿಯೆ ನಡೆಸಬೇಕು. ಸರ್ಕಾರ ಈಗಾಗಲೇ 12 ಲಕ್ಷಕ್ಕೂ ಹೆಚ್ಚು ಕಾರ್ಡ್‌ಗಳನ್ನು 'ಅನರ್ಹ' ಎಂದು ಗುರುತಿಸಿದೆ. ಈ ಪೈಕಿ ಈಗಾಗಲೇ ಲಕ್ಷಾಂತರ ಕಾರ್ಡ್‌ಗಳನ್ನು ಎಪಿಎಲ್ ಆಗಿ ಪರಿವರ್ತಿಸಲಾಗಿದೆ ಅಥವಾ ರದ್ದುಗೊಳಿಸಲಾಗಿದೆ. ಆದುದರಿಂದ, ಬಿಪಿಎಲ್ ಕಾರ್ಡ್ ಪಡೆಯಲು ಇರುವ ಮಾನದಂಡಗಳನ್ನು ಕೂಡಲೇ ಪರಾಮರ್ಶಿಸಿ, ಪ್ರಸ್ತುತ ಇರುವ ಆದಾಯ ಮಿತಿಯನ್ನು ವಾಸ್ತವ ನೆಲೆಗಟ್ಟಿನ ಆಧಾರದಲ್ಲಿ ಗಣನೀಯವಾಗಿ ಏರಿಸುವುದು, ಬಡವರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗದಂತೆ ಪಾರದರ್ಶಕ ಪ್ರಕ್ರಿಯೆ ನಡೆಸುವುದು ಹಾಗೂ ಹೊಸ ಬಿಪಿಎಲ್ ಕಾರ್ಡ್‌ಗಾಗಿ ಬಾಕಿ ಇರುವ 3.22 ಲಕ್ಷಕ್ಕೂ ಅಧಿಕ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಗತ್ಯ ಹಾಗೂ ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದರು.

ಕೊಡಗು ವಿದ್ಯಾಲಯದಲ್ಲಿ ಬಾಲವಾಟಿಕ ಮಕ್ಕಳ ಆರೋಹಣ



ಮಡಿಕೇರಿ: ಕೊಡಗು ವಿದ್ಯಾಲಯದ ಬಾಲವಾಟಿಕ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ 'ಆರೋಹಣ ಸಮಾರಂಭ' ಪದವಿ ಪ್ರದಾನ ಮಡಿಕೇರಿಯ ಕೊಡಗು ವಿದ್ಯಾಲಯದ ಬಿ.ಕೆ. ಸುಬ್ಬಯ್ಯ ಸಭಾಂಗಣದಲ್ಲಿ ನೆರವೇರಿತು.
ಬಳಿಕ ಮುಖ್ಯ ಅತಿಥಿ ಆಗ್ನೆಸ್ ಮುತ್ತಣ್ಣ, ಶಾಲೆಯ ಪ್ರಾಂಶುಪಾಲರು ಸುಮಿತ್ರ ಕೆ.ಎಸ್. ಹಾಗೂ ಆಡಳಿತ ವ್ಯವಸ್ಥಾಪಕ ರವಿ ಪಿ. ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
ಶಾಲೆಯ ನಿವೃತ್ತ ಉಪ ಪ್ರಾಂಶುಪಾಲ ಆಗ್ನೆಸ್ ಮುತ್ತಣ್ಣ ಮಾತನಾಡಿ ಎಲ್ಲರೂ ಪರಸ್ಪರ ಸಹಾಯ ಮತ್ತು ಸಹಕಾರದ ಮನೋಭಾವವನ್ನು ಹೊಂದಿರಬೇಕು ಎಂದು ತಿಳಿಸಿದರು. ಮಕ್ಕಳು ಮತ್ತು ಶಿಕ್ಷಕರ ನಡುವಿನ ಭಾಂದವ್ಯ ಅತ್ಯಂತ ಮಹತ್ವದ್ದಾಗಿದೆ ಎಂದರು.
ಪ್ರಾಂಶುಪಾಲೆ ಸುಮಿತ್ರ ಕೆ.ಎಸ್. ಮಾತನಾಡಿ, ಪೋಷಕರು ಮಕ್ಕಳೊಂದಿಗೆ ಹೆಚ್ಚಿನ ಸಮಯ ಕಳೆಯಬೇಕು ಎಂದು ಸಲಹೆ ನೀಡಿದರು. ಬಾಲವಾಟಿಕೆ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಜಾನಪದ ನೃತ್ಯ, ಭರತನಾಟ್ಯ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿ ಮನಗೆದ್ದರು. ಸಂಯೋಜಕಿ ಭಾರತಿ ಕೆ.ಕೆ. ಮಕ್ಕಳಿಗೆ ಕೆಲವು ಹಿತನುಡಿಗಳನ್ನು ನೀಡಿದರು. ಸೋನಾ ಮುತ್ತಮ್ಮ ನಿರೂಪಿಸಿದರು. ಬೊಳ್ಳಮ್ಮ ಎಂ.ಪಿ. ಪರಿಚಯಿಸಿದರು. ರಮ್ಯಾ ಟಿ.ಪಿ.ವಂದಿಸಿದರು. ಶಿಕ್ಷಕರು ಹಾಗೂ ಪೋಷಕರು ಹಾಜರಿದ್ದರು.



ಕ್ಯಾಂಪ್ಕೊ 'ಸಾಂತ್ವನ' ಯೋಜನೆಯಡಿಯಲ್ಲಿ ಯಲ್ಲಾಪುರ ಶಾಖೆಯ ಸಕ್ರಿಯ ಸದಸ್ಯ ಗಣಪತಿ ವಿಶ್ವೇಶ್ವರ ಭಟ್ ಅವರ ತಂದೆಯ ಆಕಸ್ಮಿಕ ಮರಣ ಹೊಂದಿದ್ದು, ಸಂಸ್ಥೆಯಿಂದ ರೂ. 50,000 ಸಹಾಯಧನವನ್ನು ಶನಿವಾರ ನಿರ್ದೇಶಕ ವಿಶ್ವನಾಥ ಹೆಗ್ಡೆ ಕುಜಳ್ಳೀ ಹಸ್ತಾಂತರಿಸಿದರು. ಡಿಜಿಎಂ ಗೋವಿಂದ ಭಟ್, ಶಿರಸಿ ಪ್ರಾಂತೀಯ ವ್ಯವಸ್ಥಾಪಕ ಜಯರಾಮ ಶೆಟ್ಟಿ, ಯಲ್ಲಾಪುರ ಶಾಖೆ ಪ್ರಬಂಧಕ ಲೋಕೇಶ್ ಶೆಟ್ಟಿ ಸಿಬ್ಬಂದಿ ನಿತಿನ್ ಕುಮಾರ್, ಕುಮಾರ್ ಇದ್ದರು.

ಮಾತೃ ಪಿತೃ ಸೇವೆಯೇ ನಮ್ಮ ಸಂಸ್ಕೃತಿಯ ನಿಜವಾದ ಮಹಿಮೆ: ಪ್ರಕಾಶ್ ಮಲ್ಪೆ



ಕೋಟ: ಸೇವಾ ಸಂಗಮ ವಿದ್ಯಾ ಕೇಂದ್ರ ವಿದ್ಯಾ ಗಿರಿ ತೆಕ್ಕಟ್ಟೆಯಲ್ಲಿ ದೀಕ್ಷಾಂತ ಮತ್ತು ಮಾತೃ ಪಿತೃ ವಂದನಾ ಕಾರ್ಯಕ್ರಮ ಶನಿವಾರ ಜರಗಿತು.
ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪ್ರಸಿದ್ಧ ಲೇಖಕ ಅಂಕಣಕಾರ ಪ್ರಕಾಶ್ ಮಲ್ಪೆ ಮಾತನಾಡಿ ತಾಯಿಯಿಂದ ಪ್ರೀತಿ ಮಮತೆ ಮತ್ತು ಮೌಲ್ಯಗಳನ್ನು ಕಲಿತರೆ ನಮ್ಮ ಜೀವನದ ದಿಕ್ಕನ್ನು ತೋರಿಸುವ ಮಾರ್ಗದರ್ಶಿ ತಂದೆ, ಅವರು ತಮ್ಮ ಕಷ್ಟಗಳನ್ನು ಮರೆತು ಉತ್ತಮ ತ್ಯಾಗಿಯಾಗಿ ದುಡಿಯುತ್ತಾರೆ. ಅವರ ಸಂಧ್ಯಾಕಾಲದಲ್ಲಿ ಮಾತೃ ಪಿತೃ ಸೇವೆಯೇ ನಮ್ಮ ಸಂಸ್ಕೃತಿಯ ನಿಜವಾದ ಮಹಿಮೆ ಎಂದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಸುರೇಶ್ ಬೆಟ್ಟಿನ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಲಾ ಆಡಳಿತ ಮಂಡಳಿಯ ಸಂಚಾಲಕ ಕಮಲಾಕ್ಷ ಪೈ ಮತ್ತು ಆಡಳಿತ ಮಂಡಳಿಯ ಸದಸ್ಯರು ,ಶಾಲಾ ಬೋಧಕ ಮತ್ತು ಬೋಧಕೇತರ ಹಾಗೂ ಪಾಲಕರು ಉಪಸ್ಥಿತರಿದ್ದರು.ಮಾತೃಪಿತೃವಂದನೆಯನ್ನು ಶಾಲಾ ಮುಖ್ಯೋಪಾಧ್ಯಾಯ ಹರ್ಷ ಕೋಟೇಶ್ವರ ಮತ್ತು ಸಂಧ್ಯಾ ಭಟ್ ಮಾತಾಜಿ ನಿರ್ವಹಿಸಿದರು. ನಾಗರತ್ನ ಮಾತಾಜಿ ಸ್ವಾಗತಿಸಿ, ಸುಜಾತಾ ಮಾತಾಜಿ ವಂದಿಸಿದರೆ, ಶಕೀಲ ಬಿ. ಮಾತಾಜಿ ಕಾರ್ಯಕ್ರಮ ನಿರೂಪಿಸಿದರು.

ಮುಲ್ಕಿ-ಅತಿಕಾರಿಬೆಟ್ಟು ನಡಿಬೆಟ್ಟು ಶ್ರೀ ಧೂಮಾವತಿ ದೈವಸ್ಥಾನದಲ್ಲಿ ವಿಜೃಂಭಣೆ ನೇಮ



ಮುಲ್ಕಿ: ಅತಿಕಾರಿಬೆಟ್ಟು ನಡಿಬೆಟ್ಟು ಶ್ರೀ ಧೂಮಾವತಿ ದೈವಸ್ಥಾನದ ವರ್ಷಾವಧಿ ನೇಮ ಶನಿವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು.
ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಶುಕ್ರವಾರ ರಾತ್ರಿ ಭಂಡಾರ ಇಳಿಯವ ಕಾರ್ಯಕ್ರಮ ನಡೆಯಿತು. ಶನಿವಾರ ರಾತ್ರಿ ನೇಮ, ಕೊರ್ದಬ್ಬು ಭೇಟಿ, ತುಟೆದಾರ, ಬದಿಕರ ಬಲಿ, ಪ್ರಸಾದ ವಿತರಣೆ, ಹಾಗೂ ಭಾನುವಾರ ಮಧ್ಯಾಹ್ನ 1ರಿಂದ ಪಿರಿಯುದ ಬಲಿ ನಡೆಯಿತು.
ಈ ಸಂದರ್ಭ ಸಂಸದ ಬ್ರಿಜೇಶ್ ಚೌಟ, ಶಾಸಕ ಉಮಾನಾಥ ಕೋಟ್ಯಾನ್, ದೈವಸ್ಥಾನದ ಆಡಳಿತ ಮೊಕ್ತೇಸರ ಗುತ್ತಿನಾರ್ ಸುಧಾಕರ ಶೆಟ್ಟಿ ದೆಪ್ಪುಣಿಗುತ್ತು ಜಗದೀಶ್ ಎಸ್. ಪ್ರಭು ಪಣಿಕೆರೆಮನೆ, ಶಿವಚಂದ್ರ ಎಸ್. ಶೆಟ್ಟಿ ರಾಮ ದಾಸ ಶೆಟ್ಟಿ ಬಾಳಿಕೆ ಮನೆ, ವಿಜಿತ್ ಶೆಟ್ಟಿ ಕಿಶೋರ್ ಶೆಟ್ಟಿ ಬಟಾರ ಬಾಳಿಕೆ, ಜನಾನಂದ ಶೆಟ್ಟಿ ತಿಂಗೊಳೆ ಮನೆ, ಶರದ್ ಕೋಟ್ಯಾನ್, ಮುಂಬೈ, ಗಂಗಾಧರ ಶೆಟ್ಟಿ ಬರ್ಕೆ ತೋಟ, ವಿಜಯಕುಮಾರ್ ಶೆಟ್ಟಿ ಕಿಶೋರ್ ಶೆಟ್ಟಿ ದೆಪ್ಪುಣಿಗುತ್ತು, ಉತ್ತಮ್ ಪೂಜಾರಿ, ಮೈಲೊಟ್ಟು ಮನೋಹರ ಕೋಟ್ಯಾನ್, ವಸಂತ ಟಿ. ಅಮೀನ್ ನಡಿ ಕೊಪ್ಪಲ, ಸದಾಶಿವ ಶೆಟ್ಟಿ ಕಬೆತ್ತಿಗುತ್ತು ಮತ್ತಿತರರು ಉಪಸ್ಥಿತರಿದ್ದರು



ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ರೂ.10 ಲಕ್ಷ ವೆಚ್ಚದಲ್ಲಿ ಕಾಂಕ್ರಿಟೀಕರಣಗೊಂಡ ಕುಕ್ಕೇಡಿ ಗ್ರಾಮದ ಕುಂಡದಬೆಟ್ಟು ಸಂತ ಜಾನ್ ಪೌಲ್ ಚರ್ಚ್ ಸಂಪರ್ಕ ರಸ್ತೆಯನ್ನು ಉದ್ಘಾಟಿಸಿದರು. ಮಂಡಲ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಸೆಬಾಸ್ಟಿಯನ್, ಸಂತ ಜಾನ್ ಪೌಲ್ ಚರ್ಚ್ ಧರ್ಮಗುರು ಸನ್ನಿ ಅಲಾಪಟ್, ಟ್ರಸ್ಟಿಗಳಾದ ಅಲ್ವಿನ್, ಜಾರ್ಜ್, ದಿನು ಇದ್ದರು.

ಮಂಗಳೂರು ವಿವಿ ತುಳು ಪೀಠದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಡಿ. ಯಶುಕುಮಾರ್ ಬಣ್ಣನೆ

ತುಳುನಾಡಿನ ಸಿರಿ ಪಾಡ್ದನ ಜಗತ್ತಿನ ಏಳು ಮಹಾಕಾವ್ಯಗಳಲ್ಲೊಂದು

ಮಂಗಳೂರು: ತುಳುನಾಡು ಆರಾಧಿಸುವ ಸಿರಿಯ ಪಾಡ್ದನ ಜಗತ್ತಿನ ಏಳು ಜಾನಪದ ಮಹಾಕಾವ್ಯಗಳಲ್ಲೊಂದು ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ಯಶುಕುಮಾರ್ ಹೇಳಿದರು.
ಅವರು ಸೋಮವಾರ ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಮತ್ತು ಕೆನರಾ ಕಾಲೇಜಿನ ತುಳು ಸಂಘದ ಸಹಯೋಗದೊಂದಿಗೆ ಕಾಲೇಜಿನ ಸಭಾಂಗಣದಲ್ಲಿ ನಡೆದ ಪ್ರಚಾರೋಪನ್ಯಾಸ ಮಾಲಿಕೆಯ 'ದೈವಾರಾಧನೆ: ದೈವ ಕಲತ್ತ ಬೇತೆ ಬೇತೆ ಮರ್ಗಿಲ್- ಗೇನದ ತುಲಿಪು- ತುಳುನಾಡ್ ದ ಅವಳಿ ವೀರರ್' ಉಪನ್ಯಾಸ ಮಾಲಿಕೆಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಸಾಂಸ್ಕೃತಿಕ ವೀರರಾಗಿ ಆರಾಧನೆಗೆ ಒಳಪಟ್ಟರು

ಅನ್ಯಾಯ ವಿರುದ್ಧ ಹೋರಾಡಿ, ಐತಿಹಾಸಿಕ ಮತ್ತು ಪೌರಾಣಿಕ ಅವಳಿ ವೀರರಾಗಿ, ತುಳುನಾಡು ಪೂಜಿಸುವಂತಹ ಬೈದೆರ್ಲು, ಮುಗೇರ್ಲು, ಕಂಬೆರ್ಲು, ಬಾರೆಲು ಇವರುಗಳೆಲ್ಲರೂ ಮೂಲ ಮಾನವರಾಗಿದ್ದವರು. ಅಕಾಲ ಮರಣಕ್ಕೆ ತುತ್ತಾಗಿ ತುಳುನಾಡಿನ ಒಂದು ಸಮುದಾಯದಿಂದ ಸಾಂಸ್ಕೃತಿಕ ವೀರರಾಗಿ ಆರಾಧನೆಗೆ ಒಳಪಟ್ಟವರು. ಅವಳಿ ವೀರರೆಂದು ಕರೆಯಲ್ಪಡುವ ಈ ಶಕ್ತಿಗಳನ್ನು ಹೆತ್ತ ತಂದೆ ತಾಯಿಗೂ ಒಂದೊಂದು ವಿಶೇಷ ಕಥೆ ಇರುವುದನ್ನು ಕಾಣಬಹುದು ಎಂದವರು ಹೇಳಿದರು. ಒಂದೇ ತಾಯಿಯ ಗರ್ಭದಿಂದ ಹುಟ್ಟಿ ಅನ್ಯಾಯದ ವಿರುದ್ಧ ಹೋರಾಡಿದ ಕಲ್ಕುಡ- ಕಲ್ಲುರ್ಟಿಯಂತಹ ಸೋದರ ಸಂಬಂಧಿ ದೈವಗಳು ಅವಳಿ ವೀರರಂತೆಯೇ ಆರಾಧಿಸಲ್ಪಟ್ಟವು ಎಂದು ಹೇಳಿದರು



ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆನರಾ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರೊ.ದೇಜಮ್ಮ ಮಾತನಾಡಿ, ಸತ್ಯದ ಹಾದಿಯಲ್ಲಿ ಸಾಗಿ ಅಧರ್ಮವನ್ನು ಮೆಟ್ಟಿ ನಿಂತ ಅವಳಿ ವೀರರು ಈ ಮಣ್ಣಿನ ಶಕ್ತಿ ಎಂದರು.
ತುಳು ಪೀಠದ ಸಹಾಯಕರಾದ ಪ್ರಸಾದ್ ಅಂಚನ್ ಮಾತನಾಡಿ, ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಇತಿಹಾಸವಿರುವ ತುಳು ಭಾಷೆಯು ಶೈಕ್ಷಣಿಕ ಮಟ್ಟದಲ್ಲಿ ಬೆಳೆಯಬೇಕಾಗಿದೆ ಎಂದರು.
ಕೆನರಾ ಕಾಲೇಜಿನ ತುಳು ಸಂಘದ ಸಂಚಾಲಕರಾದ ವಾಣಿ ಯು.ಎಸ್. ಉಪಸ್ಥಿತರಿದ್ದರು. ತುಳು ಸಂಘದ ಸಹ ಸಂಚಾಲಕರಾದ ಮನೀಷಾ ಡಿ ವಂದಿಸಿದರು. ವಿದ್ಯಾರ್ಥಿ ವೈಷ್ಣು ನಿರೂಪಿಸಿದರು.

ಕುಂಟಾರಿನಲ್ಲಿ ಸಂಭ್ರಮಿಸಿದ ಸಾಹಿತ್ಯೋತ್ಸವ | ಡಾ.ತಾಳ್ತಜೆ ವಸಂತ ಕುಮಾರ ಅಭಿಪ್ರಾಯ

ಗ್ರಾಮೀಣ ಜನರ ಹೃದಯ ಮುಟ್ಟಲು ಸಾಹಿತ್ಯ ಕಾರ್ಯಕ್ರಮ ಪೂರಕ



ಮುಳ್ಳೇರಿಯ: ಕುಂಟಾರು ಎಯುಪಿ ಶಾಲೆ ಮತ್ತು ಕನ್ನಡ ಸಂಶೋಧನಾ ಕೇಂದ್ರ ಕಾಸರಗೋಡು ಇದರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಕಾಸರಗೋಡು ಗಡಿನಾಡ ಘಟಕ, ಹಳೆ ವಿದ್ಯಾರ್ಥಿಗಳ ಸಂಘ ಎಯುಪಿ ಶಾಲೆ ಕುಂಟಾರು ಇವುಗಳ ಸಹಕಾರ ದೊಂದಿಗೆ 'ಕುಂಟಾರು ಸಾಹಿತ್ಯೋತ್ಸವ – 2026' ಕುಂಟಾರು ಶಾಲೆಯಲ್ಲಿ ಜರಗಿತು.

ಬೆಳಿಗ್ಗೆ ದಿ.ಮಾಟೆಡ್ಕ ಪುರುಷೋತ್ತಮ ರಾವ್ ದ್ವಾರವನ್ನು ಎಂ.ನಾ.ಚಂಬಲ್ತಿಮಾರ್ ಉದ್ಘಾಟಿಸಿದರು. ಬಳಿಕ ವಾದ್ಯಮೇಳದೊಂದಿಗೆ ಮೆರವಣಿಗೆ ಮೂಲಕ ಸಾಹಿತ್ಯೋತ್ಸವ ನಡೆಯುವ ವೇದಿಕೆಗೆ ಬರಲಾಯಿತು. ಮುಂಬೈ ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ತಾಳ್ತಜೆ ವಸಂತ ಕುಮಾರ ಸಾಹಿತ್ಯೋತ್ಸವ ಉದ್ಘಾಟಿಸಿ, ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, ಗ್ರಾಮೀಣ ಪ್ರದೇಶದ ಜನರ ಹೃದಯ ಮುಟ್ಟಿಸುವಲ್ಲಿ ಕುಂಟಾರು ಸಾಹಿತ್ಯೋತ್ಸವ ಕಾರ್ಯಕ್ರಮದಿಂದ ಸಾಧ್ಯ ಎಂದರು. ಕನ್ನಡದಲ್ಲಿ ಕೆಲವು ಪದಗಳೇ ಕಾಣೆಯಾಗುತ್ತಿವೆ, ಅದರ ವೇಗ ಹೆಚ್ಚುತ್ತಿದೆ. ಈ ಹಿನ್ನೆಲೆ ನಮ್ಮ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಕೆಲವು ಪದಗಳ ಅಧ್ಯಯನ ನಡೆಯಬೇಕೆಂದರು. ಉದಾಹರಣೆಗೆ ಮಹೋತಾಭಾರೆಂಬ ಪದ ಅರೇಬಿಕ್‌ನ ಮಹತಬರ್ ಪದವಾಗಿದೆ, ಅದು ಸಂಸ್ಕೃತ ಪದವಲ್ಲ ಎಂದರು. ನಮ್ಮ ಓದು ನಮ್ಮೊಳಗೆ ಪ್ರಶ್ನೆಗಳ ಹುಟ್ಟಿಸಬೇಕು, ನಾವೇ ಅದರ ಉತ್ತರ ಕಂಡುಕೊಳ್ಳಬೇಕು ಎಂದರು.

ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ಕಮಲಾಕ್ಷ ಕಾಸರಗೋಡು ಅಧ್ಯಕ್ಷತೆ ವಹಿಸಿ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿದರು. ವಸ್ತು ಪ್ರದರ್ಶನವನ್ನು ಕಾರಡ್ಕ ಗ್ರಾ.ಪಂ. ಅಧ್ಯಕ್ಷೆ ಜನನಿ ಎಂ. ಉದ್ಘಾಟಿಸಿದರು. ಚಿತ್ರ –ವ್ಯಂಗ್ಯ ಚಿತ್ರ ಪ್ರದರ್ಶನವನ್ನು ಹಿರಿಯ ವ್ಯಂಗ್ಯಚಿತ್ರಗಾರ ಎಚ್.ಎಸ್.ವಿಶ್ವನಾಥ್ ಬೆಂಗಳೂರು ಉದ್ಘಾಟಿಸಿದರು.

ಡಾ.ಮೋಹನ ಕುಂಟಾರ್ ಮಾತನಾಡಿದರು. ಗ್ರಾ.ಪಂ. ಸದಸ್ಯೆ ಬೇಬಿ ಕಟ್ಟತ್ತಬಯಲು, ಮುಖ್ಯ ಶಿಕ್ಷಕಿ ದಾಕ್ಷಾಯಣಿ ಉಪಸ್ಥಿತರಿದ್ದರು. ಸಾಹಿತ್ಯೋತ್ಸವ ಸಮಿತಿ ಕಾರ್ಯದರ್ಶಿ ಪ್ರಕಾಶ್ ಮಾಸ್ತರ್ ಸ್ವಾಗತಿಸಿ, ಉಪಾಧ್ಯಕ್ಷ ಜಗದೀಶ ಮಾಸ್ತರ್ ವಂದಿಸಿದರು. ಡಾ.ಯತೀಶ್‌ಕುಮಾರ್ ರೈ ನಿರೂಪಿಸಿದರು.

ಬಳಿಕ ನಡೆದ 1ನೇ ಗೋಷ್ಠಿಯಲ್ಲಿ ಪಂಪನ ವಿಕ್ರಮಾರ್ಜುನ ವಿಜಯ ವಿಷಯವಾಗಿ ಪ್ರಾಧ್ಯಾಪಕ ಡಾ. ರತ್ನಾಕರ ಮಲ್ಲಮೂಲೆ, ರಾಘವಾಂಕನ ಹರಿಶ್ಚಂದ್ರ ಕಾವ್ಯ ವಿಷಯವಾಗಿ ಡಾ.ಮೀನಾಕ್ಷಿ ರಾಮಚಂದ್ರ, ಮಂಗಳೂರು, ವಚನ ಸಾಹಿತ್ಯ ವಿಷಯವಾಗಿ ಡಾ.ಟಿ. ಎ.ಎನ್ ಖಂಡಿಗೆ ಮೂಡುಬಿದಿರೆ ಮಾತನಾಡಿದರು. 2ನೇ ಗೋಷ್ಠಿಯಲ್ಲಿ ವ್ಯಕ್ತಿತ್ವ ವಿಕಸನ ಮತ್ತು ಸಾಹಿತ್ಯ ವಿಷಯವಾಗಿ ಡಾ.ವರದರಾಜ ಚಂದ್ರಗಿರಿ ಪುತ್ತೂರು, ಕೃಷಿಕ ಮಹಿಳೆ ಮತ್ತು ಸಾಹಿತ್ಯ ವಿಷಯವಾಗಿ ಸಹನಾ ಕಾಂತಬೈಲು ಸಂಪಾಜೆ, ಜಾನಪದ ಸಾಹಿತ್ಯ ವಿಷಯ ಡಾ.ಸುಂದರ ಕೇನಾಜೆ ಸುಳ್ಯ ಮಾತನಾಡಿದರು.

ಮಧ್ಯಾಹ್ನ 2 ಗಂಟೆಗೆ ನಡೆದ 3ನೇ ಗೋಷ್ಠಿಯಲ್ಲಿ ಕುವೆಂಪು ಕವಿತೆಗಳು ವಿಷಯವಾಗಿ ಡಾ.ಸುಧಾರಾಣಿ ಮೂಡುಬಿದಿರೆ, ಕೀರ್ತನ ಸಾಹಿತ್ಯ ವಿಷಯವಾಗಿ ಡಾ.ಬೇಸೀ ಗೋಪಾಲಕೃಷ್ಣ ಭಟ್ ಬದಿಯಡ್ಕ, ಸಣ್ಣಕತೆ, ಕಾದಂಬರಿ ವಿಷಯವಾಗಿ ಡಾ.ರಾಧಾಕೃಷ್ಣ ಬೆಳ್ಳೂರು ಮಾತನಾಡಿದರು.

ಬಳಿಕ ನಡೆದ ಬಹುಭಾಷಾ ಕವಿಗೋಷ್ಠಿಯಲ್ಲಿ ಕವಿ ರಾಧಾಕೃಷ್ಣ ಕೆ.ಉಳಿಯತ್ತಡ್ಕ ಅಧ್ಯಕ್ಷತೆ ವಹಿಸಿದ್ದರು.

> **ಕೊರತೆ ನೀಗಬೇಕು**
>
> ಕುಂಟಾರಿಗೆ ಸಾಂಸ್ಕೃತಿಕ ಹಿನ್ನೆಲೆ ಇದ್ದರೂ, ಸಾಹಿತ್ಯಿಕ ಹಿನ್ನೆಲೆ ಕೊರತೆ ಇದೆ. ಅದು ನೀಗಬೇಕು. ಹೊಸ ಪೀಳಿಗೆ ಮೂಡಬೇಕೆಂಬ ಸಂಕಲ್ಪದಿಂದಲೇ ಸಾಹಿತ್ಯೋತ್ಸವ ಆಯೋಜಿಸಲಾಗಿದೆ ಎಂದರು.
>
> • ಡಾ.ಮೋಹನ ಕುಂಟಾರ್

ದಿವ್ಯಗಂಗಾ (ಕನ್ನಡ), ದಿಲೀಪ್ ನಾಯರ್ (ಮಲೆಯಾಳಂ), ರೇಣುಕಾ ಸುಧೀರ್ ಆರಶಿನಮಕ್ಕಿ (ಕನ್ನಡ), ವಿರಾಜ್ ಅಡೂರು (ಕನ್ನಡ), ರಾಮು ಭಟ್ ಚೆನ್ನಂಗೋಡು (ಕರಾಡ), ದಯಾನಂದ ರೈ ಕಳುವಾಜೆ (ಕನ್ನಡ), ರವೀಂದ್ರನ್ ಪಾಡಿ (ಮಲೆಯಾಳಂ), ಚಂದ್ರಿಕಾ ಶೆಣೈ ಮುಳ್ಳೇರಿಯ (ಕೊಂಕಣಿ), ಕೃಷ್ಣೋಜಿ ಮಾಸ್ತರ್ (ಕನ್ನಡ) ಕವನಗಳನ್ನು ವಾಚಿಸಿದರು.

ಸಮಾರೋಪ ಸಮಾರಂಭ

ಸಮಾರೋಪದಲ್ಲಿ ಡಾ.ಮೋಹನ ಕುಂಟಾರ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿವಿ ಹಂಪಿ ಪ್ರಾಧ್ಯಾಪಕ ಡಾ. ವೆಂಕಟಗಿರಿ ದಳವಾಯಿ ಸಮಾರೋಪ ಭಾಷಣ ಮಾಡಿದರು. ಆಯಿಷಾ ಪೆರ್ಲ ಅತಿಥಿಯಾಗಿದ್ದರು. ಕಸಾಪ ಕಾಸರಗೋಡು ಜಿಲ್ಲಾ ಘಟಕ ಅಧ್ಯಕ್ಷ ಡಾ. ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕಾರಡ್ಕ ಗ್ರಾ.ಪಂ. ಉಪಾಧ್ಯಕ್ಷ ದಾಮೋದರ ಎಂ., ರವೀಶ ತಂತ್ರಿ ಕುಂಟಾರು, ಕುಂಟಾರು ಎಯುಪಿ ಶಾಲೆ ವ್ಯವಸ್ಥಾಪಕ ವಿಷ್ಣು ಪ್ರಸಾದ್ ಭಾಗವಹಿಸಿದ್ದರು. ಸಂಜೆ ಡಾ. ವಾಣಿಶ್ರೀ ಕಾಸರಗೋಡು ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕಸಂಸ್ಥೆಯಿಂದಭಾವಗಾನಾಮೃತ, ಕುಂಟಾರು ಶಾಲೆ ಮಕ್ಕಳಿಂದ ಯಕ್ಷಗಾನ ತಾಳಮದ್ದಳೆ ನಡೆಯಿತು.

ಸುತ್ತ ಮುತ್ತ

ಮಾ.20: ಐಲ ಶ್ರೀ ದುರ್ಗಾಪರಮೇಶ್ವರಿ ಕಲಾ ಸಂಘದ ಭಜನೋತ್ಸವ

ಉಪ್ಪಳ: ಐಲ ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದಲ್ಲಿ ಕಳೆದ 47 ವರ್ಷಗಳಿಂದ ಪ್ರತೀ ಶುಕ್ರವಾರ ಮತ್ತು ಪರ್ವ ದಿನಗಳಲ್ಲಿ ಭಜನಾ ಕಾರ್ಯಕ್ರಮದ ಮೂಲಕ ಶ್ರೀ ದೇವಿಯ ಸೇವೆ ಮಾಡುತ್ತಿರುವ ಐಲ ಶ್ರೀ ದುರ್ಗಾಪರಮೇಶ್ವರಿ ಕಲಾ ಸಂಘದ 47ನೇ ವರ್ಷದ ಭಜನೋತ್ಸವ ಕಾರ್ಯಕ್ರಮ ಮಾ.20ರಂದು ಸೂರ್ಯೋದಯದಿಂದ ಸೂರ್ಯಾಸ್ತಮಾನದ ತನಕ ಶ್ರೀ ದೇವಿ ಸನ್ನಿಧಿಯಲ್ಲಿ ಜರಗಲಿದೆ.

ಬೆಳಿಗ್ಗೆ 6.34ಕ್ಕೆ ಕ್ಷೇತ್ರದ ಪ್ರಧಾನ ಅರ್ಚಕರ ಉಪಸ್ಥಿತಿಯಲ್ಲಿ ಶ್ರೀ ಕ್ಷೇತ್ರದ ಸೇವಾ ಸಮಿತಿ ಉಪಾಧ್ಯಕ್ಷ ವಸಂತ್‌ಕುಮಾರ್ ಮಯ್ಯ ತಿಂಬರ ದೀಪಪ್ರಜ್ವಲನೆಗೊಳಿಸುವರು ಬಳಿಕ ವಿವಿಧ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆದು ಸಂಜೆ 6.38ಕ್ಕೆ ಮಂಗಳಾಚಾರಣೆ ನಡೆಯಲಿದೆ.

ಡಾ.ವಾಮನ್ ರಾವ್ ಬೇಕಲ್‌ರಿಗೆ ಕರ್ನಾಟಕದ ಪ್ರತಿಷ್ಠಿತ ಹೊಯ್ಸಳ ಪ್ರಶಸ್ತಿ



ಕಾಸರಗೋಡು: ಮೈಸೂರು ನಗರದ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ ಕೊಡಮಾಡುವ 2025ನೇ ಸಾಲಿನ ರಾಜ್ಯಮಟ್ಟದ 'ಹೊಯ್ಸಳ ಪ್ರಶಸ್ತಿ' ಗಡಿನಾಡಿನ ಕನ್ನಡ ಸೇವೆಯನ್ನು ಪರಿಗಣಿಸಿ ಡಾ.ವಾಮನ್ ರಾವ್ ಬೇಕಲ್ ಅವರನ್ನು ಆರಿಸಲಾಗಿದೆ ಎಂದು ಹೊಯ್ಸಳ ಕನ್ನಡ ಸಂಘ ಅಧ್ಯಕ್ಷರಾದ ಪತ್ರಕರ್ತ, ಸಾಹಿತಿ, ಸಂಘಟಕರಾದ ರಂಗನಾಥ್ ಮೈಸೂರು ತಿಳಿಸಿದ್ದಾರೆ. ಏಪ್ರಿಲ್ 5ರಂದು ಮೈಸೂರಿನ ನಾದಬ್ರಹ್ಮ ಸಭಾಂಗಣದಲ್ಲಿ ಸವಿಗನ್ನಡ ಪತ್ರಿಕೆಯ 26ನೇ ವಾರ್ಷಿಕೋತ್ಸವದ ಅಂಗವಾಗಿ ನಡೆ ಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪ್ರಶಸ್ತಿ ಆಯ್ಕೆ ಸಮಿತಿಯ ಗೌರವ ಸಂಚಾಲಕ ಡಾ. ರಘುರಾಮ್ ವಾಜಪೇಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಕುಲಾಲ ಸಂಘ ಕುಂಬಳೆ ಪಂ.ಶಾಖೆ ಮಹಿಳಾ ಸಮಿತಿ ರಚನಾ ಸಭೆ







ಕುಂಬಳೆ: ಕಾಸರಗೋಡು ಜಿಲ್ಲಾ ಕುಲಾಲ ಸಂಘ ಕುಂಬಳೆ ಪಂಚಾಯತ್ ಶಾಖೆ ಮಹಿಳಾ ಸಮಿತಿ ರೂಪೀಕರಣ ಸಭೆ ಕಳತ್ತೂರಿನಲ್ಲಿ ನಡೆಯಿತು. ಕುಂಬಳೆ ಪಂ.ಶಾಖೆ ಅಧ್ಯಕ್ಷ ನಾರಾಯಣ ನಾರಾಯಣ ಮಂಗಲ, ಕಾರ್ಯದರ್ಶಿ ಸತೀಶ್ ಶ್ರವಣಗೆರೆ, ಕೋಶಾಧಿಕಾರಿ ನಾರಾಯಣ ಕಾಸರಗೋಡು, ಕಾರ್ಯಕಾರಿಣಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಪದಾಧಿಕಾರಿಗಳ ವಿವರ

ಮಹಿಳಾ ಸಮಿತಿ ಅಧ್ಯಕ್ಷೆಯಾಗಿ ನಿಶಾ ಕೃಷ್ಣ ಕಳತ್ತೂರು, ಉಪಾಧ್ಯಕ್ಷೆಯಾಗಿ ಚಂದ್ರಾವತಿ ಟೀಚರ್ ನಾರಾಯಣಮಂಗಲ, ಶಾಲಿನಿ ಕೃಷ್ಣ ಮುಂಡ್ರೇಲ್, ಕಾರ್ಯದರ್ಶಿಯಾಗಿ ಚಂದ್ರಕಲಾ ಕಮರ್ತೆ, ಜೊತೆ ಕಾರ್ಯದರ್ಶಿಯಾಗಿ ಸುಶೀಲ ದಿನೇಶ್ ಮುನಿಯೂರು, ಧರ್ಮಶ್ರೀ ಸತೀಶ್, ಕೋಶಾಧಿಕಾರಿಯಾಗಿ ಉಷಾ ಸುರೇಶ್ ಪಾಂಬಾಡಿ, ಕಾರ್ಯಕಾರಿ ಸಮಿತಿ ಸದಸ್ಯೆಯರಾಗಿ ಭಾಗ್ಯಶ್ರೀ ನಾರಾಯಣ, ಮೀನಾಕ್ಷಿ ಪುನಿಯೂರು, ಚಂದ್ರಕಲಾ ಪಾಂಬಾಡಿ, ಪ್ರೇಮಾ ಓಡಗದ್ದೆ ಮಾಲತಿ ಕಳತ್ತೂರು, ಚಂದ್ರಿಕಾ ಪುನಿಯೂರು, ಪದ್ಮಾವತಿ ನಾಯ್ಕಾಪು, ಈಶ್ವರೀ ಶ್ರೀನಗರ, ಸುನೀತಾ ಶ್ರವಣಗೆರೆ, ಯಶೋಧಾ ಕಳತ್ತೂರು, ಪುಷ್ಪಾ ಶ್ರವಣಗೆರೆ, ಸರಸ್ವತಿ ಶ್ರವಣಗೆರೆ, ಮಲ್ಲಿಕಾ ಶ್ರೀನಗರ, ಸವಿತಾ ಚೂಕ್ರಿ ಅವರನ್ನು ಆಯ್ಕೆ ಮಾಡಲಾಯಿತು.

ವಿಡಿಯೋ ಸ್ಟಿಂಗರ್ ಸಂದರ್ಶನ ಮುಂದೂಡಿಕೆ

ಕಾಸರಗೋಡು: ಜಿಲ್ಲಾ ಮಾಹಿತಿ ಕಚೇರಿಯಲ್ಲಿ ಮಾ.18 ರಂದು ಬೆಳಗ್ಗೆ 11 ಗಂಟೆಗೆ ನಡೆಯಬೇಕಿದ್ದ ವಿಡಿಯೋ ಸ್ಟ್ರಿಂಗರ್‌ಗಳ ಸಮಿತಿ ಸಂದರ್ಶನ ಇಲಾಖೆ ಮುಂದಿನ ಸೂಚನೆ ಬರುವವರೆಗೆ ಮುಂದೂಡಲಾಗಿದೆ. ಕೇಂದ್ರ ಚುನಾವಣಾ ಆಯೋಗ ಕೇರಳ ವಿಧಾನಸಭಾ ಚುನಾವಣಾ ದಿನಾಂಕ ಘೋಷಿಸಿರುವುದರಿಂದ ಸಂದರ್ಶನವನ್ನು ಮುಂದೂಡಲಾಗಿದೆ.

ಚುನಾವಣಾಧಿಕಾರಿಗಳ ಸಭೆ

ಕಾಸರಗೋಡು: ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆಯಲ್ಲಿ ಚುನಾವಣಾ ಅಧಿಕಾರಿಗಳ ಸಭೆ ಕಲೆಕ್ಟರೇಟ್‌ನಲ್ಲಿ ನಡೆಯಿತು. ಮಾದರಿ ನೀತಿ ಸಂಹಿತೆ ಕಟ್ಟುನಿಟ್ಟಿನ ಅನುಷ್ಠಾನದ ಭಾಗವಾಗಿ ಸಾರ್ವಜನಿಕ, ಖಾಸಗಿ ಸ್ಥಳಗಳಿಂದ ಅಕ್ರಮ ಪ್ರಚಾರ ಸಾಮಗ್ರಿಗಳ ತೆಗೆದು ಹಾಕುವಂತೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು. ವಿಧಾನಸಭಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಡೀಸಿ ಪರಿಶೀಲನೆ ನಡೆಸಿದರು. ಎಡಿಎಂ ಕೆ.ವಿ. ಶ್ರುತಿ, ಚುನಾವಣಾ ಅಧಿಕಾರಿಗಳು, ನೋಡಲ್ ಅಧಿಕಾರಿಗಳು ಇದ್ದರು. ಸರ್ಕಾರಿ, ಸಾರ್ವಜನಿಕ, ಖಾಸಗಿ ಆಸ್ತಿಗಳ ಮೇಲಿನ ಜಾಹೀರಾತುಗಳ ಕ್ರಮವಾಗಿ 24, 48, 72 ಗಂಟೆಗಳ ಒಳಗೆ ತೆಗೆದು ಹಾಕಬೇಕು. ನಿಗದಿತ ಸಮಯದೊಳಗೆ ಇವುಗಳನ್ನು ತೆಗೆದು ಹಾಕಿ ವರದಿ ಸಲ್ಲಿಸಬೇಕು. ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪತ್ತೆಹಚ್ಚಲು, ತಡೆಗಟ್ಟಲು, ಚುನಾವಣಾ ವೆಚ್ಚಗಳ ಮೇಲ್ವಿಚಾರಣೆ ಮಾಡಲು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಫ್ಲೈಯಿಂಗ್ ಸ್ಕ್ವಾಡ್‌ಗಳು, ಮಾನನಷ್ಟ ನಿಗ್ರಹ ದಳ ಗಳು, ಸ್ಟ್ಯಾಟಿಕ್ ಸರ್ವೈಲೆನ್ಸ್ ತಂಡ ನಿಯೋಜಿಸಲಾ ಗಿದೆ. ಇದರ ಜೊತೆಗೆ ಸಹಾಯಕ ವೆಚ್ಚ ವೀಕ್ಷಕರ ನೇಮಿಸಲಾಗುವುದು, ಮತದಾರರ ಜಾಗೃತಿಗೆ ಸ್ವೀಪ್ ಚಟುವಟಿಕೆಗಳ ತ್ವರಿತಗೊಳಿಸಲಾಗುವುದು. ಹಸಿರು ಸಂಹಿತೆ ಅನುಸರಿಸಿ ಚುನಾವಣೆ ನಡೆಸಲು ಮಾದರಿ ವ್ಯವಸ್ಥೆ ರಚಿಸಲು ಜಿಲ್ಲಾಧಿಕಾರಿ ನಿರ್ದೇಶಿಸಿದರು.

ಕೇರಳ ವಿಧಾನಸಭಾ ಚುನಾವಣೆ ಸಿದ್ಧತೆ: ವಿವಿಧ ನೋಡಲ್ ಅಧಿಕಾರಿಗಳ ಸಭೆ



ಕಾಸರಗೋಡು: ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆಯಲ್ಲಿ ಕೇರಳ ವಿಧಾನ ಸಭಾ ಚುನಾವಣೆಗೆ ಸಂಬಂಧಿಸಿದ ವಿವಿಧ ನೋಡಲ್ ಅಧಿಕಾರಿಗಳ ಸಭೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ನಡೆಯಿತು.

ಚುನಾವಣಾ ನಿಯಂತ್ರಣ ಕೊಠಡಿ ಚಟುವಟಿಕೆ ತ್ವರಿತಗೊಳಿಸಲು, ಸ್ವೀಪ್ ನೇತೃತ್ವ ನಡೆಸಲಾಗುತ್ತಿರುವ ಜಾಗೃತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಚುನಾವಣೆಯಲ್ಲಿ ಹಸಿರು ನೀತಿ ಸಂಹಿತೆ ಅನುಸರಿಸುವ ಸಂಬಂಧ ಜಾಗೃತಿಗೆ ವಿವಿಧ ಪೋಸ್ಟರ್‌ಗಳು, ವಿಡಿಯೋಗಳ ತಯಾರಿಸಲು, ಪ್ರಸಾರಮಾಡಲು ಜಿಲ್ಲಾಧಿಕಾರಿ ಗಳು ಸೂಚಿಸಿದರು. ಚುನಾವಣೆಗೆ ಸಂಬಂಧಿಸಿದ ವಿವಿಧ ಸಮಿತಿಗಳ ರಚಿಸಿ ಕಾರ್ಯಗತಗೊಳಿಸಲು ಅವರು ನಿರ್ದೇಶಿಸಿದರು. ಜಿಲ್ಲೆಯಲ್ಲಿ ಸ್ಟ್ಯಾಟಿಕ್ ಸರ್ವೈಲೆನ್ಸ್ ತಂಡ, ಆ್ಯಂಟಿ ಫೇಸ್‌ಮೆಂಟ್ ಸ್ಕ್ವಾಡ್ ಕಾರ್ಯನಿರ್ವಹಿಸಲು ಪ್ರಾರಂಭಿಸಿವೆ. ಮಾದರಿ ನೀತಿ ಸಂಹಿತೆ ಅನುಷ್ಠಾನ ಖಚಿತಪಡಿಸಿಕೊಳ್ಳಲು 55 ವಾಹನ ಸ್ಟ್ಯಾಟಿಕ್ ಸರ್ವೈಲೆನ್ಸ್ ತಂಡಗಳಿಗೆ, ಐದು ವಾಹನಗಳನ್ನು ಆ್ಯಂಟಿ ಫೇಸ್‌ಮೆಂಟ್ ಸ್ಕ್ವಾಡ್‌ಗೆ ಹಂಚಿಕೆ ಮಾಡಲಾಗಿದೆ. ಈ ತಂಡ ಜಿಲ್ಲೆಯಲ್ಲಿ ಸಕ್ರಿಯಗೊಳಿಸಲಾಗಿದೆ.

ಎಡಿಎಂ ಕೆ.ವಿ. ಶ್ರುತಿ, ಎಲ್‌ಎಸ್‌ಜಿಡಿ ಜೆಡಿ ಜೇಸನ್ ಮ್ಯಾಥ್ಯೂ, ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್ ವಿಶೇಷ ಅಧಿಕಾರಿ ವಿ.ಚಂದ್ರನ್, ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ, ವಿಶೇಷ ಶಾಖೆ ಡಿವೈಎಸ್‌ಪಿ ಎಂ.ಸುನೀಲ್ ಕುಮಾರ್, ಎಲ್‌ಎಸ್‌ಜಿ ಆಂತರಿಕ ವಿಜಿಲೆನ್ಸ್ ಅಧಿಕಾರಿ ಟಿ.ಟಿ. ಸುರೇಂದ್ರನ್, ಜಿಲ್ಲಾ ಸಾಮಾಜಿಕ ನ್ಯಾಯ ಅಧಿಕಾರಿ ಎಂ.ಅಬ್ದುಲ್ಲ, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ತರಬೇತಿ ನೋಡಲ್ ಅಧಿಕಾರಿ ಕೆ.ಬಿ.ರಾಮು, ಸೂಟ್ ವಿಭಾಗ ಹಿರಿಯ ಸೂಪರಿಂಟೆಂಡೆಂಟ್ ವಿ.ಶ್ರೀಕುಮಾರ್, ಕಲೆಕ್ಟರೇಟ್ ತಪಾಸಣೆ, ಲೆಕ್ಕ ಪರಿಶೋಧನಾ ವಿಭಾಗದ ಹಿರಿಯ ಸೂಪರಿಂಟೆಂಡೆಂಟ್ ಕೆ.ರಮೇಶನ್, ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ಕೆ. ರತೀಶ್ ಕುಮಾರ್, ಶುಚಿತ್ವ ಮಿಷನ್ ಜಿಲ್ಲಾ ಸಂಯೋಜಕ ಪಿ.ಜಯನ್ ಮತ್ತಿತರರಿದ್ದರು.

ಮತದಾನ ಹಬ್ಬಕ್ಕೆ ಕಾಸರಗೋಡು ಸಜ್ಜು: ಇಂದು ಸ್ವೀಪ್ ಲೋಗೋ ಬಿಡುಗಡೆ

ಕಾಸರಗೋಡು: ಜಿಲ್ಲಾಡಳಿತವು ವಿಧಾನ ಸಭಾ ಚುನಾವಣೆ ಉತ್ಸಾಹವನ್ನು ಮತದಾರರಲ್ಲಿ ಹರಡಲು ವ್ಯಾಪಕ ಪ್ರಚಾರ ಕಾರ್ಯಕ್ರಮ ನಡೆಸುತ್ತಿದೆ. ಸ್ವೀಪ್ (ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ) ಆಯೋಜಿಸಿರುವ ಜಿಲ್ಲಾ ಮಟ್ಟದ ಪ್ರಚಾರ ಕಾರ್ಯಕ್ರಮವಾದ ವೋಟಾಯನಂ – 2026 ಮಾ.17ರಂದು ಪ್ರಾರಂಭವಾಗಲಿದೆ.

ಬೆಳಿಗ್ಗೆ 11 ಗಂಟೆಗೆ ವಿದ್ಯಾನಗರ ಕಲೆಕ್ಟರೇಟ್ ಕಾಂಪೌಂಡ್‌ನಲ್ಲಿ ಸ್ವೀಪ್‌ನ ಅಧಿಕೃತ ಲೋಗೋ ಬಿಡುಗಡೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಗಲಿದ್ದು, ಕಾಸರಗೋಡು ಡೀಸಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಲಿದ್ದಾರೆ.

ಮಾ.18:ಚಿತ್ರಕಲಾ ತರಬೇತಿ

ಮಾ.18 ರಂದು ಬೆಳಗ್ಗೆ 10 ಗಂಟೆಗೆ ಕಲೆಕ್ಟರೇಟ್‌ನಲ್ಲಿ ವಿಶೇಷವಾಗಿ ಸಿದ್ಧಪಡಿಸಲಾದ ಕ್ಯಾನ್ವಾಸ್‌ನಲ್ಲಿ ಚಿತ್ರಕಲಾ ತರಬೇತಿ ಆಯೋಜಿಸಲಾಗುವುದು. ಇದಾದ ನಂತರ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಮತ್ತು ಸಹಾಯಕ ಸದಸ್ಯರಿಗೆ ಮೆಹಂದಿ ಉತ್ಸವ ನಡೆಯಲಿದೆ. ಕರಾವಳಿ ಪ್ರದೇಶಗಳು ಸಹ ಚುನಾವಣಾ ಸಂಭ್ರಮದಲ್ಲಿ ಭಾಗಿಯಾಗಲಿವೆ.

ಮಾ.22ರಂದು ಸಂಜೆ 4 ಕ್ಕೆ ತೃಕ್ಕರೀಪ್ಪುರದ ವಲಿಯಪರಂಬ ಬೀಚ್‌ನಲ್ಲಿ ಗಾಳಿಪಟ ತಯಾರಿಕೆ, ಗಾಳಿಪಟ ಹಾರಾಟ ಜರಗಲಿದೆ.

> **ವಿವಿಧ ಕಾರ್ಯಕ್ರಮ**
>
> ಯುವಜನರಲ್ಲಿ ಚುನಾವಣೆಗಳ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿರುವುದನ್ನು ಪರಿಗಣಿಸಿ ಎಲ್ಲಾ ಮತದಾರರನ್ನು ಮತಗಟ್ಟೆಗೆ ಕರೆತರುವ ಉದ್ದೇಶದಿಂದ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮತದಾನ, ಹಾಡು ಪ್ರಚಾರ ವ್ಯಾನ್

ಮಾ.23 ರಂದು ಪಳ್ಳಿಕೆರೆ ಬೀಚ್‌ನಲ್ಲಿ ಮರಳು ಶಿಲ್ಪಗಳು ಪೂರ್ಣಗೊಳ್ಳಲಿವೆ. ಇದರೊಂದಿಗೆ ಮತದಾನ, ಹಾಡು ಪ್ರಚಾರ ವ್ಯಾನ್ ಮಾ.23ರಿಂದ ಏ.4ರ ವರೆಗೆ ಜಿಲ್ಲೆ 5 ವಿಧಾನ ಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಲಿದೆ. ಅಭಿಯಾನದಲ್ಲಿ ಜಾನಪದ ಕಲೆ, ಕ್ರೀಡೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.

ಮಾ.29: ಫುಟ್ಬಾಲ್ ಸ್ಪರ್ಧೆ

ಮಾ.29 ರಂದು ಅಪರಾಹ್ನ 3 ಗಂಟೆಗೆ ಪಳ್ಳಿಕೆರೆ ಬೀಚ್‌ನಲ್ಲಿ ಜಿಲ್ಲಾ ಮಟ್ಟದ ಫುಟ್ಬಾಲ್ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಚಿತ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ಏ.4 ರಂದು ಅಪರಾಹ್ನ 3 ಗಂಟೆಗೆ ಮ್ಯಾರಥಾನ್ ಓಟ ಜರಗಲಿದೆ ಎಂದು ಜಿಲ್ಲಾ ನೋಡಲ್ ಅಧಿಕಾರಿಯಾದ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ತಿಳಿಸಿದ್ದಾರೆ.

ಮಂಜೇಶ್ವರದಲ್ಲಿ ಪರಶುರಾಮ್ ಎಕ್ಸ್‌ಪ್ರೆಸ್ ರೈಲು ನಿಲುಗಡೆ: ಸುರೇಂದ್ರನ್‌ಗೆ ಅಭಿನಂದನೆ



ಮಂಜೇಶ್ವರ: ಪರಶುರಾಮ್ ರೈಲಿಗೆ ಮಂಜೇಶ್ವರದಲ್ಲಿ ಮೊದಲ ನಿಲುಗಡೆಗೆ ಸೋಮವಾರ ಬೆಳಿಗ್ಗೆ ಮಂಜೇಶ್ವರ ರೈಲು ನಿಲ್ದಾಣದಲ್ಲಿ ಸ್ವಾಗತ ನೀಡಲಾಯಿತು.

ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಹರಿಶ್ಚಂದ್ರ ಮಂಜೇಶ್ವರ, ಪ್ರಶಾಂತ್ ಕುಮಾರ್, ರವಿ ಎಂ.ಕೆ. ಕೋಳ್ಯೂರು, ರಾಮಕೃಷ್ಣ ಭಟ್, ಜಗದೀಶ್, ಭಾಸ್ಕರ ಬಿ.ಎಂ. ಮೊದಲಾದವರು ಸ್ವಾಗತಿಸಿದರು. ಕೆ.ಸುರೇಂದ್ರನ್ ರಿಗೆ ಅಭಿನಂದನೆ ಸಲ್ಲಿಸಿ ಘೋಷಣೆ ಮಾಡಲಾಯಿತು

ಕೆ.ಸುರೇಂದ್ರನ್ ಕೇಂದ್ರ ರೈಲ್ವೆ ಸಚಿವರಲ್ಲಿ ವಿನಂತಿ ಮೇರೆಗೆ ಪರಶುರಾಮ್ ಎಕ್ಸ್‌ಪ್ರೆಸ್ ರೈಲು ಮಂಜೇಶ್ವರ ನಿಲುಗಡೆಗೆ ಅನುಮತಿ ದೊರಕಿದ್ದು ಸುರೇಂದ್ರನ್ ಅವರ ಶ್ರಮಕ್ಕೆ ಮಂಜೇಶ್ವರ ಜನತೆ ಅಭಿನಂದನೆ ಸಲ್ಲಿಸಿದ್ದಾರೆ.

ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ ಬಿ.ಎಂ., ಜನಕೀಯ ಹೋರಟ ಸಮಿತಿ ಮಂಜೇಶ್ವರ, ಎಬಿವಿಪಿ, ಕೆ.ಸುರೇಂದ್ರನ್‌ಗೆ ಕೃತಜ್ಞತೆ ಸಲ್ಲಿಸಿದೆ.



ವಿಧಾನಸಭಾ ಚುನಾವಣೆ ಪೂರ್ವಭಾವಿಯಾಗಿ ಕೇಂದ್ರ ಸೇನೆ ಮತ್ತು ಕೇರಳ ಪೊಲೀಸರು ಕಾಸರಗೋಡು ಪೊಲೀಸ್ ಠಾಣೆ ವ್ಯಾಪ್ತಿಯ ಮೀಪುಗುರಿಯಿಂದ ಕಾಸರಗೋಡು ಹೊಸ ಬಸ್‌ನಿಲ್ದಾಣ ಮೂಲಕ ಕೆಎಸ್‌ಆರ್‌ಟಿಸಿ ವರೆಗೆ ಪಥ ಸಂಚಲನ ನಡೆಸಿದರು.

ಸಮಾನ ಮನಸ್ಸು, ಒಗ್ಗಟ್ಟಿನ ದುಡಿಮೆಯು ನಾಡಿನ ಅಭಿವೃದ್ಧಿಗೆ ದ್ಯೋತಕ: ಮಹೇಶ್



ಬದಿಯಡ್ಕ: ಯುವಕರ ಸೃಜನಾತ್ಮಕತೆ ಹಾಗೂ ಉತ್ಸಾಹವು ನಾಡಿನ ಅಭಿವೃದ್ಧಿಗೆ ಅತಿ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಚುಕ್ಕಿನಡ್ಕದ ಷಣ್ಮುಖ ಕ್ಲಬ್‌ನ ಸದಸ್ಯರ ಸಮುವಸದೊಳಗಿರುವ ಸಮಾನ ಮನಸ್ಸು ಹಾಗೂ ಒಗ್ಗಟ್ಟಿನ ದುಡಿಮೆ ನಾಡಿನ ಅಭಿವೃದ್ಧಿಗೆ ದ್ಯೋತಕವಾಗಿರಲಿ ಎಂದು ಕಾಸರಗೋಡು ಬ್ಲಾಕ್ ಪಂಚಾಯತ್ ಸದಸ್ಯ ಮಹೇಶ್ ವಳಕ್ಕುಂಜ ಹೇಳಿದ್ದಾರೆ.

ಕ್ಲಬ್‌ನ ನೂತನ ವರ್ಷದ ಸಮುವಸವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಷಣ್ಮುಖ ಕ್ಲಬ್ ಮುಂದೆ ಕೂಡಾ ಉತ್ತಮ ಕೆಲಸಗಳನ್ನು ಮಾಡಿ ಸಮಾಜಕ್ಕೆ ಮಾದರಿಯಾಗಿ ಉತ್ತಮ ಸಂಘಟನೆಯಾಗಿ ಬೆಳೆಯಲಿ ಎಂದು ಶುಭಹಾರೈಸಿದರು.

ಚುಕ್ಕಿನಡ್ಕ ಶ್ರೀ ಅಯ್ಯಪ್ಪ ಭಜನಾ ಮಂದಿರದ ಪ್ರಧಾನ ಗುರುಸ್ವಾಮಿ ಕುಂಞಿಕಣ್ಣ ಗುರುಸ್ವಾಮಿ ದೀಪ ಪ್ರಜ್ವಲನೆಗೈದು ಕಾರ್ಯಕ್ರಮ ಉದ್ಘಾಟಿಸಿದರು. ಗುರುಸ್ವಾಮಿ ಮಧುಸೂದನ ಚುಕ್ಕಿನಡ್ಕ ಶುಭಕೋರಿದರು. ಕ್ಲಬ್‌ನ ಅಧ್ಯಕ್ಷ ಉದಯ ಚುಕ್ಕಿನಡ್ಕ ಅಧ್ಯಕ್ಷತೆ ವಹಿಸಿದ್ದರು. ಸುಬ್ರಹ್ಮಣ್ಯ ಸಿ.ಎಚ್. ಸ್ವಾಗತಿಸಿ, ರಂಜಿತ್ ಚುಕ್ಕಿನಡ್ಕ ವಂದಿಸಿದರು. ಕ್ಲಬ್‌ನ ಕಾರ್ಯದರ್ಶಿ ವಿನೀತ್ ಸಿ.ಎಚ್. ಹಾಗೂ ಸದಸ್ಯರು ಉಪಸ್ಥಿತರಿದ್ದರು.

> **ಮಾದರಿ ಸಂಘಟನೆ ಆಗಿ ಬೆಳೆಯಲಿ**
>
> ಕಳೆದ 16 ವರ್ಷಗಳಿಂದ ಚುಕ್ಕಿನಡ್ಕ ಪರಿಸರದಲ್ಲಿ ಸಾಮಾಜಿಕ ಕಳಕಳಿಯಿಂದ ಕಾರ್ಯಾಚರಿಸುತ್ತಿರುವ ಷಣ್ಮುಖ ಕ್ಲಬ್ ಮುಂದೆ ಕೂಡಾ ಉತ್ತಮ ಕೆಲಸಗಳಿಂದ ಸಮಾಜಕ್ಕೆ ಮಾದರಿ ಸಂಘಟನೆಯಾಗಿ ಬೆಳೆಯಲಿ.
>
> • ಮಹೇಶ್ ವಳಕ್ಕುಂಜ

ಶ್ರೀ ವಾಣಿ ವಿಜಯ ಎಯುಪಿ ಶಾಲೆ: ಆಯುರ್ವೇದ ವೈದ್ಯಕೀಯ ಶಿಬಿರ



ಮಂಜೇಶ್ವರ: ಮಿತ್ರವೃಂದ ಲೈಬ್ರರಿ ಮತ್ತು ವಾಚನಾಲಯ, ಕಣಚ್ಚೂರು ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ನಾಟೆಕಲ್ಲು ಇವುಗಳ ವತಿಯಿಂದ ಆಯುರ್ವೇದ ವೈದ್ಯಕೀಯ ಉಚಿತ ಶಿಬಿರವು ಭಾನುವಾರ ಕೊಡ್ಲಮೊಗರು ಅಡೇಕಳಕಟ್ಟೆ ಶ್ರೀ ವಾಣಿ ವಿಜಯ ಎಯುಪಿ ಶಾಲೆಯಲ್ಲಿ ಜರಗಿತು.

ಶಿಬಿರವನ್ನು ಉದ್ಘಾಟಿಸಿದ ಕೇರಳ ತುಳು ಅಕಾಡೆಮಿ ಅಧ್ಯಕ್ಷ ಕೆ.ಆರ್.ಜಯಾನಂದ ಮಾತನಾಡಿ, ಆಧುನಿಕ ಯುಗದಲ್ಲಿ ಆಯುರ್ವೇದ ಚಿಕಿತ್ಸೆಯು ಜಗತ್ತಿನ ಅನಿವಾರ್ಯವಾಗಿದೆ. ಪರಂಪರಾಗತವಾಗಿ ಬಂದ ಹಳ್ಳಿಯ ಚಿಕಿತ್ಸಾ ಪದ್ಧತಿಯಲ್ಲಿ ಯಾವುದೇ ಅಡ್ಡ ಪರಿಣಾಮವಿರುವುದಿಲ್ಲ. ಈ ಚಿಕಿತ್ಸೆಯು ಜನರ ಉತ್ತಮ ಆರೋಗ್ಯಕ್ಕೆ ಪೂರಕವಾಗಿದೆ ಎಂದರು. ತುಳು ನಾಡಿನ ಹಳ್ಳಿಮದ್ದುಗಳನ್ನು, ಚಿಕಿತ್ಸಾ ವಿಧಾನಗಳನ್ನು ಪೋಷಿಸಲು ನಾವೆಲ್ಲರೂ ಶ್ರಮಿಸಬೇಕು ಎಂದು ಹೇಳಿದರು.

ಲೈಬ್ರರಿ ಅಧ್ಯಕ್ಷ ಹಾಗೂ ವರ್ಕಾಡಿ ಗ್ರಾ.ಪಂ. ಸದಸ್ಯ ಗೋಪಾಲಕೃಷ್ಣ ಪಜ್ವ ಅಧ್ಯಕ್ಷತೆ ವಹಿಸಿದ್ದರು. ದೈಗೋಳಿ ಶ್ರೀ ಸತ್ಯಸಾಯಿ ಆಶ್ರಮದ ಮುಖ್ಯಸ್ಥ ಡಾ. ಉದಯಕುಮಾರ್ ನೂಜಿ, ಗ್ರಾ. ಪಂ. ಸದಸ್ಯೆ ಗೀತಾ ಸಾಮಾನಿ, ಮಂಜೇಶ್ವರ ತಾಲೂಕು ಲೈಬ್ರರಿ ಸಮಿತಿ ಕಾರ್ಯದರ್ಶಿ ಡಿ.ಕಮಲಾಕ್ಷ, ಕೇರಳ ತುಳು ಅಕಾಡೆಮಿ ಸದಸ್ಯೆಯರಾದ ಭಾರತಿ ಎಸ್., ಕೃಷ್ಣವೇಣಿ, ನಿವೃತ್ತ ಮುಖ್ಯೋಪಾಧ್ಯಾಯ ಭಾಸ್ಕರ ಶೆಟ್ಟಿಗಾರ್, ಕೊಡ್ಲಮೊಗರು ಸೇವಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಮೋಹನ ಬಿ., ಸಮಾಜ ಸೇವಕ ಮೊಹಮ್ಮದ್ ಕಾಂತಮಜಲ್ ಹಾಗೂ ಕಣಚೂರು ಆಸ್ಪತ್ರೆ ವೈದ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಲೈಬ್ರರಿ ಕಾರ್ಯದರ್ಶಿ ಪ್ರದೀಪ್ ಕುಮಾರ್ ಬಿ. ಸ್ವಾಗತಿಸಿ, ಲೈಬ್ರರಿ ಸದಸ್ಯ ಜಮಾಲುದ್ದೀನ್ ಎನ್. ನಿರೂಪಿಸಿದರು.

ಚಿಗುರುಪಾದೆ 'ಜೈ ಹನುಮಾನ್' ಫ್ರೆಂಡ್ಸ್ ಕ್ಲಬ್‌ನ ವಾರ್ಷಿಕೋತ್ಸವ



ಮಂಜೇಶ್ವರ: ಜೈ ಹನುಮಾನ್ ಫ್ರೆಂಡ್ಸ್ ಕ್ಲಬ್ ಹನುಮಾನ್ ನಗರ ಚಿಗುರುಪಾದೆ ಇದರ ವಾರ್ಷಿಕೋತ್ಸವವು ಬ್ರಹ್ಮಶ್ರೀ ಮೊಗೇರ ಹಾಗೂ ಪರಿವಾರ ಕ್ಷೇತ್ರ ಚಿಗುರುಪಾದೆ ಇದರ ವಾರ್ಷಿಕ ನೇಮದ ಸಂದರ್ಭ ಜರಗಿತು. ಇದರಂಗವಾಗಿ ನಡೆದ ಸಭಾ ಕಾರ್ಯಕ್ರಮದಲ್ಲಿ ತೊಟ್ಟೆತ್ತೋಡಿ ವಾಣೀವಿಲಾಸ ಕಿ.ಪ್ರಾ.ಶಾಲೆ ಪ್ರಬಂಧಕ ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅಧ್ಯಕ್ಷತೆ ವಹಿಸಿದ್ದರು.

ಅತಿಥಿಗಳಾಗಿ ಜಗದೀಶ್ ಶೆಟ್ಟಿ ಎಲಿಯಾಣ, ಶರೀಫ್ ಚಿನಾಲ, ಶಾಲಿನಿ ಬಿ.ಶೆಟ್ಟಿ ವಸಂತ ಭಟ್ ತೊಟ್ಟೆತ್ತೋಡಿ. ಟಿ.ಡಿ.ಸದಾಶಿವ ರಾವ್ ಚಿಗುರುಪಾದೆ, ರಾಜಾರಾಮ ರಾವ್ ಚಿಗುರುಪಾದೆ, ರಾಜೇಶ್ವರಿ ಎಸ್. ಚಿಗುರುಪಾದೆ, ರಮೇಶ್ ಶೆಟ್ಟಿ ಕುಳಬೈಲು, ನಾರಾಯಣ ಚಿನಾಲ, ಸುಜಾತ, ಶಂಕರ ಸಿ. ಮತ್ತಿತರರಿದ್ದರು. ಲಕ್ಷ್ಮೀಶ ಭಟ್ ಸ್ವಾಗತಿಸಿ, ರವೀಂದ್ರ ಭಂಡಾರಿ ವಂದಿಸಿದರು.

ಈ ಸಂದರ್ಭ ಲಾಂಛನ ಬಿಡುಗಡೆ, ಸಾಧಕರಿಗೆ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸ್ಥಳೀಯ ಪ್ರತಿಭೆಗಳಿಂದ ನೃತ್ಯ ವೈಭವ ಜರಗಿತು.

ಕುಂಡಂಗುಳಿಯಲ್ಲಿ ಎನ್‌ಡಿಎ ಉದುಮ ಕ್ಷೇತ್ರ ಸಮಿತಿಯಿಂದ ಬೃಹತ್ ಸಮಾವೇಶ | ವಿ.ಕೆ.ಸಜೀವನ್ ಉದ್ಘಾಟನೆ

ಎಡ–ಐಕ್ಯರಂಗ ವಿರುದ್ಧ ಪರ್ಯಾಯ ಸರಕಾರ ರಚಿಸಲು ಬಿಜೆಪಿ ಸ್ಪರ್ಧೆ



ಕಾಸರಗೋಡು: ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಈ ಬಾರಿ ಕೇರಳದ ವಿಧಾನಸಭಾ ಚುನಾವಣೆಯಲ್ಲಿ ಎಡ ಮತ್ತು ಐಕ್ಯರಂಗ ಒಕ್ಕೂಟಗಳ ವಿರುದ್ಧ ಪರ್ಯಾಯ ಸರಕಾರ ರಚಿಸಲು ಸ್ಪರ್ಧಿಸುತ್ತಿದೆ ಎಂದು ಬಿಜೆಪಿ ರಾಜ್ಯ ಸೆಲ್ ಸಂಯೋಜಕ ವಿ.ಕೆ.ಸಜೀವನ್ ಹೇಳಿದ್ದಾರೆ. ಉದುಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವಾರು ಜ್ವಲಂತ ಸಮಸ್ಯೆಗಳನ್ನು ಉಲ್ಲೇಖಿಸಿ ಕುಂಡಂಗುಳಿಯಲ್ಲಿ ಎನ್‌ಡಿಎ ಉದುಮ ಕ್ಷೇತ್ರ ಸಮಿತಿ ಆಯೋಜಿಸಿದ್ದ ಬೃಹತ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಎಡ ಮತ್ತು ಐಕ್ಯರಂಗಗಳು ಮತಗಳಿಕೆಗೆ ಮತೀಯವಾದವನ್ನು ಬೆಂಬಲಿಸುತ್ತಿವೆ. ದೇಶ ವಿರೋಧಿಸುವವರ ಮತಗಳು ಎನ್‌ಡಿಎ ರಂಗಕ್ಕೆ ಅಗತ್ಯವಿಲ್ಲ. ಕೇರಳದಲ್ಲಿ ರಾಷ್ಟ್ರೀಯ ಹೆದ್ದಾರಿಯ ಅಭಿವೃದ್ಧಿಗೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ಅಲ್ಪ ಹಣವನ್ನು ಮಾತ್ರ ರಾಜ್ಯ ಸರಕಾರ ನೀಡಿದೆ. ಹೆದ್ದಾರಿ ನಿರ್ಮಾಣಕ್ಕೆ ಹಣ ಸಂಪೂರ್ಣ ವಿನಿಯೋಗಿಸಿರುವುದು ಕೇಂದ್ರ ಸರಕಾರವಾಗಿದೆ. ಅದರ ಶ್ರೇಯಸ್ಸು ನರೇಂದ್ರ ಮೋದಿ ಸರಕಾರಕ್ಕೆ ಸಲ್ಲಬೇಕು ಎಂದರು.

ರಾಷ್ಟ್ರೀಯ ಹೆದ್ದಾರಿ ಸಾಂಕೇತಿಕವಾಗಿ ಉದ್ಘಾಟಿಸಿದ ಉದುಮ ಶಾಸಕ ಸಿ.ಎಚ್.ಕುಂಞಂಬು, ತಮ್ಮ ಮಂಡಲದ ಮೂಲಕ ಹಾದುಹೋಗುವ ಮಲೆಗಾಡು ಹೆದ್ದಾರಿ ಪೂರ್ಣಗೊಳಿಸಿ ಉದ್ಘಾಟಿಸಲು ಸಿದ್ಧರಾಗಬೇಕಿತ್ತು ಎಂದು ನುಡಿದರು. ಯುದ್ಧದ ಮಧ್ಯೆ ಅನೇಕ ದೇಶಗಳಲ್ಲಿ ಇಂಧನ ಬೆಲೆಗಳು ಹೆಚ್ಚಿದ್ದರೂ, ಏರಿಕೆ ಮಾಡದ ಏಕೈಕ ದೇಶ ಭಾರತ. 100 ದಿನಗಳವರೆಗೆ ಬಳಸಲು ಇಂಧನ ನಿಕ್ಷೇಪ ಹೊಂದಿರುವ ಏಕೈಕ ದೇಶವೂ ಭಾರತವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮನುಲಾಲ್ ಮೇಲತ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಬಾಬುರಾಜ್, ಕಾರ್ಯದರ್ಶಿಗಳಾದ ಮಹೇಶ್ ಗೋಪಾಲ್, ಕೆ.ಟಿ. ಪುರುಷೋತ್ತಮನ್, ಮಂಡಲ ಪ್ರಧಾನ ಕಾರ್ಯದರ್ಶಿ ಗಳಾದ ಪ್ರದೀಪ್ ಎಂ. ಕೂಟಕ್ಕಣಿ, ಎ.ಎಂ.ಮುರಳೀಧರನ್, ಶಶಿ ಅಮ್ಮಂಗೋಡು, ಜಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಮುಳಿಯಾರು ಮಂಡಲ ಅಧ್ಯಕ್ಷ ದಿಲೀಪ್ ಪಳ್ಳಂಜಿ ಸ್ವಾಗತಿಸಿ, ಉದುಮ ಮಂಡಲ ಅಧ್ಯಕ್ಷೆ ಶೈನಿ ಮೋಳ್ ವಂದಿಸಿದರು.

> **ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಬೇಕು**
>
> ಕೇರಳವನ್ನು ಪರ್ಯಾಯವಾಗಿ ಆಳಿದ ಎರಡೂ ರಂಗಗಳು ಪೊಳ್ಳು ಭರವಸೆ ನೀಡುವುದು ಬಿಟ್ಟರೆ, ಮೂಲಭೂತ ಸಮಸ್ಯೆ ಪರಿಹರಿಸಲು ಮುಂದಾಗುತ್ತಿಲ್ಲ. ಉದುಮ ಕ್ಷೇತ್ರದ ಮಲೆಗಾಡು ಪ್ರದೇಶಗಳಲ್ಲಿ ವನ್ಯಜೀವಿಗಳು ದಾಳಿ ನಡೆಸುತ್ತಿವೆ. ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರೆತ ಮತ್ತು ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕೇಂದ್ರವು ಜಾರಿಗೆ ತಂದ ಯೋಜನೆ ಕೇರಳದಲ್ಲಿ ಜಾರಿಗೆ ತರಬೇಕಾದರೆ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಬೇಕು.
>
> • ವಿ.ಕೆ.ಸಜೀವನ್

ಸುತ್ತ ಮುತ್ತ

ಇಂದು ವಿಶ್ವ ಗ್ರಾಹಕರ ದಿನಾಚರಣೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕ ಸಂಘಟನೆಗಳ ಒಕ್ಕೂಟ ದ.ಕ. ಜಿಲ್ಲೆ, ಮಂಗಳೂರು ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ದ.ಕ. ಜಿಲ್ಲೆ, ಮಂಗಳೂರು ಜಿಲ್ಲಾ ಗ್ರಾಹಕರ ವ್ಯಾಜ್ಯ ವಿಲೇವಾರಿ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ ಮಾರ್ಚ್ 17 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಡಾ. ರಾಧಾಕೃಷ್ಣ ಹಾಲ್‌ನಲ್ಲಿ ನಡೆಯಲಿದೆ. ಜಿಲ್ಲಾ ಗ್ರಾಹಕರ ವ್ಯಾಜ್ಯ ವಿಲೇವಾರಿ ಆಯೋಗದ ಅಧ್ಯಕ್ಷ ಸೋಮಶೇಖರಪ್ಪ ಕೆ.ಎಚ್. ಉದ್ಘಾಟಿಸಲಿದ್ದು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅಧ್ಯಕ್ಷತೆ ವಹಿಸಲಿದ್ದಾರೆ.

ಚರಂತಿಪೇಟೆ ದೈವಸ್ಥಾನದಲ್ಲಿ ದೈವಗಳ ನೇಮ

ಮುಲ್ಕಿ: ಚರಂತಿಪೇಟೆ ಕೋಟಿಕೊಪ್ಪಲ ಶ್ರೀ ಬಬ್ಬುಸ್ವಾಮಿ ದೈವಸ್ಥಾನದಲ್ಲಿ 23ನೇ ವರ್ಷದ ಬಬ್ಬುಸ್ವಾಮಿ ಮತ್ತು ಪರಿವಾರ ದೈವಗಳ ನೇಮ ನಡೆಯಿತು. ಮಾ.14ಕ್ಕೆ ಮಧ್ಯಾಹ್ನ ಚಪ್ಪರ ಮಹೂರ್ತ, ಮಹಾ ಅನ್ನ ಸಂತರ್ಪಣೆ, ರಾತ್ರಿ ಭಂಡಾರ ಇಳಿದು ಶ್ರೀ ಬಬ್ಬುಸ್ವಾಮಿ, ತನ್ನಿಮಾನಿಗೆ ದೈವಗಳ ನೇಮ ನಡೆಯಿತು. ಮಾ.15ಕ್ಕೆ ಸಂಜೆ ಚಾಮುಂಡಿ, ಗುಳಿಗ, ಧೂಮಾವತಿ, ಮತ್ತು ಬಂಟ ದೈವಗಳ ನೇಮ ನಡೆಯಿತು. ಈ ಸಂದರ್ಭ ಮಧ್ಯಸ್ಥ ಗೋಪಿನಾಥ ಪಡಂಗ, ಟ್ರಸ್ಟ್ ಅಧ್ಯಕ್ಷ ಯದೀಶ್ ಅಮೀನ್ ದೈವಸ್ಥಾನ ಸಮಿತಿ ಅಧ್ಯಕ್ಷ ಅಶೋಕ್, ಉಪಾಧ್ಯಕ್ಷ ಶಶಿಕಾಂತ್, ರಮೇಶ್ ಅಮೀನ್ ಕೊಕ್ಕರಕಲ್, ಮೋಹನ್ ಸುವರ್ಣ, ಕೋಟಿಕೊಪ್ಪಲ ಶ್ರೀ ಬಬ್ಬು ಸ್ವಾಮಿ ದೈವಸ್ಥಾನ ಸೇವಾ ಟ್ರಸ್ಟ್, ಕೋಟೆ ಕೊಪ್ಪಲ ಫ್ರೆಂಡ್ಸ್, ಮಹಿಳಾ ಮಂಡಳಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಾ.19ರಿಂದ ಅಶ್ವತ್ಥಪುರದಲ್ಲಿ ಶ್ರೀ ರಾಮನವಮಿ

ಮೂಡುಬಿದಿರೆ: ಅಶ್ವತ್ಥಪುರ ಶ್ರೀ ಸೀತಾರಾಮಚಂದ್ರ ದೇವಸ್ಥಾನದಲ್ಲಿ ಮಾ.19ರಿಂದ 29ರ ವರೆಗೆ ವಾರ್ಷಿಕ ಜಾತ್ರೆ ಶ್ರೀ ರಾಮನವಮಿ ಮಹೋತ್ಸವ ನಡೆಯಲಿದೆ. ಚಾಂದ್ರಮಾನ ಯುಗಾದಿ ಮಾ.19ರಂದು



ಬೆಳಿಗ್ಗೆ ಧ್ವಜಾರೋಹಣ ನಡೆಯಲಿದೆ. ಮಾ.27ರಂದು ಮಧ್ಯಾಹ್ನ 12.06 ಗಂಟೆಗೆ ಶ್ರೀ ರಾಮ ಜನ್ಮೋತ್ಸವ, ರಾತ್ರಿ ಪುಷ್ಪರಥೋತ್ಸವ, 28ರಂದು ಬ್ರಹ್ಮರಥೋತ್ಸವ, ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಲಿದ್ದು ಮಾ.29ರಂದು ಧ್ವಜಾವರೋಹಣ, ಅವಭೃತೋತ್ಸವ ನಡೆಯಲಿದೆ. ಜಾತ್ರಾ ದಿನಗಳಲ್ಲಿ ವಿಶೇಷ ಪೂಜೆ, ಚತುರ್ವೇದ, ಸುಂದರಕಾಂಡ– ಪುರಾಣ ಪಾರಾಯಣ, ರಾತ್ರಿ ಭಜನೆ, ಪಲ್ಲಕ್ಕಿ– ವಾಹನೋತ್ಸವ ನಡೆಯಲಿದೆ. ಪ್ರತಿದಿನ ಸಂಜೆ 6.30ರಿಂದ ಶಿರಸಿ ನಾರಾಯಣ ದಾಸರಿಂದ ಕಥಾಕೀರ್ತನೆ, ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಮಾ.27ರಂದು ಸಂಜೆ 6ರಿಂದ ಬೆಂಗಳೂರಿನ ವಿದ್ವಾನ್ ಶ್ರೀ ತಿರುಮಲೈ ಶ್ರೀನಿವಾಸ ಬಳಗದವರಿಂದ ಭಕ್ತಿ ಸಂಗೀತ, 28ರಂದು ಸಂಜೆ 6.30ರಿಂದ ಮಂಗಳೂರು ಊರ್ವ ನಾಟ್ಯಾಲಯದ ವಿನಯಾ ರಾವ್ ಶಿಷ್ಯೆಯರಿಂದ ಭರತನಾಟ್ಯ ನಡೆಯಲಿದೆ.

ಮಹೋತ್ಸವದ ಪೂರ್ವಭಾವಿಯಾಗಿ ಮಾ.18ರಂದು ರಾತ್ರಿ ಕೋಠಿ (ಉಗ್ರಾಣ) ಪೂಜೆ ನಡೆಯಲಿದ್ದು, ಈ ಸಂದರ್ಭದಲ್ಲಿ ಸಂಪಿಗೆಯಲ್ಲಿರುವ ಶ್ರೀ ದೇವಳದ ಮಹಾದ್ವಾರಕ್ಕೆ ಲೆಕ್ಸಾ ಕಂಪನಿ ಸೇವಾರ್ಥವಾಗಿ ನಿರ್ಮಿಸಿಕೊಟ್ಟಿರುವ ಶಾಶ್ವತ ವಿದ್ಯುದ್ದೀಪಾಲಂಕಾರ ಉದ್ಘಾಟನೆ ಸಂಜೆ 6 ಗಂಟೆಗೆ ನಡೆಯಲಿದೆ ಎಂದು ಶ್ರೀ ದೇವಳದ ಆಡಳಿತ ಮಂಡಳಿ ಪ್ರಕಟನೆ ತಿಳಿಸಿದೆ.

ಇ-ಆಟೋ ರಿಕ್ಷಾ ಪರವಾನಗಿ: ಅರ್ಜಿ ಆಹ್ವಾನ

ಮಂಗಳೂರು: ಮಂಗಳೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ನೋಂದಣಿಗೊಂಡಿರುವ ಎಲ್ಲಾ ಇ-ಆಟೋ ರಿಕ್ಷಾದ ಮಾಲಕರು ಮಾರ್ಚ್ 31 ರೊಳಗಾಗಿ ಇ-ಆಟೋ ರಿಕ್ಷಾ ಪರವಾನಗಿಯನ್ನು ಪಡೆಯಲು ಅರ್ಜಿ ಸಲ್ಲಿಸಬೇಕು. ಈ ಕುರಿತು ಮಾಹಿತಿಗೆ ಮಂಗಳೂರು ಆರ್.ಟಿ.ಓ ಕಚೇರಿಯನ್ನು ಸಂಪರ್ಕಿಸುವಂತೆ ಉಪಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ (ಪ್ರಭಾರ) ಪ್ರಕಟಣೆ ತಿಳಿಸಿದೆ.

ಮಡಿಕೇರಿಯಲ್ಲಿ ರಾಜ್ಯಮಟ್ಟದ ವಿಶೇಷಚೇತನರ ಕ್ರೀಡಾಕೂಟ । 150ಕ್ಕೂ ಅಧಿಕ ಮಕ್ಕಳು ಭಾಗಿ

ಮಾನಸಿಕ, ದೈಹಿಕ ದೃಢತೆಗೆ ಕ್ರೀಡೆ ಸಹಕಾರಿ: ಬಿಂದುಮಣಿ



ಮಡಿಕೇರಿ: ಸುಂಟಿಕೊಪ್ಪದ ಸ್ವಸ್ಥ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರದ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ವಿಶೇಷ ಚೇತನರ ರಾಜ್ಯ ಮಟ್ಟದ ಕ್ರೀಡಾಕೂಟ ಸೋಮವಾರ ನಡೆಯಿತು.

ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು, ವಿಶೇಷಚೇತನರು ಯಾವುದೇ ಕಾರಣಕ್ಕೂ ವಿಚಲಿತರಾಗದೆ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಮತ್ತು ದೈಹಿಕವಾಗಿ ದೃಢತೆ ಕಾಣಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಯಾವುದೇ ಕ್ಷೇತ್ರದಲ್ಲಿ ಯಾರೇ ಆದರೂ ಸಹ ತಂಡವಾಗಿ ಕೆಲಸ ಮಾಡಿದಾಗ ಯಶಸ್ಸುಗಳಿಸಲು ಸಾಧ್ಯ. ಆ ದಿಸೆಯಲ್ಲಿ ಸುಂದರ ಬದುಕು ಹಾಗೂ ಆರೋಗ್ಯಯುತ ಜೀವನ ನಡೆಸಲು ಕ್ರೀಡೆ, ಸಾಹಿತ್ಯ, ಕಲೆ, ಬರವಣಿಗೆ ಹೀಗೆ ವಿವಿಧ ಚಟುವಟಿಕೆಯಲ್ಲಿ ತೊಡಗಿಸಿಕೊಂಡಾಗ ಕ್ರಿಯಾಶೀಲ ಹಾಗೂ ಸೃಜನಶೀಲವಾಗಿ ಬದುಕಬಹುದು ಎಂದರು.

ಕೂರ್ಗ್ ಫೌಂಡೇಶನ್ ಟ್ರಸ್ಟಿ ಗಂಗಾ ಚೆಂಗಪ್ಪ ಟಾಟಾ ಕಾಫಿ ಸಂಸ್ಥೆಯ ಜನರಲ್ ಮ್ಯಾನೇಜರ್ ಕೆ.ಜಿ. ರಾಜೀವ್, ಟಾಟಾ ಕಾಫಿ ಸಂಸ್ಥೆಯ ಉಪ ವ್ಯವಸ್ಥಾಪಕ ಬೋಪಯ್ಯ ಮಾತನಾಡಿದರು. ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ಲೋಕೇಶ್, ಜಿಲ್ಲಾ ಸರ್ಜನ್ ಡಾ.ನಂಜುಂಡಯ್ಯ, ಜಿಲ್ಲಾ ವಿಶೇಷ ಚೇತನರ ಅಧಿಕಾರಿ ಕೆ.ಜಿ. ವಿಮಲಾ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಇಎನ್‌ಟಿ ವಿಭಾಗದ ಮುಖ್ಯಸ್ಥೆ ಡಾ.ಶ್ವೇತಾ, ಟಾಟಾ ಕಾಫಿ ಸಂಸ್ಥೆಯ ವ್ಯವಸ್ಥಾಪಕ ಗೌತಮ್, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ವಿ.ಟಿ.ವಿಸ್ಮಯಿ, ಸ್ವಸ್ಥ ಸಂಸ್ಥೆಯ ವಿಶೇಷಚೇತನರ ಶಿಕ್ಷಕ ಬಿಜು ಇತರರು ಪಾಲ್ಗೊಂಡಿದ್ದರು. ಸ್ವಪ್ನಾ ಪ್ರಾರ್ಥಿಸಿದರೆ, ಸುಂಟಿಕೊಪ್ಪ ಸ್ವಸ್ಥ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರದ ನಿರ್ದೇಶಕಿ ಆರತಿ ಸೋಮಯ್ಯ ಸ್ವಾಗತಿಸಿದರು. ಚೋಕಿರ ಅನಿತಾ ಪ್ರವೀಣ್ ನಿರೂಪಿಸಿ, ವಂದಿಸಿದರು.

ಸಮಾರೋಪದಲ್ಲಿ ನಿವೃತ್ತ ಪ್ರಾಂಶುಪಾಲೆ ಡಾ. ಪುಷ್ಪಾ ಕುಟ್ಟಣ್ಣ ಅವರು ಮಾತನಾಡಿದರು. ಸಿ.ಟಿ. ಮುತ್ತಣ್ಣ ಡಾ.ಸಿ.ಕೆ.ಎನ್.ಚಂದ್ರು, ವಿಸ್ಮಯ ಚಕ್ರವರ್ತಿ ಹಾಗೂ ಉದ್ಯಮಿ ತಮ್ಮು ಪೂವಯ್ಯ ಅತಿಥಿಗಳಾಗಿ ಭಾಗವಹಿಸಿ ಬಹುಮಾನ ವಿತರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ಸ್ವಸ್ಥ ವಿದ್ಯಾರ್ಥಿಗಳಾದ ವೈ. ಎಂ.ದರ್ಶನ್, ಬಿ.ಎಂ.ಸಂಗೀತಾ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಬೋಧಿಸತ್ವ ಸಂಸ್ಥೆಯ ಅಧ್ಯಕ್ಷ ಕರ್ಮ ರಿಂಪೋಚೆ ಅವರು ಗಿಡಗಳನ್ನು ನೆಟ್ಟು ಪರಿಸರ ಜಾಗೃತಿ ಮೂಡಿಸಿದರು. ಕಾರ್ಯಕ್ರಮದಲ್ಲಿ ಟಾಟಾ ಕಾಫಿ ಸಿನಿಯರ್ ಜನರಲ್ ಮ್ಯಾನೇಜರ್ ಕೆ.ಜಿ.ರಾಜೀವ್, ಹಿರಿಯ ಕಾಫಿ ಬೆಳೆಗಾರರು ಮತ್ತು ಸಮಾಜ ಸೇವಕ ಬೋಸ್ ಮಂದಣ್ಣ, ಸ್ವಸ್ಥ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರದ ನಿರ್ವಾಹಕಿ ಐಶ್ವರ್ಯ ಬೋಪಯ್ಯ, ಶಿಕ್ಷಕರು, ಪೋಷಕರು, ಆರೋಗ್ಯ ಸಿಬ್ಬಂದಿಗಳು ಇತರರು ಹಾಜರಿದ್ದರು.

ಲವಲವಿಕೆಯಿಂದ ಭಾಗಿಯಾದ ವಿದ್ಯಾರ್ಥಿಗಳು

ಪಾಲಿಬೆಟ್ಟ, ಮಂಗಳೂರು, ಮಡಿಕೇರಿ, ಮಂಡ್ಯ, ಮೈಸೂರು, ಕೊಡಗು ಮತ್ತು ಬೈಲುಕುಪ್ಪೆಯ ಟಿಬೇಟಿಯನ್ ವಸತಿ ಶಾಲೆ ಸೇರಿದಂತೆ ಸುಮಾರು 8 ಶಾಲೆಯ 150ಕ್ಕೂ ಹೆಚ್ಚು ವಿಶೇಷ ಚೇತನ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದರು. 8ರಿಂದ 11 ವರ್ಷ, 12 ರಿಂದ 15 ವರ್ಷ, 16 ರಿಂದ 21 ವರ್ಷ, 22 ರಿಂದ 29 ವರ್ಷ ಹಾಗೂ 30 ವರ್ಷದಿಂದ ಮೇಲ್ಪಟ್ಟ ವಿಶೇಷಚೇತನರು 100 ಮೀಟರ್ ಓಟ, 200 ಮೀಟರ್ ಓಟ, ಶಾಟ್‌ಪುಟ್, ಲಾಂಗ್ ಜಂಪ್, ರಿಲೇ ಮತ್ತಿತರ ಕ್ರೀಡಾಕೂಟದಲ್ಲಿ ಲವಲವಿಕೆಯಿಂದ ಪಾಲ್ಗೊಂಡಿದ್ದರು.

ಮಂಗಳೂರಿನ ಸಾನಿಧ್ಯ ಸಂಸ್ಥೆ ದ್ವಿತೀಯ ರನ್ನರ್ ಅಪ್

ಕ್ರೀಡಾಕೂಟದಲ್ಲಿ ಮಂಡ್ಯ ಜಿಲ್ಲೆಯ ಪ್ರೇರಣಾ ಸಂಸ್ಥೆ ಸಮಗ್ರ ಚಾಂಪಿಯನ್ ಅಗಿ ಹೊರಹೊಮ್ಮಿದೆ. ಆತಿಥೇಯ, ಸುಂಟಿಕೊಪ್ಪದ ಸ್ವಸ್ಥ ಸಂಸ್ಥೆ ಪ್ರಥಮ ರನ್ನರ್ ಅಪ್ ಹಾಗೂ ಮಂಗಳೂರಿನ ಸಾನಿಧ್ಯ ಸಂಸ್ಥೆ ದ್ವಿತೀಯ ರನ್ನರ್ ಅಪ್‌ಗೆ ತೃಪ್ತಿಪಟ್ಟುಕೊಂಡಿವೆ.

ಮಂಗಳೂರು ವಿವಿಯಲ್ಲಿ ಮಹಿಳಾ ದಿನಾಚರಣೆ: ಸಾಧಕರಿಬ್ಬರಿಗೆ ಸನ್ಮಾನ



ಕೊಣಾಜೆ: ಇಂದಿನ ಆಧುನಿಕತೆಯಲ್ಲೂ ಮಹಿಳೆಗೆ ಸಮಾಜದಲ್ಲಿ ಹಲವಾರು ಅವಕಾಶಗಳು ಇವೆಯಾದರೂ ಅವಳೆದುರು ಅನೇಕ ಸವಾಲುಗಳೂ ಇವೆ. ಮಹಿಳೆಯು ಶಿಕ್ಷಣ, ಜ್ಞಾನ, ಕೌಶಲ್ಯ ಮೊದಲಾವುಗಳ ಮೂಲಕ ಸಮಾಜದ ಧ್ವನಿಯಾಗಬೇಕು ಎಂದು ಬರಹಗಾರ್ತಿ, ಕವಿಯತ್ರಿ ಮಮತಾ ಅರಸಿಕೆರೆ ಅವರು ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ ಸೋಮವಾರ ಮಂಗಳ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರು ವಿವಿಯ ವಿಶ್ರಾಂತ ಪ್ರಾಧ್ಯಾಪಕಿ ಪ್ರೊ. ಸಮತಾ ದೇಶ್ಮನೆ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಇಂದಿನದ್ದು ಎಐ ಯುಗ, ಸಾಮಾಜಿಕ ಜಾಲತಾಣ ಸಕ್ರಿಯವಾಗಿದೆ. ತಂತ್ರಜ್ಞಾನದ ಅತಿರೇಕದಿಂದ ನಮ್ಮತನವನ್ನು ಕಳೆದುಕೊಳ್ಳುತ್ತಿದ್ದೇವೆ. ಒತ್ತಡಗಳು ಹೆಚ್ಚಾಗುತ್ತಿವೆ ಎಂದರು.

ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಸಮಾರಂಭದಲ್ಲಿ 35 ಸಾವಿರಕ್ಕೂ ಹೆಚ್ಚು ಮೃತದೇಹಗಳ ಅಂತ್ಯಕ್ರಿಯೆ ನಡೆಸಿದ ಉಡುಪಿಯ ವನಜ ಪೂಜಾರ್ತಿ ಹಾಗೂ ಜನಸ್ನೇಹಿ ಅಭಿವೃದ್ಧಿ ಅಧಿಕಾರಿ ವತ್ಸಲಾ ಕುಮಾರಿ ಅವರನ್ನು ಸನ್ಮಾನಿಸಲಾಯಿತು. ಪ್ರಾಧ್ಯಾಪಕರಾದ ಡಾ.ಮೋನಿಕಾ ಸದಾನಂದ ಉಪಸ್ಥಿತರಿದ್ದರು. ಡಾ.ಸಬಿತಾ, ರೋಶನಿ ಅವರು ಪ್ರಶಸ್ತಿ ಪತ್ರ ವಾಚಿಸಿದರು. ಮಹಿಳಾ ಅಧ್ಯಯನ ಕೇಂದ್ರದ ಪ್ರೊ.ತ್ರಿವೇಣಿ ಅವರು ಸ್ವಾಗತಿಸಿ, ಡೆಪ್ಯೂಟಿ ರಿಜಿಸ್ಟ್ರಾರ್ ಲಲಿತಾ ವಂದಿಸಿದರು. ಕಾವ್ಯ ನಿರೂಪಿಸಿದರು.

ಪುಸ್ತಕಗಳು ಸತ್ಯ, ವಿವೇಕವನ್ನು ಹುಟ್ಟುಹಾಕುತ್ತವೆ: ಕಲ್ಲೂರು ನಾಗೇಶ್



ಮೂಡುಬಿದಿರೆ: ಪುಸ್ತಕಗಳು ಜ್ಞಾನದ ಜತೆಗೆ ಸತ್ಯ, ವಿವೇಕವನ್ನೂ ಹುಟ್ಟು ಹಾಕುತ್ತವೆ. ತಂತ್ರಜ್ಞಾನ ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಇದರ ಮೂಲಕ ಜ್ಞಾನ ಹೆಚ್ಚಿನ ವರಿಗೆ ತಲುಪಲು ಸಾಧ್ಯವಾಗಿದೆ. ವೃತ್ತಿ ಬದುಕಿನ ಅನುಭವಗಳನ್ನು ಕೃತಿ, ಅಕ್ಷರ ರೂಪದಲ್ಲಿ ಸಮಾಜಕ್ಕೆ ಧಾರೆ ಎರೆಯುವ ಪ್ರಯತ್ನ ನಿರಂತರ ನಡೆಯುತ್ತಲೇ ಇರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ಆಕೃತಿ ಆಶಯ ಪ್ರಕಾಶನದ ಕಲ್ಲೂರು ನಾಗೇಶ್ ಹೇಳಿದರು.

ಅವರು ಭಾನುವಾರ ಸಮಾಜ ಮಂದಿರದಲ್ಲಿ ಸಾಹಿತ್ಯ ಕೃತಿಗಳ ಲೋಕಾರ್ಪಣಾ ಸಮಾರಂಭ ಉದ್ಘಾಟಿಸಿ, ಸಾಹಿತ್ಯ ಕೇವಲ ಸಾಹಿತಿಗಳಿಗೆ ಸಂಬಂಧಿಸಿದ್ದಲ್ಲ, ಅದನ್ನು ಕೃತಿಯಾಗಿ ರೂಪಿಸುವಲ್ಲಿ ಲೇಖಕರು ಮಾತ್ರವಲ್ಲ, ಪ್ರಕಾಶಕ ಬಳಗದ ಪರಿಶ್ರಮದ ಕುರಿತೂ ಗಮನ ಹರಿಸಬೇಕು ಎಂದರು.

ಕೃತಿಗಳ ಲೋಕಾರ್ಪಣೆ

ವಿಶ್ರಾಂತ ಮುಖ್ಯ ಶಿಕ್ಷಕಿ ಪದ್ಮಾವತಿ ಪಂಡಿತ್ ಮೂಡುಬಿದಿರೆ ಅವರ ಚೊಚ್ಚಲ ಕಥಾ ಸಂಕಲನ 'ಕಿಟಕಿಯಲ್ಲಿ ಕಂಡ ಕಥೆಗಳು' ಕೃತಿಯನ್ನು ಹಿರಿಯ ನ್ಯಾಯವಾದಿ ಕೆ. ರಮಾನಂದ ಪಂಡಿತ್, ಶ್ರೀಕೃಷ್ಣ ಅಹಿತಾನಲ ಸಾಲಿಗ್ರಾಮ ಉಡುಪಿ ಅವರ 'ಹರಿದಾಸ ಸಾಹಿತ್ಯ ಮತ್ತು ಇತರ ಧಾರ್ಮಿಕ ವಿಚಾರಗಳು' ಕೃತಿಯನ್ನು ಗುಂಡ್ಯಡ್ಕ ಶ್ರೀನಿವಾಸಪುರದ ಕರಾಡ ಬ್ರಾಹ್ಮಣ ಸುಧಾರಕ ಸಂಘದ ಕಾರ್ಯಾಧ್ಯಕ್ಷ ರಾಮಚಂದ್ರ ಭಟ್ ನಾಟೇಕರ್ ಲೋಕಾರ್ಪಣೆಗೊಳಿಸಿದರು.

ಮುಖ್ಯ ಅತಿಥಿಯಾಗಿದ್ದ ಕೋಟ ವಿವೇಕ ಆಂಗ್ಲ ಮಾಧ್ಯಮ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀಪತಿ ಹೇರ್ಳೆ ಭಾಗವಹಿಸಿ, ಮಾತನಾಡಿದರು.

ಮೂಡುಬಿದಿರೆ ಶ್ರೀ ಮಹಾವೀರ ಕಾಲೇಜಿನ ಕನ್ನಡ ಉಪನ್ಯಾಸಕಿ ಡಾ. ಚಂದನಾ ಕೆ.ಎಸ್. ಹಾಗೂ ಕೆನರಾ ಇಂಜಿನಿಯರಿಂಗ್ ಕಾಲೇಜಿನ ಕನ್ನಡ ಉಪನ್ಯಾಸಕ ಎಂ. ಗಣೇಶ್ ಕಾಮತ್ ಕೃತಿ, ಕೃತಿಕಾರರ ಕುರಿತು ವಿವರಿಸಿದರು. ಕೃತಿಕಾರರು ಕೃತಿ ಪ್ರಕಟಣೆಗೆ ಕಾರಣರಾದವರನ್ನು ಕೃತಜ್ಞತಾ ಪೂರ್ವಕ ಸ್ಮರಿಸಿಕೊಂಡರು. ಇಬ್ಬರೂ ಲೇಖಕರನ್ನು ದಂಪತಿ ಸಹಿತ ಗೌರವಿಸಲಾಯಿತು. ಕೃತಿ ಪ್ರಕಟಣೆಯಲ್ಲಿ ಸಹಕಾರಿಗಳಾದವರನ್ನು ಗೌರವಿಸಲಾಯಿತು. ಲೇಖಕಿ ಪದ್ಮಾವತಿ ಪಂಡಿತ್ ಸ್ವಾಗತಿಸಿ, ಚಿತ್ರಾಕ್ಷಿ ಕೆ.ಎಸ್., ಮಹೇಶ್ ಕುಮಾರ್ ಡಿ.ಕರ್ಕೆರಾ ನಿರೂಪಿಸಿದರು. ದೃತಿ ಪಂಡಿತ್ ಕಾರ್ಯಕ್ರಮ ವಂದಿಸಿದರು.

ಮಾತೃ ಭಾಷೆಯನ್ನು ಪ್ರೀತಿಸಿದಾಗ ಬದುಕು ಸುಂದರ: ಯು. ರಾಮರಾವ್



ಮಂಗಳೂರು: ಮಾತೃ ಭಾಷೆ ಪೂಜನೀಯ. ಅದನ್ನು ಪ್ರೀತಿಸುತ್ತಾ ಬದುಕುವುದು ಸಂತಸ ಮತ್ತು ನೆಮ್ಮದಿ ನೀಡುತ್ತದೆ ಎಂದು ರೇಡಿಯೋ ಕೇಳುಗರ ಸಂಘದ ಸ್ಥಾಪಕಾಧ್ಯಕ್ಷ ಹಾಗೂ ಮಂಗಳೂರು ಪ್ರೊಡಕ್ಟಿವಿಟಿ ಕೌನ್ಸಿಲ್ ಅಧ್ಯಕ್ಷ ಯು. ರಾಮರಾವ್ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು – ಮಂಗಳೂರು ತಾಲೂಕು ಘಟಕ ಅವರ ಮನೆಗೆ ಭೇಟಿ ನೀಡಿ ಗೌರವಿಸಿದ ಸಂದರ್ಭದಲ್ಲಿ ಅವರು ಮಾತನಾಡಿ, ಆಂಟಿ , ಅಂಕಲ್ ಬೇಡ. ಅತ್ತೆ , ಮಾವ , ಚಿಕ್ಕಮ್ಮ , ಚಿಕ್ಕಪ್ಪ, ಅಣ್ಣ, ತಮ್ಮ , ಭಾವ ಎನ್ನುವ ಭಾವದಲ್ಲಿ ಹೃದಯದ ಪ್ರೀತಿ ಅರಳುತ್ತದೆ ಎಂದರು.

ರೇಡಿಯೋ ಕೇಳುಗರ ಸಂಘದ ಉದ್ಘಾಟನೆ ಮಾಡಿದ ಅಮೃತ ಸೋಮೇಶ್ವರರು ಆಕಾಶವಾಣಿಯು ನಮ್ಮ ಮಿತ್ರ, ತತ್ವಬೋಧಕ, ಮತ್ತು ಮಾರ್ಗದರ್ಶಕ ಎಂದಿದ್ದರು. ಸಂಘದ ಕಾರ್ಯಕ್ರಮಕ್ಕೆ ಶಿವರಾಮ ಕಾರಂತರು, ಕು.ಶಿ. ಹರಿದಾಸ ಭಟ್ಟರು ಮುಂತಾದ ಖ್ಯಾತನಾಮರು ಬಂದಿದ್ದನ್ನು ನೆನಪಿಸಿಕೊಂಡರು. ತಮಿಳು ಭಾಷೆಯನ್ನೋದಿದ ರಾಮರಾಯರು ಇಲ್ಲಿನ ಭಾಷೆ, ಸಂಸ್ಕೃತಿ ಪ್ರೀತಿಸುತ್ತಾ ರೇಡಿಯೋ ಕೇಳುಗರ ಸಂಘವನ್ನು ಕಟ್ಟಿ ಬೆಳೆಸಿದ ಪರಿಯನ್ನು ಕಾರ್ಯದರ್ಶಿ ಡಾ. ಮುರಲೀಮೋಹನ್ ಚೂಂತಾರು ಕೊಂಡಾಡಿದರು.

ಮುಖ್ಯ ಅತಿಥಿಯಾಗಿ ಹೊಸದಿಗಂತದ ಸ್ಥಾನೀಯ ಸಂಪಾದಕ ಪ್ರಕಾಶ್ ಇಳಂತಿಲ, ಆಕಾಶವಾಣಿ ಪದ ಮತ್ತು ಇತಿಹಾಸದ ಬಗ್ಗೆ ವಿವರಿಸಿ, ರಾಮರಾಯರಂತಹ ಎಲೆ ಮರೆಯ ಸಾಧಕರನ್ನು ಗುರುತಿಸಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ, ಇವರ ಕುಟುಂಬ ದೊಡ್ಡ ದಾನದ ಪರಂಪರೆ ಹೊಂದಿದೆ ಎಂದು ನುಡಿದರು.

ಘಟಕದ ಅಧ್ಯಕ್ಷ ಡಾ. ಮಂಜುನಾಥ ರೇವಣ್ಕರ್, ರಾಮರಾವ್ ಹಾಗೂ ಸಾವಿತ್ರಿ ರಾಮರಾವ್ ದಂಪತಿಯನ್ನು ಸನ್ಮಾನಿಸಿ, ಮಾತುಗಳನ್ನಾಡಿದರು. ಕೋಶಾಧಿಕಾರಿ ಎನ್. ಸುಬ್ರಾಯ ಭಟ್ ಸ್ವಾಗತಿಸಿ, ಕಾರ್ಯದರ್ಶಿ ಗಣೇಶ್ ಪ್ರಸಾದ್ ಜಿ. ವಂದಿಸಿದರು. ಜಿಲ್ಲಾ ಸಮಿತಿಯ ಸನತ್ ಕುಮಾರ್ ಜೈನ್ , ಸಮಿತಿ ಸದಸ್ಯ ರವೀಂದ್ರನಾಥ್ ಕೆ.ಪಿ., ಸುನಂದಾ ಪೈಲೂರು ಮುಂತಾದವರಿದ್ದರು.

ಕುಟುಂಬದ ಏಳಿಗೆಗಾಗಿ ಮಹಿಳೆಯರ ಕೊಡುಗೆ ಅಪಾರ: ಹರೀಶ್ ಕುಮಾರ್



ಮಂಗಳೂರು: ಅಂತರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ (ಮೆಸ್ಕಾಂ) ವತಿಯಿಂದ ಮಾ.14ರಂದು ಕಾವೂರಿನ ಕವಿಪ್ರನಿನಿ ನೌಕರರ ಸಭಾಭವನದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮೆಸ್ಕಾಂ ತಾಂತ್ರಿಕ ನಿರ್ದೇಶಕ ಹರೀಶ್ ಕುಮಾರ್ ವಿ. ಕಾರ್ಯಕ್ರಮ ಉದ್ಘಾಟಿಸಿ, ಕುಟುಂಬ, ಸಮಾಜ, ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಕೊಡುಗೆ, ಆಕೆ ವಹಿಸುವ ಪಾತ್ರ ಮಹತ್ತರವಾದುದು. ಕುಟುಂಬದ ಏಳಿಗೆಗಾಗಿ ಆಕೆ ವಹಿಸುವ ಶ್ರಮ, ಮಾಡುವ ತ್ಯಾಗ ಅಪಾರ ಎಂದರು.

ಮೆಸ್ಕಾಂನ ಪ್ರಗತಿಯಲ್ಲಿ ಮಹಿಳಾ ಉದ್ಯೋಗಿಗಳು ನೀಡುತ್ತಿರುವ ಕೊಡುಗೆ ಮಹತ್ತರ ಎಂದವರು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಮುಖ್ಯ ಆರ್ಥಿಕ ಅಧಿಕಾರಿ ಮುರಳೀಧರ ನಾಯಕ್ ಮಾತನಾಡಿ, ಮಹಿಳೆಗೆ ನಮ್ಮ ದೇಶ, ಸಮಾಜ ವಿಶೇಷ ಸ್ಥಾನಮಾನ ನೀಡಿದೆ. ಮಹಿಳೆಯರು ಎಷ್ಟೇ ಒತ್ತಡಗಳಿದ್ದರೂ ಅದನ್ನು ಸಮರ್ಥವಾಗಿ ನಿರ್ವಹಿಸಿ ಕೌಟುಂಬಿಕವಾಗಿ, ಔದ್ಯೋಗಿಕವಾಗಿ ತನ್ನ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾರೆ ಎಂದರು.

ಮೆಸ್ಕಾಂ ಸಂಸ್ಥೆ ಮಹಿಳಾ ಉದ್ಯೋಗಿಗಳ ಹಿತ ರಕ್ಷಣೆಗೆ ಸದಾ ಆದ್ಯತೆ ನೀಡುತ್ತಾ ಬಂದಿದೆ ಎಂದವರು ಹೇಳಿದರು.

ಮೆಸ್ಕಾಂ ಅಧೀಕ್ಷಕ ಇಂಜಿನಿಯರ್ ಭಾರತಿ, ಸುಜಾತಾ, ಕೆಪಿಟಿಸಿಎಲ್ ಅಧೀಕ್ಷಕ ಇಂಜಿನಿಯರ್ ಚೈತನ್ಯ, ಕವಿಪ್ರನಿನಿ ನೌಕರರ ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಶಂಕರ್ ಪ್ರಕಾಶ್, ಲೋಹಿತ್, ಶ್ರೀನಿವಾಸಪ್ಪ, ನವೀನ್ ಕುಮಾರ್, ನಿತೇಶ್ ಉಪಸ್ಥಿತರಿದ್ದರು. ಮಹಿಳಾ ದಿನಾಚರಣೆ ಸಮಿತಿಯ ಸಂಚಾಲಕರು ಹಾಗೂ ಅಧೀಕ್ಷಕ ಇಂಜಿನಿಯರ್ ಲೀನಾ ಮರಿಯಾ ಲೋಬೊ ಸ್ವಾಗತಿಸಿ, ಸೀಮಾ ನಿರೂಪಿಸಿದರು. ವಿನಯ ವಂದಿಸಿದರು. ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಮನರಂಜನಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು.

ಬೆಸೆಂಟ್ ಸಂಧ್ಯಾ ಕಾಲೇಜಿನಲ್ಲಿ ರಕ್ತದಾನ ಶಿಬಿರ: ಒಟ್ಟು 51 ಯೂನಿಟ್ ರಕ್ತ ಸಂಗ್ರಹ



ಮಂಗಳೂರು: ನಗರದ ಬೆಸೆಂಟ್ ಸಂಧ್ಯಾ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘ ವತಿಯಿಂದ ಬೆಸೆಂಟ್ ಸಂಧ್ಯಾ ಕಾಲೇಜು ಮಂಗಳೂರು ಹಾಗೂ ಕಸ್ತೂರ್ಬಾ ಮೆಡಿಕಲ್ ಕಾಲೇಜು ಆಸ್ಪತ್ರೆ ಮಂಗಳೂರು ಸಹಯೋಗದೊಂದಿಗೆ ಬೆಸೆಂಟ್ ಸಂಧ್ಯಾ ಕಾಲೇಜು ಸಭಾಂಗಣದಲ್ಲಿ ಭಾನುವಾರ 31ನೇ ವರ್ಷದ ರಕ್ತದಾನ ಶಿಬಿರ ನಡೆಯಿತು.

ಉದ್ಘಾಟನಾ ಸಮಾರಂಭದಲ್ಲಿ ಕೆಎಂಸಿ ಆಸ್ಪತ್ರೆಯ ಡಾ. ವೈಭವಿ, ಬೆಸೆಂಟ್ ಸಂಧ್ಯಾ ಕಾಲೇಜಿನ ಸಂಯೋಜಕಿ ಲಲಿತಾ ಜಿ. ಮಲ್ಯ ಅತಿಥಿಯಾಗಿದ್ದರು. ರಾಷ್ಟ್ರೀಯ ಮಹಿಳಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಣೇಲ್ ಅಣ್ಣಪ್ಪ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಬೆಸೆಂಟ್ ಸಂಧ್ಯಾ ಕಾಲೇಜಿನ ಪ್ರಾಂಶುಪಾಲ ಡಾ. ಪರಶುರಾಮ ಮೂಲಗೆ, ಬೆಸೆಂಟ್ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ. ಪ್ರವೀಣ್‌ಕುಮಾರ್ ಕೆ.ಸಿ., ಹಳೆ ವಿದ್ಯಾರ್ಥಿ ಸಂಘದ ಸಲಹೆಗಾರ್ತಿ ಶ್ರೀವಿದ್ಯಾ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಆದಿತ್ಯ ಶೆಟ್ಟಿ, ಕಾರ್ಯದರ್ಶಿ ರಿತೇಶ್, ಕೋಶಾಽಕಾರಿ ನರೇಶ್ ಕಾಮತ್, ಮೋಹಿತ್ ಉಪಸ್ಥಿತರಿದ್ದರು. ಹಳೆ ವಿದ್ಯಾರ್ಥಿಗಳು, ಕಾಲೇಜು ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹಳೆ ವಿದ್ಯಾರ್ಥಿ ಸಂಘದ ಸಲಹೆಗಾರ್ತಿ ಶ್ರೀವಿದ್ಯಾ ಸ್ವಾಗತಿಸಿದರು. ಪ್ರಣೀತಾ ಕಾರ್ಯಕ್ರಮ ನಿರೂಪಿಸಿದರು. ಒಟ್ಟು 51 ಯೂನಿಟ್ ರಕ್ತ ಸಂಗ್ರಹ ಮಾಡಲಾಯಿತು.

ಮುಲ್ಕಿಯಲ್ಲಿ ರಸ್ತೆ ಬದಿಯಲ್ಲೇ ಹೊಂಡ: ಅಪಘಾತದ ಭೀತಿ

ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯ ಕೆ.ಎಸ್. ರಾವ್ ನಗರ ವಿಜಯಪುರ ಕಾಲನಿ ಬಸ್ ನಿಲ್ದಾಣದ ಮೊಬೈಲ್ ಅಂಗಡಿ ಬಳಿ ಕಳೆದ ಕೆಲ ದಿನಗಳಿಂದ ಕುಡಿಯುವ ನೀರಿನ ಪೈಪ್ ಲೈನ್ ದುರಸ್ತಿಪಡಿಸಲು ರಸ್ತೆ ಬದಿಯಲ್ಲಿ ಹೊಂಡ ತೋಡಿ ಮುಚ್ಚದೆ ತೆರೆದ ಸ್ಥಿತಿಯಲ್ಲಿ ಅಪಾಯಕಾರಿಯಾಗಿ ಪರಿಣಮಿಸಿದೆ. ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ದುರಸ್ತಿಪಡಿಸಲು ತೆರೆದ ಹೊಂಡದಲ್ಲಿ ಅನೇಕ ವಾಹನ ಸವಾರರು, ಪಾದಾಚಾರಿಗಳು ಬಿದ್ದು ಗಾಯಗೊಂಡು ಸಣ್ಣಪುಟ್ಟ ಅಪಘಾತಗಳು ಸಂಭವಿಸಿದೆ.

ಕುಡಿಯುವ ನೀರಿನ ಸಮಸ್ಯೆ

ಈ ಭಾಗದಲ್ಲಿ ಪೈಪ್‌ಲೈನ್ ಅಲ್ಲಲ್ಲಿ ಒಡೆದಿದ್ದು, ಈ ನಡುವೆ ಕುಡಿಯುವ ನೀರಿನ ಸಮಸ್ಯೆ ತಲೆದೋರಿ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಹೊಂಡ



ಮುಚ್ಚಲೂ ಆಗದೆ ದುರಸ್ತಿಪಡಿಸದೆ ತ್ರಿಶಂಕು ಸ್ಥಿತಿಯಲ್ಲಿ ಕಾಮಗಾರಿ ನಿಂತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ನಗರ ಪಂಚಾಯತ್ ಮುಖ್ಯಾಧಿಕಾರಿಗಳು ಸೂಕ್ತ ಗಮನಹರಿಸಿ ಈ ಭಾಗದಲ್ಲಿ ಪೈಪ್‌ಲೈನ್ ಕಾಮಗಾರಿ ತುರ್ತು ದುರಸ್ತಿ ಪಡಿಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ

ಬಂಗಾಡಿ ಕೊಲ್ಲಿ ಸೂರ್ಯ- ಚಂದ್ರ ಕಂಬಳಕ್ಕೆ ತೆರೆ

ಬೆಳ್ತಂಗಡಿ: ಬಂಗಾಡಿ ಕೊಲ್ಲಿಯ ನೇತ್ರಾವತಿ ನದಿ ಕಿನಾರೆಯಲ್ಲಿ ಸೂರ್ಯ-ಚಂದ್ರ ಜೋಡು ಕೆರೆ ಕಂಬಳ ಸಮಿತಿ, ರಾಜ್ಯ ಕಂಬಳ ಅಸೋಸಿಯೇಷನ್ ಹಾಗೂ ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಭಾಗಿತ್ವದಲ್ಲಿ ಭಾನುವಾರ ಜರಗಿದ 28ನೇ ವರ್ಷದ ಕೊಲ್ಲಿ ಕಂಬಳದ ಫಲಿತಾಂಶ ಪ್ರಕಟಿಸಲಾಗಿದೆ.

ಫಲಿತಾಂಶದ ವಿವರ

ಕನೆಹಲಗೆ ವಿಭಾಗದಲ್ಲಿ ಭಾಗವಹಿಸಿದ ಬೋಳಾರ ತ್ರಿಶಾಲ್ ಕೆ. ಪೂಜಾರಿ ಎ. ಮತ್ತು ಬಿ. ಕುಂಡೋಳಿ ಶ್ರೀ ದುರ್ಗಾ ನಿಲಯ ಸುಧೀರ್ ಪದ್ಮನಾಭ ಶೆಟ್ಟಿ, ಪೆರುವಾರು ಗುರುವಾಯನಕೆರೆ ವೈಭವ್ ಸೀತಾರಾಮ ಶೆಟ್ಟಿ ಈ ನಾಲ್ಕು ತಂಡದ ಕೋಣಗಳಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ಹಗ್ಗ ಹಿರಿಯ ವಿಭಾಗದಲ್ಲಿ 11 ಜತೆ ಕೋಣಗಳು ಭಾಗವಹಿಸಿದ್ದು, ಪ್ರಥಮ ಸ್ಥಾನವನ್ನು ಕೊಳಕ್ಕೆ ಇರ್ವತ್ತೂರು ಭಾಸ್ಕರ ಸುಬ್ಬಯ್ಯ ಕೋಟ್ಯಾನ್ (ಓಡಿಸಿದವರು ಕಕ್ಯಪದವು ಪೆಂಗಾಲ್ ಕೃತಿಕ್ ಗೌಡ), ದ್ವಿತೀಯ ಸ್ಥಾನವನ್ನು ನಂದಳಿಕೆ



ಶ್ರೀಕಾಂತ ಭಟ್ ಬಿ., ಓಡಿಸಿದವರು (ಬಂಬ್ರಾಣಬೈಲು ವಂದಿತ್ ಶೆಟ್ಟಿ), ಹಗ್ಗ ಕಿರಿಯ ವಿಭಾಗದಲ್ಲಿ 16 ಜತೆ ಕೋಣಗಳು ಭಾಗವಹಿಸಿದ್ದು, ಪ್ರಥಮ ಸ್ಥಾನವನ್ನು ಬೆಳವಾಯಿ ಪರೋಡಿ ಪುತ್ತಿಗೆಗುತ್ತು ನರಸಿಂಹ ಕೆ.ಶೆಟ್ಟಿ ಬಿ., (ಓಡಿಸಿದವರು ಮಾಳ ಆದಿಶ್ ಪೂಜಾರಿ), ದ್ವಿತೀಯ ಸ್ಥಾನವನ್ನು ಹಾಗೂ ಇವರದೇ ಎ ತಂಡದ ಕೋಣಗಳು (ಓಡಿಸಿದವರು: ಕಾವೂರು ದೋಟ ಸುದರ್ಶನ್) ಅಡ್ಡ ಹಲಗೆ ವಿಭಾಗದಲ್ಲಿ 7 ಜತೆ ಕೋಣಗಳು ಭಾಗವಹಿಸಿದ್ದು ಪ್ರಥಮ ಸ್ಥಾನವನ್ನು ಇರುವೈಲು ದೊಡ್ಡಗುತ್ತು ಜಗದೀಶ್ ಎಂ.ಶೆಟ್ಟಿ (ಓಡಿಸಿದವರು: ತೆಕ್ಕಟ್ಟೆ ಸುಧೀರ್ ದೇವಾಡಿಗ), ದ್ವಿತಿಯ ಸ್ಥಾನವನ್ನು ನಕ್ರೆ ಕೊರಪಲಕಟ್ಟೆ ಲವೀನಾ ಅಲ್ಮೇಡ ಎ, (ಓಡಿಸಿದವರು:ಭಟ್ಕಳ ಪಾಂಡು), ನೇಗಿಲು ಹಿರಿಯ ವಿಭಾಗದಲ್ಲಿ 17 ಜತೆ ಕೋಣಗಳು ಭಾಗವಹಿಸಿದ್ದು ಪ್ರಥಮ ಸ್ಥಾನವನ್ನು ಕಕ್ಯಪದವು ಪೆಂಗಾಲು ಬಾಬು ತನಿಯಪ್ಪ ಗೌಡ (ಓಡಿಸಿದವರು: ಕಕ್ಯಪದವು ಕೃತಿಕ್ ಗೌಡ), ದ್ವಿತೀಯ ಸ್ಥಾನವನ್ನು ಮಿಜಾರು ಕೊಂಡಿಬೆಟ್ಟು ಶರಣ್ ಪೂಜಾರಿ, (ಓಡಿಸಿದವರು:ಮಿಜಾರು ಅಶ್ವತಪುರ ಶ್ರೀನಿವಾಸ ಗೌಡ) ನೇಗಿಲು ಕಿರಿಯ ವಿಭಾಗದಲ್ಲಿ 34 ಜತೆ ಭಾಗವಹಿಸಿದ್ದು ಪ್ರಥಮ ಸ್ಥಾನವನ್ನು ಮುನಿಯಾಲು ಉದಯ್ ಕುಮಾರ್ ಶೆಟ್ಟಿ ಓಡಿಸಿದವರು: (ಕುಂದಬಾರಂದಡಿ ಮಾಸ್ತಿಕಟ್ಟೆ ಸ್ವರೂಪ್) ದ್ವಿತೀಯ ಸ್ಥಾನವನ್ನು ಮಡಂತ್ಯಾರು ಮಾಲಾಡಿ ಬರ್ನ ದಿನೇಶ್ ಶೆಟ್ಟಿ (ಓಡಿಸಿದವರು ಪಡುಸಾಂತೂರು ಪೃಥ್ವಿರಾಜ ಪೂಜಾರಿ) ಪಡೆದುಕೊಂಡರು.

ಮಾ.20ರಿಂದ 25ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ

ದೇಂದಡ್ಕ ಶ್ರೀ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ಮಾ.20ರಿಂದ 25 ರವರೆಗೆ ಅಷ್ಟಬಂಧ ಪ್ರತಿಷ್ಠಾ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿಗಳ ಅಮೃತ ಹಸ್ತದಲ್ಲಿ, ಪ್ರಧಾನ ಅನುವಂಶಿಕ ಅರ್ಚಕ ಪಿ. ಸುಬ್ರಹ್ಮಣ್ಯ ಭಟ್ ಉಪಸ್ಥಿತಿಯಲ್ಲಿ ನಡೆಯಲಿದೆ.

ಮಾ.20ಕ್ಕೆ ಬೆಳಿಗ್ಗೆ 9 ಗಂಟೆಗೆ ದೇವತಾ ಪ್ರಾರ್ಥನೆ, ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ಆಚಾರ್ಯ ವರಣ, ಮಾ. 21ಕ್ಕೆ ಬೆಳಿಗ್ಗೆ 8ರಿಂದ ಪುಣ್ಯಾಹ, ಆದ್ಯಗಣಯಾಗ, ಸಂಜೆ 5ರಿಂದ ಸಪ್ತ ಶುದ್ಧಿ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಪೂಜಾ ವಾಸ್ತು ಹೋಮ ವಾಸ್ತು ಬಲಿ, ಪ್ರಾಕಾರ ಬಲಿ, ಮಾ.22ಕ್ಕೆ ಬೆಳಿಗ್ಗೆ ಎಂಟರಿಂದ



ಮೃತ್ಯುಂಜಯ ಯಾಗ, ಗಣಪತಿ ಶಾಂತಿ ಸಂಜೆ 5ರಿಂದ ನಾಗದೇವರ ಸನ್ನಿಧಿಯಲ್ಲಿ ವಾಸ್ತು ಪ್ರಕ್ರಿಯೆ ಭದ್ರಕ ಮಂಡಲ ಪೂಜೆ ರಕ್ತೇಶ್ವರಿ ಸನ್ನಿಧಿಯಲ್ಲಿ ಕಲಶಾಭಿಷೇಕ, ಮಾ.23ಕ್ಕೆ ಬೆಳಿಗ್ಗೆ 8 ರಿಂದ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಬಿಂಬಶುದ್ಧಿ, ನವಗ್ರಹ ಯಾಗ ಶಾಂತಿ ಹೋಮ ಪ್ರಾಯಶ್ಚಿತ್ತ ಹೋಮ ಸಂಜೆ 5ರಿಂದ ದಿಶಾ ಹೋಮ ಧ್ವಜ ಕಲಶ, ಸಿರಿಗಳಿಗೆ ಕಲಶಾಭಿಷೇಕ, ಅಷ್ಟ ಬಂಧ ಪ್ರತಿಷ್ಠೆ ಮಾ. 24ಕ್ಕೆ ಬೆಳಿಗ್ಗೆ ಎಂಟರಿಂದ ತತ್ವ ಹೋಮ, ತತ್ವಕಲಶಾಭಿಷೇಕ, ಚಂಡಿಕಾಯಾಗ, ಗಣಪತಿ ಕಲಶಾಭಿಷೇಕ, ಮಧ್ಯಾಹ್ನ ಮಹಾ ಅನ್ನ ಸಂತರ್ಪಣೆ, ಸಂಜೆ 5ರಿಂದ ಬ್ರಹ್ಮಕಲಶಾಧಿವಾಸ, ಮಾ.25ಕ್ಕೆ ಬೆಳಿಗ್ಗೆ 8.30ರಿಂದ ಬ್ರಹ್ಮಕಲಶಾಭಿಷೇಕ ಪ್ರಾರಂಭ , ರುದ್ರ ಯಾಗ, ಮಹಾಪೂಜೆ ಪಲ್ಲಪೂಜೆ ಮಧ್ಯಾಹ್ನ 12:30 ರಿಂದ ಮಹಾ ಅನ್ನಸಂತರ್ಪಣೆ, ರಾತ್ರಿ 7ರಿಂದ ರಂಗ ಪೂಜೆ, ಪ್ರಸಾದ ವಿತರಣೆ ನಡೆಯಲಿದೆ. ಮಾ. 22ಕ್ಕೆ ಸಂಜೆ 3.30ಕ್ಕೆ 'ಹಸಿರು ವಾಣಿ ಹೊರೆ ಕಾಣಿಕೆ'ಯು ಕವತ್ತಾರು–ಪುತ್ತೂರು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಿಂದ ಹೊರಟು ಶ್ರೀ ಕ್ಷೇತ್ರಕ್ಕೆ ತಲುಪಲಿದೆ. ಮಾ. 20ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಸುತ್ತಮುತ್ತ

ಸಾಲಿಗ್ರಾಮ ದೇಗುಲಕ್ಕೆ ಆಯ್ಕೆ

ಕೋಟ: ಸಾಲಿಗ್ರಾಮ ಶ್ರೀಗುರುನರಸಿಂಹ ದೇವಳದ 2026–31ನೇ ಸಾಲಿನ ಆಡಳಿತ ಮಂಡಳಿಗೆ ಇಂದು ಮಾರ್ಚ್ 15ರಂದು ಚುನಾವಣೆ ನಡೆಯಿತು ಒಟ್ಟು ಆರು ಕ್ಷೇತ್ರಗಳಲ್ಲಿ ಕರ್ನಾಟಕೇತರ ಭಾರತದ ಇತರ ರಾಜ್ಯಗಳಲ್ಲಿ ಎಂ ಲಕ್ಷ್ಮೀನಾರಾಯಣ ಹೊಳ್ಳರು ಅವಿರೋಧ ಆಯ್ಕೆಯಾಗಿದ್ದು ಉಳಿದ ಐದು ಕ್ಷೇತ್ರಗಳಿಗೆ ಭಾನುವಾರ ಮತದಾನ ನಡೆಯಿತು ಒಟ್ಟು ಐದು ಕ್ಷೇತ್ರಗಳಿಗೆ 8ಜನ ಅಭ್ಯರ್ಥಿಗಳನ್ನು ಆಯ್ಕೆಯಲ್ಲಿ ಒಟ್ಟು 2,829 ಮತ ಚಲಾವಣೆಗೊಂಡಿದೆ.

ಉಡುಪಿ ಜಿಲ್ಲೆಯ ಉಳಿದ ಭಾಗಗಳು ಮತಕ್ಷೇತ್ರದಿಂದ ಬಿ., ಚಂದ್ರಶೇಖರ ನಾವಡ ಬೈಂದೂರು, ಬೆಂಗಳೂರು ಮತಕ್ಷೇತ್ರದಿಂದ ಶ್ರೀ ಜಿ. ಪ್ರಕಾಶ ಮಯ್ಯ, ದಕ್ಷಿಣ ಕನ್ನಡ ಜಿಲ್ಲೆಯ ಮತಕ್ಷೇತ್ರದಿಂದ ಶ್ರೀ ಪ್ರಕಾಶ ಕಾರಂತರು ಕರ್ನಾಟಕದ ಉಳಿದ ಭಾಗಗಳು ಮತಕ್ಷೇತ್ರದಿಂದ ಶ್ರೀ ಬಿ.ಜಿ. ಕೃಷ್ಣಮೂರ್ತಿ, ಸಾಲಿಗ್ರಾಮ ಮತಕ್ಷೇತ್ರದಿಂದ ಪ್ರಸನ್ನ ತುಂಗ, ಪರಶುರಾಮ ಭಟ್ಟ, ಕೆ. ತಾರಾನಾಥ ಹೊಳ್ಳ ಮತ್ತು ಚಂದ್ರಶೇಖರ ಉಪಾಧ್ಯಾ ಬಹುಮತದಿಂದ ಆಯ್ಕೆಯಾಗಿದ್ದಾರೆ.

ಸಿಎ ಫೌಂಡೇಶನ್, ಇಂಟರ್‌ಮಿಡಿಯೇಟ್: ವಿದ್ಯಾರ್ಥಿಗಳ ಸಾಧನೆ

ಕುಂದಾಪುರ: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ ಆಫ್ ಇಂಡಿಯ ನಡೆಸುವ ಸಿ.ಎ ಫೌಂಡೇಶನ್ ಹಾಗೂ ಸಿ.ಎ. ಇಂಟರ್



ಮೀಡಿಯೇಟ್ ಗ್ರೂಪ್ 1 ರ ಜನವರಿ 2026ರಲ್ಲಿ ನಡೆದ ಪರೀಕ್ಷೆಯಲ್ಲಿ ಕುಂದಾಪುರದ ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಾದ ಬಾಲಕೃಷ್ಣ ಭಟ್, ಇಂಚರಾ, ವಿಕಾಸ್, ಶಶಾಂಕ ಆರ್.ಭಟ್, ಸಂಜನಾ, ಬಿಂದುಶ್ರೀ, ಆಕಾಶ್ ಎಂ.ಎಂ. ಅವರು ಸಿ.ಎ. ಫೌಂಡೇಶನ್‌ನಲ್ಲಿ ಮತ್ತು ಪ್ರಜ್ವಲ್ ಎಸ್.ನಾಯಕ್ ಅವರು ಸಿ.ಎ. ಇಂಟರ್ ಮೀಡಿಯೇಟ್ ಗ್ರೂಪ್ 1 ರಲ್ಲಿ ಉತ್ತೀರ್ಣರಾಗುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ಇಂದು ವೃತ್ತಿ ದಿಕ್ಸೂಚಿ ಕೆರಿಯರ್ ಮೇಳ

ಉಡುಪಿ: ಕರ್ನಾಟಕ ಸರ್ಕಾರದ ಸಮಗ್ರ ಶಿಕ್ಷಣ ಇಲಾಖೆ ಹಾಗೂ ಉಡುಪಿ ಡಯಟ್ ವತಿಯಿಂದ ಹೈಸ್ಕೂಲ್ ಮತ್ತು ಪಿಯು ವಿದ್ಯಾರ್ಥಿಗಳಿಗಾಗಿ ವೃತ್ತಿ ದಿಕ್ಸೂಚಿ ಎಂಬ ಕೆರಿಯರ್ ಮೇಳವು ಮಾ.17ರ ಮಂಗಳವಾರ ನಗರದ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ನಡೆಯಲಿದೆ. ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಡೆಯುವ ಈ ಮೇಳದಲ್ಲಿ ವಿವಿಧ ವೃತ್ತಿಶಿಕ್ಷಣ ಕಾಲೇಜುಗಳು, ಬ್ಯಾಂಕುಗಳು ಮತ್ತು ಸರ್ಕಾರಿ ಇಲಾಖೆಗಳು ಭಾಗವಹಿಸಿ, ವಿದ್ಯಾರ್ಥಿವೇತನ ಹಾಗೂ ಶಿಕ್ಷಣ ಸಾಲಗಳ ಬಗ್ಗೆ ಮಾಹಿತಿ ನೀಡಲಿವೆ. ಭವಿಷ್ಯದ ವೃತ್ತಿ ಆಯ್ಕೆ ಕುರಿತು ತಜ್ಞರಿಂದ ತರಬೇತಿಯೂ ಲಭ್ಯವಿರಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಸಣ್ಣ ಉದ್ದಿಮೆಗಳಿಗೆ ಸಹಾಯಧನ: ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ ಪ್ರಸಕ್ತ ಸಾಲಿನ ಎಸ್‌ಎಫ್‌ಸಿ ಮುಕ್ತ ನಿಧಿಯ ಶೇ.7.25 ರ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮದಡಿ ಸಣ್ಣ ಉದ್ದಿಮೆಗೆ ಸಹಾಯಧನ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಮಾ. 23 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಪೌರಾಯುಕ್ತರು, ಉಡುಪಿ ನಗರಸಭೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

'ಇಂದಿರಾ' ಚಿತ್ತ

ಮಧ್ಯಾಹ್ನ ಊಟಕ್ಕೆ ಅನ್ನ ಸಾಂಬಾರು ಉಪ್ಪಿನಕಾಯಿ ಮಾಡುತ್ತಿದ್ದಾರೆ. ಅಡುಗೆ ಅನಿಲದ ಕೊರತೆಯಿಂದಾಗಿ ಮುಲ್ಕಿ ತಾಲೂಕು ವ್ಯಾಪ್ತಿಯ ಪಟ್ಟಣದಲ್ಲಿ ಕೆಲ ಹೋಟೆಲ್ ಗಳು ಮುಚ್ಚಲ್ಪಟ್ಟಿದೆ . ಮುಲ್ಕಿ ನಗರದ ಹೃದಯ ಭಾಗದ ಕಾರ್ನಾಡ್‌ನಲ್ಲಿ ಪ್ರಮುಖ ಎರಡು ಹೋಟೆಲ್ ಗಳು ಮುಚ್ಚಲ್ಪಟ್ಟಿದ್ದು ಗ್ರಾಹಕರ ಬಂದು ತಲೆಯ ಮೇಲೆ ಕೈ ಇಟ್ಟು ವಾಪಸ್ ತೆರಳುತ್ತಿದ್ದಾರೆ. ಕಾರ್ನಾಡ್ ಗಾಂಧಿ ಮೈದಾನದ ಬಳಿ ಒಂದು ಹೋಟೆಲ್ ಕಾರ್ಯಚರಿಸುತ್ತಿದ್ದು ಅದು ಕೂಡ ಇಂದು ನಾಳೆಯೋ ಕೊನೆಯ ಸ್ಥಿತಿ ಎದುರಿಸುತ್ತಿದೆ. ತಾಲೂಕು ವ್ಯಾಪ್ತಿಯ ಪ್ರಮುಖ ಕೇಂದ್ರಗಳಾದ ಕಿನ್ನಿಗೋಳಿ, ಹಳೆಯಂಗಡಿ, ಪಕ್ಷಿಕೆರೆ , ತೋಕೂರು ಹಾಗೂ ಮುಲ್ಕಿಯ ಕೊಲ್ನಾಡು ಕೈಗಾರಿಕಾ ಪ್ರದೇಶದಲ್ಲಿ ಮೊದಲಾದ ಕಡೆ ವಾಣಿಜ್ಯ ಅನಿಲ ಕೊರತೆ ಕಾಣುತ್ತಿದ್ದು, ಮುಂದಿನ ದಿನಗಳಲ್ಲಿ ವಾಣಿಜ್ಯ ಅಡುಗೆ ಅನಿಲದ ಸಮಸ್ಯೆ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆ ಇದೆ.

ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಯಶಸ್ವಿ | 20.92 ಕೋಟಿ ರೂ. ಪರಿಹಾರ ಘೋಷಣೆ

ಒಂದೇ ದಿನದಲ್ಲಿ ಇತ್ಯರ್ಥವಾಯಿತು 38,369 ಪ್ರಕರಣಗಳು

ಉಡುಪಿ: ಉಡುಪಿ ಜಿಲ್ಲೆಯಾದ್ಯಂತ ಶನಿವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ ದಾಖಲೆ ಪ್ರಮಾಣದ ಪ್ರಕರಣಗಳು ಇತ್ಯರ್ಥಗೊಂಡಿವೆ.

ಜಿಲ್ಲೆಯ ಉಡುಪಿ, ಕುಂದಾಪುರ, ಕಾರ್ಕಳ ಹಾಗೂ ಬೈಂದೂರಿನ ನ್ಯಾಯಾಲಯಗಳಲ್ಲಿ ನಡೆದ ಈ ಅದಾಲತ್‌ನಲ್ಲಿ ಒಂದೇ ದಿನ ಒಟ್ಟು 38,369 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಲಾಗಿದೆ.

ಬೃಹತ್ ಇತ್ಯರ್ಥದ ವಿವರಗಳು

ಇತ್ಯರ್ಥಗೊಂಡ ಪ್ರಕರಣಗಳಲ್ಲಿ 35,460 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿವೆ. ಉಳಿದಂತೆ 2,094 ಇತರೆ ಕ್ರಿಮಿನಲ್ ಪ್ರಕರಣಗಳು, 391 ಚೆಕ್ಕು ಅಮಾನ್ಯ ಪ್ರಕರಣಗಳು, 273 ಸಿವಿಲ್ ಪ್ರಕರಣಗಳು, 99 ಎಂ.ವಿ.ಸಿ ಪ್ರಕರಣಗಳು ಹಾಗೂ 33 ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳನ್ನು ಬಗೆಹರಿಸಲಾಗಿದೆ. ಇದಲ್ಲದೆ ಬ್ಯಾಂಕ್ ವಸೂಲಾತಿ, ಎಂ.ಎಂ.ಆರ್.ಡಿ ಪ್ರಕರಣಗಳು, ವಿದ್ಯುತ್ ಕಾಯ್ದೆ ಹಾಗೂ ಕಾರ್ಮಿಕ



ವ್ಯಾಜ್ಯಗಳಿಗೂ ನ್ಯಾಯ ಒದಗಿಸಲಾಗಿದೆ.

20.92 ಕೋಟಿ ರೂ. ಪರಿಹಾರ

ಈ ಬಾರಿಯ ಅದಾಲತ್‌ನಲ್ಲಿ ಕೇವಲ ಪ್ರಕರಣಗಳನ್ನು ಇತ್ಯರ್ಥಪಡಿಸುವುದು ಮಾತ್ರವಲ್ಲದೆ, ಸಂತ್ರಸ್ತರಿಗೆ ಮತ್ತು ಅರ್ಹರಿಗೆ ಒಟ್ಟು 2,09,25,53,44 ರೂ. ಗಳ ಬೃಹತ್ ಪರಿಹಾರ ಮೊತ್ತವನ್ನು ಘೋಷಿಸಲಾಗಿದೆ. ನ್ಯಾಯಾಂಗ ಇಲಾಖೆ, ವಕೀಲರ ಸಂಘ, ಪೊಲೀಸ್ ಇಲಾಖೆ, ವಿವಿಧ ವಿಮಾ ಕಂಪನಿಗಳ ಸಂಪೂರ್ಣ ಸಹಕಾರದಿಂದ ಈ ಪ್ರಕ್ರಿಯೆ ಯಶಸ್ವಿಯಾಗಿದೆ.

ಕಡಿಮೆ ಅವಧಿ, ಗರಿಷ್ಠ ಪರಿಹಾರ

ಈ ಬಾರಿಯ ಯಶಸ್ಸಿನಿಂದಾಗಿ ಮುಂದಿನ ದಿನಗಳಲ್ಲಿ ಲೋಕ ಅದಾಲತ್ ಕುರಿತು ಗ್ರಾಮೀಣ ಮಟ್ಟದಲ್ಲಿ ಮತ್ತಷ್ಟು ಜಾಗೃತಿ ಮೂಡಿಸಲು ಇಲಾಖೆ ನಿರ್ಧರಿಸಿದೆ. ಮೋಟಾರ್ ವಾಹನ ಅಪಘಾತದಂತಹ ಸಂಕೀರ್ಣ ಪ್ರಕರಣಗಳಲ್ಲಿ ವಿಮಾ ಕಂಪನಿಗಳೊಂದಿಗೆ ಮಾತುಕತೆ ನಡೆಸಿ, ಸಂತ್ರಸ್ತರಿಗೆ ಅತಿ ಕಡಿಮೆ ಅವಧಿಯಲ್ಲಿ ದೊಡ್ಡ ಮೊತ್ತದ ಪರಿಹಾರ ಕೊಡಿಸಿರುವುದು ಹೊಸ ಮೈಲಿಗಲ್ಲಾಗಿದೆ.

ಲೋಕ ಅದಾಲತ್ ಎಂದರೇನು?

ಲೋಕ ಅದಾಲತ್ ಅಥವಾ ಜನರ ನ್ಯಾಯಾಲಯವು ನ್ಯಾಯಾಂಗ ವ್ಯವಸ್ಥೆಯಲ್ಲಿನ ಒಂದು ಅತ್ಯಂತ ಪರಿಣಾಮಕಾರಿ ಪರ್ಯಾಯ ವೇದಿಕೆಯಾಗಿದ್ದು, ಇಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ಅಥವಾ ನ್ಯಾಯಾಲಯದ ಮೆಟ್ಟಿಲೇರುವ ಮೊದಲೇ ಇರುವ ವ್ಯಾಜ್ಯಗಳನ್ನು ಉಭಯ ಪಕ್ಷಗಳ ಒಪ್ಪಿಗೆಯ ಮೇರೆಗೆ ರಾಜಿ ಸಂಧಾನದ ಮೂಲಕ ಬಗೆಹರಿಸಲಾಗುತ್ತದೆ. ಇಲ್ಲಿ ಸಿವಿಲ್, ರಾಜಿಯಾಗಬಲ್ಲ ಕ್ರಿಮಿನಲ್, ಚೆಕ್ ಬೌನ್ಸ್ ಮತ್ತು ಆಸ್ತಿ ವಿವಾದಗಳಂತಹ ಪ್ರಕರಣಗಳನ್ನು ಯಾವುದೇನ್ಯಾಯಾಲಯದಶುಲ್ಕವಿಲ್ಲದೆತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿರುತ್ತದೆ. ಲೋಕ ಅದಾಲತ್‌ನಲ್ಲಿ ನೀಡಲಾಗುವ ತೀರ್ಪು ಅಂತಿಮವಾಗಿದ್ದು, ಇದು ಸಿವಿಲ್ ನ್ಯಾಯಾಲಯದ ಡಿಕ್ರಿಯಷ್ಟೇ ಮಾನ್ಯತೆ ಹೊಂದಿರುತ್ತದೆ. ಇದರಿಂದಾಗಿ ಸುದೀರ್ಘ ಕಾಲದ ಕಾನೂನು ಹೋರಾಟ ತಪ್ಪುವುದಲ್ಲದೆ, ಸಮಯ ಮತ್ತು ಹಣದ ಉಳಿತಾಯವಾಗುತ್ತದೆ. ಮುಖ್ಯವಾಗಿ ಪಕ್ಷಕಾರರ ನಡುವಿನ ದ್ವೇಷವು ಕಡಿಮೆಯಾಗಿ ಸಂಬಂಧಗಳು ಸೌಹಾರ್ದಯುತವಾಗಿ ಮುಂದುವರಿಯಲು ಈ ವ್ಯವಸ್ಥೆಯು ಸಹಕಾರಿಯಾಗಿದೆ.

ಸೌಹಾರ್ದಯುತ ಇತ್ಯರ್ಥಕ್ಕೆ ಒತ್ತು

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಈ ಬೃಹತ್ ಅಭಿಯಾನವು ಕೇವಲ ಅಂಕಿ–ಅಂಶಗಳಿಗೆ ಸೀಮಿತವಾಗದೆ, ನೂರಾರು ಕುಟುಂಬಗಳ ಮನಸ್ತಾಪವನ್ನು ಹೋಗಲಾಡಿಸುವಲ್ಲಿ ಯಶಸ್ವಿಯಾಗಿದೆ. ಲೋಕ ಅದಾಲತ್‌ನಲ್ಲಿ ಭಾಗವಹಿಸಿದ್ದ ಅನೇಕರು ವರ್ಷಗಳಿಂದ ನ್ಯಾಯಾಲಯದ ಸುತ್ತ ಅಲೆಯುತ್ತಿದ್ದವರು. ರಾಜಿ ಸಂಧಾನದ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡ ಪಕ್ಷಕಾರರು ಪರಸ್ಪರ ಹಸ್ತಲಾಘವ ಮಾಡಿ, ಸಂತೋಷದಿಂದ ಮನೆಗೆ ಮರಳಿದ ದೃಶ್ಯಗಳು ಕಂಡುಬಂದವು.

ವಿಶೇಷವಾಗಿ ಚೆಕ್ ಅಮಾನ್ಯ ಪ್ರಕರಣಗಳು ಮತ್ತು ಕೌಟುಂಬಿಕ ವ್ಯಾಜ್ಯಗಳಲ್ಲಿ ಉಭಯ ಪಕ್ಷಗಳ ನಡುವೆ ದೀರ್ಘಕಾಲದ ಸಂಧಾನ ಪ್ರಕ್ರಿಯೆ ನಡೆಸಿ, ಅವರನ್ನು ಒಪ್ಪಿಸುವಲ್ಲಿ ನ್ಯಾಯಾಧೀಶರು ಮತ್ತು ವಕೀಲರ ತಂಡ ಪ್ರಮುಖ ಪಾತ್ರ ವಹಿಸಿತು. ಇದರಿಂದಾಗಿ ಸಣ್ಣಪುಟ್ಟ ಕಾರಣಗಳಿಗಾಗಿ ನ್ಯಾಯಾಲಯದ ಮೆಟ್ಟಿಲೇರಿದ್ದ ಅನೇಕ ಸಿವಿಲ್ ಪ್ರಕರಣಗಳು ಇಂದು ಶಾಶ್ವತವಾಗಿ ಇತ್ಯರ್ಥಗೊಂಡಿವೆ.

ಪ್ರಶಸ್ತಿಗೆ ಹಕ್ಲಾಡಿ ಗ್ರಾಮ ಪಂಚಾಯತ್ ನಾಮನಿರ್ದೇಶನ: ಕೇಂದ್ರ ತಂಡ ಭೇಟಿ



ಕುಂದಾಪುರ: ಕೇಂದ್ರ ಸರಕಾರದ ಸುಸ್ಥಿರ ಅಭಿವೃದ್ಧಿ ಗುರಿಗಳು–2023 ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಭದ್ರತೆಯುಳ್ಳ ಪಂಚಾಯತ್ ಎಂಬ ವಿಷಯದಡಿ ಈ ಬಾರಿ ರಾಷ್ಟ್ರ ಮಟ್ಟದ ಪಂಚಾಯತ್ ಪ್ರಶಸ್ತಿಗೆ ಕುಂದಾಪುರ ತಾಲೂಕಿನ ಹಕ್ಲಾಡಿ ಗ್ರಾಮ ಪಂಚಾಯತ್ ನಾಮನಿರ್ದೇಶನಗೊಂಡಿದೆ.

ಇದರ ದಾಖಲೆಗಳ ಪರಿಶೀಲನೆ, ಕ್ಷೇತ್ರ ಭೇಟಿ, ಸಾರ್ವಜನಿಕರೊಂದಿಗಿನ ಸಂವಾದಕ್ಕೆ ಕೇಂದ್ರ ಸರಕಾರದ ಹಿರಿಯ ಅಧಿಕಾರಿಗಳ ತಂಡ ಗ್ರಾಮಕ್ಕೆ ಭೇಟಿ ನೀಡಿತು.

ತಂಡದ ಮುಖ್ಯಸ್ಥ ಪಿನಾಕಿ ತಹಬಿಲ್ದಾರ್, ಡಾ. ಮಮತಾ ಕುಮಾರಿ, ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಉದಯ ಶೆಟ್ಟಿ,

■ **ದಾಖಲೆಗಳ ಪರಿಶೀಲನೆ, ಕ್ಷೇತ್ರ ಭೇಟಿ, ಸಾರ್ವಜನಿಕರೊಂದಿಗಿನ ಸಂವಾದಕ್ಕೆ ಹಿರಿಯ ಅಧಿಕಾರಿಗಳ ತಂಡ ಗ್ರಾಮಕ್ಕೆ ಭೇಟಿ**

ಜಿಲ್ಲಾ ಎಸ್.ಡಿ.ಜಿ. ಸೆಲ್ ಮೇಲ್ವಿಚಾರಕ ಅನಿಲ್ ಶೆಟ್ಟಿ, ಕುಂದಾಪುರ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಮಹೇಶ್ ಕೆ.ಜಿ., ತಾಲೂಕು ಪಂಚಾಯತ್ ಪ್ರಭಾರ ಯೋಜನಾಧಿಕಾರಿ ಸತೀಶ್ ವಡ್ಡರ್ಸೆ, ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕಿ ದೀಪಾ ಮತ್ತಿತರರು ತಂಡದಲ್ಲಿದ್ದರು. ಈ ಸಂದರ್ಭದಲ್ಲಿ ಹಕ್ಲಾಡಿ ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ರಮೇಶ್ ಕುಲಾಲ್, ಪಿಡಿಒ ಚಂದ್ರ ಬಿಲ್ಲವ, ಮಾಜಿ ಉಪಾಧ್ಯಕ್ಷ ಸುಭಾಷ್ ಶೆಟ್ಟಿ ಹೊಳ್ಮಗೆ, ಮಾಜಿ ಸದಸ್ಯರು, ಸಿಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು.

ನೀರಿನ ಸಮಸ್ಯೆ ಉಂಟಾಗದಂತೆ ಎಚ್ಚರ ವಹಿಸಿ: ಶಾಸಕ ಯಶ್‌ಪಾಲ್

ಉಡುಪಿ: ಜಿಲ್ಲೆಯಲ್ಲಿ ಬೇಸಿಗೆಯ ತಾಪ ಏರುತ್ತಿರುವ ಬೆನ್ನಲ್ಲೇ ಸಾರ್ವಜನಿಕರಿಗೆ ಕುಡಿಯುವನೀರಿನಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸೋಮವಾರ ಬನ್ನಂಜೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಕುಡಿಯುವ ನೀರು ಹಾಗೂ ಮಳೆಗಾಲದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಹಲವು ಭಾಗಗಳಲ್ಲಿ ನೀರಿನ ಕೊರತೆ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ತಕ್ಷಣವೇ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದ ಶಾಸಕರು, ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಲಭ್ಯತೆಯ ಬಗ್ಗೆ ತಕ್ಷಣವೇ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದರು. ಈ ಹಿಂದೆ ನೀರಿನ ತೀವ್ರ ಕೊರತೆ ಎದುರಿಸಿದ ವಸತಿ ಪ್ರದೇಶಗಳನ್ನು ಮೊದಲೇ ಗುರುತಿಸಿ, ಅಲ್ಲಿ ನೀರಿನ ಪೂರೈಕೆಯನ್ನು ಸಮರ್ಪಕಗೊಳಿಸಲು ವಿಶೇಷ ಕಾರ್ಯತಂತ್ರ ರೂಪಿಸಬೇಕು ಎಂದು ನಿರ್ದೇಶನ ನೀಡಿದರು.

ಕುಡಿಯುವ ನೀರು ಸರಬರಾಜಿಗೆ ಅಡ್ಡಿಯಾಗುವ ತಾಂತ್ರಿಕ ಸಮಸ್ಯೆಗಳ ಬಗ್ಗೆ ಗಮನಹರಿಸಿದ ಅವರು, ಹಾಳಾಗಿರುವ



ಪೈಪ್‌ಲೈನ್‌ಗಳು, ವಾಟರ್ ಪಂಪ್‌ಗಳು ಹಾಗೂ ಟ್ಯಾಂಕ್‌ಗಳನ್ನು ವಿಳಂಬ ಮಾಡದೆ ತುರ್ತಾಗಿ ದುರಸ್ತಿಗೊಳಿಸಬೇಕು ಮತ್ತು ಅಗತ್ಯವಿದ್ದಲ್ಲಿ ಹೆಚ್ಚುವರಿ ಮೋಟಾರ್ ಪಂಪ್‌ಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು. ನೀರಿನ ತೀವ್ರ ಅಭಾವವಿರುವ ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಸಜ್ಜಾಗಬೇಕು. ಅಗತ್ಯವಿದ್ದಲ್ಲಿ ಬೋರ್‌ವೆಲ್ ಅಥವಾ ಬಾವಿಗಳನ್ನು ಮತ್ತಷ್ಟು ಆಳಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ವಿದ್ಯುತ್ ವ್ಯತ್ಯಯದಿಂದ ನೀರು ಸರಬರಾಜಿಗೆ ಅಡ್ಡಿಯಾಗದಂತೆ ಮೆಸ್ಕಾಂ ಇಲಾಖೆಯೊಂದಿಗೆ ನಿರಂತರ ಸಮನ್ವಯತೆ ಸಾಧಿಸಬೇಕು ಮತ್ತು ಸಾರ್ವಜನಿಕರಿಂದ ಬರುವ ದೂರುಗಳಿಗೆ ತಕ್ಷಣವೇ ಸ್ಪಂದಿಸಿ ನೀರುಸರಬರಾಜನ್ನುಸುಗಮಗೊಳಿಸಬೇಕು ಎಂದು ಅಧಿಕಾರಿಗಳಿಗೆ ಶಾಸಕರು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ತಹಶೀಲ್ದಾರ್, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಷ್ಟ್ರೀಯ ಗಣಿತ ಪ್ರತಿಭಾನ್ವೇಷಣ ಪರೀಕ್ಷೆ: ಸೇವಾ ಸಂಗಮದ ಸಾಧನೆ



ಕೋಟ: ಚಿತ್ರದುರ್ಗದ ಪುಟಾಣಿ ವಿಜ್ಞಾನ ಸಂಸ್ಥೆಯವರು ನಡೆಸಿದ ರಾಷ್ಟ್ರೀಯ ಗಣಿತ ಪ್ರತಿಭಾನ್ವೇಷಣ ಪರೀಕ್ಷೆ 2025–26ರ ಪರೀಕ್ಷೆಯಲ್ಲಿ ಸೇವಾ ಸಂಗಮ ವಿದ್ಯಾಕೇಂದ್ರ ವಿದ್ಯಾಗಿರಿ ತೆಕ್ಕಟ್ಟೆಯಿಂದ 122 ವಿದ್ಯಾರ್ಥಿಗಳು ಭಾಗವಹಿಸಿದ್ದು ರಾಜ್ಯಮಟ್ಟದಲ್ಲಿ ರೋಶನ್, ಮನಸ್ವಿ ಕಾರ್ತಿಕ್ ವಿಜೇತರಾಗಿದ್ದು ರಾಷ್ಟ್ರಮಟ್ಟದಲ್ಲಿ ಅದಿತಿ ಕೆ.ವಿ., ಅನ್ವಿತಾ ವಿಜೇತರಾಗಿದ್ದಾರೆ.

ಸಂಘಟನಾ ಮಾರ್ಗದರ್ಶಿ ಮಾತಾಜಿ ಪ್ರತಿಮಾ ವೈ. ಅವರಿಗೆ ಹೆಕ್ಸಾಗೊನಲ್ ಮ್ಯಾತ್ಸ್ ಅವಾರ್ಡ್ ಹಾಗೂ ಶಾಲೆಗೆ ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಶಾಲೆ ಪ್ರಶಸ್ತಿ ಲಭಿಸಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿಯ ವತಿಯಿಂದ ಸನ್ಮಾನಿಸಲಾಯಿತು. ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಸುರೇಶ್ ಬೆಟ್ಟಿನ್ ಅವರು ಮಕ್ಕಳ ಸಾಧನೆಯನ್ನು ಅಭಿನಂದಿಸಿದರು. ಸಂಚಾಲಕ ಕಮಲಾಕ್ಷ ಪೈ, ಲೇಖಕ ಪ್ರಕಾಶ್ ಮಲ್ಪೆ ಮತ್ತು ಮುಖ್ಯೋಪಾಧ್ಯಾಯ ಹರ್ಷ ಕೋಟೇಶ್ವರ ಉಪಸ್ಥಿತರಿದ್ದರು.

ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಪರಿಣಾಮಕಾರಿ ಸಂಶೋಧನಾ ಬರವಣಿಗೆ ಕೌಶಲ ಕಾರ್ಯಾಗಾರ



ಕಾರ್ಕಳ: ಶ್ರೀ ಭುವನೇಂದ್ರ ಕಾಲೇಜಿನ ಐಕ್ಯೂಎಸಿ ಆಶ್ರಯದಲ್ಲಿ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ಪರಿಣಾಮಕಾರಿ ಸಂಶೋಧನಾ ಬರವಣಿಗೆ ಕುರಿತು ಕಾರ್ಯಾಗಾರವು ನೆರವೇರಿತು.

ಮಾಹೆ ಮಣಿಪಾಲದ ಸ್ಕೂಲ್ ಆಫ್ ಕಾಮರ್ಸ್ ಆಂಡ್ ಎಕನಾಮಿಕ್ಸ್ ಸಹಾಯಕ ಪ್ರಾಧ್ಯಾಪಕರೂ, ಸಂಶೋಧನಾ ಪ್ರಾಧ್ಯಾಪಕರೂ ಆಗಿರುವ ಡಾ. ಸತೀಶ್ ಕುಮಾರ್ ಇವರು ವಿದ್ಯಾರ್ಥಿಗಳಿಗೆ ಬರವಣಿಗೆ ಕೌಶಲ್ಯದ ಕುರಿತು ತರಬೇತಿ ನೀಡಿ, ವಿದ್ಯಾರ್ಥಿಗಳು ಯಾವ ಕೆಲಸವನ್ನು ಯಾವಾಗ ಮಾಡಬೇಕು ಎಂಬುದನ್ನು ಸರಿಯಾಗಿ ಅರಿತುಕೊಂಡಿರಬೇಕು. ಕಳೆದು ಹೋದ ಕ್ಷಣಗಳು ಮತ್ತೆ ಎಂದಿಗೂ ಮರಳಿ ಬರಲಾರವು. ಹಾಗಾಗಿ ಆಸಕ್ತಿ ಇರುವಾಗ ಅಸಡ್ಡೆ ತೋರದೆ, ನೆಪಗಳನ್ನು ಹೇಳದೆ ಕೆಲಸವನ್ನು ಮಾಡಬೇಕು. ಬರವಣಿಗೆಯ ಕೌಶಲವನ್ನು ವೃದ್ಧಿಸುವುದರಿಂದ ಅನೇಕ ಸಂಶೋಧನಾ ಪ್ರಬಂಧಗಳನ್ನು ರಚಿಸಲು ಸಾಧ್ಯವಾಗುತ್ತದೆ. ಪರಿಪೂರ್ಣವಾಗಿ ಬರವಣಿಗೆಯ ಕೌಶಲದಲ್ಲಿ ತೊಡಗಿಸಿಕೊಂಡಾಗ ನಮಗೇ ಗೊತ್ತಿರದ ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುತ್ತವೆ ಎಂದರು.

ವಿದ್ಯಾರ್ಥಿಗಳ ಬರವಣಿಗೆಗೆ ಪೂರಕವಾದ ಮಾಹಿತಿಗಳಿಗೆ ಸಂಬಂಧಪಟ್ಟಂತೆ ಹಾಗೂ ಪ್ರಬಂಧ ಮಂಡನೆಯ ರೀತಿಯನ್ನು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿದರು.

ಪ್ರಾಚಾರ್ಯ ಡಾ. ಮಂಜುನಾಥ ಎ. ಕೋಟ್ಯಾನ್, ಬಿ. ಬಿ. ಎ ವಿಭಾಗ ಮುಖ್ಯಸ್ಥ ನಂದಕಿಶೋರ್ ಕೆ., ವಾಣಿಜ್ಯ ವಿಭಾಗದ ಉಪನ್ಯಾಸಕ,ಮಹೇಶ್ ಶೆಟ್ಟಿ ಉಪಸ್ಥಿತರಿದ್ದರು. ಬಿ.ಬಿ. ಎ. ವಿಭಾಗದ ವಿದ್ಯಾರ್ಥಿನಿ, ಪ್ರೀಮಲ್ ನಿರೂಪಿಸಿದರು. ವಾಣಿಜ್ಯ ಸಂಘದ ಸಂಯೋಜಕ ಪ್ರೊ. ಶಿವಶಂಕರ್ ಸ್ವಾಗತಿಸಿ, ಬಿ. ಕಾಂ.ನ ಅಕ್ಷತಾ ಎಲ್. ಕೋಟ್ಯಾನ್ ವಂದಿಸಿದರು.

ಆರ್‌ಎಸ್‌ಬಿ ಮಹಿಳಾ ವೇದಿಕೆಯಿಂದ ಮಹಿಳಾ ದಿನಾಚರಣೆ, ಸಾಧಕರಿಗೆ ಸನ್ಮಾನ



ಶಿರ್ವ: ಆರ್‌ಎಸ್‌ಬಿ ಮಹಿಳಾ ವೇದಿಕೆ ಮಣಿಪಾಲ ಇದರ ವತಿಯಿಂದ ಆರ್ ಎಸ್‌ಬಿ ಸಭಾಭವನದಲ್ಲಿ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನೆರವೇರಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವೈಶಾಲಿ ಜನಾರ್ದನ ನಾಯಕ್ ಹಿರಿಯಡ್ಕ ಅವರು ಸನ್ಮಾನಿಸಿಮಾತನಾಡಿ, ಮಹಿಳೆಯರಲ್ಲಿಸಾಧಿಸುವ ಛಲ ಇದ್ದಲ್ಲಿ ಯಾವುದೇ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು ಕೆಲಸ ಮಾಡಲು ಸಾಧ್ಯವಿದೆ. ಇಂದು ಮಹಿಳೆಯರು ಪುರುಷರಿಗೆ ಸರಿ ಸಮಾನರಾಗಿ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುತ್ತಿರುವುದು ಪ್ರಗತಿಯ ಸಂಕೇತ ಎಂದರು.

ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವೇದಿಕೆಯ ಅಧ್ಯಕ್ಷೆ ರೂಪಾ ನಾಯಕ್ ಅವರು ವಹಿಸಿದ್ದರು. ನಿರ್ಮಲಾ ಪ್ರಭು, ಸುಮಾ ನಾಯಕ್ ಪ್ರಾರ್ಥಿಸಿದರು. ಉಪಾಧ್ಯಕ್ಷೆ ಉಜ್ವಲಾ ನಾಯಕ್ ಸ್ವಾಗತಿಸಿದರು. ಕೋಶಾಧಿಕಾರಿ ಮಷ್ಕಾ ಪ್ರಭು ವಂದಿಸಿದರು. ಗೀತಾ ನಾಯಕ್, ಮೀರಾ ನಾಯಕ್, ಜ್ಯೋತಿ ನಾಯಕ್ ಕಾರ್ಯಕ್ರಮ ನಿರೂಪಿಸಿದರು.

ಗೌರವಾರ್ಪಣೆ

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳಾ ಉದ್ಯಮಿ ಶ್ವೇತಾ ಅನಿಲ್ ನಾಯಕ್, ರಂಗಕಲಾವಿದೆ ಬಹುಭಾಷಾ ನಟಿ,ಕವಯತ್ರಿ ಕುಸುಮಾ ಕಾಮತ್ ಕರ್ವಾಲು, ಜ್ಯೋತಿ ನಾಯಕ್, ಆಶಾಲತಾ (ಪೋಲಿಸ್ ಇಲಾಖೆ), ಆಶಾ ಕೇಶವ ಪ್ರಭು(ಅವಿಭಕ್ತ ಕುಟುಂಬ), ಸುನೀತಾ ನಾಯಕ್(ರವಿಶಂಕರ್ ಗುರೂಜಿಯವರ ಟೀಚರ್ ಆಗಿ ಉಚಿತ ಸೇವೆ) ಅವರನ್ನು ಸನ್ಮಾನಿಸಲಾಯಿತು.

ಕೋಟ ಪಡುಕರೆ ಸರ್ಕಾರಿ ಪದವಿ ಕಾಲೇಜಿನಲ್ಲಿ 'ಹಾಸ್ಯ' ಉಪನ್ಯಾಸ



ಕೋಟ: ಲಕ್ಷ್ಮಿ ಸೋಮ ಬಂಗೇರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೋಟ–ಪಡುಕರೆ ಇಲ್ಲಿ ಬದುಕು ಮತ್ತು ಹಾಸ್ಯ ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಇತ್ತೀಚಿಗೆ ಏರ್ಪಡಿಸಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಉಡುಪಿ ಅಜ್ಜರಕಾಡು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತರ ಅಧ್ಯಯನ ಕೇಂದ್ರ ಪ್ರಾಧ್ಯಾಪಕ ಪಿ.ಬಿ. ಪ್ರಸನ್ನ ಮಾತನಾಡಿದರು. ಅಧ್ಯಕ್ಷತೆಯನ್ನು ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ರಮೇಶ್ ಆಚಾರ್ ವಹಿಸಿದ್ದರು. ಐಕ್ಯೂಎಸಿ ಸಂಚಾಲಕ ಪ್ರೊ. ಸುಬ್ರಮಣ್ಯ ಎ ಉಪಸ್ಥಿತರಿದ್ದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಪ್ರಕಾಶ್ ಕೆ. ನಿರೂಪಿಸಿದರು.



ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ಅವರ ಪರಾಭವ ನಾಮ ಸಂವತ್ಸರದ ಚಾತುರ್ಮಾಸ್ಯ ಕಾಶಿಯ ಮೂಲ ಮಠದಲ್ಲಿ ನಡೆಯಲಿದ್ದು, ಇದರ ಆಮಂತ್ರಣ ಪತ್ರಿಕೆಯನ್ನು ಶ್ರೀಗಳು ಹರಿದ್ವಾರದ ಶ್ರೀ ವ್ಯಾಸ ಆಶ್ರಮದಲ್ಲಿ ಬಿಡುಗಡೆಗೊಳಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯ ಎಂಎ ಬಿಎಡ್ | ಪ್ರಥಮ ರ್‍ಯಾಂಕ್‌ನಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯರು

ಹೆಬ್ರಿ ಬಿಜೆಪಿ ಶಕ್ತಿ ಕೇಂದ್ರದಿಂದ ಇಬ್ಬರು ಉನ್ನತ ಶಿಕ್ಷಣ ಸಾಧಕರಿಗೆ ಗೌರವಾರ್ಪಣೆ

ಹೆಬ್ರಿ: ಇಲ್ಲಿನ ಮುದ್ರಾಡಿ ಗ್ರಾಮದಲ್ಲಿ ಹುಟ್ಟಿ ಬೆಳೆದು, ಕನ್ನಡ ಮಧ್ಯಮ ಶಾಲೆಗಳಲ್ಲಿ ಕಲಿತು, ಉನ್ನತ ವ್ಯಾಸಂಗ ಮಾಡಿ, ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ,ಇದೀಗ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಇಬ್ಬರು ಸಾಧಕರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ರಮವು ಹೆಬ್ರಿ ಬಿಜೆಪಿ ಶಕ್ತಿ ಕೇಂದ್ರದ ವತಿಯಿಂದ ಮುದ್ರಾಡಿ ಸಮುದಾಯ ಭವನದಲ್ಲಿ ಭಾನುವಾರ ಜರಗಿತು.

ಮಂಗಳೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಬಿ.ಎಡ್ ಪದವಿ ಪಡೆದು ದ್ವಿತೀಯ ರ್‍ಯಾಂಕ್‌ನಲ್ಲಿ ತೇರ್ಗಡೆ ಹೊಂದಿದ ಮುದ್ರಾಡಿಯ ಕೃಷ್ಣ ಶೆಟ್ಟಿಗಾರ್, ಪೂರ್ಣಿಮಾ ದಂಪತಿಯ ಪ್ರಥಮ ಪುತ್ರಿ ಶಿವಾನಿ ಹಾಗೂ ಉಪ್ಪಳ ಮಲ್ಲಿಕಾರ್ಜುನ, ಗುಲಾಬಿ ದಂಪತಿಗಳ ಮಗಳಾದ ರಮ್ಯ ಅವರು ಎಂ.ಎ.



ಬಿಎಡ್‌ನಲ್ಲಿ ಪ್ರಥಮ ರ್‍ಯಾಂಕ್‌ನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪದವಿ ಪಡೆದು ಸಾಧನೆ ಮಾಡಿದ ಇಬ್ಬರನ್ನು ಸನ್ಮಾನಿಸಲಾಯಿತು.

ಬಿ ಜೆ ಪಿ ಮಂಡಲ ಕಾರ್ಯದರ್ಶಿ ಸುರೇಶ್ ಶೆಟ್ಟಿ ಶಿವಪುರ, ಮುದ್ರಾಡಿ ಗ್ರಾಮ ಪಂಚಾಯತ್ ನಿಕಟಪೂರ್ವ ಉಪಾಧ್ಯಕ್ಷೆ ರಮ್ಯಕಾಂತಿ ಹಾಗೂ ಸಭೆಯ ಅಧ್ಯಕ್ಷತೆ ವಹಿಸಿದ ಮುದ್ರಾಡಿ ಖ್ಯಾತ ವೈದ್ಯ ಎಂ.ಎಸ್. ರಾವ್ ಇಬ್ಬರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ತಾಲೂಕು ಪಂಚಾಯತ್ ಅಧ್ಯಕ್ಷರಾದ ರಮೇಶ್ ಕುಮಾರ್ ಶಿವಪುರ, ಮುದ್ರಾಡಿ ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷರಾದ ವಸಂತಿ ಪೂಜಾರಿ, ನಿಕಟಪೂರ್ವ ಸದಸ್ಯರಾದ ಜಗದೀಶ ಪೂಜಾರಿ, ಮುದ್ರಾಡಿ ಗ್ರಾ.ಪಂ ನಿಕಟಪೂರ್ವ ಪಂಚಾಯತ್ ಸದಸ್ಯರಾದ ಸಂತೋಷ್ ಕುಮಾರ್ ಶೆಟ್ಟಿ ಸನತ್ ಕುಮಾರ್ ಉಪಸ್ಥಿತರಿದ್ದರು.

ಗಣಪತಿ ಎಂ. ಸ್ವಾಗತಿಸಿ, ವಂದಿಸಿದರು. ಮುದ್ರಾಡಿ ಗ್ರಾ.ಪಂ ನಿಕಟಪೂರ್ವ ಪಂಚಾಯತ್ ಸದಸ್ಯರಾದ ಸಂತೋಷ್ ಕುಮಾರ್ ಶೆಟ್ಟಿ ಸನತ್ ಕುಮಾರ್ ಉಪಸ್ಥಿತರಿದ್ದರು.

ಅಭಿನಂದನೀಯ

ಕನ್ನಡ ಶಾಲೆಯಲ್ಲಿ ಕಲಿತು ಕಷ್ಟದಲ್ಲೂ ಉನ್ನತ ವ್ಯಾಸಂಗ ಮಾ, ಛಲ ಒಂದಿದ್ದರೆ ಯಾವುದೇ ಶಿಕ್ಷಣಕ್ಕೆ ಅಡ್ಡಿಯಾಗುವುದಿಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಇಲ್ಲಿಯ ತಂಡ ಒಳ್ಳೆಯ ಕೆಲಸ ಮಾಡಿ ಶಿಕ್ಷಣದಲ್ಲಿ ಸಾಧನೆ ಮಾಡಿದ ಇಬ್ಬರನ್ನು ಅಭಿನಂದಿಸುವ ಕಾರ್ಯ ಮಾಡಿದೆ.

● ಲಕ್ಷ್ಮೀನಾರಾಯಣ ನಾಯಕ್, ಅಧ್ಯಕ್ಷ ಬಿಜೆಪಿ ಶಕ್ತಿ ಕೇಂದ್ರ